ಏಪ್ರಿಲ್-ಜೂನ್ ೨೦೦೬

೫೦ ಕರ್ನಾಟಕ
KARNATAKA

ಅನಿಕೇತನ

ಕರ್ನಾಟಕ ಸಾಹಿತ್ಯ ಅಕಾಡೆಮಿ ತ್ರೈಮಾಸಿಕ



ದಯವಿಟ್ಟು ಗಮನಿಸಿ

ಸುವರ್ಣ ಕರ್ನಾಟಕದ ಆಚರಣೆ ಅಂಗವಾಗಿ
ಎಲ್ಲಾ ಪುಸ್ತಕಗಳಿಗೆ "ಶೇಕಡ ೫೦ರಷ್ಟು
ವಿಶೇಷ ರಿಯಾಯಿತಿ"

❁ ❁ ❁

ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕನ್ನಡ ಹಾಗೂ ಇಂಗ್ಲಿಷ್
ಭಾಷೆಗಳಲ್ಲಿ ಪ್ರಕಟಿಸುತ್ತಿರುವ ತ್ರೈಮಾಸಿಕ ಪತ್ರಿಕೆ
'ಅನಿಕೇತನ'ಕ್ಕೆ ಚಂದಾದಾರರಾಗಿರಿ.

ಬಿಡಿ ಪ್ರತಿ	–	೩೦–೦೦
ವಾರ್ಷಿಕ ಚಂದಾ	–	೧೦೦–೦೦
ಆಜೀವ ಚಂದಾ	–	೩೦೦–೦೦

ಅನಿಕೇತನ

ಕರ್ನಾಟಕ ಸಾಹಿತ್ಯ ಅಕಾಡೆಮಿಯ ತ್ರೈಮಾಸಿಕ

ಏಪ್ರಿಲ್ - ಜೂನ್ - ೨೦೦೬

ಸಂಪಾದಕ

ಡಾ. ವೆಂಕಟಗಿರಿ ದಳವಾಯಿ

ಕರ್ನಾಟಕ ಸಾಹಿತ್ಯ ಅಕಾಡೆಮಿ

ಕನ್ನಡ ಭವನ, ಜೆ.ಸಿ. ರಸ್ತೆ

ಬೆಂಗಳೂರು - ೫೬೦ ೦೦೨

ದೂರವಾಣಿ : ೨೨೨೧ ೧೮೫೦

ANIKETHANA : A Literary Journal (Quarterly)
Edited by : **Dr. Venkatagiri Dalavai**, Lecturer, Dept of P.G. (Kannad
Basaveshwar Arts College, Bagalkot - 587 101
Published by : **V.N. Mallikarjunaswamy**, Registrar, Karnataka Sahith
Academy, Kannada Bhavana, J.C. Road, Bengalooru - 0

Pages : xii + 152

Registration No. 45646/88

ಸಂಪುಟ : ೧೭

ಸಂಚಿಕೆ : ೪

ಪ್ರತಿಗಳು : ೧೨೦೦

ಪುಟಗಳು : xii + ೧೫೨

ಪ್ರಧಾನ ಸಂಪಾದಕರು
ಗೀತಾ ನಾಗಭೂಷಣ
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

ಪ್ರಕಾಶಕರು
ವಿ.ಎನ್. ಮಲ್ಲಿಕಾರ್ಜುನಸ್ವಾಮಿ
ರಿಜಿಸ್ಟ್ರಾರ್, ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು – ೫೬೦ ೦೦೨

ಬಿಡಿ ಪ್ರತಿ	:	ರೂ. ೩೦/–
ವಾರ್ಷಿಕ ಚಂದಾ	:	ರೂ. ೧೦೦/–
ಆಜೀವ ಚಂದಾ	:	ರೂ. ೩೦೦/–
ಮುಖಪುಟ ಕಲೆ	:	ಅಶೋಕ್‌ಕುಮಾರ್ ಜಿ. ಹಿರೇಮಠ
ಹಿಂಬದಿಪುಟ ಕಲೆ	:	ಸುಭಾಷ್ ಕಮ್ಮಾರ
ಕೃಪೆ	:	ಕರ್ನಾಟಕ ಲಲಿತಕಲಾ ಅಕಾಡೆಮಿ
ಅಕ್ಷರ ವಿನ್ಯಾಸ	:	ಬಸವರಾಜ ಚಿನಿವಾಲರ

ಲಕ್ಷ್ಮೀ ಮುದ್ರಣಾಲಯ
LAKSHMI MUDRANALAYA
ISO 9001-2000
ಚಾಮರಾಜಪೇಟೆ, ಬೆಂಗಳೂರು–೧೮
ದೂರವಾಣಿ : ೨೨೬೧ ೩೧೨೩, ೨೬೬೧ ೮೭೫೨

ಅಧ್ಯಕ್ಷರ ಮಾತು

ಇಂದು ಎಲ್ಲೆಲ್ಲೂ ಸುವರ್ಣ ಕರ್ನಾಟಕದ ಸಂಭ್ರಮ. ಇಂತಹ ಸಂದರ್ಭಗಳು ನಮ್ಮ ನಾಡಿಗೆ ಮೊದಲಲ್ಲವಾದರೂ, ಪ್ರಜಾಪ್ರಭುತ್ವದ ನೆಲೆಯಲ್ಲಿ ಇದು ಜರುಗುತ್ತಿರುವುದು ವಿಶೇಷವಾಗಿದೆ. ಸಂಭ್ರಮದ ಮಧ್ಯೆ ಎಚ್ಚರಿಕೆಯ ಪ್ರಜ್ಞೆಯೂ ನಮ್ಮನ್ನು ಕಾಡುತ್ತಿದೆ. ಕರ್ನಾಟಕವನ್ನು, ಕನ್ನಡವನ್ನು ಜಾಗೃತಗೊಳಿಸುವ ಈ ಪ್ರಯತ್ನಕ್ಕೆ ಕೇವಲ ೫೦ ವರ್ಷಗಳಲ್ಲದೆ, ಶತಮಾನಗಳ ಚರಿತ್ರೆ ಇದೆ. 'ಕುರಿತೋದಯಂ ಕಾವ್ಯಪ್ರಯೋಗ ಪರಿಣತ'ರಿಂದ ಆರಂಭಗೊಂಡ ಈ ಸಂಭ್ರಮ–ಆಲೋಚನೆ ಕುವೆಂಪು ಯುಗದವರೆಗೂ ವಿಸ್ತರಿಸಿಕೊಂಡಿದೆ. ಕನ್ನಡ ಸಾಹಿತ್ಯ ಆರಂಭದಿಂದಲೂ ರಾಜಕೀಯ–ಸಾಮಾಜಿಕ, ಧಾರ್ಮಿಕ ಬಿಕ್ಕಟ್ಟುಗಳಿಗೆ ಪ್ರತಿಕ್ರಿಯಿಸುತ್ತಲೇ ಬಂದಿದೆ. ಇದನ್ನು ಆಸ್ಥಾನಗಳೂ ತಡೆಯಲು ಸಾಧ್ಯವಾಗಿಲ್ಲ. ಕಾಲಮಾನದೊಂದಿಗೆ ಗುದ್ದಾಡುತ್ತಲೇ ಹೊಸತನವನ್ನು ಒಂದು ಮನೋಧರ್ಮದ ರೂಪದಲ್ಲಿ ಪಡೆದುಕೊಂಡಿದ್ದೇವೆ. ಇದಕ್ಕೆ ಬಸವಣ್ಣ ಒಂದು ಮಾದರಿ.

ಕನ್ನಡ–ಕನ್ನಡಿಗ–ಕರ್ನಾಟಕ ಇಂದು ಅನೇಕ ಆತಂಕಗಳನ್ನು ಎದುರಿಸುತ್ತಿದೆ. ಆಧುನಿಕತೆಯ ಮನುಷ್ಯ ವಿರೋಧಿ ನಿಲುವುಗಳೊಂದಿಗೆ ಮುಖಾಮುಖಿಯಾಗುತ್ತಲೇ, ಸಮಾಜಮುಖಿ ಚಿಂತನೆಗಳಲ್ಲಿ ಕ್ರಿಯಾಶೀಲವಾಗಬೇಕಾಗಿದೆ. ಈ ಹಿನ್ನೆಲೆಯಲ್ಲಿ ಶ್ರಮಿಸಿದ ಹಾದಿಯಷ್ಟೇ ಸಾಧನೆಯ ಪಥವೂ ಇದೆ. ಸಮಕಾಲೀನ ಎಲ್ಲ ತಲ್ಲಣಗಳನ್ನು ಗುರುತಿಸುವಲ್ಲಿ ಕನ್ನಡ ಲೇಖಕರು ಹಿಂದೆ ಬಿದ್ದಿಲ್ಲ. ತಮ್ಮ ವೈಚಾರಿಕ ನಿಲುವುಗಳಿಂದ ಇದನ್ನು ಅಭಿವ್ಯಕ್ತಿಸುತ್ತಲೇ ಬಂದಿದ್ದಾರೆ. ಇದಕ್ಕೆ ಧ್ವನಿಯಾಗಿದೆ ಅನಿಕೇತನ ಪತ್ರಿಕೆ. ನಾಡಿನ ಪ್ರಬುದ್ಧ ಚಿಂತಕರನ್ನು ಒಳಗೊಂಡ ಹಾಗೇ ಇತ್ತೀಚಿನ ಯುವ ಬರಹಗಾರರು ಈ ಜವಾಬ್ದಾರಿಯನ್ನು ಹೊತ್ತುಕೊಂಡಿರುವುದು ಸಂತೋಷದ ಸಂಗತಿ.

ಸಾಹಿತ್ಯದ ವಸ್ತು, ಭಾಷೆ–ತಂತ್ರದ ದೃಷ್ಟಿಯಿದಂಲೂ ಅನಿಕೇತನ ತನ್ನ ಗುಣಾತ್ಮಕತೆಯನ್ನು ಉಳಿಸಿಕೊಂಡು ಬರುತ್ತಿದೆ. ಈ ಆಶಯಕ್ಕೆ ಓದುಗರ ಸಹಕಾರವಿದೆ. ಅವರೆಲ್ಲರಿಗೂ ಸುವರ್ಣ ಕರ್ನಾಟಕದ ಶುಭಕಾಮನೆಗಳು.

ಈ ಸಂಚಿಕೆಯನ್ನು ಅಕಾಡೆಮಿಯ ಸದಸ್ಯರಾದ ಡಾ. ವೆಂಕಟಗಿರಿ ದಳವಾಯಿಯವರು ರೂಪಿಸಿದ್ದಾರೆ. ಎಂದಿನಂತೆ ವಿಷಯ ವೈವಿಧ್ಯತೆಗೆ ಒತ್ತುಕೊಡಲಾಗಿದೆ.

–ನಾಡೋಜ ಗೀತಾ ನಾಗಭೂಷಣ

'ಸುಟ್ಟ ಸೊಡರು – ಕಂಡ ಬೆಳಕು'

ಅಂದಿನವರು ನಡೆದದಾರಿ, ಇಂದಿನವರು ನಡೆಯರು
ಇಂದಿನವರು ನಡೆದದಾರಿ ಅಂದಿನವರು ಕಾಣರು
ಅಂದಿಂದೆಂಬ ದ್ವಂದ್ವ ಭೇದವನೆಂದೆಂದು ಕಾಣೆ ನೋಡ
ಕಪಿಲಸಿದ್ಧ ಮಲ್ಲಿಕಾರ್ಜುನ.

ವರ್ತಮಾನದಲ್ಲಿ ನಿಂತು ಭೂತಕಾಲದ ಮಿತಿಗಳನ್ನು ಎಣಿಸುವುದಾಗಲಿ, ಅಥವಾ ಚರಿತ್ರೆಯು ತಾನೇ ಘನವೆಂದು ಬೀಗುವುದಾಗಲಿ ಅಸಂಗತ ಎನ್ನುವುದನ್ನು ಸಿದ್ಧರಾಮನ ಈ ವಚನ ಅರ್ಥಪೂರ್ಣವಾಗಿ ವಿಶ್ಲೇಷಿಸುತ್ತದೆ. ಮನುಷ್ಯ ಮತ್ತು ಕಾಲದ ನಡುವಿನ ದ್ವಂದ್ವಗಳನ್ನು ಅರಿತುಕೊಂಡಲ್ಲಿ ಇತಿಹಾಸವಾಗಲಿ – ವರ್ತಮಾನವಾಗಲಿ ಮನುಕುಲಕ್ಕೆ ಮಗ್ಗಲು ಮುಳ್ಳಾಗುವುದಿಲ್ಲ. "ನಾಲಿಗೆ ಪದೇ ಪದೇ ನೋಯುವ ಹಲ್ಲಿಗೆ ಹೊರಳುವುದರಿಂದ" ವೇದನೆ ಕಡಿಮೆಯಾಗುವುದಿಲ್ಲ. ಈ ಹಿನ್ನಲೆಯಲ್ಲಿ ಟಿಪ್ಪುವಿನ ಭಾರತೀಯತೆಯ ಕಲ್ಪನೆ, ನಾಡು-ನುಡಿ, ಆಡಳಿತಕ್ರಮವನ್ನು ಪರಿಶೀಲಿಸಬೇಕಾಗಿದೆ. ಇತಿಹಾಸದ ಗೋರಿಗಳನ್ನು ತೋಡುತ್ತಾ ಹೋದಂತೆ "ನಮಗೆ ಸಿಗುವುದು ಎಲಬುಗಳೇ ಹೊರತು" ರಕ್ತ-ಮಾಂಸದಿಂದ ತುಂಬಿದ ಶರೀರವಲ್ಲ. ಇದರರ್ಥ ಇತಿಹಾಸದ ಪುಟಗಳನ್ನು ಆರಾಧಿಸಬೇಕೆಂದಲ್ಲ. ಪೂರ್ವಗ್ರಹತನಗಳಿಂದ ಮುಕ್ತರಾಗಿ ಸಂಬಂಧಗಳನ್ನು ಬೆಸೆಯುವ ಹಾದಿಯಲ್ಲಿ ನಮ್ಮ ಸಂಶೋಧನಾಗ್ರಹಿಕೆಗಳು ಮುಂದುವರಿದಲ್ಲಿ ಸಾಮಾಜಿಕ ಬಿರುಕುಗಳನ್ನು ತಡೆಗಟ್ಟಲು ಸಾಧ್ಯ.

ಆಯಾ ಕಾಲದಲ್ಲಿ ಆದರ್ಶರಾಜರೆನಿಸಿಕೊಂಡವರ ಆಡಳಿತ ಪದ್ಧತಿಯ ಹಿಂದೆ ರಾಜಕಾರಣದ ಸೂಕ್ಷ್ಮತೆಗಳನ್ನು ಅಲ್ಲಗಳೆಯುವಂತಿಲ್ಲ. ಇನ್ನೂ ಮುಂದುವರೆದು ಸ್ವಾಮಿ ವಿವೇಕಾನಂದರು "ಪ್ರತಿಯೊಂದು ಧಾರ್ಮಿಕ ಹೋರಾಟದ ಹಿಂದೆಯೂ ಒಂದು ಆರ್ಥಿಕ ಹೋರಾಟವಿದೆ" ಎನ್ನುತ್ತಾರೆ ಸುವರ್ಣಯುಗದ ಸಾಂಸ್ಕೃತಿಕ ಚಹರೆಯ ಹಿಂದೆ ಶೋಷಣೆಯ ಕಬ್ಬಿಣದ ಕೈಗಳಿವೆ. ಜನತಂತ್ರ ವ್ಯವಸ್ಥೆಯನ್ನು 'ದಮನ' ಮಾಡದ ರಾಜನನ್ನು, ರಾಜ್ಯದ ಮೇರೆಗಳನ್ನಾದರೂ ಹುಡುಕುವುದು ಎಲ್ಲಿ? ನಾವು

ಅತ್ಯಂತ ನಾಗರೀಕರು ಎಂದು ಕರೆದುಕೊಳ್ಳುವುದು ಯಾವ ಹಂತದಲ್ಲಿ ಸಾಧ್ಯವಾಗಿದೆ? ಭವ್ಯ-ದಿವ್ಯವೆಂದು ಘೋಷಣೆ ಕೂಗುವ ಸಂಸ್ಕೃತಿಯ ಆರಾಧಕರು ಈ ದೇಶದ ಅಧೋಗತಿಗೆ ಕಾರಣವಾದ ಅಂಶಗಳನ್ನು ತಿಳಿಯಲು ಒಮ್ಮೆ ವಿವೇಕಾನಂದರನ್ನು ಓದಬೇಕು. ದೇಶಪ್ರೇಮ ಮತ್ತು ಸಂಸ್ಕೃತಿಯ ನಿಜವಾದ ಸಂಪತ್ತು ಯಾರು? ಎನ್ನುವುದು ತಿಳಿಯುತ್ತೆ. ಸ್ವಾತಂತ್ರ್ಯ ಪೂರ್ವದಲ್ಲಿಯೇ ಎರಡು ಜನಾಂಗಗಳ ಬೆಸೆಯುವಿಕೆ ಅನಿವಾರ್ಯ ಎನ್ನುವುದನ್ನು ವಿವೇಕಾನಂದರು ಪ್ರತಿಪಾದಿಸುತ್ತಾರೆ. "ನಮ್ಮ ಮಾತೃಭೂಮಿಯಲ್ಲಿ ಹಿಂದೂ ಮತ್ತು ಮುಸಲ್ಮಾನ ಧರ್ಮಗಳೆರಡೂ ಮಿಲನವಾಗಬೇಕು. ವೇದಾಂತದ ಮೆದುಳು, ಇಸ್ಲಾಮಿನ ದೇಹ ಇದೊಂದೇ ನಮ್ಮ ಪುರೋಗಮನಕ್ಕೆ ಹಾದಿ" ಎಂದ ಒಬ್ಬ ಸನ್ಯಾಸಿ ವಾಸ್ತವತೆಯನ್ನು ಅರ್ಥೈಸಿಕೊಳ್ಳುವುದಕ್ಕೂ, ಇವತ್ತಿನ ನಮ್ಮ ರಾಜಕಾರಣಿಗಳು ಇತಿಹಾಸದ ರಕ್ತ-ಸಿಕ್ತ ಕಲೆಗಳನ್ನು ಹುಡುಕುವುದಕ್ಕೂ ಎಷ್ಟು ವ್ಯತ್ಯಾಸವಿದೆ.

ಒಬ್ಬ ಪ್ರವಾದಿಗೆ ಕಾಣುವ ಬೆಳಕು; ಭೌತಜಗತ್ತಿಗೆ ಕಾಣುವುದಿಲ್ಲ. ಕಾರಣ ಮನಸ್ಸಿನ ವೈರುಧ್ಯಗಳು. ಈ ವೈರುಧ್ಯಗಳು ಧ್ಯಾನಸ್ಥ ರೂಪವನ್ನು ತಾಳಿದರೆ ಸುಟ್ಟಸೊಡರು ಒಂದು ಬೆಳಕಾಗಲು ಸಾಧ್ಯ. ಅರಿವೆಂಬ ಬೆಳಕಿಗೆ ತೈಲವಾದ ಚರಿತ್ರೆ ನಮಗೆ ಬಹುವಿಧವಾಗಿ ಕಾಡುವಂತದ್ದು. ನಮ್ಮ ಸಮಕಾಲೀನ ಸಂದರ್ಭಗಳನ್ನು ಗ್ರಹಿಸುವುದು ಚರಿತ್ರೆಯ ಮೂಲಕವಾದರೂ, ಕಾಣದ ಸೊಡರುಕ್ಕಿಂತಲೂ ಕಾಣುವ ಬೆಳಕು ಮುಖ್ಯವಾಗಬೇಕು. ಆದರೆ ಈ ಬೆಳಕನ್ನು ಹಿಡಿದಿಡುವುದು ಅಷ್ಟು ಸುಲಭವಲ್ಲ. ನಿರಂತರಧ್ಯಾನ, ಅನ್ವೇಷಣೆ, ಏಕಾಂತಕ್ಕೆ ದಕ್ಕದ ಯಾವ ವಸ್ತುಗಳೂ ಜ್ಞಾನವಾಗುವುದಿಲ್ಲ, ಪ್ರಜ್ಞೆಯ ಮೂಲವಾಗಬಹುದಷ್ಟೇ! ಅದನ್ನೇ ವಿವೇಕಾನಂದ ಹೇಳುವುದು "......... ಅನಂತಪ್ರೇಮ ಮತ್ತು ಭೂತದಯೆಯಿಂದ ಕೂಡಿದ ನೂರಾರು ಬುದ್ಧರು ಬೇಕಾಗಿದ್ದಾರೆ. ಜಗದ ಧರ್ಮಗಳೆಲ್ಲ ನಿಸ್ತೇಜವಾಗಿ ನಗೆಗೀಡಾಗಿವೆ. ಜಗತ್ತಿಗೆ ಬೇಕಾಗಿರುವುದು ಶುದ್ಧಚಾರಿತ್ರ್ಯ....."

ಇಂದು ಪ್ರತಿಯೊಂದು 'ಜ್ಞಾನಶಿಸ್ತು' ಮಾನವೀಕರಣಗೊಳ್ಳಬೇಕಿದೆ. ಹೊಸ ಹೊಸ ಸವಾಲುಗಳನ್ನು ವೈಚಾರಿಕತೆ – ವಿಜ್ಞಾನದ ತಿಳುವಳಿಕೆಯಿಂದ ಎದುರಿಸಬೇಕಿದೆ. ಅಂತಹ ಸೃಜನಶೀಲ ಮನಸ್ಸುಗಳ ನಿರೀಕ್ಷೆಯಲ್ಲಿ 'ಅನಿಕೇತನ' ಪತ್ರಿಕೆ ಇದೆ.

ನನ್ನ ಸಂಪಾದಕತ್ವದಲ್ಲಿ ಬರುತ್ತಿರುವ ಮೊದಲ ಸಂಚಿಕೆ ಇದು. ವಿಶೇಷವಾಗಿ ರೂಪಿಸಲು ಸಾಧ್ಯವಾಗಿಲ್ಲ. ಬಂದ ಲೇಖನಗಳಲ್ಲಿಯೇ ಉತ್ತಮವಾದವುಗಳನ್ನು ಸಂಕಲಿಸಿದ್ದೇನೆ. ಇದು ನನ್ನ ಮಿತಿಯೆಂದೇ ಭಾವಿಸಿದ್ದೇನೆ. ಎಂದಿನಂತೆ ಅರುಂಧತಿರಾಯ್, ರವೀಂದ್ರನಾಥ್ ಟ್ಯಾಗೋರ್, ಡಾ. ಎಂಡ್ಲೂರಿ ಸುಧಾಕರ, ಮುಲ್ಕರಾಜ್ ಆನಂದರವರ ಆಳದ ಮನುಷ್ಯ ಪ್ರೀತಿಯನ್ನು ನಮ್ಮ ಲೇಖಕರು ಇಷ್ಟಪಟ್ಟಿದ್ದಾರೆ. ಇವುಗಳನ್ನು ಕ್ರಮವಾಗಿ ಡಾ. ಕೆ. ಆರ್. ಸಿದ್ಧಗಂಗಮ್ಮ, ಪ್ರೊ. ಪರಿಮಳನಾಯಕ, ಬಿ. ಮಹೇಶ್ ಹರವೆ, ಡಾ. ಆಂಜನಪ್ಪ, ಶ್ರೀನಿವಾಸ ವಿ. ಸುತ್ರಾವೆ, ಶ್ರೀಧರರಾವ್. ಪಿಸ್ಸೆ, ಸಮರ್ಥವಾಗಿ ಕನ್ನಡಿಸಿದ್ದಾರೆ. ನಮ್ಮ ಅನುವಾದಕರು ತಮ್ಮ ಧೋರಣೆಗಳನ್ನು 'ವಿಷಯ'ದ ಆಯ್ಕೆಯಲ್ಲಿಯೇ ಸ್ಪಷ್ಟಗೊಳಿಸಿದ್ದಾರೆ. ಈ ರೀತಿಯ

ಸಾಹಿತ್ಯದ ವಿವಿಧ ಪ್ರಕಾರಗಳು ಕನ್ನಡಕ್ಕೆ ಮತ್ತಷ್ಟು ಭಾಷಾಂತರಗೊಳ್ಳಬೇಕಿದೆ. ಈ ಹಿನ್ನೆಲೆಯಲ್ಲಿಯೇ 'ಗೂರ್ಕಾ' ಪದ್ಯ ಮಹತ್ವದಾಗುತ್ತದೆ. 'ಸೃಜನ' ವಿಭಾಗದಲ್ಲಿ ಹಿರಿಯ ಲೇಖಕರಾದ ಪ್ರೊ. ಎಸ್.ಜಿ. ಸಿದ್ಧರಾಮಯ್ಯ, ಬಿಳುಮನೆ ರಾಮದಾಸ್, ಪ್ರೊ. ಜಿ.ಬಿ. ಸಜ್ಜನ, ಡಾ. ಭೈರಮಂಗಲ ರಾಮೇಗೌಡ, ನಮ್ಮ ತಲೆಮಾರಿನ ಚಿದಾನಂದಸಾಲಿ, ಲಕ್ಕೂರ ಸಿ. ಆನಂದ, ಡಾ. ಆರ್. ಜಿ. ಮಠಪತಿ, ಡಾ. ಅಣ್ಣೆಮ್ಮ ಮುಂತಾದವರ ಬರವಣಿಗೆಯಲ್ಲೆಲ್ಲಾ ಸಮಕಾಲೀನ ದೃಷ್ಟಿಕೋನಗಳಿವೆ.

ಒಂದು ತಲೆಮಾರಿನ ಚಿಂತನೆಗಳು ಸ್ಥಿತ್ಯಂತರಕ್ಕೆ ಒಳಪಡುತ್ತಿರುವ ಸೂಚನೆಗಳು ಇಲ್ಲಿಯ ಸೃಜನಶೀಲತೆಯಲ್ಲಿ ಸ್ಪಷ್ಟವಾಗಿವೆ. ಬಿಕ್ಕಟ್ಟುಗಳನ್ನು ಎದುರಿಸುವಲ್ಲಿ ಬರೀ ಆತಂಕಗಳಿಲ್ಲ. ಸಿದ್ಧತೆಗಳೂ ಇವೆ. ಅಂತಹ ಭರವಸೆ ಹೊಸ ಪ್ರತಿಭೆಗಳಲ್ಲಿ ಕಾಣಿಸಿಕೊಂಡಿದೆ. ಭಿನ್ನ ಮನೋಧರ್ಮದ ಸಾಹಿತ್ಯಿಕ ರೂಪಗಳಾಗಿ ಎಲ್ಲ ಲೇಖಕರ ಅನುವಾದ, ಸೃಜನಶೀಲತೆ, ಲೇಖನ – ವಿಮರ್ಶೆಗಳ ಸ್ವರೂಪವಿದೆ. ಇದೊಂದು ಪ್ರಯೋಗ. ಎಂದಿನಂತೆ ಸಹೃದಯತೆಯಿಂದ ಈ ಸಂಚಿಕೆಯನ್ನು ಕೈಗೆತ್ತಿಕೊಳ್ಳುತ್ತೀರೆಂದು ನಂಬಿದ್ದೇನೆ. ನಿಮ್ಮಿಂದ ಸಲಹೆ ಸೂಚನೆಗಳನ್ನು ಬಯಸುತ್ತೇನೆ.

ಸಂಪಾದಕನನ್ನಾಗಿ ರೂಪಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ನಾಡೋಜ ಗೀತಾನಾಗಭೂಷಣರವರಿಗೆ, ರಿಜಿಸ್ಟ್ರಾರ್‌ರಾದ ಶ್ರೀಮಲ್ಲಿಕಾರ್ಜುನ ಸ್ವಾಮಿಯವರಿಗೆ, ಅಕಾಡೆಮಿಯ ಎಲ್ಲ ಸದಸ್ಯರಿಗೆ, ಕರಡನ್ನು ತಿದ್ದುವಲ್ಲಿ ನೆರವಾದ ಡಾ. ಬಿ.ಎಸ್. ಬಿರಾದಾರರವರಿಗೆ, ಅಕ್ಷರ ಸಂಯೋಜಕರಾದ ಬಸವರಾಜ ಚಿನಿವಾಲರಿಗೆ ನನ್ನ ಸಂಪ್ರೀತಿ ವಂದನೆಗಳು.

ಡಾ. ವೆಂಕಟಗಿರಿ ದಳವಾಯಿ.

ಪರಿವಿಡಿ

ಭಾಗ-೧ ಪುಟ

೧) ಪರಿಣೀತರಿಗೇ ತೀರ್ಮಾನಗಳನ್ನು ಬಿಡಬೇಕೆ? (ಲೇಖನ) ೧
ಇಂಗ್ಲೀಷ್ ಮೂಲ : ಅರುಂಧತಿರಾಯ್
ಅನುವಾದ : ಡಾ. ಕೆ.ಆರ್. ಸಿದ್ಧಗಂಗಮ್ಮ
ಪ್ರೊ. ಪರಿಮಳನಾಯಕ

೨) ಕಳೆದು ಹೋದ ಹುಡುಗ (ಕಥೆ) ೨೦
ಇಂಗ್ಲೀಷ್ ಮೂಲ : ಮುಲ್ಕ್‌ರಾಜ್ ಆನಂದ
ಅನುವಾದ : ಶ್ರೀನಿವಾಸ ವಿ. ಸುತ್ರಾವೆ.

೩) ಮುದುಕವ್ವ (ಕಥೆ) ೨೬
ಮಣಿಪುರಿಮೂಲ : ಕೆಯ್ ಶಾಮ್ ಪ್ರಿಯೆಂ ಕುಮಾರ್
ಇಂಗ್ಲೀಷ್‌ನಿಂದ ಕನ್ನಡಕ್ಕೆ : ಶ್ರೀಧರರಾವ್ ಪಿಸ್ಸೆ.

೪) ಕಬೀರರ ವಚನಗಳು (ಕವಿತೆ) ೩೬
ಇಂಗ್ಲೀಷ್ ಮೂಲ : ರವೀಂದ್ರನಾಥ ಟ್ಯಾಗೋರ್
ಅನುವಾದ : ಬಿ. ಮಹೇಶ್ ಹರವೆ.

೫) ಇರುಳು ಮಲ್ಲಿಗೆ (ಕವಿತೆ) ೩೮
ಮಲಯಾಳಂ ಮೂಲ: ಓ. ಎನ್.ಬಿ. ಕುರುಪ್ಪ್
ಅನುವಾದ : ಜಿ. ನವೀನಕುಮಾರ್

೬) ನದಿ, ಪ್ರೇಮ, ವಿಸರ್ಜನ (ಕವಿತೆ) ೪೦
ಅಸ್ಸಾಮಿ ಮೂಲ : ನವಸಾಪಕೋಟ
ಹಿಂದಿಗೆ : ಶಾಂತಿಧಾಪಾ
ಕನ್ನಡಕ್ಕೆ ಅನುವಾದ : ಅರ್ಜುನ ಕೊರಟಕರ

೭) ಡಾ. ಎಂಡ್ಲೂರಿ ಸುಧಾಕರ ಎರಡು ಕವಿತೆಗಳು ೪೨
ಅನುವಾದ : ಡಾ. ಆಂಜನಪ್ಪ

೮) ಮಿರ್ಜಾಗಾಲೀಬ್‌ನ ಛಾಯಾನುವಾದ. ೪೭
ಅನುವಾದ : ವಿಜಯ್ ಕರೋಲಿ

ಭಾಗ-೨

೯) ಪ್ರಾಚೀನ ಕನ್ನಡ ಸಾಹಿತ್ಯೋಕ್ತ ಅಪರಾಧಗಳ ೪೯
ಸ್ವರೂಪ (ಲೇಖನ) ಡಾ. ಎಚ್.ಎಮ್. ಚೆನ್ನಪ್ಪಗೋಳ

೧೦) ವಚನಕಾರ ವೀರಗೊಲ್ಲಾಳ (ಲೇಖನ) ೬೫
ಪ್ರೊ. ಎಸ್.ಜಿ. ಸಿದ್ಧರಾಮಯ್ಯ

೧೧) ಚಿದಾನಂದ ಸಾಲಿ : ಐದು ಗಜಲುಗಳು ೭೩

೧೨) ಆನಂದ ಸಿ. ಲಕ್ಕೂರ : ಎರಡು ಕವಿತೆಗಳು ೭೬

೧೩) ಬದುಕು ಜಟಕಾಬಂಡಿ (ಕಥೆ) ೮೦
ಉಮೇಶ್ ತಿಮ್ಮಾಪುರ

೧೪) ಖಾಲಿಯಾದ ಮಾಂಸದ ಕಡಾಯ (ಪ್ರಬಂಧ) ೮೫
ಬಿಳುಮನೆ ರಾಮದಾಸ.

೧೫) 'ಮುಕ್ತಿ' ಪಡೆದ ದೇಸಾಯಿಯವರೊಂದಿಗೆ (ಲೇಖನ) ೯೦
ಪ್ರೊ. ಜಿ.ಬಿ. ಸಜ್ಜನ

೧೬) ಎ.ಸಿ. ಅಪ್ಪಾಜಿಗೋಳ : ಎರಡು ಕವಿತೆಗಳು ೯೮

೧೭) ಅಗಾಧ ವಿಸ್ಮಯಗಳಿಗೆ ತೆರೆದ ಕಣ್ಣು ೧೦೧
'ಚಂಚಲ ನಕ್ಷತ್ರಗಳು' (ವಿಮರ್ಶೆ)

೧೮) ಅಡಿಗರು ಮತ್ತು ಸ್ತ್ರೀವಾದ (ವಿಮರ್ಶೆ) ೧೦೫
ಡಾ. ಅಣ್ಣಮ್ಮ

೧೯) ಕುಸುಮ ನಕೋಸಾಕರಾಳೆ : ಎರಡು ಕವಿತೆಗಳು ೧೧೨

೨೦) ಭೀತಿಯಿಂದ ಬುದ್ಧನೆಡೆಗೆ (ಲೇಖನ) ೧೧೫
ಡಾ. ಆರ್.ಜಿ. ಮಠಪತಿ.

೨೧) ಪಶ್ಚಾತ್ತಾಪ (ಕಥೆ) ೧೨೩
ಮಿಥುನ ಚಕ್ರವರ್ತಿ.

೨೨) ಆಕುರಾಲೇಕಾಲಂ ಮತ್ತು ಎಲೆ ೧೪೧
ಉದುರುವ ಕಾಲ (ವಿಮರ್ಶೆ)
ಡಾ. ಜಿ. ವೀರಭದ್ರಗೌಡ

ಪರಿಣಿತರಿಗೇ ತೀರ್ಮಾನಗಳನ್ನು ಬಿಡಬೇಕೆ?

ಇಂಗ್ಲೀಷ ಮೂಲ : ಅರುಂಧತಿರಾಯ್
ಅನುವಾದ : ಡಾ: ಕೆ.ಆರ್.ಸಿದ್ದಗಂಗಮ್ಮ
ಪ್ರೊ . ಪರಿಮಳನಾಯಕ

ಭಾರತದೇಶ ಒಂದೇ ಕಾಲದಲ್ಲಿ ಅನೇಕ ಶತಮಾನಗಳಲ್ಲಿ ಬದುಕುತ್ತದೆ. ಇಲ್ಲಿ ಅಭಿವೃದ್ಧಿ ಮತ್ತು ಅನಾಭಿವೃದ್ಧಿಗಳು ಜೊತೆ ಜೊತೆಯಾಗಿ ಕೈ ಹಿಡಿದು ನಡೆಯುತ್ತವೆ. ನಮ್ಮದೇಶವು ಅಭಿವೃದ್ಧಿಯ ಪಥದಲ್ಲಿ ಮುಂದೆ ಸಾಗಿದಷ್ಟೇ ದೂರವನ್ನು ಅದರ ವಿರುದ್ಧ ದಿಕ್ಕಿನಲ್ಲಿ ಹಿಂದೆಯೂ ಸಾಗುತ್ತಿದೆ. ಶಾರ್ಕ್ ಮೀನಿನ ಕಣ್ಣುಗಳಂತೆ ನಮ್ಮ ಕಣ್ಣುಗಳು ಪರಸ್ಪರ ವಿರುದ್ಧ ದಿಕ್ಕಿನಲ್ಲಿ ದೃಷ್ಟಿಸುತ್ತಿವೆ. ನಮ್ಮಲ್ಲಿ ಒಂದೇ ಕಾಲದಲ್ಲಿ ಪ್ರತಿಗಾಮಿ ಮತ್ತು ಪುರೋಗಾಮಿ ಆಲೋಚನೆಗಳು ಕೆಲಸ ಮಾಡುತ್ತಿವೆ. ಒಂದುಕಡೆ ಯುರೋಪ ಇಂಡಿಯಾದ ಸಾಫ್ಟ್‌ವೇರ್ ಇಂಜನಿಯರ್‌ಗಳನ್ನು ಕರೆಸಿಕೊಳ್ಳುವ ಸಲುವಾಗಿ ತಮ್ಮ ಇಮಿಗ್ರೇಷನ್ ನೀತಿ ನಿಯಮಗಳನ್ನು ಬದಲಿಸಿಕೊಳ್ಳಲು ನಿಂತಿದೆ[೧] ಇನ್ನೊಂದುಕಡೆ ಭಾರತದಲ್ಲಿ ಕುಂಬಮೇಳದಲ್ಲಿ ನಾಗ ಸಾಧು ಜಿಲ್ಲಾಧಿಕಾರಿಯ ಕಾರನ್ನು ತನ್ನ ಶಿಶ್ನದ ಬಲದಿಂದ ಎಳೆದುಕೊಂಡು ಹೋಗುತ್ತಿದ್ದಾನೆ. ಆಗ ಆ ಜಿಲ್ಲಾಧಿಕಾರಿ ತನ್ನ ಕುಟುಂಬದೊಂದಿಗೆ ಕಾರಿನಲ್ಲಿ ಕುಳಿತು ನೋಡುತ್ತಿದ್ದಾನೆ[೨] ವೈಚಾರಿಕತೆಯ ಜೊತೆಗೇ ಅಂಧಶ್ರದ್ಧೆಯ ಪರಮಾವಧಿ ಇದು. ನಾವು ಯಾವ ಶತಮಾನದಲ್ಲಿದ್ದೇವೆ?

ಒಂದು ದಿಕ್ಕಿನಲ್ಲಿ ಅಣುಬಾಂಬ್‌ನ ಪರೀಕ್ಷೆಗಳು ನಡೆಯುತ್ತಿದ್ದರೆ ಇನ್ನೊಂದು ಕಡೆ ಮಸೀದಿಯ ಧ್ವಂಸದಿಂದ ಇಡೀ ದೇಶವೇ ಕೋಮು ಗೊಂದಲದಲ್ಲಿ ಉರಿಯುತ್ತಿದೆ. ಒಂದು ಕಡೆ ಚರ್ಚಿನ ಪಾದ್ರಿಯ ಬೀಭತ್ಸ ಹತ್ಯೆ ಇನ್ನೊಂದು ಕಡೆ ಮೊಬೈಲ್ ನೆಟವರ್ಕಗಳ ವಿಸ್ತರಣೆ. ಒಂದೆಡೆ ಹೆಣ್ಣು ಭ್ರೂಣ ಹತ್ಯೆ, ಇನ್ನೊಂದೆಡೆ ಕಂಪ್ಯೂಟರ್ ಕ್ರಾಂತಿ. ಒಂದು ಕಡೆ ವರದಕ್ಷಿಣೆಗಾಗಿ ಹೆಣ್ಣುಗಳ ಸಜೀವ ದಹನ ಇನ್ನೊಂದೆಡೆ ವಿಶ್ವ ಸುಂದರಿಯರ ಸಾಲಿನಲ್ಲಿ ಭಾರತ... ಇದರರ್ಥ ಏನು? ಆಧುನಿಕತೆ ಒಳ್ಳೆಯದು ಸಾಂಪ್ರದಾಯಿಕತೆ ಕೆಟ್ಟದ್ದು ಎಂದು ಅದರ ವಿರುದ್ಧವಾಗಿ ಸಾಂಪ್ರದಾಯಿಕತೆ ಒಳ್ಳೆಯದು ಆಧುನಿಕತೆ ಕೆಟ್ಟದ್ದು ಎಂದು ಹೇಳುವ ವಿಚಾರ ನನ್ನದಲ್ಲ, ಈ ರೀತಿ ಒಳಿತು ಕೆಡಕು ಎಂಬ ಸರಳ ಸಮೀಕರಣವನ್ನು ನಾನು ಮಾಡುತ್ತಿಲ್ಲ. ಇಂತಹ ಎಲ್ಲ ವೈರುಧ್ಯಗಳೊಂದಿಗೆ ನಮಗೆ ಹೊಂದಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಏಕೆಂದರೆ ನಮ್ಮಲ್ಲಿಯೇ ಇರುವ ಸಿಝೋಫೆನಿಕ್ ನೇಚರ್. ಇದಕ್ಕೆ ವೈಯಕ್ತಿಕ ಜೀವನದ ಸತ್ಯ ಹಾಗೂ ರಾಜಕೀಯ ಜೀವನದ ವಾಸ್ತವಗಳು ಉಂಟು ಮಾಡುತ್ತಿರುವ ಘರ್ಷಣೆ ಕಾರಣವಿರಬಹುದೇ? ಇದಕ್ಕೆ ಭಾರತದ ಆಧುನಿಕ ಮತ್ತು ಸಾಂಪ್ರದಾಯಿಕ ಸೆಣಸಾಟಗಳ ಪರಿಣಾಮವಷ್ಟೇ ಅಲ್ಲ ಭಾರತ ನಡೆಸುತ್ತಿರುವ ಅತಾರ್ಕಿಕವಾದ ಅಭಿವೃದ್ಧಿಯ ಪ್ರಯೋಗಗಳೂ ಕಾರಣಗಳಾಗಿವೆ. ಉದಾಹರಣೆಗೆ ಈ ವೈರುಧ್ಯದ ಪರಮಾವಧಿ ಎಂದರೆ ಕೂಳಿಲ್ಲದ ಕೂಲಿಗಳು ರಾತ್ರಿ ಕಂದೀಲಿನ ಬೆಳಕಿನಲ್ಲಿ ಕೇಬಲ್ ಟಿ.ವಿ. ಯ ವೈರ್‌ಗಳನ್ನು ಹಾಕಲು ಗುಂಡಿ ತೋಡುತ್ತಿದ್ದಾರೆ ಕೊರೆಯುವ ಚಳಿಯಲ್ಲಿ ಕೆಲವೇ ಮೊಂಬತ್ತಿಗಳ ಬೆಳಕಿನಲ್ಲಿ ಕೆಲಸ ಮಾಡುತ್ತಲೇ ಇದ್ದಾರೆ. ಶ್ರೀಮಂತರ ಮನೆಯ ಟಿ.ವಿ.ಯಲ್ಲಿ ವಿಶ್ವ ಸುಂದರಿಯರ ಸ್ಪರ್ಧೆಯನ್ನು ವೀಕ್ಷಿಸಲು ಕೂಲಿಕಾರರ ದುಡಿತದ ಬೆವರು ಹೀಗೆ ಹರಿಯುತ್ತಿದೆ ಇದೆಂತಹ ವೈರುಧ್ಯ?

ಇಡಿ ಭಾರತದ ಜನ ಸಮೂಹವನ್ನು ಇಬ್ಭಾಗಿಸಿ ಎರಡು ಟ್ರಕ್ಕಿನಲ್ಲಿ ತುಂಬಲಾಗಿದೆ. ಒಂದು ಟ್ರಕ್ ಭಾರತೀಯರನ್ನು ಝಗಮಗಿಸುವ ಜಗತ್ತಿನ ತುತ್ತತುದಿಯ ಗುರಿಯತ್ತ ಒಯ್ದರೆ ಇನ್ನೊಂದು ಟ್ರಕ್ ಕತ್ತಲಲ್ಲೆ ಕರಗಿ ಮಾಯವಾಗಿಬಿಟ್ಟಿದೆ. ಕುತೂಹಲದಿಂದ ಯಾವ ಜಾತಿಯವ, ಯಾವ ವರ್ಗದವ, ಯಾವ ಧರ್ಮದವ ಯಾವ ಟ್ರಕ್ಕಿನಲ್ಲಿ ಪಯಣಿಸಿದ ಎಂದು ಸಣ್ಣ ಸಮೀಕ್ಷೆ ನಡೆಸಿದರೆ ಭಾರತದ ಇತಿಹಾಸದ ಸುರುಳಿ ಎಂತಹ ಸೋಮಾರಿಗೂ ಸ್ಪಷ್ಟವಾಗಿ ತಿಳಿಯುತ್ತದೆ. ಇದರಲ್ಲಿ ಕೆಲವರು ಎರಡೂ ಟ್ರಕ್ಕಿನಲ್ಲಿ ಆರಾಮವಾಗಿ ಕುಳಿತು ಅಚ್ಚುಕಟ್ಟಾಗಿ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಒಂದು ಕಡೆ ಬೌದ್ಧಿಕ ಇನ್ನೊಂದು ಕಡೆ ಭಾವನಾತ್ಮಕ ಎಂದು ಇವುಗಳನ್ನು ಸರಿಯಾಗಿ ವಿಭಜಿಸಿಕೊಂಡು ಪಯಣಿಸುತ್ತಿದ್ದಾರೆ.

ಈ ಬೌದ್ಧಿಕ ಭಾವನಾತ್ಮಕ ವಿಭಜನೆ ಭಾರತದಲಷ್ಟೇ ಅಲ್ಲ ಜಗತ್ತಿನಲ್ಲೆ ನಡೆಯುತ್ತಿದೆ. ಇದು ಭಾರತದಲ್ಲಿ ತೀವ್ರವಾಗಿ ತಿಳಿದು ಬರಲು ಕಾರಣ ಭಾರತದಲ್ಲಿನ

ಜನಸಂಖ್ಯೆ, ಎದ್ದು ಕಾಣುವ ಬಡತನ ಮತ್ತು ಸಿರಿತನದ ಮಾನದಂಡಗಳು. ಬಡತನ ಮತ್ತು ಸಿರಿತನದ ಎರಡು ಮುಖಗಳು ನಮ್ಮ ದೇಶದಲ್ಲಿ ಯಾವಾಗಲೂ ಮುಖಾಮುಖಿಯಾಗಿಯೇ ಇರುತ್ತವೆ. ಆದರೆ ನಾವು ಈ ಸತ್ಯವನ್ನು ಕಲಾತ್ಮಕವಾಗಿ ನಿರಾಕರಿಸಿ ನಡೆದು ಬಿಟ್ಟಿದ್ದೇವೆ. ಈ ಸತ್ಯವನ್ನು ಒಪ್ಪಿಕೊಳ್ಳಬೇಕೋ ಬೇಡವೋ? ಈ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬೇಕೋ ಬೇಡವೋ? ಆದರೆ ನಾವು ಮಾತ್ರ ನಾಳೆ ನೋಡಿದರಾಯಿತು ಎಂಬ ಯೋಚನೆಯಿಂದ ನಮ್ಮನ್ನು ನಾವು ಬೆಚ್ಚಗಿನ ವ್ಯೂಹದಲ್ಲಿ ರಕ್ಷಿಸಿಕೊಳ್ಳುವ ಹುಚ್ಚುತನ ಮಾಡುತ್ತಿದ್ದೇವೆ.

ಇಂತಹ ಸಂದರ್ಭದಲ್ಲಿ ಲೇಖಕನಾಗಿರೋದು ಎಂದರೆ? ಅದೂ ಮಿಲಿಯನ್‌ಗಟ್ಟಲೆ ನಿರಕ್ಷರಸ್ತರ[೮] ನಡುವೆ! ಇಲ್ಲಿ ಲೇಖಕನಿಗೆ ಸಿಗೋ ಗೌರವ ಸಂಶಯಾಸ್ಪದ, ಅಹಿಂಸೆಯ ತತ್ವವನ್ನು ಜಗತ್ತಿಗೆ ಕೊಟ್ಟ ಗಾಂಧೀಜಿಯನ್ನು ಹೆತ್ತ ನಾಡಿನಲ್ಲಿ ಕೇವಲ ಅರ್ಧ ಶತಮಾನವನ್ನು ದಾಟುವಷ್ಟರಲ್ಲಿಯೇ ಪರಮಾಣು ಬಾಂಬಿನ ಪರೀಕ್ಷೆಗಳು ನಡೆಯುತ್ತಿರುವ ಸಂಗತಿ ಲೇಖಕನ ಮೇಲೆ ಭಯಂಕರ ಬೋಜವಾಗಿದೆ(ಹೊರೆಯಾಗಿದೆ). ಅಮೇರಿಕಾದ ಲೇಖಕನೋ ಸಹ ಇದಕ್ಕಿಂತ ಕಡಿಮೆ ಹೊರೆ ಹೊತ್ತಿಲ್ಲ. ಅಮೇರಿಕಾದವರು ಇಡೀ ಭೂಮಂಡಲವನ್ನೇ ಸಹಸ್ರಬಾರಿ ನಾಶಮಾಡಬಲ್ಲ ಪರಮಾಣು ಬಾಂಬಿನ ಅಸ್ತ್ರಗಳನ್ನು ಸಂಗ್ರಹಿಸಿದ್ದಾರೆ. ಅಭಿವೃದ್ಧಿಯ ಹೆಸರಿನಲ್ಲಿ ಆಂತರಿಕ ಕಲಹಕ್ಕೆ(Civilwar)ಮುಸುಕಿನಲ್ಲೇ ಪ್ರಜೆಗಳ ಮೇಲೆ ಆಜ್ಞೆ ಮಾಡುವ ನಾಡಿನಲ್ಲಿ ಲೇಖಕನ ಜವಾಬ್ದಾರಿ ಸಣ್ಣದಲ್ಲ ಈ ಜವಾಬ್ದಾರಿ ಅನೈಚ್ಚಿಕ ಆದುದಾಗಿರುತ್ತದೆ. ಅತ್ಯಂತ ದು:ಖದಿಂದ ಮತ್ತು ಭಾರವಾದ ಹೃದಯದಿಂದ ಹೇಳುತ್ತಿದ್ದೇನೆ. ಲೇಖಕ ಹೊತ್ತ ಜವಾಬ್ದಾರಿಯು ಅನೇಕ ಬಾರಿ ಅನೈಚ್ಛಿಕ(Onerous) ಆಗಿರುತ್ತದೆ.

ಇಂತಹ ಸಂದರ್ಭದಲ್ಲಿ ಲೇಖಕರ ಮತ್ತು ಕಲಾವಿದರ ಪಾತ್ರವೇನು ಇವರಿಗೆ ನಿರ್ದಿಷ್ಟ ಕರ್ತವ್ಯಗಳು ಇರುತ್ತವೆಯೋ? ಅದನ್ನು ವಿವರಿಸಲು ನಿರ್ದಿಷ್ಟ ಪದಗಳಿವೆಯೇ ಅಥವಾ ಅವು ಇರಬೇಕಾದರೂ ಏಕೆ?

ವೈಯಕ್ತಿಕವಾಗಿ ಹೇಳುವುದಾದರೆ ಈ ರೀತಿಯ ಬದಲಾವಣೆಯೇ ಇಲ್ಲದ ಕೆಲವು ಕರ್ತವ್ಯಗಳನ್ನು ಹೊಣೆಗಾರಿಕೆಗಳನ್ನು ಲೇಖಕರಿಗೆ ಹೊರಸಿದ್ದೇ ಆದರೆ ಅವರು ಏನು ಮಾಡಬೇಕು? ಕಲ್ಪಿಸಿಕೊಳ್ಳಿ ಒಂದು ಪುಸ್ತಕವಿದೆ. ಅದರ ಹೆಸರು 'ಒಳ್ಳೆಯ ಬರವಣಿಗೆಗೆ ಹಾದಿ' ಅದರಲ್ಲಿ ಲೇಖಕನಾದವನು ರಾಜಕೀಯ ಪ್ರಜ್ಞೆ ಹೊಂದಿರಬೇಕು, ನೈತಿಕವಾಗಿರಬೇಕು, ಒಳಿತನ್ನು ದೇವರನ್ನು ನಂಬಬೇಕು, ಜಾಗತೀಕರಣ ಮತ್ತು ಸಂಸಾರದ ಸುಖಗಳನ್ನು ಅನುಮೋದಿಸಬೇಕು. ಎಂದೆಲ್ಲ ಹೇಳುತ್ತ ಹೋದರೆ ಏನಾಗುತ್ತದೆ? ಲೇಖಕ ಸತ್ತು ಹೋಗುತ್ತಾನೆ. ಆದ್ದರಿಂದ ನನ್ನ ಪ್ರಕಾರ ಲೇಖಕನಿಗೆ ಇರಬೇಕಾದ ಮೊದಲ ನಿಯಮವೆಂದರೆ 'ಯಾವುದೇ ನಿಯಮವೇ ಇಲ್ಲದಿರುವುದು'. ಎರಡನೆಯದಾಗಿ ಲೇಖಕ/ ಕಲಾವಿದ ಕೆಟ್ಟ ಕಲಾಕೃತಿಯನ್ನು ಸೃಷ್ಟಿಸಿದರೆ ಅವನಿಗೆ ಕ್ಷಮೆಯೇ ಇಲ್ಲ. ಚಿತ್ರಕಾರರು,

ಲೇಖಕರು, ಹಾಡುಗಾರರು, ಕಲಾವಿದರು, ನೃತ್ಯ ಪಟುಗಳು, ಸಿನಿಮಾ ಮಾಡುವವರು, ಸಂಗೀತಗಾರರು ಇವರಿರುವುದು ಸೀಮೆಗಳನ್ನು ದಾಟಲಿಕ್ಕಾಗಿ, ನಿರಂತನವಾಗಿ ಆಕಾಶಕ್ಕೆ ಲಗ್ಗೆ ಇಡುವುದಕ್ಕಾಗಿ, ಕಲ್ಪನೆಯ ಹಕ್ಕಿಯಾಗಿ ಹಾರುವುದಕ್ಕಾಗಿ, ಅನಿರೀಕ್ಷಿತವಾದ ಸಂಗತಿಗಳಲ್ಲಿ ಅಡಗಿರುವ ಸೌಂದರ್ಯವನ್ನು ಹುಡುಕುವುದಕ್ಕಾಗಿ ಅಂದರೆ ರವಿ ಕಾಣದ್ದನ್ನು ಕವಿ ಕಾಣುವುದಕ್ಕಾಗಿ, ಅವನು ಪ್ರಯತ್ನಿಸುತ್ತಲೇ ಇರುತ್ತಾನೆ.

ಈಗಾಗಲೇ ಸಮಾಜದಲ್ಲಿರುವ ಸ್ಥಾಪಿತ ಮೌಲ್ಯಗಳ ಜವಾಬ್ದಾರಿಯನ್ನು ಲೇಖಕನಿಗೆ ಹೊರಿಸಲು ಹೋದರೆ ಲೇಖಕನ ಪ್ರಯತ್ನಗಳನ್ನು ದಿಕ್ಕು ತಪ್ಪಿಸುತ್ತಿರಿ, ಒಬ್ಬ ಒಳ್ಳೆಯ ಶ್ರೇಷ್ಠ ಲೇಖಕ ಸಮಾಜ ಬಯಸುವ ಸ್ಥಾಪಿತ ಮೌಲ್ಯಗಳ ಹೊರೆ ಹೊರಲು ನಿರಾಕರಿಸುತ್ತಾನೆ. ತನಗಿರುವ ಸ್ವಾತಂತ್ರ್ಯವನ್ನು ಕಳೆದುಕೊಂಡರೆ ಕೆಟ್ಟ ಕಲೆಯ ಸೃಷ್ಟಿಗೆ ತಾನು ಕಾರಣನಾಗುತ್ತೇನೆ, ಎಂದವನಿಗೆ ತಿಳಿದಿರುತ್ತದೆ. ಲೇಖಕನಾದವನಿಗೆ ಅವನ ಬರವಣಿಗೆಯೇ ನೈತಿಕತೆಯನ್ನು ಜವಾಬ್ದಾರಿಗಳ ಜಾಲವನ್ನು ಹೊರಿಸಿರುತ್ತದೆ. ಈ ಹೊರೆಯನ್ನು ಜವಾಬ್ದಾರಿಯನ್ನು ಲೇಖಕನೇ ರೂಪಿಸಿಕೊಂಡಿದ್ದರೂ ನೈತಿಕತೆಯ ಜವಾಬ್ದಾರಿಯಂತೂ ಇದ್ದೇ ಇರುತ್ತದೆ.

ಕಲೆ ಅಂತಿಮವಾಗಿ ಕಲಾವಿದ ಮತ್ತು ಮಾಧ್ಯಮದ ನಡುವಿನ ಸಂವೇದನಾತ್ಮಕ ಸಹಕಾರವನ್ನು ಹೇಳುತ್ತಿರುತ್ತದೆ. ಈ ಸಂಬಂಧ ತಪ್ಪಿದರೆ ಒಂದು ರೀತಿಯ ಶೋಷಣೆ ಅಗೌರವಗಳಿಂದ ಕಲೆ ಕೆಳಗೆ ಬಿದ್ದು ಬಿಡುತ್ತದೆ.

ಸಮಾಜ ಹೇರುವ ಯಾವುದೇ ಬಾಹ್ಯ ನಿಯಮಗಳು ಮತ್ತು ಪರಿಸ್ಥಿತಿಗಳು ಲೇಖಕನನ್ನು ಸಂಕೀರ್ಣಗೊಳಿಸುತ್ತವೆ. ಜೀವಂತ ಭಾವದ ಹಕ್ಕಿಗೂ ಕೃತಕವಾಗಿ ಒತ್ತಡದಿಂದ ಸೃಷ್ಟಿಸಿದ ಹಕ್ಕಿಗೂ ನಡುವೆ ಯಾವಾಗಲೂ ತೆಳುವಾದ ಗೆರೆಯಿರುತ್ತದೆ. ಅದನ್ನು ಗುರುತಿಸುವುದು ಹೇಗೆ? ಅದನ್ನು ದಾಟುವುದು ಹೇಗೆ? ಪ್ರವಾದಿಯೊಬ್ಬನ ಅಥವಾ ಜಾದುಗಾರನ ಶಬ್ದಗಳಲ್ಲಿ ಇದನ್ನು ಹೇಳಬೇಕೆಂಬ ಒತ್ತಡ ನನಗೆ ಉಂಟಾಗುತ್ತದೆ. ಅದೊಂದು 'ಕಲ್ಪನಾ ವಿಲಾಸ'. ಇದನ್ನು ಯಾವ ಓದುಗನೂ ಯಾವ ಸಂಪಾದಕನೂ ಯಾವ ಸ್ನೇಹಿತನೂ, ಯಾವ ಶತ್ರುವೂ ಸ್ಪಷ್ಟವಾಗಿ ಹೇಳುವುದಿಲ್ಲ. ಈ ಗೆರೆಯನ್ನು ಹುಡುಕಲು ಪ್ರತಿಯೊಬ್ಬ ಲೇಖಕನು ತನ್ನನ್ನು ಪ್ರಮಾಣಿಕವಾಗಿ ಪ್ರಶ್ನಿಸಿಕೊಳ್ಳಬೇಕು. ಈ ತೆಳುವಾದ ಗೆರೆಯನ್ನು ಒಮ್ಮೆ ಹುಡುಕಿ ಬಿಟ್ಟನೆಂದರೆ ಸಾಕು ಅದನ್ನು ನಿರ್ಲಕ್ಷಿಸಲು ಅಸಾಧ್ಯ, ಆಗ ಆಯ್ಕೆಯ ಪ್ರಶ್ನೆಯೇ ಬರುವುದಿಲ್ಲ. ಸಮಾಜ ಹಾಕುವ ನೀತಿ–ನಿಯಮಗಳು ಬರುವುದಿಲ್ಲ. ಕಲಾವಿದ ಕಂಡುಕೊಂಡ ಸತ್ಯದೊಂದಿಗೆ ಬದುಕಲೇಬೇಕು. ಆ ಸತ್ಯವನ್ನು ಅನುಸರಿಸಲೇಬೇಕು. ಒಮ್ಮೆ ಆ ಸತ್ಯವನ್ನು ಒಪ್ಪಿಸಿಕೊಂಡು ಅದರಲ್ಲಿ ಸಂಕೀರ್ಣತೆಯೊಂದಿಗೆ ವೈರುಧ್ಯಗಳೊಂದಿಗೆ ಅದರ ಹಕ್ಕೊತ್ತಾಯಗಳ ನಡುವೆ ಬದುಕಬೇಕು. ಅದು ಯಾವಾಗಲೂ ಸುಲಭ ಅಲ್ಲ. ಏಕೆಂದರೆ ಅದು ನಮ್ಮನ್ನು ಹೊಗಳಿಕೆಯ ದಿಕ್ಕಿಗೆ ಒಯ್ಯುವುದಿಲ್ಲ. ನಮ್ಮ ಪರವಾಗಿಯೂ ನಿಲ್ಲುವುದಿಲ್ಲ. ಆ ಸತ್ಯ ನಮ್ಮನ್ನು ದುರ್ಗಮವಾದ ಹಾದಿಯಲ್ಲಿ ಕರದೊಯ್ಯುತ್ತದೆ. ಅದರ ಹುಡುಕಾಟವೇ ನಮ್ಮೆದುರಿನ ಪ್ರಶ್ನೆ, ಉದಾಹರಣೆಗೆ

ಆ ದಾರಿಯು ಭೀಕರ ಯುದ್ಧದ ಮಧ್ಯದಲ್ಲಿ ಜ್ಞಾನೋದಯದ ಕ್ಷಣಗಳಾಗಿ ಹುಟ್ಟಬಹುದು. ಅಥವಾ ಬದುಕಿನ ರಹಸ್ಯಗಳು ಬಂಗಾರದ ಮೀನಿನಲ್ಲೂ ಸಿಗಬಹುದು. ಅದರ ವಿರುದ್ಧವಾಗಿ ನಿರಾತಂಕ ಶಾಂತಿಯ ನಡುವೆಯೂ ಮೌನ ಯುದ್ಧವು ನಡೆಯುತ್ತಿರುವುದನ್ನು ಕಾಣಬಹುದು.

ಯಾರಿಗೂ ಸಹ ಈ ಸಂದರ್ಭಗಳಲ್ಲಿ ಬದುಕಿನ ಸತ್ಯ ಮತ್ತು ಸೌಂದರ್ಯಗಳು ಇಲ್ಲಿಲ್ಲ ಎಂದು ಹೇಳಲಾಗದು. ಸಮಸ್ಯೆ ಎಂದರೆ ಒಮ್ಮೆ ಸತ್ಯದ ದರ್ಶನವಾದ ನಂತರದಲ್ಲಿ ಅದನ್ನು ನೋಡದೆ ಇರುವುದೂ ಅಸಾಧ್ಯ. ಮೌನದಿಂದಿರುವುದೂ ರಾಜಕೀಯವಾಗುತ್ತದೆ. ಇಷ್ಟಾಗಿಯೂ ಲೇಖಕನೇ ಎರಡಕ್ಕೂ ಜವಾಬ್ದಾರನು.

ಇಂದು ಜಗತ್ತಿನಲ್ಲಿ ಯಾವ ಕಾಲಕ್ಕೂ ಸಿಗಲಾರದಷ್ಟು ಲೇಖಕನಿಗೆ ಬೌದ್ಧಿಕ ಸ್ವಾತಂತ್ರ ಸಿಕ್ಕಿದೆ. ಎಲ್ಲಾ ಶಕ್ತಿಯುತ ರಾಷ್ಟ್ರಗಳು, ಸಮಾಜಗಳು, ಮಾತಾಡುವ ಸ್ವಾತಂತ್ರವನ್ನು ಕಾಯ್ದುಕೊಂಡಿವೆ. ಈ ಮಾತಿನ ಸ್ವಾತಂತ್ರಕ್ಕೆ ದಕ್ಕೆ ಒದಗಿದರೆ ತೀವ್ರವಾದ ಆಕ್ಷೇಪ ಆ ಕ್ಷಣದಲ್ಲೇ ದೊರೆಯುತ್ತದೆ. ಈಗ ಲೇಖಕನಿಗೆ ರಕ್ಷಣೆಯಿದೆ ಇದು ಆಶ್ಚರ್ಯಕರ ಸಂಗತಿ. ಇಂದು ಲೇಖಕರು, ಕಲಾವಿದರು, ಸಂಗೀತಗಾರರು, ಸಿನಿಮಾ ಮಾಡುವವರು ಆಧುನಿಕ, ನಾಗರೀಕ ಜಗತ್ತಿನಲ್ಲಿ ಹೊಳೆಯುವ ತಾರೆಯಾಗಿದ್ದಾರೆ. ನಾನಂದುಕೊಂಡಂತೆ ಕಲಾವಿದ ಹಿಂದೆಂದಿಗಿಂತಲೂ ಹೆಚ್ಚು ಸ್ವಾತಂತ್ರ್ಯವನ್ನು ಪಡೆದಿದ್ದಾನೆ. ಹಿಂದೆಂದಿಗಿಂತಲೂ ಬಹಳಷ್ಟು ಪುಸ್ತಕಗಳನ್ನು ಪ್ರಕಟಿಸಿದ್ದಾನೆ. ಈಗಂತೂ 'ಅಂತರ್ಜಾಲ' ಒಂದು ನಮ್ಮೆದುರು ಇದೆ. ಮೊದಲಿಗಿಂತ ನಾವೀಗ ವಾಣಿಜ್ಯ ಲೋಕದಲ್ಲಿ ಸಿಕ್ಕಿಹಾಕಿಕೊಂಡಿದ್ದೇವೆ. ವ್ಯಾಪಾರ ಮತ್ತು ವಸಾಹತುವಿನ ಗಮ್ಯ ಸ್ಥಾನದಲ್ಲಿ ನಿಂತಿದ್ದೇವೆ. ಅನೇಕ ಸಾವಿರ ಸೋಲಿನ ನಂತರ ಅದ್ಭುತ ಯಶಸ್ಸು ನಮ್ಮದಾಗಿದೆ. ಈ ಹೋರಾಟದ ಸಂದರ್ಭದಲ್ಲಿ ಅಸಂಖ್ಯಾತ ಜನಪದ ಶಾಸ್ತ್ರೀಯ ಕಲೆಗಳು, ಲಲಿತಕಲೆಗಳು, ಸಂಸ್ಕೃತಿ, ಸಾಂಪ್ರದಾಯಿಕ ನಡಾವಳಿಗಳು ನುಜ್ಜುಗುಜ್ಜಾಗಿರುವುದು ನಿಜ. ಆದರೂ ಅಸಂಖ್ಯಾತ ಲೇಖಕರು, ಕಲಾವಿದರು, ಹಾಡುಗಾರರು ಇತಿಹಾಸಕಾರರು ಸಮಾಜದಲ್ಲಿ ಪ್ರಭಾವಶಾಲಿಯಾಗಿ ನಿಂತು ಒಳ್ಳೆಯದನ್ನು ನೀಡುತ್ತಿರುವುದೂ ನಿಜ. ಅವರ ಕಲೆಗಳು ಯಶಸ್ವಿ ಕತೆಗಳಾಗಿವೆ, ಮೈಲಿಗಲ್ಲುಗಳಾಗಿವೆ. ಆದರೆ ಇಂತಹ ಪ್ರತಿ ಯಶಸ್ವಿನ ಗಾಥೆಯ ಹಿಂದೆಯೇ ನೂರಾರು ಅನುಕರಣೆಗಳು ಹುಟ್ಟುತ್ತವೆ. ಈ ಅನುಕರಣೆ ಮಾಡಿದವನಿಗೇ ಹೆಚ್ಚು ಶ್ರೇಯಸ್ಸು ಸಿಗುವುದರಿಂದ ಅವರೇ ಮುಂದೆ ನೇತಾರರಾಗುತ್ತಾರೆ. ಹೀಗಾಗಿ ಭಾರತದ ಈ ಸಂದರ್ಭದಲ್ಲಿ 'ಬರವಣಿಗೆಯ ಕಲೆ ಎಂಬುದು ನಟನೆಯಾಗಿದೆ' ಇಂದು ಪಾಶ್ಚಾತ್ಯ ಪ್ರಕಾಶಕರು ಬರೀ ಲಾಭದ ದೃಷ್ಟಿಯಿಂದ ಇಂಡೋ-ಆಂಗ್ಲ ಭಾಷೆಯ ಕಾದಂಬರಿಕಾರರ ಬೆನ್ನು ಹತ್ತಿದ್ದಾರೆ. ಇಂಗ್ಲೀಷ ಬಲ್ಲ ಭಾರತೀಯರಿಗೆ ಬರೆಯಿರಿ ಎಂದು ಹೇಳೋದನ್ನು ಬಿಟ್ಟು ಬೇರೆಲ್ಲ ರೀತಿಯ ಒತ್ತಾಯಗಳನ್ನು ಒತ್ತಡಗಳನ್ನು ಹೇರಿದ್ದಾರೆ. ಇವರು ಲೇಖಕರು ಎಂಬ ನೌಕರಿಗೆ ಸಂದರ್ಶನ ಮಾಡೋದನ್ನು ಒಂದನ್ನು ಬಿಟ್ಟು ಬೇರೆ ಎಲ್ಲ ಪ್ರಯತ್ನ ಪಡುತ್ತಿದ್ದಾರೆ. ಅದೇರೀತಿ ಭಾರತೀಯ

ಮಧ್ಯಮ ವರ್ಗದ ತಂದೆ-ತಾಯಿಗಳು ಕೂಡ ಇಲ್ಲೀವರೆಗೆ ತಮ್ಮ ಮಕ್ಕಳನ್ನು ಇಂಜನಿಯರ್ ಮತ್ತು ಡಾಕ್ಟರಗಳನ್ನು ಮಾಡುವುದಕ್ಕೆ ಪ್ರಯತ್ನಿಸುತ್ತಿದ್ದರು. ಆದರೆ ಈಗ ಅದನ್ನು ಬಿಟ್ಟು ಕ್ರಿಯಟಿವ್ ರೈಟಿಂಗ್ ಕೋರ್ಸಗಳಿಗೆ ಕಳಿಸಲು ಪ್ರಾರಂಭಿಸಿದ್ದಾರೆ. ನನ್ನಂತಹ ಲೇಖಕರನ್ನು ವಾಚ್‌ಕಂಪನಿ, ಕಂಪ್ಯೂಟರ್ ಕಂಪನಿಗಳು ತಮ್ಮ ಸರಕುಗಳ ಮಾರಾಟಕ್ಕೆ ಪ್ರಚಾರಕ್ಕೆ ಕರೆಯುತ್ತಿದ್ದಾರೆ. ಬಾಂಬೆಯಲ್ಲಿ ಹೂ ಮಾರುವವನು ತನ್ನ ಹೂವಿನ ಗುಚ್ಛದೊಂದಿಗೆ ನಿಮ್ಮ ಪುಸ್ತಕಗಳನ್ನು ಪ್ರದರ್ಶನಕ್ಕಿಡಲೇ ಎಂದು ಕೇಳಿದ್ದೂ ಉಂಟು. ನನ್ನ ಪುಸ್ತಕವೇನು ಆಭರಣವೇ? ಜುಂಪಾಲಹರಿ ಅಮೇರಿಕಾದಲ್ಲಿ ಹುಟ್ಟಿದ ಭಾರತೀಯ ಮೂಲದ ಲೇಖಕಿ. ಪುಲಿಡ್ಜರ್ ಪ್ರಶಸ್ತಿ ಬಂದ ಸಂದರ್ಭದಲ್ಲಿ ಅವಳು ತನ್ನ ಮದುವೆಗೆಂದು ಬಂಗಾಲಕ್ಕೆ (ಭಾರತಕ್ಕೆ) ಬಂದಾಗ ಆ ಸುದ್ದಿ ವಾರ್ತಾಪತ್ರಿಕೆಯ ಮುಖಪುಟದಲ್ಲಿತ್ತು. ಏನಿದರ ಅರ್ಥ? ಇದನ್ನು ಸುಮ್ಮನೆ ಒಂದು ಗ್ಲಾಮರ್ ಸುದ್ದಿ ಎಂದು ನಿರ್ಲಕ್ಷಿಸಬೇಕೋ..? ಮಾಧ್ಯಮದವರು ಈ ತರಹ ನಮ್ಮನ್ನು ಪ್ರದರ್ಶನಕ್ಕಿಟ್ಟು ನಮ್ಮ ಕಲೆಯನ್ನು ಸಣ್ಣದಾಗಿಸಿದ್ದಾರೆ. ಈ ರೀತಿಯ ಪ್ರದರ್ಶನದಿಂದ ಜನ ನಮ್ಮನ್ನು ಯಾವಬಣ್ಣದ ಮೇಲೆ ದೀಪವಿಟ್ಟ ಹಾಗೆ ಬರೆಯೋದು ಕಡ್ಡಾಯವೇ? ಇಂದು ನಾನು ನಿರ್ದಿಷ್ಟವಾದ ನಿಲುವು ತೆಗೆದುಕೊಳ್ಳಬೇಕಾಗಿದೆ. ಇತಿಹಾಸದಲ್ಲಿ ಈ ರೀತಿ ಪರೋಕ್ಷವಾಗಿ ಹೇಳಿದ ಕಾರಣಕ್ಕಾಗಿ ಎಷ್ಟೊಂದು ದುರಂತಗಳಾಗಿಲ್ಲ.

ಉನ್ನತ ಮಟ್ಟದ ಚಿಂತಕರು ಕೂಡ ರಾಷ್ಟ್ರೀಯ ಬಿಕ್ಕಟ್ಟಿನ ಸಂದರ್ಭದಲ್ಲಿ ಯಾವುದಾದರೂ ಒಂದು ಪಕ್ಷ ವಹಿಸಬೇಕಾಗುತ್ತದೆ. ನನಗನ್ನಿಸಿದ ಪ್ರಕಾರ ಅಂತಹ ಬಿಕ್ಕಟ್ಟು ಇಂದು ನಮ್ಮ ದೇಶಕ್ಕೆ ಬಂದಿದೆ. ಈಗ ನಾವು ಲೇಖಕರು ಒಂದು ಪಕ್ಷ ವಹಿಸಲೇಬೇಕಾಗಿದೆ.

ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಶತ್ರು ಹೊರಗಿನವನಾಗಿದ್ದ, ಆದರೆ ಇಂದು ಈಗ ಶತ್ರು ನಮ್ಮವರೇ ಆಗಿದ್ದಾರೆ.

ನಾವೀಗ ನಮ್ಮನ್ನೇ ಕೆಲವು ಅಸಹನೀಯ ಪ್ರಶ್ನೆಗಳನ್ನು ಕೇಳಿಕೊಳ್ಳಬೇಕಾಗಿದೆ. ನಮ್ಮ ಮೌಲ್ಯಗಳು ಸಂಪ್ರದಾಯಗಳು ಜೊತೆಗೆ ನಾಗರೀಕ ಕರ್ತವ್ಯಗಳು ಪ್ರಜಾಪ್ರಭುತ್ವ, ಆಡಳಿತದ ನೈತಿಕತೆ, ಭವಿಷ್ಯದ ದರ್ಶನಗಳು, ಸರಕಾರದ ಪಾತ್ರ, ಸೈನ್ಯ, ನ್ಯಾಯಾಂಗ, ಬುದ್ಧಿಜೀವಿಗಳು, ಎಲ್ಲವನ್ನು ಎಲ್ಲರನ್ನು ಪ್ರಶ್ನಿಸಬೇಕಾಗಿದೆ.

ಐವತ್ತು ವರ್ಷಗಳ ಸ್ವಾತಂತ್ರ್ಯದ ನಂತರವೂ ವಸಾಹತುಶಾಯಿ ಕೊಟ್ಟ ಬಳುವಳಿಯೊಂದಿಗೆ ಹೋರಾಡುತ್ತಲೇ ಇದ್ದೇವೆ. ಸಾಂಸ್ಕೃತಿಕ ಅವಮಾನಗಳಿಂದ ಮುದುಡುತ್ತಿದ್ದೇವೆ. ಭಾರತೀಯರ ಒಳಗೆ ಸೇರಿಕೊಂಡಿರುವ 'ಬಿಳಿಯ ಪ್ರಜ್ಞೆ'ಯ ಹಿಡಿತದಿಂದ ತಪ್ಪಿಸಿಕೊಳ್ಳಲಾಗಿಲ್ಲ.

ಬೌದ್ಧಿಕವಾಗಿ ಮತ್ತು ಭಾವನಾತ್ಮಕವಾಗಿ ಭೌತಿಕ ರಾಜಕಾರಣದಿಂದ ಛಿದ್ರೀಕರಣಗೊಳ್ಳುತ್ತಿದ್ದೇವೆ. ಅಂತಹ ನಮ್ಮ ಕ್ಷಿತಿಜದಲ್ಲೂ ಹೊಸದೊಂದು ಅವತರಿಸುತ್ತಿದೆ.

ಅದು ಯುದ್ಧವಲ್ಲ ಬರಗಾಲವಲ್ಲ ಜನಾಂಗ ನಾಶವೂ ಅಲ್ಲ. ಕೋಮು ನಾಶವೂ ಅಲ್ಲ ಬದಲಿಗೆ ನಿತ್ಯದ ಸಾಮಾನ್ಯ ವ್ಯವಹಾರಗಳಲ್ಲಿ ನಮಗೆ ಗೊತ್ತೇ ಆಗದೆ ಆಡಳಿತವೊಂದು ನಮ್ಮ ಬದುಕನ್ನು ಪ್ರವೇಶಿಸುತ್ತಿದೆ. ಇಲ್ಲಿ ನಾಟಕ ಇರುವುದಿಲ್ಲ ಇದು ಕಥೆ ಕಾದಂಬರಿ ಅಲ್ಲ. ಯಾವುದೋ ಮಹಾಕಾವ್ಯದ ವಿಸ್ತಾರವನ್ನು ಪಡೆದಿರುವುದಿಲ್ಲ. ಇದಕ್ಕೆ ಹೋಲಿಕೆಯೇ ಇಲ್ಲ. ಇಂತಹದು T.V.ಯ ಸುದ್ದಿಯೂ ಆಗುವುದಿಲ್ಲ. ಈ ಆಡಳಿತವು ನೀರು-ವಿದ್ಯುತ್ ಸರಬರಾಜು, ಎಂಬ ಅಸ್ತ್ರಗಳ ಮೂಲಕ ನಮ್ಮನ್ನು ನಿಯಂತ್ರಿಸುತ್ತದೆ. ಇತಿಹಾಸದಲ್ಲಿ ಎಂದೂ ಈ ರೀತಿಯ ಬರ್ಬರ ಅಸ್ತ್ರ ಕಂಡುಬಂದಿಲ್ಲ.

ಈಗ ನಿಮಗೆ ತಿಳಿದಿರಬಹುದು 'ಜಾಗತೀಕರಣದ' ಹೊಸ ರೂಪವನ್ನು ಕುರಿತಾಗಿ ನಾನಿಲ್ಲಿ ಹೇಳುತ್ತಿದ್ದೇನೆ. ಜಾಗತೀಕರಣ ಎಂದರೇನು? ಯಾವುದಕ್ಕಾಗಿ ಜಾಗತೀಕರಣ ಶತಮಾನಗಳಿಂದ ಅಸಮಾನತೆಯ ಬೇರುಗಳನ್ನು ಜಾತಿಯಲ್ಲಿ ಹಿಡಿದಿಟ್ಟ ಭಾರತದಂತಹ ನಾಡಲ್ಲಿ ಜಾಗತೀಕರಣ ಏನು ಮಾಡುತ್ತದೆ? ಮಿಲಿಯನ್ ಗಟ್ಟಲೆ ಜನ ಹಳ್ಳಿಗಳಲ್ಲೇ ಬದುಕನ್ನು ದೂಡುತ್ತಿರುವ ಭಾರತದಲ್ಲಿ ಜಾಗತೀಕರಣದ ಕೆಲಸ ಏನು? ಅದರಲ್ಲೂ ಶೇ. ೪೦ರಷ್ಟು ಜನ ತುಂಡು ಭೂಮಿಯ ಕೃಷಿಕರು. ಅದರಲ್ಲಿ ಅರ್ಧಕ್ಕರ್ಧ ಮಂದಿ ಅನಕ್ಷರಸ್ಥರು.

ಈ ಜಾಗತೀಕರಣವು ಕೃಷಿ-ನೀರು-ವಿದ್ಯುತ್‌ಗಳಂತಹ ಮೂಲಭೂತ ಸೌಲಭ್ಯಗಳನ್ನು ನೀಡಿ ಭಾರತದ ಬಡತನವನ್ನು ತೊಲಗಿಸುವುದೇ? ಜನ ಸಾಮಾನ್ಯರ ಹಣದಿಂದ ೫೦ ವರ್ಷಗಳಿಂದ ಅಭಿವೃದ್ಧಿ ಹೊಂದಿದ ಸಾರ್ವಜನಿಕ ಆಸ್ತಿಪಾಸ್ತಿಗಳನ್ನು ಖಾಸಗೀಕರಣಗೊಳಿಸುವುದು ಅಭಿವೃದ್ಧಿಯ ಹಾದಿಯೇ? ಈ ಖಾಸಗೀಕರಣ, ದಮನಕ್ಕೆ ಒಳಗಾದವರ ಮತ್ತು ಶೋಷಣೆ ಮಾಡುವವರ ನಡುವಿನ ಕಂದಕವನ್ನು ಮುಚ್ಚುತ್ತದೆಯೇ? ಅಕ್ಷರಸ್ಥರು ಮತ್ತು ಅನಕ್ಷರಸ್ಥರ ನಡುವೆ ಶೋಷಣೆಯನ್ನು ನಿಲ್ಲಿಸುತ್ತದೆಯೇ? ಮೇಲಜಾತಿ ಮತ್ತು ಕೆಳಜಾತಿಗಳ ನಡುವೆ ಸಂಬಂಧಗಳು ಬೆಳೆಯುತ್ತವೆಯೆ? ಶತಮಾನಗಳಿಂದ ನಡೆಯುತ್ತಿರುವ ಶೋಷಣೆಗೆ ಉತ್ತರ ಹೇಳುತ್ತದೆಯೇ? ರೀಮೋಟ್‌ನಿಂದ ಹಿಡಿದಿಟ್ಟ ಡಿಜಿಟಲ್‌ನಿಂದ ಕಟ್ಟಿಟ್ಟ ವಸಾಹತುಶಾಯಿಯ ಹೊಸ ರೂಪ ಇದಾಗಿದೆಯೇ? ಇವೆಲ್ಲ ನಿರಂತನವಾಗಿ ಬೃಹದಾಕಾರವಾಗಿ ನಿಂತ ಪ್ರಶ್ನೆಗಳು. ಈ ಪ್ರಶ್ನೆಗಳಿಗೆಲ್ಲ ಉತ್ತರಗಳು ಎಲ್ಲಿಂದ ಬರೋದು? ಹಳ್ಳಿಗಳ ಹೊಲಗಳಿಂದಲೇ? ಪಟ್ಟಣಗಳ ಸ್ಲಂಗಳಿಂದಲೇ? ಅಥವಾ ಮಧ್ಯಮ ವರ್ಗದ ನಡುಮನೆಯಿಂದಲೇ? ಅಥವಾ ದೊಡ್ಡ ದೊಡ್ಡ ವ್ಯಾಪಾರ ವ್ಯವಹಾರಗಳನ್ನೇ ನಿರ್ದೇಶಿಸುವ ನಿರ್ದೇಶಕರಿಂದಲೇ?

ಇದು ಭಾರತ ಹಿಂದೆಂದಿಗಿಂತಲೂ ಹೆಚ್ಚು ಬೆಳೆ ಬೆಳೆಯುತ್ತಿದೆ, ಸಕ್ಕರೆ, ಹಾಲುಗಳನ್ನು ಉತ್ಪಾದಿಸುತ್ತಿದೆ. ಸರಕಾರದ ಕಣಜಗಳು ೪೨ ಮಿಲಿಯನ್ ಟನ್‌ಗಳಷ್ಟು ಧಾನ್ಯಗಳಿಂದ ಉಕ್ಕಿಹರಿಯುತ್ತಿದೆ.[೫] ಇದು ದೇಶದ ವಾರ್ಷಿಕ ಉತ್ಪಾದನೆಯ

ಕಾಲುಭಾಗದಷ್ಟಿದೆ. ರೈತರು ತಾವೇ ಬೆಳೆದ ಹೆಚ್ಚು ಬೆಳೆಯಿಂದ ಕಂಗೆಟ್ಟು ಹೋಗಿದ್ದಾರೆ. ರಾಜಕೀಯ ಪ್ರಬಲವಾಗಿದ್ದಕಡೆ ಧಾನ್ಯಗಳನ್ನು ಸರಕಾರ ಸಂಗ್ರಹಿಸಲು ಸಾಧ್ಯವಾಗದಷ್ಟು ಕೊಂಡಿಟ್ಟುಕೊಂಡಿದೆ. ಆದರೂ W.T.Oಕನ್ನಡಕ ಹಾಕಿಕೊಂಡು ನೋಡ್ತಾರೆ? ಆಮೇಲೆ ನಮ್ಮನ್ನು ಈ ವಾಸ್ತವ ಜಗತ್ತಿನಿಂದ ದೂರವೇ ಇಡ್ತಾರೆ. ಈ ತರಹದ ಮಾಧ್ಯಮದ ಲಕ್ಷ್ಯ ನಮ್ಮ ಮೇಲೆ ಬಿದ್ದು ನಮ್ಮ ಕೃತಿಗಳು ಬೀರುವ ಪ್ರಭಾವವನ್ನು ಸಾರ್ವಜನಿಕರಿಂದ ವಂಚಿತರಾಗಿಸುತ್ತಾರೆ. ಈ ರೀತಿಯ ಮಾಧ್ಯಮದ ಮೂಲಕ ಪ್ರದರ್ಶನಕ್ಕಿಡುವ ಕ್ರಮ ನಮ್ಮನ್ನು ಹೊಡೆದು ಬಡಿದು ಜೈಲಿಗಾಕುವ ಕ್ರಮಕ್ಕಿಂತ ಹೆಚ್ಚು ಪರಿಣಾಮಕಾರಿ.

ನಮಗೆ ವಾಕ್ ಸ್ವಾತಂತ್ರ್ಯವಿದೆ. ಆದರೆ ಎಷ್ಟರ ಮಟ್ಟಿಗೆ ? ನಾವು ಬರೆದದ್ದನ್ನು ಯಾರೂ ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲವೆಂದರೆ ವಾಕ್ ಸ್ವಾತಂತ್ರ್ಯಕ್ಕೆ ಬೆಲೆ ಏನು? ಅಥವಾ ನಾವು ಬರೆಯಬೇಕಾದರು ಏಕೆ? ಯಾವುದು ಮಾರಾಟವಾಗುತ್ತದೆ. ಅಂತಹುದನ್ನಷ್ಟೇ ನಾವು ಬರೆಯಬೇಕೆ? ಅಥವಾ ಎಲ್ಲರೂ ಮಾರಾಟಕ್ಕಾಗಿಯೇ ಬರೆಯುತ್ತಾರೋ? ಮಾರಾಟಕ್ಕಾಗಿ ಬರೆಯೋದಾದ್ರೆ ಲೇಖಕರು ಆಸ್ಥಾನ ವಿದೂಷಕರೇ?

೨೧ನೇ ಶತಮಾನದಲ್ಲಿ ಬಹುರಾಷ್ಟ್ರೀಯ ಕಂಪನಿಯ ಆಸ್ಥಾನದಲ್ಲಿ ಅವರ ಇಚ್ಛೆಯ ಪೂರೈಕೆಗಾಗಿ, ಹಿಂದೊಮ್ಮೆ ರಾಜರ ಆಸ್ಥಾನದಲ್ಲಿ ನಪುಂಸಕರು ಮಾಡುತ್ತಿದ್ದ ಕೆಲಸವನ್ನು ಲೇಖಕರಾದ ನಾವು ಮಾಡಬೇಕೆ? ಅಂದರೆ ಲೇಖನದ ಮೂಲಕ ಜನರನ್ನು ಪ್ರಚೋದಿಸಿ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಬೇಕೆ? ನಮ್ಮ ಬರವಣಿಗೆಗೆ ಈ ರೀತಿಯ ಪ್ರಭಾವ ಬರುವಂತೆ ಈ ಮಾಧ್ಯಮದವರು ನಮ್ಮನ್ನು ಸಾರ್ವಜನಿಕ ಪ್ರದರ್ಶನಕ್ಕಿಟ್ಟಿದ್ದಾರೆ.

ನಾನು ಬರೆದ ಒಂದೇ ಕಾದಂಬರಿ God of Small things ಪ್ರಕಟವಾಯ್ತು. ಪ್ರಕಟವಾದ ಮೊದಲ ದಿನಗಳಲ್ಲಿ ನನ್ನನ್ನು ಯಾರಿಗಾದರೂ ಪರಿಚಯಿಸುವ ಸಂದರ್ಭ ಬಂದಾಗ 'ವಿಚಿತ್ರ ಯಶಸ್ಸನ್ನು ಕಂಡ ಮೊದಲ ಪುಸ್ತಕದ ಲೇಖಕಿ' ಎನ್ನುತ್ತಿದ್ದರು. ಈಗ ನನ್ನನ್ನು ಈ ಜನ ೨೧ ನೇ ಶತಮಾನದ ಲೇಖಕಿ ಅಷ್ಟೇ ಅಲ್ಲ ಸಮಾಜ ಸೇವಕಿ(activitist)ಎಂದು ಗುರುತಿಸಿದ್ದಾರೆ. ನಾನು ಜನರಿಗೆ ಬೇಕಾದಾಗ ಲೇಖಕಿ, ಬೇಕಾದಾಗ ಸಮಾಜಕಾರ್ಯಕರ್ತೆಯಾಗಲು Sofa ಕಂ Bed (sofa cum bed) ಏನು?

ನಾನೇಕೆ ಲೇಖಕಿ ಹಾಗೂ ಸಮಾಜ ಕಾರ್ಯಕರ್ತೆ ಅನಿಸಿಕೊಂಡಿದ್ದೇನೆ ಗೊತ್ತೇ? ನಾನು ಒಂದು ಕಾದಂಬರಿ ಜೊತೆಗೆ ಮೂರು ರಾಜಕೀಯ ಪ್ರಬಂಧಗಳನ್ನು ರಚಿಸಿದ್ದೇನೆ. ಈ ಪ್ರಬಂಧಗಳು೧)End of imagination (ಭಾರತದ ಪರಮಾಣು ಬಾಂಬ್‌ನ ಪ್ರಯೋಗದ ಬಗೆಗೆ), ೨)The greatest common god (ನರ್ಮದಾ ಬಚಾವೊ ಆಂದೋಲನದ ಬಗೆಗೆ), ೩)Power politics (ನೀರು ಮತ್ತು ವಿದ್ಯುತ್‌ಗಳ ಖಾಸಗೀಕರಣ ಮತ್ತು ಜಾಗತೀಕರಣದ ಬಗೆಗೆ), ಇಲ್ಲಿಂದು ಅಯೋಧ್ಯೆಯ ಬಾಬರೀ ಮಸೀದಿಯ ಜಾಗದಲ್ಲಿ ಗುಡಿ ಕಟ್ಟಿಸುವ ಯೋಜನೆಯ ಸರಕಾರಕ್ಕೆ ಈ ಮೂರೂ ಯೋಜನೆಗಳನ್ನು ಭಾರತಕ್ಕೆ ತಂದೇ ತರಬೇಕೆಂಬ ಗೀಳಿದೆ.

ನಾನೀಗ ಯೋಚಿಸಬೇಕಾಗಿದೆ God of Small things ಬರೆದು ಲೇಖಕಿ ಅಂತ ಕರೆಸಿಕೊಳ್ಳಬೇಕೋ ರಾಜಕೀಯ ಪ್ರಬಂಧಗಳನ್ನು ಬರೆದು ಸಮಾಜ ಕಾರ್ಯಕರ್ತೆ ಅಂತ ಕರೆಸಿಕೊಳ್ಳಬೇಕೋ? ಹಾಗಾದರೆ ನಾನು ಬರೆದ ಕಾದಂಬರಿಯಲ್ಲಿ ರಾಜಕೀಯ ಇಲ್ಲವೇ? ಖಂಡಿತ ನಾನು ಬರೆದ ಕಾದಂಬರಿಯಲ್ಲಿ ಕೂಡ ನನ್ನ ಪ್ರಬಂಧಗಳಲ್ಲಿರುವಂತೆಯೆ ರಾಜಕೀಯ ಧ್ವನಿ ಇದೆ. ಕಾದಂಬರಿಕಾರರು ಪ್ರಬಂಧ ಬರೀಬಾರ್ದು ಅಂತ ಯಾರು ಹೇಳ್ತಾರೆ? ಯಾವ ನಿಯಮವಿದೆ?

ನನಗೇನಸ್ತದೆ ಎಂದರೆ ಈ ಡಬಲ್ ಬ್ಯಾರಲ್‌ನ ಶೀರ್ಷಿಕೆಯನ್ನು ನನಗ್ಯಾಕೆ ಕೊಟ್ಟಿದ್ದಾರೆ. ಎಂದರೆ ನನ್ನ ಕಾದಂಬರಿಯಲ್ಲಿ ರಾಜಕೀಯ ಇದೆ ಅಂತ ಅಲ್ಲ, ನನ್ನ ಪ್ರಬಂಧಗಳಲ್ಲಿ ನಾನೊಂದು ಖಚಿತ ಸ್ಪಷ್ಟ ನಿಲುವನ್ನು ಒಪ್ಪಿಕೊಂಡಿದ್ದೇನೆ ಎಂದು. ನನ್ನ ನಿಲುವು ಸರಿ ಮತ್ತು ನೈತಿಕ ಎಂದು ಖಚಿತವಾಗಿ ಹೇಳುತ್ತಾನೆ. ಈ ನಿರ್ಧಾರಕ್ಕೆ ನನ್ನ ಹಿಂಬಾಲಕರ ಸಹಾಯ ಮತ್ತು ಸಹಕಾರವನ್ನು ನನ್ನ ಶಕ್ತಿ ಮೀರಿ ಕೇಳುತ್ತಾ ಇದ್ದೇನೆ.

೨೧ ನೇ ಶತಮಾನದಲ್ಲಿ ಲೇಖಕ ತನ್ನ ವಿಚಾರಗಳನ್ನು ಖಚಿತ ಪಡಿಸಿಕೊಳ್ಳೋದು, ಅಂದರೆ ರಾಜಕೀಯ ಪ್ರಣಾಳಿಕೆಗಳನ್ನು ಬರೆಯುವವರ ಪಕ್ಕ ನಿಂತ ಹಾಗೆ. ನನಗೆ ಗೊತ್ತಿದೆ, ಜನ ಅಂತಹವರನ್ನು ನಂಬುವುದಿಲ್ಲ. ಅದಕ್ಕಾಗಿ ನಮ್ಮಂತಹ ಲೇಖಕರು ಅನ್ಯೋಕ್ತಿ ವಿಧಾನದಿಂದ ಮುಚ್ಚಿ ಹೇಳುತ್ತಾ ಚಾಟೂಕ್ತಿಯ ಮುಖಾಂತರ ಚುಚ್ಚಿ ಹೇಳುತ್ತಾ ಸೂಕ್ಷ್ಮವಾಗಿ ನಾಜೂಕಾಗಿ ಹೇಳಬೇಕಾಗಿದೆ.

ಒಬ್ಬ ಲೇಖಕಿಯಾಗಿ ನನಗೂ ಏರಲಾರದ ಬೆಟ್ಟವನ್ನು ಕಂಡರೆ ಅಥವಾ ಅರ್ಥವಾಗಿರುವ ಕನಸುಗಳನ್ನು ಕಂಡರೆ ಪ್ರೀತಿ. ಆದರೆ ಲೇಖಕರಿಗೆ ಯಾವಾಗಲೂ ಅಡ್ಡಗೋಡೆಯದ ಒಪ್ಪಂದದ ಪ್ರಕಾರ ೧,೪೦೦ ಸರಕುಗಳನ್ನು ಹೊರದೇಶದಿಂದ ಕೊಂಡುಕೊಳ್ಳಲೇ ಬೇಕಾಗಿದೆ. ಇದರಲ್ಲಿ ಹಾಲು, ಕಾಳು,ಸಕ್ಕರೆ, ಹತ್ತಿ, ಚಹಾ, ಕಾಫಿ, ರಬ್ಬರ್, ಪಾಮೆಣ್ಣೆಗಳು ಸೇರಿವೆ.[೬]

ಸರಕಾರದ ಕಣಜಗಳಲ್ಲಿ ಧಾನ್ಯಗಳು ಕೊಳೆತು ಹೋಗುತ್ತಿರುವಾಗ, ಮಿಲಿಯನ್ ಗಟ್ಟಲೆ ಜನ ಬಡತನದ ರೇಖೆಗಳ ಕೆಳಗೆ ಬದುಕುತ್ತಾ ಒಂದು ಹೊತ್ತಿನ ಊಟಕ್ಕೆ ಪರದಾಡುತ್ತಿರುವಾಗ, ಹಸಿವಿನಿಂದಾಗುತ್ತಿರುವ ಸಾವುಗಳನ್ನು ದೇಶದ ಅನೇಕ ಕಡೆ ನೋಡುತ್ತಿರುವಾಗ ಈ ಎಲ್ಲ ಗದ್ದಲಗಳು ನಡೆಯುತ್ತಿವೆ. ಈ ಸಾವುಗಳಿಗೆ ಬೇರೆ ಬಣ್ಣಗಳನ್ನು ಹಚ್ಚುತ್ತಿದ್ದಾರೆ.

೨೦೦೧ರ ಎಪ್ರಿಲ್ ಒಂದು (ಅಂದು ಮೂರ್ಖರ ದಿನ) ಭಾರತದೇಶವು W.T.O.ದ ಗುಣಮಟ್ಟ ಹೊಂದಿದ ಸರಕುಗಳು ಆಮದು ನೀತಿಗೆ ಒಪ್ಪಿಗೆ ನೀಡಿದೆ. ಈಗಾಗಲೇ ಭಾರತದ ಮಾರುಕಟ್ಟೆಗಳಲ್ಲಿ ಅಗ್ಗದ ಸಾಮಾನುಗಳು ಉಕ್ಕಿ ಹರಿಯುತ್ತಿವೆ.

ತಾಂತ್ರಿಕವಾಗಿ ಭಾರತಕ್ಕೆ ಕೃಷಿ ಉತ್ಪಾದನೆಗಳನ್ನು ರಫ್ತು ಮಾಡುವ ಸ್ವಾತಂತ್ರ್ಯವಿದೆ. ಆದರೆ ಅದೂ ಸಾಧ್ಯವಾಗುತ್ತಿಲ್ಲ. ಏಕೆಂದರೆ ಅಭಿವೃದ್ಧಿ ಹೊಂದಿದ ದೇಶಗಳ ಉತ್ಪಾದನಾ ಸರಕುಗಳ ಗುಣಮಟ್ಟವನ್ನು ನಾವು ಮುಟ್ಟಲು ಸಾಧ್ಯವಾಗಿಲ್ಲ.

ಪಾಶ್ಚಾತ್ಯ ಬಳಕೆದಾರರು ಬಹಳ ಮಾಗಿದ ಮಾವಿನ ಹಣ್ಣನ್ನು ತಿನ್ನುವುದಿಲ್ಲ, ಬಾಳೆಹಣ್ಣಿನ ತುದಿಗೆ ನೊರಜ ಕಂಡರೆ ಮುಟ್ಟುವುದಿಲ್ಲ, ಅಕ್ಕಿಯಲ್ಲಿ ನುಸಿ ಇದ್ದರೆ ತಿರುಗಿಯೂ ನೋಡುವುದಿಲ್ಲ. ಆದರೆ ಭಾರತದಲ್ಲಿ ನಾವು ಇಂತಹ ಸಣ್ಣ-ಪುಟ್ಟ ಕ್ರಿಮಿಕೀಟಗಳಿಗೆ ತಲೆ ಕೆಡಿಸಿಕೊಳ್ಳುವುದಿಲ್ಲ.

ಅಭಿವೃದ್ಧಿ ಹೊಂದಿದ ದೇಶ ಅಮೇರಿಕಾ ತನ್ನ ದೇಶದ ರೈತನಿಗೆ ಹೇರಳವಾದ ಸಬ್ಸಿಡಿ ಕೊಟ್ಟು ನಮ್ಮ ದೇಶದ ರೈತನಿಗೆ ಸರಕಾರದಿಂದ ಸಿಗುವ ಸಬ್ಸಿಡಿಗಳನ್ನು ಕಡಿತಗೊಳಿಸಲು ಒತ್ತಾಯಿಸುತ್ತಿದೆ. ಜಾಗತಿಕ ಮಾರುಕಟ್ಟೆಯ ಸ್ಪರ್ಧೆಯಲ್ಲಿ ಯಂತ್ರಗಳನ್ನು ಬಳಸಿ ಸಾವಿರಾರು ಎಕರೆಯ ಕೃಷಿ ಮಾಡುವ ಸಬ್ಸಿಡಿ ಪಡೆದ ರೈತನಿಗೆ ಒಂದೆರಡು ಎಕರೆಯಲ್ಲಿ ಸ್ವತ: ದುಡಿಯುವ ಸಬ್ಸಿಡಿ ಸಿಗದ ರೈತ ಸರಿಸಾಟಿಯೇ?

ಭಾರತ ದೇಶದ ಆರ್ಥಿಕತೆ ಕತ್ತು ಹಿಸುಕಿದ ಸ್ಥಿತಿಯಲ್ಲಿದೆ. ಹೆಚ್ಚು ಬೆಳೆ ಬೆಳೆದ ರೈತನೂ ಕಂಗೆಟ್ಟಿದ್ದಾನೆ, ಕಡಿಮೆ ಇಳುವರಿ ಪಡೆದ ರೈತನೂ ಕಂಗೆಟ್ಟಿದ್ದಾನೆ. ಸ್ವಂತ ಭೂಮಿ ಇಲ್ಲದೆ ಇತರರ ಹೊಲಗಳಲ್ಲಿ ದುಡಿಯುತ್ತಿದ್ದ ಕೂಲಿಕಾರನು ದಿಕ್ಕೆಟ್ಟು ಕೆಲಸ ಹುಡುಕಿಕೊಂಡು ನಗರಗಳಿಗೆ ಗುಳೇ ಹೊರಟಿದ್ದಾನೆ.

ಇನ್ನು ಮುಂದೆ ಬರೀ ವ್ಯಾಪಾರ, ಸಹಾಯ ಧನ (ಸಬ್ಸಿಡಿ) ಇಲ್ಲ ಎಂಬ ಹೊಸ ಕೂಗು ಕೊಟ್ಟಿದ್ದಾರೆ ನಮ್ಮ ಜಾಗತಿಕ ಹಳ್ಳಿಯ ಒಡೆಯರು! ಹೊಳೆಯುವ W.T.O. ಕಛೇರಿಯಲ್ಲಿ ಕೂತು ಕೊಟ್ಟ ಕೂಗಿದು.

ನಮ್ಮ ಬ್ರಿಟೀಷ ಜನ ಮಾರುವೇಷದಲ್ಲಿ ಗೌರವಾನ್ವಿತ ವ್ಯಾಪಾರಿಗಳಾಗಿ ನಮ್ಮ ಭಾರತದ ಕಡಲ ತೀರಗಳಲ್ಲಿ ಶತಮಾನಗಳ ಹಿಂದೆಯೇ ಕಾಣಿಸಿಕೊಂಡಿದ್ದರು. ಈಸ್ಟ ಇಂಡಿಯಾ ಕಂಪನಿಯ ಹೆಸರನ್ನು ಯಾರು ಮರೆತಿದ್ದಾರೆ? ಈಗಂತೂ ಯಾವುದೇ ಟೋಕನ್ ಇಲ್ಲದೆ ಈಗವರಿಗೆ ನಮ್ಮ ದೇಶದಲ್ಲಿ ಸ್ವಾಗತ ಸಿಕ್ಕಿದೆ. ಈಗವರು ಬಿಳಿಯ ಆಫೀಸರ್ ಆಗಿ ಬಂದಿಲ್ಲ, ಭಾರತೀಯC.E.O ಗಳ ಮೂಲಕವೇ ಸಂಪರ್ಕದಲ್ಲಿದ್ದಾರೆ. ಆಗ ಬಿಳಿಯ ಜನ ನಮ್ಮ ದೇಶದ ಸುಡುವ ಬಿಸಿಲಲ್ಲಿ ದಟ್ಟ ಅಡವಿಯಲ್ಲಿ ಮಲೇರಿಯಾ, ಡಯೇರಿಯಾಗಳ ಹಾವಳಿಯಲ್ಲಿ ದಟ್ಟ ಅಡವಿಯಲ್ಲಿ ಬೆಂದು ಹೋಗುತ್ತಿದ್ದರು. ಆಗವರಿಗೆ ಜನ ವಿರೋಧವನ್ನು ತಡೆಯಲು ಪೋಲೀಸರ ಸೈನ್ಯದ ಸಹಾಯ ಅನಿವಾರ್ಯವಿತ್ತು. ಈಗ ಅವರು ತಮ್ಮ ವಸಾಹತುಗಳನ್ನು ಇವ್ಯಾವುದರ ಸಹಾಯವಿಲ್ಲದೇ ವಿಸ್ತರಿಸುತ್ತಿದ್ದಾರೆ.

ಅಭಿವೃದ್ಧಿ ಹೊಂದುತ್ತಿರುವ ದೇಶಗಳನ್ನು ಒಂದು ಒಳ್ಳೆಯ ಹಣ ಹೂಡುವ ಮಾರುಕಟ್ಟೆಯಾಗಿ ತಯಾರು ಮಾಡುವದೇ ಶೋಷಣೆಯ ಹೊಸ ತಂತ್ರ. ಇದನ್ನು

ಕಾರ್ಯರೂಪಕ್ಕೆ ತರಲು ನೇರವಾಗಿ ಆ ಜನರೇ ಇಲ್ಲಿ ಬರಬೇಕಾಗಿಲ್ಲ. ಸ್ಥಳೀಯ ಸರಕಾರವೇ ಇದನ್ನು ಕಾರ್ಯರೂಪದಲ್ಲಿ ತರುತ್ತದೆ. ಉದಾಹರಣೆಗೆ ಭಾರತ ಸರಕಾರವು ಅಭಿವೃದ್ಧಿ ಯೋಜನೆಗಳ ಹೆಸರಲ್ಲಿ land acquisition act ನ್ನು ಬದಲಿಸಿ ಅದಿರುವುದಕ್ಕಿಂತ ಹೆಚ್ಚಿನ ಭಯಾನಕ ಸ್ಥಿತಿಯನ್ನು ತರುತ್ತಿದೆ.[೭]

ಇತ್ತರಾಜ್ಯ ಸರಕಾರಗಳು ಸಹ ಈ ಕೆಲಸವನ್ನು ಇನ್ನೊಂದು ರೀತಿ ಮಾಡುತ್ತಿವೆ. ಆತಂಕವಾದಿ ವಿರೋಧಿ ಕಾಯ್ದೆಗಳನ್ನು ಬದಲಿಸಿ ಎಲ್ಲ ವಿರೋಧಿಗಳೂ ಆತಂಕವಾದಿಗಳೇ ಎಂದು ಪರಿಗಣಿಸುವ ಮಟ್ಟಕ್ಕೆ ಬಂದಿವೆ. ಈ ಕಾಯ್ದೆಯಲ್ಲಿ ಸರಕಾರ ತನ್ನ ವಿರೋಧಿಗಳನ್ನು ಕಾನೂನುಗಳ ಹೆಸರಿನಲ್ಲಿ ಯಾವುದೇ ತನಿಖೆ ಇಲ್ಲದೆ ಮೂರುವರ್ಷ ಜೈಲಿನಲ್ಲಿಡಬಹುದು, ಮತ್ತು ಅವನ ಭೂಮಿ ಕಾಣಿಯನ್ನು ದನ ಕರುಗಳನ್ನು ಜಪ್ತಿಮಾಡಬಹುದು ಎಂದಿದೆ. ಇತ್ತೀಚಿಗೆ ಬಹುರಾಷ್ಟ್ರೀಯ ಕಂಪನಿಗಳು ಮತ್ತು ಜಾಗತೀಕರಣಗಳು ಕೆಲವು ಟೀಕೆಗಳನ್ನು ಎದುರಿಸುತ್ತಿವೆ. ಸಿಯಾಟಲ್ ಮತ್ತು ಪ್ರೇಗ್‌ನಲ್ಲಿ ನಡೆದ ಘಟನೆಗಳು ಚರಿತ್ರೆಯಲ್ಲಿ ಮುಖ್ಯ ಸಂಗತಿಗಳನ್ನು ಹೇಳುತ್ತಿದೆ.

ಪ್ರತಿಭಾರಿಯ W.T.O and world Economic form ಗಳು ಸಾವಿರಾರು ಸೈನಿಕರ ರಕ್ಷಣೆಯಲ್ಲಿ ಸಭೆ ನಡೆಸಬೇಕಾಗಿದೆ. ಇಂತಹ ಸಭೆಗಳಲ್ಲಿ ಜಾಗತೀಕರಣವನ್ನು ಹೊಗಳುತ್ತಾ ಬಿಲ್‌ಕ್ಲಿಂಟನ್, ಕೋಫಿಅನ್ನಾನ್ ಮತ್ತು A.B.ವಾಜಪೇಯಿ ಇವರುಗಳೆಲ್ಲ ಅದೇ ಹಳೆ ರಾಗಗಳನ್ನು ಹಾಡುತ್ತಾರೆ.

'ನಾವು ಸರಿಯಾಗಿ ಆಡಳಿತ ನಡೆಸಿದ್ದೇ ಆದರೆ, ಪರಿಣಾಮಕಾರಿ ನ್ಯಾಯಾಲಯಗಳು ನ್ಯಾಯ ನೀಡುವಂತಿದ್ದರೆ, ಪ್ರಾಮಾಣಿಕ ರಾಜಕಾರಣಿಗಳು ಆಡಳಿತದ ಚುಕ್ಕಾಣಿ ಹಿಡಿದರೆ, ಪಾರದರ್ಶಕ ಆಡಳಿತವಿದ್ದರೆ, ಮಾನವ ಹಕ್ಕುಗಳಿಗೆ ಗೌರವ ಇರುವಂತಹ ಆಡಳಿತ ಇದ್ದರೆ ಜಾಗತೀಕರಣವು ಮಾನವೀಯ ಮುಖವನ್ನು ಹೊಂದಿರುತ್ತದೆ ಎಂದು ಇವರೆಲ್ಲರ ಅಂಬೋಣ. ಇದು ಸಾಧ್ಯವೆ? ಈ ಎಲ್ಲ ಅಂಶಗಳು ಇರುವಂತಹ ಆಡಳಿತದಲ್ಲಿ ಜಾಗತೀಕರಣವಾದರೂ ಯಾಕೆ? ಸಮಾಜವಾದ, ಬಂಡವಾಳಶಾಯಿ ಮಿಲಿಟರಿ ಆಡಳಿತ ಯಾವುದಾದರೂ ಯಶಸ್ವಿಯಾಗಿ ಆಗುತ್ತದೆ. ಅಂತಹ ಆಡಳಿತ ಸ್ವರ್ಗದಲ್ಲಷ್ಟೆ ಸಾಧ್ಯ. ಅಪೂರ್ಣವಾದ ಈ ಜಗತ್ತಿನಲ್ಲಿ ಜಾಗತೀಕರಣ ಈ ಮೇಲಿನ ಎಲ್ಲ ಅಂಶಗಳನ್ನು ಕೊಡುಗೆಯಾಗಿ ತರಲು ಸಾಧ್ಯವೇ? ಈಗ ಭಾರತ ಅತ್ಯಂತ ವೇಗದಲ್ಲಿ ಮುಕ್ತ ಮಾರುಕಟ್ಟೆಯ ಕಡೆಗೆ ಓಡುತ್ತಿದೆ. ಆದರೆ ಆ ಮೇಲಿನ ಯಾವುದಾದರೂ ಒಂದು ಅಂಶವಾದರೂ ಭಾರತದಲ್ಲಿದೆಯೇ? ರಾಜ್ಯದ ಸರ್ಕಾರಗಳು ಪಾರದರ್ಶಕವಾಗಿವೆಯೇ? ಪ್ರಜೆಗಳಿಗೆ ಮುಕ್ತ ಮೌಖಿಕ ಸ್ವಾತಂತ್ರ್ಯ ಸಿಕ್ಕಿದೆಯೇ? ಈ ಆಡಳಿತದಲ್ಲಿ ನಡೆಯುವ ಎಲ್ಲ ಸಂಗತಿಗಳನ್ನು ಮಾಹಿತಿಗಳನ್ನು ಸರಕಾರ ಪ್ರಜೆಗಳಿಗೆ ನೀಡಿದೆಯೇ? ಸಾಮಾನ್ಯ ಜನ ಜೀವನದ ಮೇಲೆ ನಡೆಯುವ ಎಲ್ಲ ಸಂಗತಿಗಳನ್ನು ಮಾಹಿತಿಗಳನ್ನು ಸರಕಾರ ಪ್ರಜೆಗಳಿಗೆ ನೀಡಿದೆಯೇ? ಸಾಮಾನ್ಯ ಜನ ಜೀವನದ ಮೇಲೆ ನಡೆಯುವ ಆಗು–ಹೋಗುಗಳನ್ನು

ಸರಕಾರ ಸಾಮಾನ್ಯರೊಂದಿಗೆ ಚರ್ಚಿಸಿದೆಯೇ? ಶ್ರೀ ಕ್ಲಿಂಟನ್(ಅಥವಾ ಈಗಿನ ಶ್ರೀ ಬುಶ್) ಮತ್ತು ಶ್ರೀ ವಾಜಪೇಯಿ ಇವರುಗಳ ಸರಕಾರದಲ್ಲಿರುವ ಎಲ್ಲ ಸಂಗತಿಗಳು ಸರಿಯಾಗಿ ಸುಸಂಬದ್ಧವಾಗಿವೆ ಎಂದು ಯೋಚಿಸಿದ್ದಾರೆಯೇ? ಅಥವಾ ಇವರುಗಳು ವಿರುದ್ಧ ದಿಕ್ಕನಲ್ಲಿ ನಮ್ಮಂತಹ ಜನಸಾಮಾನ್ಯರ ವಿರುದ್ಧವೇ ನಿಂತಿದ್ದಾರೆಯೇ? ಅಥವಾ ಇವರುಗಳೆಲ್ಲ ಹೇಳುವ 'ಸರಿಯಾದ ಆಡಳಿತ' ಎಂಬುದರ ಅರ್ಥ ಒಟ್ಟಾರೆಯಾಗಿ ಬೇರೇನನ್ನೋ ಹೇಳುತ್ತಿದೆಯೇ?

ನವೆಂಬರ್ ೨೦೦೦ ರಲ್ಲಿ ನೆಲ್ಸನ್ ಮಂಡೇಲ ಅವರು ಜಾಗತಿಕ ಆಣೆಕಟ್ಟುಗಳ ಯೋಜನಾ ಸಮೀಕ್ಷೆಯು ಒಪ್ಪಿಸಿದ ವರದಿಯನ್ನು ಬಿಡುಗಡೆ ಮಾಡಿದರು. ಇದೇ ಮೊದಲ ಬಾರಿಗೆ ಗಂಭೀರವಾಗಿ ಇಂತಹ ವರದಿಗಳನ್ನು ಅಧ್ಯಯನ ಮಾಡಲಾಯಿತು. ಯಾರು ಯಾರು ದೊಡ್ಡ ದೊಡ್ಡ ಆಣೆಕಟ್ಟೆಗಳನ್ನು ಕಟ್ಟಲು ವಿರೋಧಿಸಿದ್ದರೋ ಅವರುಗಳಿಗೆ W.C.D.ಯ ವರದಿ ಹುರುಳಿಲ್ಲದ್ದೆಂದು ತಿಳಿದು ಬಂದಿತು. ಇವರಗಳ ಗಂಭೀರ ಅಧ್ಯಯನವು ಈ ಆಣೆಕಟ್ಟುಗಳ ನಿರ್ಮಾಣದಿಂದಾಗುವ ಸಮಾಜದ ಮತ್ತು ಪರಿಸರದ ಮೇಲಾಗುವ ಬದಲಾವಣೆಗಳನ್ನು ಚರ್ಚಿಸಿತು. ಇದರಿಂದ ಆಣೆಕಟ್ಟು ನಿರ್ಮಿಸುವ ಸರಕಾರಗಳಿಗೆ. ಸಂಘ ಸಂಸ್ಥೆಗಳಿಗೆ ಮೊದಲಬಾರಿಗೆ ಕೆಲವಾದರೂ ಸೂಚನೆ ಸಲಹೆಗಳನ್ನು ನೀಡಲಾಯಿತು. ನೀತಿ-ನಿಯಮಗಳನ್ನು ರೂಪಿಸಲಾಯಿತು. ಇಂತಹ ಆಣೆಕಟ್ಟುಗಳ ನಿರ್ಮಾಣವು ಎಷ್ಟು ಜನರನ್ನು ನಿರಾಶ್ರಿತರನ್ನಾಗಿ ಮಾಡುತ್ತಿದೆ? ಎಂಬ ಅಂದಾಜು ಅಂಕಿ-ಅಂಶಗಳ ವಿಚಾರವನ್ನು ಲೆಕ್ಕ ಹಾಕಲಾಯಿತು.

ಭಾರತದೇಶ ಆಣೆಕಟ್ಟೆ ಕಟ್ಟುವ ವಿಚಾರದಲ್ಲಿ world commission ನ ಅನುಮತಿಯನ್ನು ಕೇಳಲು ಒಪ್ಪಲಿಲ್ಲ. ಗುಜರಾತ್‌ನ ಸರಕಾರ ಸರದಾರ ಸರೋವರ ಆಣೆಕಟ್ಟೆಯನ್ನು ಕಟ್ಟಿತು. ಜೊತೆಗೆ ಈ ಕಮಿಷನ್‌ನ ಸದಸ್ಯರನ್ನು ಅವರ ವಿಚಾರಗಳನ್ನು ಗಣನೆಗೆ ತೆಗೆದುಕೊಳ್ಳದೇ ವಿರೋಧಿಸಿದಾಗ ಅವರನ್ನು ಜೈಲಿಗೆ ಹಾಕಲೂ ಹಿಂಜರಿಯಲಿಲ್ಲ.[೮]

ಫೆಬ್ರುವರಿ ೨೦೦೧ ರಲ್ಲಿ ಭಾರತ ಸರಕಾರ World Commissionಅವರು ನಿರ್ಮಿಸಿದ ಆಣೆಕಟ್ಟು ನಿರ್ಮಿತಿಯ ಕುರಿತಾದ ವರದಿಗಳನ್ನು ತಿರಸ್ಕರಿಸಿತು.[೯] ಇದು ಪಾರದರ್ಶಕ ಆಡಳಿತಕ್ಕೆ ಉದಾಹರಣೆಯೇ? ಹೊಣೆಗಾರಿಕೆಯ ಪ್ರಜಾಪ್ರಭುತ್ವವೇ?

ಮಾಲಿನ್ಯದ ಹೆಸರು ಹೇಳಿ ಮತ್ತು ಕಾನೂನುಬದ್ಧವಾಗಿಲ್ಲ ಎಂಬ ಕಾರಣಕ್ಕಾಗಿ ಇತ್ತೀಚಿಗೆ ಸುಪ್ರಿಂಕೋರ್ಟ ದೆಹಲಿಯಲ್ಲಿ ೭೭,೦೦೦ ಕಾರ್ಖಾನೆಗಳನ್ನು ಮುಚ್ಚಲು ಆಜ್ಞೆನೀಡಲಾಯಿತು.[೧೦] ಇದರಿಂದ (೫,೦೦,೦೦೦) ೫ಕೋಟಿ ಕೆಲಸಗಾರರು ಕೆಲಸ ಕಳೆದುಕೊಂಡರು. ಈ ಕಾರ್ಖಾನೆಯ ಘಟಕಗಳು ಯಾವುವು? ಈ ಜನರು ಯಾರು? ಈ ಮಿಲಿಯನ್‌ಗಟ್ಟಲೆ ಜನ ಇಷ್ಟವಿದ್ದೋ ಇಲ್ಲದೆಯೋ ನೌಕರಿ ಹುಡುಕಿಕೊಂಡು ಪಟ್ಟಣಕ್ಕೆ ಗುಳೇ ಬಂದ ಹಳ್ಳಿಯ ಜನರಿವರು. ಸರಕಾರದ ಲೆಕ್ಕದಲ್ಲಿ ಈ ಜನರು ಬದುಕಿರಲೇಬಾರದು. ಅವರು ನಮ್ಮ ದೇಶದ ಪ್ರಜೆಗಳಲ್ಲ. ಅವರು

ಹೆಸರು ಕುಲಗೋತ್ರಗಳೇನೂ ಎಲ್ಲೂ ದಾಖಲಾಗಿಲ್ಲ. ಈ ಜನ ಭಾರತದ ರಾಜಧಾನಿಯಾದ ದೆಹಲಿಯ ಸಂದಿಗೊಂದಿಗಳಲ್ಲಿ ಬದುಕಿದ್ದಾರೆ. ಅವರಿಗೆ ಅಧಿಕೃತ ದೆಹಲಿಯ ನಗರ ಪಾಲಿಕೆಯ ಯಾವ ಸೌಲಭ್ಯಗಳು ಲಭ್ಯವಾಗಿಲ್ಲ. ದೆಹಲಿಯ ಜನಸಂಖ್ಯೆಯಲ್ಲಿ ಸುಮಾರು ಶೇ. ೪೦ ಅಂದರೆ ೧೨ ಮಿಲಿಯನ್ ಜನ ನಗರಪಾಲಿಕೆಯ ಹೊರಗೆ ಸ್ಲಂನಲ್ಲಿ ಬದುಕಿದ್ದಾರೆ.[೧೧] ಅವರುಗಳಿಗೆ ನಗರಪಾಲಿಕೆ ಯಾವುದೇ ಮೂಲಭೂತ ಸೌಲಭ್ಯಗಳನ್ನು ನೀಡಿಲ್ಲ. ವಿದ್ಯುತ್, ನೀರು ಅಥವಾ ಒಳ ಚರಂಡಿ ವ್ಯವಸ್ಥೆ ಇವ್ಯಾವೂ ಸರಕಾರದಿಂದ ಪಡೆಯದೆ ಇವರುಗಳು ಜೀವಿಸುತ್ತಿದ್ದಾರೆ. ಇವರಲ್ಲಿ ೫೦ ಸಾವಿರ ಮಂದಿ ವಾಸ್ತವವಾಗಿ ರಸ್ತೆಯ ಮೇಲೆ ಮಲಗುತ್ತಾರೆ. ಈ ಅನಾಥ ಪ್ರಜೆಗಳೇ ನಮ್ಮ ಸರಕಾರದ ಆಡಳಿತ ತಜ್ಞರು ಗುರುತಿಸಿರುವ ಕಾನೂನುಬದ್ಧವಲ್ಲ, ಎಂದಿರುವ ಕಾರ್ಖಾನೆಯ ಘಟಕಗಳ ಕೂಲಿಕಾರರು. ಇವರು ಆರ್ಥಿಕ ವಲಯ ಗುರುತಿಸಿರುವ ಮುಖ್ಯ ವಾಹಿನಿಯಲ್ಲಿಲ್ಲದಿದ್ದರೂ ದೇಶದ ಆರ್ಥಿಕ ಬೆಳವಣಿಗೆಯಲ್ಲಿ ತೊಡಗಿರುವವರಾಗಿದ್ದಾರೆ. ಇವರುಗಳು ತಮ್ಮದೇ ಆದ ರೀತಿಯಲ್ಲಿ ಜೀವಂತವಾಗಿ, ರಚನಾತ್ಮಕವಾಗಿ ಕ್ರಿಯಾಶೀಲವಾಗಿ ಆರ್ಥಿಕ ಪದ್ಧತಿಯಲ್ಲಿ ತೊಡಗಿಕೊಂಡಿದ್ದಾರೆ. ರಿಕ್ಷಾವಾಲಾಗಳು ಬಟ್ಟೆ ಹೊತ್ತು ಮಾರುವವರು, ಕಸ ಸಂಗ್ರಹಿಸಿ ಪುನರುತ್ಪನ್ನಕ್ಕೆ ಕೊಡುವವರು, ಕಾರಿನ ಬ್ಯಾಟರಿಯನ್ನು ರಿಚಾರ್ಜ ಮಾಡುವವರು, ಚಪ್ಪಲಿ ರಿಪೇರಿ ಮಾಡುವವರು, ಡಬ್ಬ ಅಂಗಡಿಯ ದರ್ಜಿಗಳು, ರದ್ದಿಕಾಗದಗಳಿಂದ ಪೊಟ್ಟಣ ಮಾಡುವವರು, ಕ್ಷೌರಿಕರು, ಹಾದಿಯ ಮೇಲಿನ ವ್ಯಾಪಾರಿಗಳು ಇವರೆಲ್ಲ ಈ ಗುಂಪನ್ನು ಪ್ರತಿನಿಧಿಸುತ್ತಾರೆ. ಇಂತಹ ಸಣ್ಣ ಪುಟ್ಟ ಕೆಲಸಗಳಲ್ಲಿ ತೊಡಗಿರುವವರ ಮೇಲೆ ಸಣ್ಣ ಪುಟ್ಟ ಉದ್ಯೋಗ ಘಟಕಗಳ ಮೇಲೆ ಸುಪ್ರಿಂಕೋರ್ಟ ದಾಳಿಮಾಡಿದೆ.[೧೨] ಪುಣ್ಯಕ್ಕೆ ಲೇಖಕರ ಮೇಲೆ ದಾಳಿ ಮಾಡಿಲ್ಲ. ಏಕೆಂದರೆ ನಾವೂ ಅನಧಿಕೃತ ಉತ್ಪಾದಕರೇ?

ಇತ್ತೀಚಿನ ದಿನಗಳಲ್ಲಿ ದೆಹಲಿಯ ರೈಲ್ವೇ ಭೋಗಿಗಳು ಯಾವಾಗಲೂ ತುಂಬಿರುತ್ತವೆ. ಈ ನಗರದಲ್ಲಿ ಬದುಕಲಾರದೆ ಜನ ತಮ್ಮ ಹಳ್ಳಿಯ ಹಾದಿ ಹಿಡಿದಿದ್ದಾರೆ. ಆದರೆ ದೆಹಲಿಯಲ್ಲೇ ಮಿಲಿಯನ್‌ಗಟ್ಟಲೆ ಉಳಿದ ಮೇಲೆ ಹೇಳಿದ ರೀತಿಯ ಜನ ಪೋಲೀಸರ ಸರಕಾರಿ ಅಧಿಕಾರಿಗಳ ಹೆದರಿಕೆ ಶಿಕಾರಿಗಳ ನಡುವೆ ಭಯದಿಂದ ನಡುಗುತ್ತಾ ಜೀವನ ನಡೆಸಿದ್ದಾರೆ. ಇವರುಗಳನ್ನಿನ್ನೂ ದೆಹಲಿ ಒದ್ದು ಓಡಿಸಿಲ್ಲ.

ಒಂದು ಕಡೆ ಭಾರತದಲ್ಲಿ ಲಂಚುಗುಳಿತನ ಮತ್ತು ಭ್ರಷ್ಟಾಚಾರದ ನಿರ್ಮೂಲನ ಮಾಡಲು 'ಲೈಸನ್ಸ ಕೊಡುವ' ಪದ್ಧತಿಯನ್ನೇ ರದ್ದುಗೊಳಿಸಿ ಸಣ್ಣಪುಟ್ಟ ಖಾಸಗಿ ಉದ್ಯೋಗಕ್ಕೆ ಪ್ರೋತ್ಸಾಹ ಕೊಡಬೇಕೆಂದು ಹೊಸ ನಿಯಮಗಳನ್ನು ಮಾಡುತ್ತಿದ್ದಾರೆ. ಇನ್ನೊಂದೆಡೆ ಇದೇ ರೀತಿ ಸಣ್ಣ ಪುಟ್ಟ ಉದ್ದಿಮೆಗಳನ್ನು ಮಾಡುವ ಹಾದಿಬದಿಯ ಸಣ್ಣ ಪುಟ್ಟ ಘಟಕಗಳಲ್ಲಿ ಕ್ರಿಯಾಶೀಲವಾಗಿ ರಚನಾತ್ಮಕವಾಗಿ ಸಮೃದ್ಧವಾಗಿ

ಬದುಕುವವರನ್ನು ಭ್ರಷ್ಟಾಚಾರಕ್ಕೆ ಮೇವಾಗಿ ನೀಡುತ್ತಿದ್ದಾರೆ. ಇವರ ಬಗ್ಗೆ ಯಾಕೆ ಯಾರೂ ಟೀಕೆ ಮಾಡಿಲ್ಲ?

ಅನಧಿಕೃತ ಉದ್ದಿಮೆಗಾರರು ಪರಿಸರ ಮಾಲಿನ್ಯ ಮಾಡುತ್ತಿದ್ದಾರೆ. ನಿಜವಿರಬಹುದು. ಆದರೆ ದೆಹಲಿಯಂತಹ ನಗರದಲ್ಲಿ ನಿತ್ಯ ಓಡಾಡುವ ಖಾಸಗಿ ಕಾರುಗಳು ಎಷ್ಟು? ಅವುಗಳು ಮಾಡುವ ಮಾಲಿನ್ಯ ಶೇ. ೬೭ ರಷ್ಟು ಎಂದು ಹೇಳಲಾಗಿದೆ.[೧೩] ಈ ಖಾಸಗಿ ಕಾರುಗಳ ಮಾಲಿಕರ ವಿರುದ್ಧ ಕಾರ್‌ಗಳನ್ನು ರದ್ದು ಪಡಿಸುವ ಸಲುವಾಗಿ ಏನಾದರೂ ಕಾನೂನುಗಳನ್ನು ಸರಕಾರ ಮಾಡಿಸಿದೆಯೇ ಅಥವಾ ಒಂದು ಕುಟುಂಬ ಎಷ್ಟು ಕಾರುಗಳ ಒಡೆತನ ಇಟ್ಟುಕೊಳ್ಳಬಹುದು ಎಂದು ಹೇಳಿದೆಯೇ?

ನಮ್ಮ ಸರಕಾರಕ್ಕೆ ಪರಿಸರ ರಕ್ಷಣೆಯೇ ಮುಖ್ಯ ಕಾಳಜಿಯಾಗಿದ್ದರೆ ದೊಡ್ಡ ಕಾರ್ಖಾನೆಗಳು ಹಗಲು ರಾತ್ರಿ ಉಗುಳುವ ಹೊಗೆ-ರಾಸಾಯನಿಕಗಳನ್ನು ಯಾಕೆ ನಿಯಂತ್ರಿಸಿಲ್ಲ? ಅವುಗಳು ಧಾರಾಳವಾಗಿ ನಮ್ಮ ನದಿಗಳು, ಕಾಡುಗಳು, ಅಂತರ್ಜಲ ಮತ್ತು ಕೃಷಿಭೂಮಿಯನ್ನು ವಿಷಮಯವಾಗಿಸಿದೆ ಅವುಗಳ ನಿಯಂತ್ರಣವನ್ನೇಕೆ ಮಾಡುತ್ತಿಲ್ಲ?

ಕೇರಳದ ಗ್ರಾಸಿಂ ಇಂಡಸ್ಟ್ರೀಜ್, ಮಧ್ಯಪ್ರದೇಶದ 'ಓರಿಯಂಟ್ ಪೇಪರ ಮಿಲ್', ಗುಜರಾತದ 'ಸನ್‌ರೈಜ್ ಜೆಲ್ಪ ಕಾರ್ಖಾನೆ' ಜಾದುಗೊಡಾದ 'ಯುರೇನಿಯಂ ಗಣಿ' ಹಾಗೂ ಓರಿಸ್ಸಾದ 'ಅಲ್ಯುಮಿನಿಯಂ ಕಾರ್ಖಾನೆ' ಇವೆಲ್ಲ ನಮ್ಮ ಪರಿಸರವನ್ನು ನಾಶಮಾಡುತ್ತಿಲ್ಲವೇ?

ಮುಂದುವರಿದ ರಾಷ್ಟ್ರಗಳು ಅಭ್ಯುದಯದ ಹೆಸರಲ್ಲಿ ಮಾಡುವ ಪರಿಸರ ಮಾಲಿನ್ಯಕ್ಕೆ ಬಡ ದೇಶಗಳನ್ನು ಹೊಣೆಗಾರರನ್ನಾಗಿಸುತ್ತಿವೆ. ಜಾಗತಿಕ ವಲಯಗಳಲ್ಲಿ ಬಹಳ ಚರ್ಚೆಗೆ ಒಳಗಾದ ಈ ವಿಚಾರವನ್ನು ನಾವಿಂದು ನಮ್ಮ ದೇಶದಲ್ಲೇ ತಂದಿಟ್ಟು ಕೊಂಡಿದ್ದೇವೆ. ಹೇಗೆಂದರೆ ಪ್ರಗತಿಯ ಹೆಸರಿನಲ್ಲಿ ಸರಕಾರ ಆಣೆಕಟ್ಟು ನಿರ್ಮಿಸುತ್ತಿದೆ ಅದರ ನಷ್ಟದ ಹೊಣೆಯನ್ನು ಬಡವರು ಹೊರಬೇಕಾಗಿದೆ.

ಇಂತಹ ಸಂದರ್ಭದಲ್ಲಿ ನನಗೆ ಕೊಟ್ಟಿರುವ ಲೇಖಕಿ ಮತ್ತು ಕಾರ್ಯಕರ್ತೆ ಎಂಬು ಬಿರುದು ನನ್ನನ್ನು ಕುಗ್ಗಿಸಿಬಿಡುತ್ತದೆ. ಈ ಸಂದರ್ಭದಲ್ಲಿ ಲೇಖಕ ಅನ್ನೋ ಪದಕ್ಕಿರುವ ವಿಸ್ತಾರ, ಘನತೆ, ಸ್ಥಾನ ಮಾನಗಳನ್ನು ಇವರು ಸಂಕುಚಿತಗೊಳಿಸುತ್ತಿದ್ದಾರೆ. ಏಕೆಂದರೆ ಈ ಸಂದರ್ಭದಲ್ಲಿ ಇರಬೇಕಾದ ನಿರ್ದಿಷ್ಟತೆ, ವೈಚಾರಿಕತೆ, ಪ್ರಶ್ನಿಸುವ ಮನೋಭಾವ, ಧೈರ್ಯ, ಭಂಡತನ ಸಾಧ್ಯವಾದರೆ ಅವಾಚ್ಯ ಭಾಷೆ ಎಲ್ಲವೂ ಸರಕಾರದೊಡನೆ ಹೋರಾಡಲು ಬೇಕಾಗುವ ಆಸ್ತಿಗಳು. ಆದರೆ ಲೇಖಕನಲ್ಲಿ ಖಚಿತ ನಿಲುವುಗಳು ಇರುವುದಿಲ್ಲ. ಇನ್ನೊಂದೆಡೆ ಈ ನಿಲುವನ್ನು ಹೊತ್ತುಕೊಳ್ಳುವ ಬುದ್ಧಿ ಮಟ್ಟ ಕಾರ್ಯಕರ್ತರಿಗೆ ಇರುವುದಿಲ್ಲ. ಅವರುಗಳೂ ನೇರವಾಗಿ, ಸರಳವಾಗಿ

ಸಮಸ್ಯೆಯನ್ನು ಒಂದೇ ಮುಖದಿಂದ ನೋಡುತ್ತಾರೆ. ನಾನಿಂದು ಕಾರ್ಯಕರ್ತೆಯಾಗಿ ಮಾಡುವ 'ಪ್ರತಿರೋಧಗಳು' ನನ್ನೊಳಗಿನ ತಳಮಳದಿಂದ ಬಂದಿವೆ. ಆದರೆ ಅವುಗಳಿಗೆ 'ವೃತ್ತಿರೂಪ' ಹೆಸರು ಕೊಟ್ಟು ಅದರ ತೀವ್ರತೆಯನ್ನು ಈ ಜನ ತಗ್ಗಿಸಿಬಿಟ್ಟಿದ್ದಾರೆ. ಪ್ರತಿರೋಧಗಳನ್ನು ಇತರ ವೃತ್ತಿ ಸಮಸ್ಯೆಗಳಂತೆಯೇ ಎನ್ನುತ್ತಾ ಅದರ ಪರಿಹಾರವೂ ಅವರದೇ ಎಂದು ಹೇಳುತ್ತಿರುವುದು ನನಗೆ ಸಮಸ್ಯೆಯಾಗಿದೆ. ವಾಸ್ತವತೆ ಏನೆಂದರೆ ನಮ್ಮ ದೇಶದಲ್ಲಿರುವ ಸಮಸ್ಯೆಗಳು 'ಸಮಸ್ಯೆಗಳಲ್ಲ', ಈ ಸಮಸ್ಯೆಗಳನ್ನು ಎತ್ತುತ್ತಿರುವ ನಾವು ಅದರ ಕಾರಣಕರ್ತರೂ ಅಲ್ಲ. ಈ ಸಮಸ್ಯೆಗಳು ಬೃಹತ್ತಾದ ಜಗತ್ತನ್ನೇ ಅಲುಗಾಡಿಸುವ ಸಾಮಾಜಿಕ ರಾಜಕೀಯ ಏರಿಳಿತಗಳಾಗಿವೆ.

ನಾನು ಲೇಖಕಿ ಅಥವಾ ಕಾರ್ಯಕರ್ತೆ ಎಂದಷ್ಟೆ ಇಲ್ಲಿನ ಘಟನೆಗಳಲ್ಲಿ ತೊಡಗಿಸಿಕೊಂಡಿಲ್ಲ. ಈ ಪ್ರತಿರೋಧದಲ್ಲಿ ಮನುಷ್ಯರಾಗಿರುವ ಎಲ್ಲರೂ ಪಾಲುದಾರರಾಗಿದ್ದಾರೆ. ಎಲ್ಲರೂ ಭಾಗವಹಿಸುತ್ತಿದ್ದಾರೆ. ನಾನು ಲೇಖಕಿಯಾದದ್ದರಿಂದ ಅದರ ಬಗ್ಗೆ ಪರಿಣಾಮಕಾರಿಯಾಗಿ ಬರೆಯುತ್ತಾ ಇದ್ದೇನೆ ಅಷ್ಟೆ ಈ ಜಾಗತೀಕರಣವು ಸಾಮಾನ್ಯ ಜನರ ಮೇಲೆ ಆಗುತ್ತಿರುವ ಜೈವಿಕದಾಳಿ ಆಗಿದೆ. ಇದನ್ನು ವೃತ್ತಿ ಪರತೆಯ ಹೆಸರಿನಿಂದ ತೆಗೆದು ಅದರ ದುಷ್ಪರಿಣಾಮವನ್ನು ಸಾಮಾನ್ಯರು ಅರ್ಥೈಸಿಕೊಳ್ಳಬೇಕಾಗಿದೆ. ಬುದ್ಧಿವಂತರೆನ್ನಿಸಿಕೊಂಡ, ನುರಿತ, ಪರಿಣಿತರ ಕೈಯಲ್ಲಿ ಸಿಕ್ಕಿರುವ ನಮ್ಮ ಭವಿಷ್ಯವನ್ನು ವಾಪಸ್ಸು ಕಿತ್ತುಕೊಳ್ಳಬೇಕಾಗಿದೆ. ಈ ಜಾಗತಿಕರಣದ ಬಗ್ಗೆ ಸಾಮಾನ್ಯ ಜನ ಸಾಮಾನ್ಯ ಭಾಷೆಯಲ್ಲಿ ಪ್ರಶ್ನೆಕೇಳಿ ಸಾಮಾನ್ಯ ಭಾಷೆಯಲ್ಲಿ ಉತ್ತರವನ್ನು ಒತ್ತಾಯಿಸುವ ಕಾಲ ಬಂದಿದೆ.

ಒಬ್ಬ ಲೇಖಕ ಎಷ್ಟೇ ತೀವ್ರವಾದ ನಿಷ್ಠೆಯಿಂದ ನೇರವಾಗಿ ಅಥವಾ ಕಾವ್ಯಾತ್ಮಕವಾಗಿ ಏನೇ ಪ್ರಶ್ನೆ ಕೇಳಿದರೂ ಅವನು ಒಬ್ಬ ಸಾಮಾನ್ಯ ಮನುಷ್ಯನೇ ಆದದ್ದರಿಂದ ಅವನಿಗೂ ಸಾಮಾನ್ಯ ಜನರಂತೆ ಸಾರ್ವಜನಿಕ ಪ್ರಶ್ನೆಗಳನ್ನು ಕೇಳಿ ಸಾರ್ವಜನಿಕವಾಗಿ ಉತ್ತರಕ್ಕೆ ಬೇಡಿಕೆ ಇಡಬೇಕಾಗಿದೆ.

ನಾನು ಒಬ್ಬ ಸಾಮಾನ್ಯ ಪ್ರಜೆ. ನಾನು ನನ್ನದೇ ಆದ ಯಾವ ವೈಯಕ್ತಿಕ ತತ್ವ ಆದರ್ಶಗಳನ್ನು ಯಾರಿಗೂ ಒತ್ತಾಯಿಸುವುದಿಲ್ಲ. ನನ್ನದೇ ಮಾತು ನಡೆಯಬೇಕೆಂಬ ವೈಯಕ್ತಿಕ ಹಠವೂ ಇಲ್ಲ. ನಾನು ಚರ್ಚೆಗೆ ಸಿದ್ಧಳಿದ್ದೇನೆ. ನನಗ್ಯಾರಾದರೂ ಈ ಜಗತ್ತಿನಲ್ಲಿ ನಡೆಯುತ್ತಿರುವ ಗಂಭೀರ ಸಂಗತಿಯ ಬಗೆಗೆ ವಿಚಾರಣೆ ನೀಡಿ ಸಮರ್ಥಿಸಿದರೆ ನಾನು ಒಪ್ಪಿಕೊಳ್ಳುವೆ. ಅವರ ವಿಚಾರಗಳನ್ನು ನನ್ನ ಮನಸ್ಸು ಒಪ್ಪಿದರೆ ಖಚಿತವಾಗಿ ಬದಲಾಯಿಸಿಕೊಳ್ಳುವೆ ಆದರೆ ಅವರು ವಾದ ಮಾಡುವ, ವಿನಂತಿಸುವ, ತರ್ಕಬದ್ಧತೆಯ ಬದಲಿಗೆ ನನ್ನನ್ನು ಅವಮಾನಗೊಳಿಸಿ ಈ 'ಪರಿಣಿತರು' ಹೇಳುತ್ತಾರೆ, 'ನಿನಗೇನೂ ತಿಳಿಯುವುದಿಲ್ಲ ಇದು ಸಂಕೀರ್ಣ ಸಮಸ್ಯೆ ನಾವೆಲ್ಲ ಅದರ ಕಾಳಜಿ ವಹಿಸುತ್ತೇವೆ', 'ನೀನು ನಿನ್ನ ಪುಟ್ಟ ಪುಟ್ಟ ಪದಗಳೊಂದಿಗೆ ಆಟವಾಡು, ಜಗತ್ತಿನ ಕಾಳಜಿಯನ್ನು ನಮಗೆ ಬಿಡು' ಎಂದು ಹೇಳಿ ಕಳಿಸುತ್ತಾರೆ. ಇದೊಂದು ವೈದಿಕ

ಪ್ರಜ್ಞೆ ಹಳೆಯ ಮನುಸ್ಮೃತಿಯಲ್ಲಿ ಮಾಡಿದ ಸೂತ್ರಗಳನ್ನೇ ಇಲ್ಲಿಯೂ ಅನ್ವಯಿಸುತ್ತಿದ್ದಾರೆ. ಹಿಂದಿನ ಕಾಲದಲ್ಲಿ ಬ್ರಾಹ್ಮಣರು ಜ್ಞಾನದ ಸುತ್ತಲೂ ಗೋಡೆ ಕಟ್ಟಿ ಅವರಷ್ಟೇ ಅದರ ಒಡೆಯರಾಗಬೇಕು ದಲಿತ ಕೆಳವರ್ಗದ ಯಾರಾದರೂ ಒಬ್ಬ ಆಕಸ್ಮಾತ್ ವೇದದ ಒಂದು ಶ್ಲೋಕವನ್ನು ಕೇಳಿದ್ದೇ ಆದರೆ ಅವರ ಕಿವಿಗಳಿಗೆ ಕಾದ ಸೀಸವನ್ನು ಸುರಿಯಬೇಕು ಎಂದು ಆಜ್ಞೆ ಮಾಡಿದ್ದರು. ಇಂದು ಕೂಡ ಈ 'ಪರಿಣಿತರು' ಅದೇ ಕೆಲಸವನ್ನು ಮುಂದುವರೆಸುತ್ತಿದ್ದಾರೆ. ಭಾರತವು ಮಾಹಿತಿಕ್ರಾಂತಿಯ ಮುಂಚೂಣಿಯಲ್ಲಿದ್ದಾಗಲೂ ಅದಕ್ಕಿಂತಲೂ ಹೆಚ್ಚು ಜನ ಅನಕ್ಷರಸ್ತರಿದ್ದಾರೆ ಎಂಬುದು ಎಂತಹ ಸಮೀಕರಣವಲ್ಲವೇ! ಈ ಪರಿಣಿತರ ಪಟ್ಟಿಯಲ್ಲಿ ಬ್ರಾಹ್ಮಣರೆಷ್ಟು ಜನರಿದ್ದಾರೆ? ಮೇಲವರ್ಗದವರೆಷ್ಟು ಜನ ಎಂದು ಸಮೀಕ್ಷೆ ನಡೆಸಿದರೆ ಕುತೂಹಲಕಾರಿ ಅಧ್ಯಯನವಾಗುತ್ತದೆ.

ಆಕಸ್ಮಾತ್ ನೀವು ಅದೃಷ್ಟವಶಾತ್ ಆ ವರ್ಗದವರಲ್ಲಿ ಒಬ್ಬರಾಗಿದ್ದರೆ ಆಗ ಪರಿಣಿತರ ಕೈಯಲ್ಲಿ ಪರಿಸ್ಥಿತಿಗಳನ್ನು ಬಿಡುವುದು, ನಿಮಗೆ ಮತ್ತು ಪರಿಣಿತರಿಬ್ಬರಿಗೂ ಪರಸ್ಪರ ಲಾಭಕಾರಿಯಾದದ್ದಾಗಬಹುದು. ಪರಿಣಿತರ ತೀರ್ಮಾನಗಳಿಗೆ ಬದುಕಿನ ಸಂಗತಿಗಳನ್ನು ಒಪ್ಪಿಸಿದ್ದೇ ಆದರೆ ನಾಳೆ ಹೀಗೇಕಾಯ್ತು? ಎಂಬ ಆತ್ಮ ಸಾಕ್ಷಿಯ ಪ್ರಶ್ನೆಗೆ ಉತ್ತರಿಸುವ ಸಮಸ್ಯೆ ನಿಮಗಿರುವುದಿಲ್ಲ. ಆಗ ಎಲ್ಲ ರೀತಿಯ ಪರಿಣಿತರಿಗಾಗಿ ದೊಡ್ಡ ಮಾರುಕಟ್ಟೆಯೇ ತಯಾರಾಗುತ್ತದೆ. ಈ ಮಾರುಕಟ್ಟೆಯೇ ವಿಕಾರಗಳ ಬ್ರಹ್ಮಾಂಡವಾಗುತ್ತದೆ. ಹೀಗೆಂದಾಗ ಎಲ್ಲ ಪರಿಣಿತರುಗಳು ಭ್ರಷ್ಟರೆಂದೇನಲ್ಲ ಅಥವಾ ಅವರುಗಳ ನುರಿತ ಪರಿಣಿತಿ ಅವಶ್ಯವಿಲ್ಲ ಎಂದಲ್ಲ. ಆದರೆ ನಮ್ಮ ಬಡದೇಶದಲ್ಲೂ ಅನೇಕ ಶ್ರೀಮಂತರಿದ್ದಾರೆ ಎಂಬುದು ನಿಜವಲ್ಲವೇ? ಬಡವರ ಹೆಸರಿನಲ್ಲಿಯೂ ಬಹಳ ದುಡ್ಡು ಗಳಿಸಬಹುದು. ಈ ಸಂದರ್ಭದಲ್ಲಿ ಅನೇಕ ನೈತಿಕ ಪ್ರಶ್ನೆಗಳನ್ನು ಈ ಪರಿಣಿತರಿಗೆ ಕೇಳಬೇಕಾಗಿದೆ? ಬಡತನ ಹತಾಶೆಗಳಿಂದ ತುಂಬಿರುವ ಈ ಜನರಿಂದ ಹೇಗೆ ಹಣವನ್ನು ಸಂಪಾದಿಸುವ ವೃತ್ತಿ ಮಾಡುತ್ತಿದ್ದೀರಿ? ವರ್ಲ್ಡ್ ಬ್ಯಾಂಕ್‌ನಿಂದ ಶಿಕ್ಷಣವೇತನ ಪಡೆದು ನಡೆಸಿದ ಪರಿಣಿತರ ಅಧ್ಯಯನ ಎಷ್ಟರಮಟ್ಟಿಗೆ ನಿಷ್ಪಕ್ಷಪಾತಿ? ಸ್ವಂತ ಲಾಭವಿಲ್ಲದೆ ಈ ಜನ ಜಾಗತಿಕ ಅಧ್ಯಯನವನ್ನು ಮಾಡಿದ್ದಾರೆಯೇ!

ಇನ್ನೂ ಸ್ಪಷ್ಟಪಡಿಸಬೇಕೆಂದರೆ ಅಂತರಾಷ್ಟ್ರೀಯ ಆಣೆಕಟ್ಟೆ ಕಟ್ಟುವ ಉದ್ಯಮದ ಅಧ್ಯಯನವನ್ನೇ ತೆಗೆದುಕೊಳ್ಳಿ. ಈ ಉದ್ದಿಮೆಯಲ್ಲಿ ಕೋಟಿಗಟ್ಟಲೆ ಡಾಲರ್‌ನ ವ್ಯವಹಾರ ನಡೆಯುತ್ತಿದೆ. ಈ ಅಧ್ಯಯನದ ಹೆಸರಲ್ಲಿ ಸಾವಿರಾರು ವರದಿಗಳು, ಪುಸ್ತಕಗಳು, ಪಿಎಚ್.ಡಿ.ಗಳು, ಸಹಾಯಧನಗಳು, ಸಾಲಗಳು, ಉಕ್ಕಿ ಹರಿದಿವೆ. ಆದರೆ ಒಂದು ವಿಚಿತ್ರವೆಂದರೆ ಭಾರತದೇಶದಲ್ಲಿ ಇಂತಹ ಆಣೆಕಟ್ಟುಗಳನ್ನು ನಿರ್ಮಿಸಿದಾಗ ಎಷ್ಟು ಜನ ನಿರಾಶ್ರಿತರಾಗಬಹುದು, ಎಂಬ ಅಂದಾಜಿನ ಪಟ್ಟಿ ಇಲ್ಲ ವರದಿ ಇಲ್ಲ. ಆಣೆಕಟ್ಟು ನಿರ್ಮಾಣದಿಂದ ಆಗುವ ಆಹಾರ ಉತ್ಪಾದನೆಯ ಅಂದಾಜಿನ ಲೆಕ್ಕವೂ ಇಲ್ಲ. ದೊಡ್ಡ ಆಣೆಕಟ್ಟೆಯ ನಿರ್ಮಾಣದಿಂದ ಆಗುವ ಅಭಿವೃದ್ಧಿಯ ಗುರಿ ಸಾಧಿಸಿದ್ದಾರೋ ಇಲ್ಲವೋ ಎನ್ನುವ ಮೌಲ್ಯಮಾಪನ ಈವರೆಗೆ ಯಾರೂ ಮಾಡಿಲ್ಲ?

ಆಣೆಕಟ್ಟೆ ಕಟ್ಟಲು ಮಾಡಿದ ಖರ್ಚು ಅದಕ್ಕೆ ಪೂರಕವಾಗಿ ಆಗಿರುವ ಅಭಿವೃದ್ಧಿಯ ಸಮೀಕ್ಷೆ ಎಲ್ಲಿದೆ? ಈ ಪರಿಣತರು ಏನು ಮಾಡುತ್ತಿದ್ದಾರೆ?

ಒಟ್ಟಾರೆಯಾಗಿ ಹೇಳುವುದಾದರೆ ಭಾರತದ ಆರ್ಥಿಕ ಪರಿಸ್ಥಿತಿ ಸರಿ ಇಲ್ಲ. ಆದರೂ ಅದ್ಭುತವ ಸಂಗತಿಯೆಂದರೆ ಅಸಹಾಯಕ ಅನಕ್ಷರಸ್ತ ಬಡಜನರು ಅಭಿವೃದ್ಧಿಯ ಹೆಸರಿನಲ್ಲಿ ನಡೆಯುತ್ತಿರುವ ದಾಳಿಯನ್ನು ನೂರಾರು ರೀತಿಯಿಂದ ವಿರೋಧಿಸುತ್ತಿದ್ದಾರೆ. ಇವರುಗಳನ್ನು ಎಷ್ಟು ತುಳಿದರೂ ಸಾಯದೆ ಎದ್ದು ನಿಲ್ಲುತ್ತಲೇ ಇದ್ದಾರೆ. ಈ ವಿರೋಧಿಗಳು ಬಹುಮುಖಿಯಾದವು. ಒಂದು ಸಣ್ಣ ಉದಾಹರಣೆಯನ್ನು ಹೇಳುವುದಾದರೆ, ಒಂದು ಕಡೆ ಒಬ್ಬ ಮಲೆಯಾಳಿ ಪ್ರೊಫೆಸರ್ ನಿತ್ಯವೂ ರಾಷ್ಟ್ರಪತಿಗೆ ಪತ್ರ ಬರೆದು ಇತಿಹಾಸದ ಪಠ್ಯದಲ್ಲಿ ಕೋಮು ಉದ್ದೀಪನಾ ಭಾವನೆಯ ವಿರುದ್ಧ ಪೆಟೀಶನ್ ಕಳಿಸ್ತಾನೆ. ಇನ್ನೊಂದು ಕಡೆ ಸುಂದರಲಾಲ ಬಹುಗುಣ ಅವರು ಈ ಮುದಿ ವಯಸ್ಸಿನಲ್ಲಿ ಕೂಡ ಥೆಹರಿ ಡ್ಯಾಂ ವಿರುದ್ದ ಉಪವಾಸ ಸತ್ಯಾಗ್ರಹ ಕೈಗೊಳ್ಳುತ್ತಾರೆ. ಮತ್ತೊಂದು ಕಡೆ ಜಾದುಗೊಡಾದ ಆದಿವಾಸಿ ಜನ ಯುರೇನಿಯಂ ಗಣಿಯ ವಿರುದ್ಧ ಚಳುವಳಿ ಮಾಡುತ್ತಾರೆ. ಇನ್ನೂ ಜಾರ್ಖಂಡದಲ್ಲಿ ಕೋಯಲ್‌ಕಾರೋ ಸಂಘಟನೆಯವರು ದೊಡ್ಡ ಆಣೆಕಟ್ಟು ಬೇಡ ಎಂದು ಹೋರಾಡ್ತಾ ಇದ್ದಾರೆ. ಚತ್ತೀಸ್‌ಗಡಾದ ಮುಕ್ತಿ ಮೋರ್ಚದ ಬೃಹತ್ ಹೋರಾಟ. ಕಿಸಾನ ಶಕ್ತಿ ಆಂದೋಲನ, ಬೀಜ ಉಳಿಸಿ ಆಂದೋಲನ, ಬೀಜ ವೈವಿಧ್ಯತೆ ಉಳಿಸಿ ಎಂಬ ಗದವಾಲದ ಆಂದೋಲನ, ಜೊತೆಗೆ ೩೦ ವರ್ಷಗಳಿಂದ ನಡೀತಾ ಇರುವ ನರ್ಮದಾ ಬಚಾವೋ ಆಂದೋಲನ..... ಹೀಗೆ ಈ ಎಲ್ಲ ಪ್ರತಿರೋಧಗಳು ಏನು ಹೇಳುತ್ತಿವೆ?

ಭಾರತದ ಮೋಕ್ಷ ಇರುವುದು ಭಾರತೀಯರ ರಕ್ತಗತವಾಗಿರುವ ವ್ಯವಸ್ಥೆಗೆ ಬಗ್ಗಲಾರದ ಸ್ವಭಾವವು ನಡೆಸುವ ವೈವಿಧ್ಯಮಯ ಪ್ರತಿರೋಧಗಳಲ್ಲಿದೆ.

ಹಿಂದೂ ಅಧಿಕಾರಶಾಯಿಗಳು ಕೂಡ ಇಬ್ಬರಿಗಿಂತ ಹೆಚ್ಚು ಮಂದಿ ಕೂಡಿದರೆ ೫ ನಿಮಿಷಕ್ಕಿಂತ ಜಾಸ್ತಿ ಒಂದೇ ಅಭಿಪ್ರಾಯವನ್ನು ಒಪ್ಪಿಕೊಳ್ಳುವುದಿಲ್ಲ. ಹೀಗಾಗಿ ಭಾರತದಂತಹ ದೇಶವನ್ನು ಜಾಗತೀಕರಣಕ್ಕೆ ಒಪ್ಪಿಸುವದೆಂದರೆ ಉಕ್ಕುವ ಸಮುದ್ರವನ್ನು ಕಬ್ಬಿಣದ ಬೇಲಿಯಲ್ಲಿ ನಿಯಂತ್ರಿಸುವ ಪ್ರಯತ್ನವಾಗಿದೆ. ನನಗನಿಸುತ್ತದೆ ಇದು ಭಾರತ ದೇಶಕ್ಕೆ ಒಗ್ಗುವುದಿಲ್ಲ. ಒಗ್ಗಲು ಸಾಧ್ಯವೇ ಇಲ್ಲ. ನಮ್ಮ ಅನುಭವ ಸಂಪ್ರದಾಯ, ಸಂಸ್ಕೃತಿಗಳು ಬಹಳ ಪುರಾತನವಾದವು. ಅವುಗಳನ್ನು ಬದಲಾಯಿಸಲು ಪ್ರಯತ್ನಿಸಿದರೆ ತನ್ನದೇ ಆದ ರೀತಿಯಲ್ಲಿ ಅದು ಎಲ್ಲವನ್ನು ಬಗ್ಗು ಬಡಿಯುತ್ತದೆ. ಬಹಳ ದೊಡ್ಡವಾದ ಭವ್ಯವಾದ ಬಹಳ ವೈವಿಧ್ಯಮಯವಾದ ಬಹಳ ಭಿನ್ನಾಭಿಪ್ರಾಯಗಳಿಂದ ಕೂಡಿದ್ದೂ ಏಕತೆಯನ್ನು ಸಾಧಿಸಿರುವ ಜನಾಂಗವಿದು. ಜಾಗತೀಕರಣದ ಒಂದೇ ಸೂತ್ರ 'ಜೀವನ ಎಂದರೆ ಲಾಭ', ಈ ವಿಚಾರವನ್ನು ಭಾರತ ಎಂದೂ ಒಪ್ಪುವುದಿಲ್ಲ. ಜಾಗತಿಕ ಜಗತ್ತಿನಲ್ಲಿ ಈ ಘಳಿಗೆಯಲ್ಲಿ ಏನೇನು ನಡೆಯುತ್ತಿವೆ? ಎಂಬುದು

ಸಾಮಾನ್ಯರ ಅರಿವಿಗೆ ಬರುವಂತೆ ಬಿಡಿಸಿ ಹೇಳುವ ಜವಾಬ್ದಾರಿ ಲೇಖಕರದ್ದಾಗಿದೆ. ಅಂದರೆ ಜನಸಾಮಾನ್ಯರ ಬದುಕಿನಲ್ಲಿ ನಡೆಯುತ್ತಿರುವ ಲಾಭನಷ್ಟದ ನಕ್ಷೆಯನ್ನು ಮತ್ತು ನಿರ್ದೇಶಕರುಗಳ ಸಭೆಯಲ್ಲಿ ಮಾಡುವ ಗೊತ್ತುವಳಿಗಳನ್ನು ಬದುಕಿನ ವಾಸ್ತವ ಸಂಗತಿಗಳ ಜೊತೆ ಜನಸಾಮಾನ್ಯನ ಬದುಕಿನ ನಿದರ್ಶನಗಳೊಂದಿಗೆ, ಅವರ ತಿಳುವಳಿಕೆಗೆ ಒಗ್ಗುವಂತೆ ಮುಂದಿಡಬೇಕಾದ ಅನಿವಾರ್ಯ ಇಂದಿದೆ. ಈ ಕೆಲಸ ಲೇಖಕನದಾಗಿದೆ.

ಕಣ್ಣಿಗೆ ಕಾಣದ ಶಕ್ತಿಯೊಂದಕ್ಕೆ ನಮ್ಮೆಲ್ಲ ಮನೆ, ಮಠ, ನೌಕರಿ, ಗೌರವ, ಸಂಪ್ರದಾಯ ಎಲ್ಲವುಗಳನ್ನು ಕಳದುಕೊಳ್ಳಬೇಕಾದ ಭವಿಷ್ಯ, ಕಳೆದುಕೊಳ್ಳುತ್ತಿರುವ ವರ್ತಮಾನ, ಮತ್ತು ಭೂತಕಾಲಗಳನ್ನು ಬಿಚ್ಚಿಡಬೇಕಾದ ಸತ್ಯ ಇಂದು ಲೇಖಕರ ಎದುರಿಗಿದೆ? ಶತ್ರು ಇಂದು ಕಣ್ಣಿಗೆ ಕಾಣದ,ಕಲ್ಪನೆಗೆ ಎಟುಕದ, ಕೈಗೆ ಸಿಗದ ರೂಪದಲ್ಲಿದ್ದಾನೆ. ಇಂದು ಹೊಸ ರೀತಿಯ ಸವಾಲುಗಳು ನಮ್ಮೆದುರಿಗಿವೆ. ಹೊಸ ರೀತಿಯ ಅಧ್ಯಯನ ಹೊಸ ರೀತಿಯ ಪಾತ್ರಚಿತ್ರಣ ನಮ್ಮ ಕಲೆಯಲ್ಲಾಗಬೇಕಿದೆ. ಕಲೆಗೆ ಕಣ್ಣಿಗೆ ಕಾಣದ್ದನ್ನು ಕಾಣಿಸುವ, ಕೈಗೆ ಎಟುಕಲಾರದ್ದನ್ನು ಎಟಕಿಸುವ ಮುಟ್ಟಿಸುವ ಶಕ್ತಿ ಇದೆ. ಕಲೆಯ ಜಗತ್ತಿನಲ್ಲಿ ಜಾಗತೀಕರಣದ ಶಕ್ತಿ ಸ್ವರೂಪಗಳನ್ನು ಬಿಚ್ಚಿಡುವ, ದರ್ಶಿಸುವ ಶಕ್ತಿ ಇದೆ. ಅದಕ್ಕಾಗಿಯೇ ಲೇಖಕನಾದವನು ಅದನ್ನು ಅಕ್ಷರಗಳಲ್ಲಿ ಹಿಡಿದಿಡಬೇಕಾಗಿದೆ.

ಅರಸಿಕರು ಜೀವನ ಎಂದರೆ ವಿಫಲವಾದ ಕ್ರಾಂತಿ ಮತ್ತು ಮೋಸಗಳ ಒಪ್ಪಂದಗಳ ನಡುವಿನ ಆಯ್ಕೆ ಎನ್ನುತ್ತಾರೆ. ಅವರು ಸರಿಯಿರಬಹುದು. ಆದರೆ ನಾವಿಂದು ಭವ್ಯವಾದ ಹೊಚ್ಚ ಹೊಸದಾದ ರಾಜಕೀಯ ಆಡಳಿತವನ್ನು ಶೋಧಿಸಬೇಕಾಗಿದೆ. ಈಗ ರಾಜಕೀಯ ಆಡಳಿತದವರು ನಡೆಸುತ್ತಿರುವ ರಾಜಕೀಯ ಆಡಳಿತವಲ್ಲ. ಅದನ್ನು ವಿರೋಧಿಸುವ ಶಕ್ತಿ ಇರುವ ಆಡಳಿತ ಬೇಕು. ಈ ಆಡಳಿತದಲ್ಲಿ ನಡೆಯುವ ಪ್ರತಿಘಟನೆಗೂ ಹೊಣೆಗಾರಿಕೆ ಬೇಕು. (accountability) ಈ ರಾಜಕೀಯಕ್ಕೆ ಜಗತ್ತನ್ನು ನಾಶಮಾಡುವ ಶಕ್ತಿಗಳ ವಿರುದ್ಧ ಕೈಜೋಡಿಸುವ ಶಕ್ತಿ ಇರಬೇಕು. ಈ ದಿನಗಳ ಸಂದರ್ಭದಲ್ಲಿ ಹೇಳುವುದಾದರೆ ಜಾಗತೀಕರಣಗೊಳಿಸಬೇಕಾದ ಒಂದೇ ಅರ್ಥಪೂರ್ಣ ಮೌಲ್ಯ ವೆಂದರೆ 'ಪ್ರತಿರೋಧ'. 'ಜಗತ್ತಿನ ವಿನಾಶಕಾರಿಶಕ್ತಿಗಳ ವಿರೋಧ'-ಈ ಪ್ರತಿರೋಧ ಭಾರತ ದೇಶದ ಕೊಡುಗೆಯಾಗಬೇಕು. ಅದೇ ನಿಜವಾದ ಭಾರತದ ಅರ್ಥಪೂರ್ಣ 'ರಫ್ತು'.

The Ladies Have feelings, so....

1. Roger Cohen 'Germans Seek Foreign Labor for New Era of Computers'. New York Times, 9 April 2000,p.1.

2. See report at Rediff.com(Online at http//www.rediff.com/news/2001/may/26pic3.htm).
3. For data on poverty and illiteracy in India, see United Nations Development Program, 2000 Human Development Report 2000:Human Rights and Human Development. Oxford University Press, New York, Table 1: Human Development Index.p.159,Table: Human Poverty in Developing Countries. P.170 and table 19. Demographic Trends, P.225 Reports also available on line at http://www undp.org and at the site of the UNDP programme in India, online at http://www. undp.org.in
4. See UNDP,Human Development Report (Note 3 above)p.225.
5. Ashok Gulati. 'Overflowing Granaries, Empty Stomachs The Economic Times of India 27 April 2000.
6. Joseph Kahn. US-India Agreement; New York Times 11 January 2000.p.4.
7. See Devaraj Land acquisition bill worse than polonial law inter press service 3rd December 1998.
8. Indian Government to protest world commission on Dams report Asia Pulse 6th February 2001.
9. W.C.D. website at http\www.tams.org & medium and large tams Tamned The Business Standard 23rd September 2000.
10. SC Wants time limit on closer of polluting units Times of India 25th January 2001.
11. Peter Popham "Squalid, disgusting, toxic, is this the dirtiest city on the planet" The Independent 27th October 1997. Page 9.
12. On 6th September 2001 The Supreme Court of India 3rd Notice to Arundati Roy for contempt of Court.

13) Gol. 1997 white paper on pollution in Delhi: with an Action plan, Ministry of Environment and Forests, New Delhi (online at http://envtar.nic.in/divisions cpoll/Delpolln.html)
14) See WCD Report P.ll and table 1.2.
The Algebra of Infinite Justice.

◆◆

ಪ್ರೊ. ಕೆ. ಆರ್. ಸಿದ್ಧಗಂಗಮ್ಮ, ಪರಿಮಳ ನಾಯಕ
ಪ್ರಾಧ್ಯಾಪಕರು, ಲಿಂಗರಾಜ ಕಾಲೇಜ, ಬೆಳಗಾಂವ-೫೯೦ ೦೦೬

ಕಳೆದು ಹೋದ ಹುಡುಗ

ಇಂಗ್ಲೀಷ ಮೂಲ : **ಮುಲ್ಕ್‌ರಾಜ್ ಆನಂದ್**
ಅನುವಾದ : **ಶ್ರೀನಿವಾಸ ವಿ. ಸುತ್ರಾವೆ**

ವಸಂತಾಗಮನದ ಸಮಯ. ಎಲ್ಲೆಡೆಯೂ ಹಬ್ಬದ ಸಂಭ್ರಮ. ಮಸುಕು ಮಸುಕಾದ ಸಂದಿಗೊಂದಿಗಳಿಂದ ಜನ ಚೆಂದದ ಬಟ್ಟೆಗಳನ್ನು ತೊಟ್ಟು ಸಡಗರದಿಂದ ಹೊರ ಹೊಮ್ಮುತ್ತಿದ್ದರು - ಮೊಲವೀಡಿನಿಂದ ಚೆಂದದ ಮೊಲಗಳು ಸರಸರನೆ ಹೊರಬೀಳುವಂತೆ. ನಗರದ ಹೊರವಲಯದಲ್ಲಿ ಪಸರಿಸಿದ್ದ ಹೊಂಬೆಳಕಿನಲ್ಲಿ ಇವರು ಜಾತ್ರೆ ನಡೆಯುವ ಸ್ಥಳಕ್ಕೆ ಧಾವಿಸುತ್ತಿದ್ದರು. ಕೆಲವರು ಕಾಲ್ನಡಿಗೆಯಲ್ಲಿ ಕೆಲವರು ಕುದುರೆಯ ಮೇಲೇರಿ, ಮತ್ತೆ ಕೆಲವರು ಎತ್ತಿನ ಬಂಡಿಗಳಲ್ಲಿ. ಒಬ್ಬ ಸಣ್ಣ ಹುಡುಗ ತನ್ನ ತಂದೆಯ ಜೊತೆಯಲ್ಲಿ ಪುಟ್ಟ ಪುಟ್ಟ ಹೆಜ್ಜೆಯೊಡನೆ ಕುಣಿದಾಡುತ್ತಾ, ಸಂತಸದಿಂದ ನಡೆದಿದ್ದ. ಬೆಳಗು ಎಲ್ಲರನ್ನೂ ಸಂತಸದಿಂದ ಕೈಬೀಸಿ, ಬನ್ನಿ, ಹೂವು - ಹಾಡುಗಳಿಂದ ತುಂಬಿರುವ ಈ ಹೊಲಗಳ ಹಾದು ಬನ್ನಿ ಎಂದ ಕರೆಯುತ್ತಿರುವಂತೆ ಕಾಣಿಸುತ್ತಿತ್ತು.

"ಬಾ, ಮಗು, ಬೇಗ ಬಾ", ಎಂದು ಹುಡುಗನ ತಂದೆ-ತಾಯಿಗಳು ಹಿಂದುಳಿಯುತ್ತಿದ್ದ ಮಗುವಿಗೆ ಕರೆಯುತ್ತಿದ್ದರು. ಅವನಾದರೋ, ರಸ್ತೆಯುದ್ದಕ್ಕೂ ಹಾಕಿದ್ದ ಮಳಿಗೆಗಳಲ್ಲಿನ ಆಟದ ಸಾಮಾನುಗಳನ್ನು ಕಂಡು, ಆಸೆಯಿಂದ ನಿಂತುಬಿಡುತ್ತಿದ್ದ.

ತಂದೆ-ತಾಯಿಗಳು ಕೂಗಿ ಕರೆದಾಕ್ಷಣಕ್ಕೆ ಅವರು ಅವನಿಗಾಗಿ ಕಾದು ನಿಂತಿದ್ದೆಡೆ ಅವನು ಹೋಗುತ್ತಿದ್ದ, ನಿಜ. ಆದರೆ ಅವನ ಕಣ್ಣುಗಳು ಇನ್ನೂ ಆ ಆಟಿಕೆಗಳ ಮೇಲೆ ಇರುತ್ತಿದ್ದವು. ತನ್ನ ಮನದಾಸೆಯನ್ನು ಅವರಿಗೆ ತಿಳಿಸಬೇಕೆಂದು

ಕೊಳ್ಳುವನು, ಆದರೆ ಅವರ ಕಣ್ಣುಗಳಲೆಲ್ಲ ನಿರಾಕರಣೆಯನ್ನು ಅವನು ಸ್ಪಷ್ಟವಾಗಿ ಕಾಣಬಹುದಾಗಿತ್ತು.

ಆದರೂ, "ನಂಗೆ ಆ ಆಟದ ಸಾಮಾನು ಬೇಕು", ಎಂದು ಅವನು ಬೇಡಿದ.

ಅವನ ತಂದೆ ಅವನೆಡೆ ತನ್ನ ರೂಢಿಯ ಕೆಂಗಣ್ಣಿನಿಂದ ನೋಡಿದ. ಆದರೆ ಅವತ್ತಿನ ಆ ಅಪರೂಪದ ದಿನದ ಪ್ರಭಾವದಿಂದಾಗಿ ಅವನ ತಾಯಿಯ ಮನ ಕರಗಿತ್ತು. ಅವನು ಹಿಡಿದುಕೊಳ್ಳಲೆಂದು ತನ್ನ ಬೆರಳನ್ನು ಚಾಚಿ, "ಅಲ್ನೋಡು, ಮರಿ, ಅಲ್ಲಿ ಮುಂದೆ ನೋಡು". ಎಂದಳು.

'ಅ.... ಮ್ಮ " ಎಂದು ಹುಡುಗ ಬಿಕ್ಕುತ್ತಿದ್ದ. ಆದರೆ ತನಗಿಷ್ಟವಾಗಿದ್ದ ವಸ್ತುವೇನೂ ಅವನಿಗೆ ಸಿಗುವಂತಿರಲಿಲ್ಲ. ಧೂಳು ತುಂಬಿದ್ದ ರಸ್ತೆಯಲ್ಲಿ ಇಲ್ಲಿಯವರೆಗೆ ನಡೆದು ಬಂದಿದ್ದ ಅವರು ಈಗ ಅಂಕುಡೊಂಕಾದ, ಉತ್ತರ ದಿಕ್ಕಿನೆಡೆಯ, ರಸ್ತೆಯಲ್ಲಿ ನಡೆಯುತ್ತಾ ಹೋದರು. ಅವರೀಗ ಹೊಲದಲ್ಲಿನ ಒಂದು ಕಾಲು ಹಾದಿಯಲ್ಲಿದ್ದರು.

ಅದೊಂದು ಸಾಸಿವೆಗಿಡದ ಹೊಲವಾಗಿತ್ತು. ಅದು ಸಮತಟ್ಟಾದ ನೆಲದ ಮೈಲಿಗಟ್ಟಲೆಯ ದಾರಿಯುದ್ದಕ್ಕೂ ಬಂಗಾರದ ನೀರಿನಂತೆ ಹರಿಯುತ್ತಿರುವ ನದಿಯಂತೆ ಕಾಣುತ್ತಿತ್ತು. ಅದರ ಕೊನೆಯಲ್ಲಿ, ಒಂದು ಬದಿ, ಸಣ್ಣ ಸಣ್ಣ ಮಣ್ಣಿನ ಮನೆಗಳ ಸಾಲು. ಅದರ ಮುಂದೆ, ಹಳದಿ ಬಣ್ಣದ ಬಟ್ಟೆ ತೊಟ್ಟಿದ್ದ ಗಂಡಸರು, ಹೆಂಗಸರ ಗುಂಪು. ಆ ಗುಂಪಿನಿಂದ ಶಿಳ್ಳೆಯ, ಕೂಗಾಟದ, ಕೇಕೆಯ ನಾನಾ ಬಗೆಯ ನಾದವು ಶಿವನ ಆರ್ಭಟದಂತೆ ಮುಗಿಲು ಮುಟ್ಟಿತ್ತು.

ಹುಡುಗ ವೈಭವದ ದೃಶ್ಯವನ್ನು ಕಂಡು, ಹಿಗ್ಗಿ, ತನ್ನ ತಂದೆ–ತಾಯಿಯನ್ನು ನೋಡಿದ. ಅವರಿಗೂ ತನ್ನಂತೆಯೇ ಸಂತೋಷವಾಗಿರಬೇಕೆಂದು ಕೊಂಡು, ಕಾಲುಹಾದಿಯನ್ನು ತೊರೆದು, ಹೊಲದೊಳಕ್ಕೆ ನುಗ್ಗಿದನು. ಕುದುರೆಮರಿಯಂತೆ ಅವನು ಕುಣಿಯುತ್ತಿರುವಾಗ ಅವನ ಪಾದಗಳು ಇನ್ನೂ ದೂರದ ಹೊಲಗಳಿಂದ ಬೀಸಿ ಬರುತ್ತಿದ್ದ ಸುವಾಸನಾ ಗಾಳಿಗೆ ಸರಿಯಾಗಿ ತಾಳಹಾಕುತ್ತಿರುವಂತೆ ಕಾಣುತ್ತಿದ್ದವು.

ಒಂದು ಕಪ್ಪು ಜೇನು ಹುಳವೋ ಅಥವ ಬಣ್ಣದ ಚಿಟ್ಟೆಯೋ ಮಕರಂದವನ್ನು ಹೀರಲು ಹೊಗಳನ್ನರಸುತ್ತಿರುವ ಸಮಯದಲ್ಲೇ ಕೆಲವು ಕೊಡತಿ ಹುಳುಗಳು ತಮ್ಮ ಕಡು ನೇರಳೆ ಬಣ್ಣದ ರೆಕ್ಕೆಗಳನ್ನು ಬಡಿಯತ್ತಾ ಹಾರುತ್ತಿದ್ದವು. ಹುಡುಗನು ಅವನ್ನು ದಿಟ್ಟಿಸಿ ನೋಡುತ್ತಿರುವಾಗ ಯಾವುದಾದರೂ ಒಂದು ಚಿಟ್ಟೆಯು ರೆಕ್ಕೆ ಬಡಿಯುವುದನ್ನು ನಿಲ್ಲಿಸಿ ಒಂದು ಘಳಿಗೆ ನಿಂತಾಗ ಅದನ್ನು ಅವನು ಪಕ್ಕನೆ ಹಿಡಿಯಲು ಹೋಗುವನು, ಆದರೆ ಅದು ತಪ್ಪಿಸಿಕೊಳ್ಳುವುದು. ಒಂದು ಧೈರ್ಯಶಾಲಿ ಕಪ್ಪು ಜೇನು ಹುಳುವು ಅವನ ಹಿಡಿತದಿಂದ ತಪ್ಪಿಸಿಕೊಂಡು ಅವನ ಕಿವಿಯ ಸುತ್ತ ಗುಯ್ ಎಂದು ಸುತ್ತಾಡುತ್ತಾ ಕೊನೆಗೆ ಅವನ ತುಟಿಗಳ ಮೇಲೇ ಬಂದು ಕುಳಿತಾಗ, ತಾಯಿ ಎಚ್ಚರಿಕೆಯಲ್ಲಿ "ಬಾ, ಮಗು, ಹೀಗೆ ಬಾ ಕಾಲ್ದಾರಿಯ ಮೇಲೆ", ಎಂದು ಹೇಳಿದಳು.

ಅವನೀಗ ಖುಷಿಯಿಂದ ತನ್ನ ತಂದೆ-ತಾಯಿಗಳತ್ತ ಓಡಿ ಬಂದ. ಅಷ್ಟೇ ಅಲ್ಲ, ಸ್ವಲ್ಪ ದೂರ ಅವರಿಗಿಂತ ಮುಂದೆಯೇ ನಡೆದ. ಆದರೆ ತರುವಾಯ, ಮತ್ತೆ ಹಿಂದುಳಿದ, ಏಕೆಂದರೆ ಅವನ ಗಮನಸವೀಗ ಹಿತವಾದ ಬಿಸಿಲಲ್ಲಿ ಹಾಯಾಗಿ ಹಾರಾಡಲೆಂದು ತಮ್ಮ ತಮ್ಮ ಗೂಡುಗಳಿಂದ, ಅಡಗುದಾಣಗಳಿಂದ, ಹೊರಬರುತ್ತಿದ್ದ ಕ್ರಿಮಿಕೀಟಗಳೆಡೆ ಹೊರಳಿತ್ತು.

ಅವನ ತಂದೆ-ತಾಯಿಗಳು ಇಷ್ಟು ಹೊತ್ತಿಗೆ ಒಂದು ತೋಪನ್ನು ತಲುಪಿದ್ದರು; ಅದರಲ್ಲಿನ ಒಂದು ಬಾವಿ ಕಟ್ಟೆಯ ಮೇಲೆ ಕುಳಿತಿದ್ದರು. ಅಲ್ಲಿಂದಲೇ ಅವರು ಕೂಗಿ, "ಬಾ, ಮಗು, ಇಲ್ಲಿ ಬಾ", ಎಂದು ಕರೆದರು. ಅವನು ಅವರತ್ತ ಓಡಿ ಬಂದ.

ಅಲ್ಲಿ ಒಂದು ದೊಡ್ಡ ಆಲದ ಮರವಿತ್ತು. ಅದು ತನ್ನ ಬಾಹುಗಳನ್ನು ಅರಳುತ್ತಿರುವ ಹಲಸು, ನೇರಳೆ, ಬೇವು, ಸಂಪಿಗೆ ಮತ್ತು ಬಾಗೇ ಮರ ಗಿಡಗಳ ಮೇಲೆ ಚಾಚಿತ್ತು. ಮತ್ತು ನೆರಳನ್ನು ಹೊಂಬಣ್ಣದ ಸೋನಾಮುಖಿ ಹಾಗೂ ಕಡುಗೆಂಪು ಗುಲ್‌ಮೊಹರ್ ಗಿಡಗಳ ಮೇಲೆ ಹರಡಿತ್ತು- ಮೊಮ್ಮಕ್ಕಳ ಮೇಲೆ ಅಜ್ಜಿಯೊಬ್ಬಳು ರಕ್ಷಣೆಗೆಂಬಂತೆ ತನ್ನ ಸೆರಗನ್ನು ಹರಡುವಂತೆ. ಆದರೆ ನಾಚಿ ನಸುನಗೆಯನ್ನು ಬೀರುತ್ತಿದ್ದ ಅವುಗಳು ಸೂರ್ಯನಿಗೆ ನಮಿಸಲೆಂಬಂತೆ ಹೊರ ಇಣುಕಿ ನೋಡುತ್ತಿದ್ದವು. ಅವುಗಳ ಪರಾಗದ ಪರಿಮಳವು ಮೆಲ್ಲಮೆಲ್ಲನೆ ಬೀಸುವ ಗಾಳಿಯಲ್ಲಿ ತೇಲಿ ಬರುತ್ತಿತ್ತು.

ಹುಡುಗನು ತೋಪಿನೊಳಗೆ ಓಡಿ ಬರುತ್ತಿರುವಾಗ ಅವನ ಮೈಮೇಲೆ ಹೂಗಳು ಮಳೆಗರೆಯುತ್ತಿದ್ದವು. ತನ್ನ ತಂದೆ-ತಾಯಿಗಳನ್ನು ಮರೆತು, ಅವನು ಕೆಳಗುದುರುತ್ತಿದ್ದ ದಳಗಳನ್ನು ತನ್ನ ಕೈಯಲ್ಲಿ ಹಿಡಿಯಲು ಪ್ರಯತ್ನಿಸುತ್ತಿದ್ದನು. ಆದರೆ ಅಗೋ! ಅವನಿಗೆ ಪಾರಿವಾಳಗಳ ಕೂಗು ಕೇಳಿಸಿತು! ಅವನೀಗ ತನ್ನ ತಂದೆ-ತಾಯಿಗಳ ಬಳಿ ಓಡಿ ಬಂದು, "ಪಾರಿವಾಳ! ಪಾರಿವಾಳ!" ಎಂದು ಕೂಗಿದ. ಮರೆತ ಕೈಗಳಿಂದ ದಳಗಳು ಜಾರಿ ಕೆಳಗೆ ಬಿದ್ದವು. ಅವನ ತಂದೆ-ತಾಯಿಗಳು ಅವನತ್ತ ಕುತೂಹಲದಿಂದ ನೋಡಿದರು. ಆದರೆ ಅಷ್ಟು ಹೊತ್ತಿಗೆ ಕೋಗಿಲೆಯೊಂದು ಕುಹೂ ಎಂದು ಕೂಗಿದಾಗ ಅವರ ಮನಗಳೂ ಅರಳಿದವು.

"ಬಾರೊ, ಬೇಗ ಬಾ!", ಎಂದು ಅವರು ಮಗುವನ್ನು ಪುನಃ ಕರೆದಾಗ ಅವನು ಸಂಭ್ರಮದಿಂದ ಆಲದಮರದ ಸುತ್ತ ಕುಣಿಯುತ್ತಿದ್ದ. ಅವರು ಅವನನ್ನೆತ್ತಿಕೊಂಡು ಕಾಲ್ದಾರಿಯಲ್ಲಿ ನಡೆಯುತ್ತಾ, ಸಾಸಿವೆ ಹೊಲವನ್ನು ದಾಟಿ, ಜಾತ್ರಾ ಸ್ಥಳದತ್ತ ಸಾಗಿದರು.

ಅವರು ಆ ಹಳ್ಳಿಯ ಸನಿಹಕ್ಕೆ ಬರುತ್ತಿರುವಾಗ ಹುಡುಗನು ಇನ್ನೂ ಬೇರೆ ಬೇರೆ, ಜನ ಭರಿತ, ಕಾಲುಹಾದಿಗಳನ್ನು ಕಂಡ. ತಾನು ಪ್ರವೇಶಿಸುತ್ತಿದ್ದ ಈ ಲೋಕದ ಗೊಂದಲದಿಂದಾಗಿ ಅವನಿಗೆ ದಿಗಿಲು ಮತ್ತು ಆಶ್ಚರ್ಯ!

ಪ್ರವೇಶದ್ವಾರದ ಮೂಲೆಯೊಂದರಲ್ಲಿ ಸಿಹಿತಿಂಡಿಯ ವ್ಯಾಪಾರಿಯೊಬ್ಬ "ಗುಲಾಬ್ ಜಾಮೂನ್, ರಸಗುಲ್ಲಾ, ಭರ್ಫಿ, ಜಿಲೇಬಿ!" ಎಂದು ಕೂಗುತ್ತಿದ್ದ. ಬಗೆಬಗೆಯ, ಬೆಳ್ಳಿರೇಕಿನಿಂದ ಅಲಂಕೃತ ಸಿಹಿತಿಂಡಿಗಳನ್ನು ಗೋಪುರಾಕಾರದಲ್ಲಿ ಜೋಡಿಸಿಟ್ಟಿದ್ದ ಈ

ಮಳಿಗೆಗೆ ಜನ ಮುಗಿಬಿದ್ದಿದ್ದರು. ಹುಡುಗ ಬೆರಗುಗಣ್ಣಿಂದ ಬಾಯಿಬಿಟ್ಟುಕೊಂಡು ನೋಡಿದ. ತನಗೆ ತುಂಬ ಪ್ರಿಯವಾಗಿದ್ದ ಸಿಹಿತಿಂಡಿ ಬರ್ಫಿಯನ್ನು ನೋಡಿ ಅವನ ಬಾಯಲ್ಲಿ ನೀರೂರಿತು. "ನಂಗೆ ಆ ಬರ್ಫಿ ಬೇಕು", ಎಂದು ಅವನು ಮೆಲ್ಲಗೆ ನುಡಿದ. ಆದರೆ, ನೀನೊಳ್ಳೆ ಆಸೆಬುರುಕ, ಸುಮ್ನೆಬಾ ಅಂತ ಅವನ ತಂದೆ–ತಾಯಿಗಳು ಹೇಳುವರೆಂದು ಅವನಿಗೆ ಗೊತ್ತಿತ್ತು. ಹಾಗಾಗಿ, ಅವನು ಅವರ ಉತ್ತರಕ್ಕಾಗಿ ಕಾಯದೆ ಮುನ್ನಡೆದ.

ಅಲ್ಲಿ ಹೂ ಮಾರುವನೊಬ್ಬ ಕೂಗುತ್ತಿದ್ದ : "ಗುಲ್‌ಮೊಹರ್ ಮಾಲೆ, ಗುಲ್‌ಮೊಹರ್ ಮಾಲೆ!" ಗಾಳಿಯಲ್ಲಿ ತೇಲಿ ಬರುತ್ತಿದ್ದ ಪರಿಮಳವು ಹುಡುಗನ ಮನಸೂರೆಗೊಂಡಿತ್ತು. ಅವನು ಹೂಬುಟ್ಟಿಯತ್ತ ನಡೆದು ಮೆಲ್ಲಗೆ ಗೊಣಗುಟ್ಟಿದ : "ನಂಗೆ ಆ ಮಾಲೆ ಬೇಕು" ಆದರೆ, ಅದು ಕೆಲ್ಸಕ್ಕೆ ಬಾರದ್ದು, ಸುಮ್ನಿರು ಅಂತ ಅವನ ತಂದೆ–ತಾಯಿಗಳು ಹೇಳುವರೆಂದು ಅವನಿಗೆ ಗೊತ್ತಿತ್ತು. ಹಾಗಾಗಿ, ಅವನು ಅವರ ಉತ್ತರಕ್ಕಾಗಿ ಕಾಯದೆ ಮುನ್ನಡೆದ.

ಅಲ್ಲಿ ಮುಂದೆ ಒಬ್ಬ ಬಲೂನ್ ವ್ಯಾಪಾರಿ ನಿಂತಿದ್ದ. ಹಳದಿ, ಕೆಂಪು, ಹಸಿರು ಮತ್ತು ನೇರಳೆ ಬಣ್ಣದ ಬಲೂನ್ಗಳನ್ನು ಗಳಕ್ಕೆ ಸಿಕ್ಕಿಸಿದ್ದ ಕಾಮನಬಿಲ್ಲಿನಂತಿದ್ದ ಬಣ್ಣಬಣ್ಣದ ಈ ಬಲೂನ್‌ಗಳನ್ನು ನೋಡಿ ಹುಡುಗ ಅವಕ್ಕೆ ಮಾರುಹೋದ, ಆಸೆಪಟ್ಟ ಆದರೆ, ಅವು ಸಣ್ಣ ಮಕ್ಕಳಿಗೆ, ನಿನಗಲ್ಲ, ಸುಮ್ಮನೆ ಬಾ ಅಂತ ಅವನ ತಂದೆ–ತಾಯಿಗಳು ಹೇಳುತ್ತಾರೆಂದು ಅವನಿಗೆ ಗೊತ್ತಿತ್ತು. ಹಾಗಾಗಿ, ಅವನು ಮುಂದೆ ನಡೆದ.

ಅಲ್ಲೊಬ್ಬ ಗಾರುಡಿಗ ಪುಂಗಿ ಊದುತ್ತಿದ್ದ. ಸಣ್ಣ ಜಲಪಾತದ ಶಬ್ದದಂತಹ ಅದರ ಸಂಗೀತವನ್ನು ತನ್ನ ಅಗೋಚರ ಕಿವಿಗಳಿಂದ ಕೇಳುತ್ತಿರುವಂತೆ ಪುಟ್ಟಿಯಲ್ಲಿ ಸುರುಳಿಸುತ್ತಿ ಕೂತಿದ್ದ ಹಾವೊಂದು ಹಂಸದ ಕತ್ತಿನೋಪಾದಿಯಲ್ಲಿ ಹೆಡೆಯಾಡಿಸುತ್ತಿತ್ತು. ಹುಡುಗನು ಆ ಗಾರುಡಿಗನ ಬಳಿ ನಡೆದ. ಆದರೆ, ಅಂಥ ಕೆಟ್ಟ ಸಂಗೀತ ಕೇಳಬಾರ್ದು ಎಂದು ಅವನ ತಂದೆ–ತಾಯಿಗಳು ಹೇಳಿದ್ದರಾದ್ದರಿಂದ ಅವನು ಮುಂದೆ ನಡೆದ.

ಅಲ್ಲೊಂದು ಮರದ ಕುದುರೆಗಳ ಗಿರಿಗಿಟ್ಟಿ ಇತ್ತು. ಅದು ಗಿರಗಿರನೆ ತಿರುಗುವಾಗ ಅದರಲ್ಲಿ ಕೂತಿದ್ದ ಗಂಡಸರು, ಹೆಂಗಸರು ಮತ್ತು ಮಕ್ಕಳು ಸಂತಸದಿಂದ ಕೇಕೆ ಹಾಕುತ್ತಿದ್ದರು. ಅವರನ್ನು ಖುಷಿಯಿಂದ ನೋಡುತ್ತಾ ಹುಡುಗನು ಬಾಯಿಬಿಟ್ಕೊಂಡು ನೋಡುತ್ತಾ ಇದ್ದಾಗ ತಾನು ಸ್ವತಃ ಅದರಲ್ಲಿ ಕೂತಿರುವಂತೆ ಭಾಸವಾಯಿತು. ಆದರೆ ಅವನು ಅದರಲ್ಲಿ ನಿಜವಾಗಿಯೂ ಕೂತುಕೊಳ್ಳುವ ಆಸೆಯನ್ನು ಅವನ ತಂದೆ–ತಾಯಿಗಳು ಈಡೇರಿಸುವುದಿಲ್ಲವೆಂದು ಗೊತ್ತಿದ್ದರೂ, ಈ ಸಲ ಸ್ವಲ್ಪ ಧೈರ್ಯಮಾಡಿ ಹೇಳಿದ : "ನಾನು ಅದರಲ್ಲಿ ಕೂತ್ಕೊಬೇಕು. ಅಪ್ಪ, ಅಮ್ಮ, ನನಗೆ ಅದರಲ್ಲಿ ಕೂರಿಸ್ತೀರಾ?"

ಉತ್ತರ ಬರಲಿಲ್ಲ. ತನ್ನ ತಂದೆ–ತಾಯಿಗಳನ್ನು ನೋಡಲೆಂದು ಅವನು ತಿರುಗಿ ನೋಡಿದ. ಆದರೆ ಅವರು ಅಲ್ಲಿ ಇದ್ದಿಲ್ಲ. ಆ ಕಡೆ ಈ ಕಡೆ ನೋಡಿದ. ಅವರು ಇದ್ದಿಲ್ಲ. ಹಿಂದೆ ನೋಡಿದ. ಅವರು ಎಲ್ಲೂ ಕಾಣಿಸಲಿಲ್ಲ.

ಅವನಿಗೆ ಗಾಬರಿಯಾಯಿತು. ಒಣಗಿದ ಗಂಟಲೊಳಗೇ ಅತ್ತ -ತಾನು ನಿಂತೆಡೆಯಿಂದ ತಕ್ಷಣ ಓಡಿ ಭಯದಿಂದ ಕೂಗಿದ: "ಅಮ್ಮ, ಅಪ್ಪ!" ಕಣ್ಣಿಗಿಂದ ಬಿಸಿ ಹನಿಗಳಿಳಿದವು. ಹೆದರಿಕೆಯಿಂದ ಆಕಡೆ, ಈ ಕಡೆ, ಎಲ್ಲಾ ಕಡೆ ಓಡಿದ "ಅಪ್ಪ, ಅಮ್ಮ!" ಎಂದು ಈ ಸಲ ಅವನು ಉಗುಳು ನುಂಗಿ ತೇವವಾಗಿದ್ದ ಗಂಟಲಿಂದ ಕೂಗಿದ. ಅವನ ಹಳದಿ ಪೇಟ ಜಿಚ್ಚಿಕೊಂಡಿತ್ತು. ಬೆವರಿನಿಂದ ಹಾಗೂ ಧೂಳಿನಿಂದ ಅವನ ಬಟ್ಟೆಗಳು ವಾಸಿದ್ದವು. ಅವನ ಹಗುರ ದೇಹವು ಈಗ ಕಲ್ಲಿನಂತೆ ಭಾರವಾಗಿತ್ತು.

ಅಲ್ಲಿ ಇಲ್ಲಿ ಓಡಿ ಹೋಗಿ ನೋಡಿದ ನಂತರ ದಿಕ್ಕು ಕಾಣದವನಂತೆ ನಿಂತ. ಅಳುತ್ತಿದ್ದವನು ಈಗ ಮೆಲ್ಲನೆ ಬಿಕ್ಕುತ್ತಿದ್ದಾನೆ. ಅಲ್ಲಲ್ಲಿ, ಹಸಿರು ಹುಲ್ಲಿನ ಮೇಲೆ, ಗಂಡಸರು ಹೆಂಗಸರು ಹರಟೆ ಹೊಡೆಯುತ್ತಿದ್ದಾರೆ. ಗಾಢ ಹಳದಿ ಬಣ್ಣದ ಬಟ್ಟೆಗಳನ್ನು ತೊಟ್ಟ ಜನರನ್ನು ತೇವಗೊಂಡ ಕಣ್ಣಿಗಿಂದ ನೋಡುತ್ತಾ ನಿಂತ. ಆದರೆ ಅವರ ನಡುವೆ ಎಲ್ಲೂ ಅವನ ತಂದೆತಾಯಿಗಳು ಕಾಣಿಸಲಿಲ್ಲ.

ಅವನು ಪುನಃ ಆತಂಕದಿಂದ ಓಡಿದ. ಈ ಸಲ ಅವನು ಹೋದದ್ದು ಒಂದು ಗುಡಿಯೊಳಗೆ, ಬಹಳಷ್ಟು ಜನ ಅಲ್ಲಿಗೆ ಹೋಗುತ್ತಿರುವುದನ್ನು ಕಂಡು ತಾನು ಹೋದ. ಒಳಗೆ ವಿಪರೀತ ಜನ. ಅವರ ಕಾಲುಗಳ ನಡುವೆಯೇ ನುಸುಳಿಕೊಂಡು ಬಾಲಕ "ಅಮ್ಮ, ಅಪ್ಪ!" ಎಂದು ಅಳುತ್ತಾ ನಡೆದ. ಗುಡಿಯ ಪ್ರವೇಶ ದ್ವಾರದಲ್ಲಿಯೂ ಅಸಾಧ್ಯ ಜನ. ದಪ್ಪನೆಯ, ಜಟ್ಟಿಗಳಂಥ ಜನ, ಒಬ್ಬರನ್ನೊಬ್ಬರು ನೂಕಿಕೊಂಡು ಒಳಹೋಗುತ್ತಿದ್ದರು. ಹುಡುಗ "ಅಪ್ಪ, ಅಮ್ಮ!" ಎಂದು ಜೋರಾಗಿ ಕೂಗದೇ ಹೋಗಿದ್ದಿದ್ದರೆ ಅವರ ಕಾಲ್ತುಳಿತಕ್ಕೆ ಸಿಕ್ಕಿಬಿಡುತ್ತಿದ್ದ. ಒಬ್ಬ ಮನುಷ್ಯ ಈ ಹುಡುಗನ ಅಳುವನ್ನು ಕೇಳಿ, ಕಷ್ಟಪಟ್ಟು ನಿಂತು, ಅವನನ್ನು ಎತ್ತಿಕೊಂಡ.

"ನೀನು ಹ್ಯಾಗೆ ಬಂದೆಯಪ್ಪ ಇಲ್ಲಿಗೆ? ಯಾರ ಮಗ ನೀನು?" ಎಂದು ಆತ ಕೇಳಿದ. ಆದರೆ ಈ ಹುಡುಗ ಮೊದಲಿಗಿಂತ ಜೋರಾಗಿ ಅಳುತ್ತಾ. "ನಂಗೆ ನಮ್ಮ ಅಮ್ಮ ಬೇಕು ನಮ್ಮ ಅಪ್ಪ ಬೇಕು!" ಎಂದಷ್ಟೇ ಹೇಳಿದ.

ಆ ಮನುಷ್ಯ ಅವನನ್ನು ಕುದುರೆ ರಾಟೆಯತ್ತ ಕರೆದೊಯ್ದು ಸಮಾಧಾನ ಮಾಡಲೆತ್ನಿಸಿದ. "ಕುದುರೆ ಮೇಲೆ ಕೂತ್ಕೊತೀಯಾ, ಮರಿ?" ಎಂದು ಕೇಳಿದ. ಆದರೆ ಮಗು ಬಿಕ್ಕಿ ಬಿಕ್ಕಿ ಅಳುತ್ತಾ "ನಂಗೆ ನಮ್ಮ ಅಮ್ಮ ಬೇಕು, ನಂಗೆ ನಮ್ಮ ಅಪ್ಪ ಬೇಕು!" ಎಂದು ಹೇಳಿದ.

ಆ ಮನುಷ್ಯ ಈಗ ಹಾವಾಡಿಗನಿದ್ದೆಡೆ ನಡೆದ. ಆ ಹಾವಾಡಿಗನು ಇನ್ನೂ ಅಲ್ಲಿ ಹಾವಿನ ಮುಂದೆ ಪುಂಗಿ ನುಡಿಸುತ್ತಿದ್ದ. "ಅಲ್ಲಿ ಕೇಳು, ಮರಿ, ಆ ಸೊಗಸಾದ ಸಂಗೀತಾನ", ಎಂದ ಈತ. ಆದರೆ ಬಾಲಕನು ಕಿವಿ ಮುಚ್ಚಿಕೊಂಡು ಜೋರಾಗಿ ಕೂಗಿ ಹೇಳಿದ : "ನಂಗೆ ನಮ್ಮ ಅಮ್ಮ ಬೇಕು, ನಂಗೆ ನಮ್ಮ ಅಪ್ಪ ಬೇಕು!"

ಆ ಮನುಷ್ಯ ಈಗ ಹುಡುಗನನ್ನು ಬಲೂನಿನವನ ಬಳಿ ಕರೆದೊಯ್ದು ಬಣ್ಣಬಣ್ಣದ ಬಲೂನುಗಳನ್ನು ನೋಡಿ ಹುಡುಗ ಸುಮ್ಮನಾಗಬಹುದು ಎಂದು ತಿಳಿದು. "ನಿನಗೆ ಕಾಮನಬಿಲ್ಲಿನ ಬಣ್ಣದ ಬಲೂನು ಬೇಕಾ? ಎಂದು ಒಲಿಸುವ ದನಿಯಲ್ಲಿ

ಕೇಳಿದ. ಆದರೆ ಹುಡುಗ ಮತ್ತೆ ಹಿಂದಿನಂತೆಯೇ "ನಂಗೆ ನಮ್ಮ ಅಮ್ಮ ಬೇಕು, ನಂಗೆ ನಮ್ಮ ಅಪ್ಪ ಬೇಕು!" ಎಂದು ಅಳತೊಡಗಿದ.

ಆ ಮನುಷ್ಯ, ಹ್ಯಾಗಾದರೂ ಮಾಡಿ ಹುಡುಗನನ್ನು ಸಂತೋಷಪಡಿಸಬೇಕೆಂದುಕೊಂಡು, ಗೇಟಿನ ಬಳಿ ಹೂ ಮಾರುತ್ತಿದ್ದವನ ಹತ್ತಿರ ಕರೆದುಕೊಂಡು ಹೋದ, "ಇಲ್ನೋಡು, ಈ ಹೂವು ಎಂಥ ಸುವಾಸನೆ! ಚೆನ್ನಾಗಿದೆ ಅಲ್ವಾ, ಮರಿ? ನೀನೊಂದು ಮಾಲೆ ಹಾಕ್ಕೊಳ್ತೀಯಾ?" ಎಂದು ಕೇಳಿದ. ಹುಡುಗ ಆಚೆ ತಿರುಗಿ ಮತ್ತೆ ಮೊದಲಿನಂತೆಯೇ, "ನಂಗೆ ನಮ್ಮ ಅಮ್ಮ ಬೇಕು, ನಂಗೆ ನಮ್ಮ ಅಪ್ಪ ಬೇಕು!" ಎಂದ.

ದುಃಖಿಯಾಗಿದ್ದ ಹುಡುಗನ ಗಮನ ಬೇರೆ ಕಡೆ ಸೆಳೆದು, ಸಿಹಿತಿಂಡಿ ಕೊಡಿಸಿ ಸ್ವಲ್ಪ ಸಮಾಧಾನ ಪಡಿಸಲೆಂದು ಆತ ಸಿಹಿತಿಂಡಿ ಅಂಗಡಿ ಕಡೆ ನಡೆದ "ನಿಂಗೆ ಯಾವ ತಿಂಡಿ ಬೇಕು, ಮರಿ?", ಎಂದು ಕೇಳಿದ.

ಹುಡುಗ ಪುನಃ ಮುಖ ಆಚೆ ತಿರುಗಿಸಿ, "ನಂಗೆ ನಮ್ಮ ಅಮ್ಮ ಬೇಕು, ನಂಗೆ ನಮ್ಮ ಅಪ್ಪ ಬೇಕು!" ಎಂದ.

✧✧

ಪ್ರೊ. ಶ್ರೀನಿವಾಸ ವಿ. ಸುತ್ರಾವೆ
೧೬೪೬/೧೮ ಮಹಡಿ, ವಿದ್ಯಾನಗರ ದಾವಣಗೆರೆ - ೫೭೭೦೦೫

ಮುದುಕವ್ವ

ಮಣಿಪುರಿ ಮೂಲ: **ಕೆಯ್‌ಶಾಮ್‌ಪ್ರಿಯೆಂಕುಮಾರ್**
ಇಂಗ್ಲೀಷ್‌ನಿಂದ ಅನು: **ಶ್ರೀಧರರಾವ್ ಪಿಸ್ಸೆ**

ಹೊತ್ತಾರೆಯೆ ಮುಂಗಾರು ಮಳೆ ಎಡೆಬಿಡದೆ ಸುರಿಯುತ್ತಿತ್ತು. ಮುಗಿಲು ಕಪ್ಪಗಿತ್ತು. ಕಳೆದ ಏಳೆಂಟು ದಿನಗಳಿಂದಲೂ ಮಳೆ ಹೀಗೆ ಒಂದೇ ಸಮನೆ ಹುಯ್ಯುತ್ತಿತ್ತು. ಮುದುಕಿಯು ವರಾಂಡದಲ್ಲಿದ್ದ ಮಂಚದ ಮೇಲೆ ಮುದುಡಿಕೊಂಡಿದ್ದಳು. ವರಾಂಡದ ಒಳಭಾಗಕ್ಕೆ ಗೋಡೆ ಎಬ್ಬಿಸಿ ನಡುಮನೆ ಮಾಡಿಕೊಳ್ಳಲಾಗಿತ್ತು. ಗೋಡೆಯ ನಡುಭಾಗದಿಂದ ಜಾಲರಿ ಹಾಕಿದ ಉದ್ದನೆಯ ಕಿಟಕಿಯೊಂದು ಇತ್ತು. ನಡುಮಧ್ಯದಲ್ಲಿ ಬಾಗಿಲಿತ್ತು. ಮೆಲುದನಿಯಲ್ಲಿ ನಡೆಯುತ್ತಿದ್ದ ತನ್ನ ಮುಂದಿದ್ದ ಟಿವಿಯನ್ನು ಅವಳು ನೋಡಿಯೂ ನೋಡದಂತೆ ಇದ್ದಳು. ಸ್ವಲ್ಪ ಹೊತ್ತಿನ ಮೊದಲು ಅವಳ ಸೊಸೆಯು ಆಕೆಗಾಗಿ ತಂದಿತ್ತಿದ್ದ ಟೀ ತಣ್ಣಗಾಗಿತ್ತು. ಅದನ್ನವಳು ಮುಟ್ಟದೆ ಹಾಗೇ ಬಿಟ್ಟಿದ್ದಳು. ಅವಳ ಗಮನವೆಲ್ಲ ಆಕೆಯ ಮೂರುಜನ ಮೊಮ್ಮಕ್ಕಳು ರೂಮಿನಲ್ಲಿ ಓದುತ್ತಲೋ ಗಲಾಟೆ ಮಾಡುತ್ತಲೋ ಆಡುತ್ತಲೋ ಇದ್ದುದರ ಕಡೆಗಿತ್ತು. ಆಗಾಗ ಅವರು ಗುದ್ದಾಡುತ್ತ ಜಗಳ ಕಾಯುತ್ತಿದ್ದರು. ಆರಂಭದಲ್ಲಿ ಅವರನ್ನು ಸುಮ್ಮನಿರಿಸುವ ಪ್ರಯತ್ನ ಮಾಡಿದಳು, ಆದರೆ ಆಕೆಯ ಮಾತು ಅವರ ಮೇಲೆ ಯಾವ ಪರಿಣಾಮವನ್ನೂ ಬೀರದೆ ಇದ್ದಾಗ ಅವಳು ಅಷ್ಟಕ್ಕೆ ಕೈ ಚೆಲ್ಲಿ ಸುಮ್ಮನಾಗಿ ಬಿಟ್ಟಳು.

ಹೊರಗೆ ಬೀಳುತ್ತಿದ್ದ ಮಳೆಯ ದಪ್ಪ ದಪ್ಪ ಹನಿಗಳನ್ನು ಅವಳು ಮೈ ಮರೆತು ನೋಡುತ್ತಿದ್ದಳು. ಮಳೆಗಾಲ ಶುರುವಾಗಿಬಿಟ್ಟಿತ್ತು. ಸಣ್ಣ ಪುಟ್ಟ ಹಳ್ಳಕೊಳ್ಳಗಳು ಮೈ ತುಂಬಿ ಹರಿಯುತ್ತಿತ್ತು. ಈಗಾಗಲೆ ಬಯಲು ಭೂಮಿಯೆಲ್ಲ ಕೊಳದಂತೆ ನೀರು

ತುಂಬಿ ಥಳಥಳ ಹೊಳೆಯುತ್ತಿತ್ತು. ಅವಳಿಗೇಕೋ ಕೆಡಕು ಎನಿಸಿಬಿಟ್ಟಿತು. ಅವಳು ಕುಳಿತುಕೊಳ್ಳಲು ಪ್ರಯತ್ನಿಸುವಂತೆ ಹಲವು ಸಲ ಮೇಲ್ಮುಖವಾಗಿ ಜರುಗತೊಡಗಿದಳು.

ಗ್ಯಾಸು ಮುಗಿದು ಹೋಗಿದೆ. ಈ ಕುಕ್ಕರ್‌ನಲ್ಲಿ ಅನ್ನ ಬೇಯಿಸೋಕೆ ಯುಗಗಳೇ ಬೇಕು.

ಅವಳ ಸೊಸೆಯ ಮಾತು ಆಕೆಯವರೆಗೂ ಕೇಳಿಬಂತು. ನೀನು ಗ್ಯಾಸ್ ಏಜೆನ್ಸಿಗೆ ಯಾಕೆ ಫೋನ್ ಮಾಡಬಾರದು?

ಅವಳ ಮಗ ಉತ್ತರಿಸಿದ.- ಇಷ್ಟು ಹೊತ್ತಾದರೂ ನೀವು ಹಾಸುಗೆಯಲ್ಲೆ ಮಲಗಿಕೊಂಡಿದ್ದೀರಿ. ಅವನ ತಪ್ಪನ್ನು ಸೊಸೆ ಎತ್ತಿ ಆಡಿದ್ದಳು.

ಅವನಿನ್ನು ಹಾಸುಗೇಲಿ ಮಲಗಿದ್ದಾನಾ? ಹೊತ್ತು ಮೇಲೇರಿ ಈಗಾಗಲೇ ಕೆಲಸಮಯವಾಗಿತ್ತು. ಇಚಿಂಚೋಬಾನ ಸಮಾಚಾರ ಎಂಥದೋ ಏನೋ? ಅವನು ಮುದ್ದೆ ಮುದ್ದೆಯಾಗಿದ್ದ ಮಣ್ಣನ್ನು ಸಮತಟ್ಟು ಮಾಡಲು ಹೊತ್ತು ಹುಟ್ಟುವ ಮೊದಲೆ ಗದ್ದೆಗೆ ಹೋಗಿರ್ತಾನೆ ಇಂಥ ಸುರಿಯೋ ಮಳೇಲೂ! ಮೈಯೆಲ್ಲ ಕೆಸರು, ಮಣ್ಣು ಮೆತ್ತಿಕೊಂಡಿದ್ದರೂ ನಡುವಿಗೆಂದು ತುಂಡುಬಟ್ಟೆ ಕಟ್ಟಿಕೊಂಡು ನೆಲ ಸಮತಟ್ಟು ಮಾಡುತ್ತಾ ಇರ್ತಾನೆ. ಅವನೊಂದಿಗೆ ಒಂದು ಜೊತೆ ಪ್ರಾಣಿಗಳು ಬೇರೆ ಹೌದು. ಅವು ಮುದಿ ಎತ್ತುಗಳು ಮೂಳೆ ಚಕ್ಕಳ ಎದ್ದು ಕಾಣೋ ಬಡಕಲು ಎತ್ತುಗಳು. ಅವನ್ನು ಬದಲಿಸಬೇಕು. ದಷ್ಟಪುಷ್ಟವಾದ ಒಂದು ಜೊತೆ ಹೊಸ ಎತ್ತುಗಳು ಬೇಕು ಹೌದು. ಒಂದು ಜೊತೆ ಹೊಸ ಎತ್ತುಗಳು ಬೇಕು.

ಗ್ಯಾಸು ಸ್ಟಾಕಿಲ್ಲ. ಮಳೆ ಬಂದರೆ ನಮಗೆ ಗ್ಯಾಸ್ ಸಿಗಲ್ಲ ಇದೆಂಥ ಸ್ಥಿತಿ!*

ಅವಳು ತನ್ನ ಸೊಸೆಯ ದೂರನ್ನು ಕೇಳಿಸಿಕೊಂಡಳು. ಅವಳು ಅಡುಗೆಮನೆಯಲ್ಲಿ ಆಕೆಗೆ ಸಹಾಯ ಮಾಡಲು ಬಯಸಿದಳು. ಆದರೆ ಹೇಗೆ ಮಾಡಬೇಕೆಂಬುದು ಮುದುಕಿಗೆ ತಿಳಿಯಲಿಲ್ಲ. ಅಡುಗೆಮನೆಯಲ್ಲಿ ಪ್ರತಿಯೊಂದು ವಿಚಿತ್ರವಾಗಿ ಕಾಣುತ್ತಿತ್ತು. ಅವಳು ಜಡವಾಗಿ ಉಳಿಯಲು ಬಯಸದಿದ್ದರೂ ಏನು ಮಾಡಬೇಕೆಂಬುದರ ಬಗ್ಗೆ ಆಕೆಗೆ ಏನೂ ತೋಚಲಿಲ್ಲ. ಎಲ್ಲ ಕಡೆ ತನ್ನ ಕೈ ಕಟ್ಟಿಹಾಕಿರುವಂತೆ ಅವಳಿಗೆ ಅನ್ನಿಸಿತು. ಅವಳಲ್ಲಿ ಉತ್ಸಾಹವೆಂಬುದು ಉಳಿದಿರಲೇ ಇಲ್ಲ. ಅವಳು ಸದಾ ಕುಳಿತುಕೊಂಡೇ ಇರುತ್ತಿದ್ದಳು.

ತೊಂಬಿ ಮಾಚಾ....... ಅವಳು ಮೈ ತೊಳೆದುಕೊಂಡು ಅವಸರವಸರವಾಗಿ ಹಣೆಗೆ ಬೊಟ್ಟು ಇಟ್ಟುಕೊಂಡು, ಮಕ್ಕಳನ್ನು ಸ್ಕೂಲಿಗೆ ಕಳಿಸಲು ತಿಂಡಿ ಅಡುಗೆ ಬೇಯಿಸುತ್ತ ಇದ್ದಾಳಾ? ಬೆಟ್ಟದ ಮೇಲೆ ಆಯ್ದು ಕಟ್ಟಿದ ಸೌದೆ ಕಟ್ಟುಗಳನ್ನು ತಲೆ ಮೇಲೆ ಹೊತ್ತು ಇಳಿದು ಬಂದು, ತಂದು, ಒಣಗಲೆಂದು ಹಿತ್ತಲಲ್ಲೆ ಹಾಕಿತ್ತು. ಅವು ಮಳೆಯಲ್ಲಿ ತೊಯ್ದೆ ಇದ್ದಾವಾ?

ಗೋಡೆ ಮೇಲೆ ತಟ್ಟಿದ್ದ ಕುರುಳು ಮಳೆ ನೀರು ಬಿದ್ದು ಕೆಳಗುರುಳಿ ಹಾಳಾಗೋದಿಲ್ವಾ? ತೊಂಬಿಮಾಚಾ ಅವನ್ನು ಈಗಾಗಲೇ ಒಳಗೆ ತರದೆ ಇದ್ದಿದ್ದರೆ ಮುದುಕ ಖಂಡಿತ ತಂದಿರ್ತಾನೆ. ಮುದುಕ ತನ್ನ ಬೆನ್ನು ನೋವಿನ ಬಗ್ಗೆ

ದೂರೋದಿಲ್ಲವಾ? ಆದರೂ ಅವನು ಹಾಸುಗೇಲಿ ಮಲಿಕೊಂಡಿರಲ್ಲ. ಅವನು ಕುಡ್ಲಿಂದ ಬಿದಿರು ಸೀಳ್ತಾ ಇರೋದಿಲ್ವಾ? ಇಲ್ಲಾಂದ್ರೆ ತರಕಾರಿ ಹಾಕಿದ ಮಡೀಲಿ ಕಳೆ ಕೀಳ್ತಾ ಇರೋದಿಲ್ವ? ಹೌದು. ಏಸು ಸಣ್ಣ ಜಾಗ ಆದ್ರೂ ಹೂವಾ ಬೆಳಿಯೋ ಜಾಗದಲ್ಲಿ ತರಕಾರಿ ಬೆಳೀಲೆಬೇಕು. ಇಲ್ಲಿ ಹೂವ ಬೆಳೆದು ಏನು ಉಪಯೋಗ? ನನಗಂತು ಒಂದೂ ತಿಳಿಯಾಕಿಲ್ಲ.

ಗ್ಯಾಸು ತರಬೇಕು ಅನ್ನೊ ವಿಚಾರ ನೀವು ತುಂಬ ದಿವಸದಿಂದ ಮರೆತು ಬಿಟ್ಟಿದ್ದೀರಿ. ನೀವೆ ನೋಡಿ. ಗ್ಯಾಸಿಲ್ಲ ಅಂದರೆ ಎಷ್ಟೊಂದು ತೊಂದರೆ ಆಗುತ್ತೆ ಅಂತಾ.....

ಮಳೆಯು ಮನೆಯ ತಗಡುಸೂರಿನ ಮೇಲೆ ನಿರಂತರವಾಗಿ ಬೀಳುತ್ತ ಹೊರಡಿಸುತ್ತಿದ್ದ ಅಪಸ್ವರದ ನಡುವೆಯೂ ಅವಳು ತನ್ನ ಸೊಸೆಯ ಮೆಲುದನಿಯ ದೂರನ್ನು ಚೂರುಪಾರು ಕೇಳಿಸಿಕೊಂಡಳು.

ನಾನು ಫ್ರಿಜ್ಜ ತರುವವರೆಗೂ ನೀನೂ ಚುಚ್ಚಿ ಮಾತಾಡ್ತಿದ್ದೆ. ಈಗ ನೀನು ಬೇರೆ ವಿಷಯಕ್ಕೆ ನನ್ನನ್ನು ಬೈಯ್ತೀಯಾ?

ಮಲಗುವ ಕೋಣೆಯಿಂದ ಅವಳ ಮಗನ ದನಿಕೇಳಿ ಬಂತು.... ಅವನಿನ್ನೂ ಮಲಗಿದ್ದಾನಾ?

ಖರೀದಿ ನಿಧಾನ ಮಾಡಲಿಕ್ಕೆ ಬೇರೆ ದಾರೀನೆ ಇರಲಿಲ್ಲ. ಎಷ್ಟು ಅನುಕೂಲವಾಯ್ತು ನೋಡಿ – ಮಕ್ಕಳಿಗೆ ನಾವೀಗ ಮನೆಯಲ್ಲೆ ಐಸ್‌ಕ್ರೀಮು, ತಂಪು ರಸನಾ ಪಾನಕ, ಫೇದಾ ಇನ್ನೂ ಏನೇನೋ ಇಟ್ಟಿದ್ದೀವಿ.

ಅದೂ ನಿಜಾನೆ. ಅವಳು ಹೊರಗೆ ಹೋದಾಗ ತನ್ನ ಮೊಮ್ಮಕ್ಕಳಿಗೆ ಅಂತಾನೆ ಯೆಲಾಂಗ್ ಖಾಂಗ್ ಪೋಕ್‌ಪಿ ಊರಿನ ಚಿಕ್ಕಮಾರುಕಟ್ಟೆಯಲ್ಲಿ ಒಂದು ತುಂಡು ಕಬ್ಬು, ಹವಾಯ್ ಹೆಯಂಗಾಲ್, ಕಬೆಂಕ್ ಖೆಂಯ್‌ಬಾಕ್, ಲಾಲು ಸಿಹಿತಿಂಡಿ ತಂದ್ದದಿದೆ. ಅವಳು ನಂಬಲಿಕ್ಕಾಗದಷ್ಟು ಕಾಲದಿಂದ ಮಕ್ಕಳನ್ನೆ ನೋಡಿರಲಿಲ್ಲ. ತನ್ನ ಮೊಮ್ಮಕ್ಕಳು ಸಂತಸದ ಉಬ್ಬಿನಲ್ಲಿ ತನ್ನ ಮೈಮೇಲೆ ಬೀಳೋದು, ತನ್ನ ಕಾಲಿನ ಹತ್ತಿರ ತುಂಟಾಟ ಮಾಡೋದನ್ನೆಲ್ಲ ಅವು ತನ್ನ ಕಣ್ಣ ಮುಂದೆ ತಂದುಕೊಳ್ಳುತ್ತಿದ್ದಳು. ಅವಳು ತಂದ ತಿಂಡಿಗಳನ್ನು ಮಕ್ಕಳು ಆನಂದದಿಂದ ಕುರುಕುವುದನ್ನು ಕನಸು ಕಾಣುತ್ತಿದ್ದಳು.

ಆದರೆ ಮಕ್ಕಳ ಪುಟ್ಟ ಕೈಗಳಲ್ಲಿದ್ದ ತಿಂಡಿಗಳನ್ನು ಅವರ ತಾಯಂದಿರು ಕಿತ್ತುಕೊಂಡಾಗ ಅವಳು ಕನಸು ಒಡೆದು ಹೋಗುವಂಥದೆಂದು ಸಾಬೀತಾಗಿ ಬಿಡುತ್ತಿತ್ತು...... ಹೌದು ಅವಳು ಪ್ರತಿಯೊಂದನ್ನು ಗುಟ್ಟಾಗಿ ಹಿತ್ತಲಿನಲ್ಲಿ ಬಿಸುಡುತ್ತಿರಲಿಲ್ಲವೆ? ಸಣ್ಣಗೆ ತೆಳ್ಳಗೆ ಇದ್ದಂಥ ಮಕ್ಕಳು ವಿಷಯ ಏನಂತ ತಿಳಿಯದೆ ಕಂಬದಂತೆ ನಿಂತಲ್ಲೆ ನಿಂತುಬಿಡುತ್ತಿದ್ದರು. ತನ್ನ ವಶದಲ್ಲಿದ್ದ ತನ್ನ ಸ್ವಂತ ಮೊಮ್ಮಕ್ಕಳಿಗೆ ಉಣಿಸುವ ಹಕ್ಕು ಬಂದಾಗ ಅವಳಿಗೆ ನೋವಾಯಿತೆ? ಅವಳಿಗೇನೂ ತಿಳಿಯಲಿಲ್ಲ. ಇಲ್ಲದಿದ್ದರೆ ಮೆಲುದನಿಯಲ್ಲಾದರೂ ಅವಳು ತಿರುಗಿ ಬೀಳುತ್ತಿದ್ದಳು.

– ಅವರು ಆಡಿ ನಲಿದಾಡುವಂಥ ಸಾಮಾನುಗಳನ್ನು ತಾವೆ ಬಿಸಾಕೊ ಹಾಗೆ ನೀನು ಯಾಕೆ ಮಾಡಿದೆ?

– ಹೊತ್ತಾರೆಯಿಂದ ಅವರು ಬಿಡುವಿಲ್ಲದೆ ಬಾಯಿ ಆಡುಸ್ತಾನೆ ಇದ್ದರು. ಅವರು ಕಾಯಿಲೆ ಬೀಳಬೋದು ಅಂಥ ಹೆದರಿದೆ.

ಅದಕ್ಕಿಂತ ಹೆಚ್ಚಿಗೆ ಅವಳು ಏನೂ ಹೇಳಲಿಲ್ಲ. ಅನಂತರ ಅವಳು ಮಕ್ಕಳಿಗೆ ಮನಸಲ್ಲೆ ಬುದ್ಧಿವಾದ ಹೇಳಿದುದನ್ನು ಆಲಿಸಿದಳು. ಅವಳ ಸೊಸೆ ಹೇಳಿದಳು:

ಅಂಥ ಅನಾರೋಗ್ಯದ ಬಗ್ಗೆ ನಾನು ನಿಮಗೆ ಎಚ್ಚರಿಕೆ ಕೊಡುತ್ತಿರಲಿಲ್ಲವೆ?

ಇಬೊಚೋಬಾನ ಮಕ್ಕಳು .... ಹೌದು ಅವರಿಗೆ ತಿಂಡಿ ತೀರ್ಥಕೊಟ್ಟು ದಣಿವಾರಿಸೊ ಕೆಲಸ ಯಾರೂ ಮಾಡಲಿಲ್ಲ. ಯಾರಾದರೂ ಅವರಿಗೆ ಅಕಸ್ಮಾತ್ತಾಗಿ ಸಾಮಾನ್ಯ ಅಕ್ಕಿಯ ಉದುರು ಅನ್ನ ಕೊಟ್ಟಿದರೆ ಅವರಲ್ಲಿ ಪ್ರತಿಯೊಬ್ಬರೂ ದೊಡ್ಡಪಾಲು ಪಡೆಯೋಕೆ ಪ್ರಯತ್ನ ಮಾಡುತ್ತಿದ್ದರು, ಭಯಂಕರ ಗದ್ದಲ ಎಬ್ಬಿಸುತ್ತಿದ್ದರು. ದಷ್ಟಪುಷ್ಟರಾದ ಮಕ್ಕಳು ಕಾಳಗದ ಹುಂಜಗಳ ರೀತಿ ಒಂದು ತುಂಡು ಮಿಠಾಯಿಗಾಗಿ ಕಾದಾಡಬೇಕಿತ್ತು...... ಆ ಮೇಲೆ ಎಂದಿನಂಗೆ ಸ್ನೇಹದಿಂದ ಕೂಡಿ ಆಟನೂ ಆಡಬೇಕಿತ್ತು.

– ಇತ್ತೀಚೆಗೆ ಹೊಸಗ್ಯಾಸು ಕನೆಕ್ಷನ್ ತಗೋಬೇಕು ಅಂದರೆ ಅದು ಅಷ್ಟು ಸುಲಭದ ಕೆಲಸವಲ್ಲ. ಆದರೂ ನನ್ನ ಪ್ರಯತ್ನ ನಾನು ಬಿಡದೆ ಮಾಡ್ತೀನಿ.

ತನ್ನ ಮಗನ ದನಿಯನ್ನು ಕೇಳಿದ ಮುದುಕಿ ಈ ಜಗತ್ತಿಗೆ ಹಿಂದಿರುಗಿದಳು. ಮತ್ತೊಂದು ರೂಮಿನಲ್ಲಿದ್ದ ಅವನ ಮಾತು ಮುಂದುವರೆದಿತ್ತು.

– ವಸ್ತುಸ್ಥಿತಿ ಅಂದರೆ ನನ್ನದೂ ನೆಟ್ಟಗಿಲ್ಲ. ಈ ಸಲ ಹೆಚ್ಚಾಗುತ್ತಿರುವ ಖರ್ಚುವೆಚ್ಚಗಳ ತಡೆಹಿಡಿಯೋಕೆ ಸಾಧ್ಯವಾಗುತ್ತಿಲ್ಲ. ಎಲ್ಐಸಿ ಕಂತು ಬೇರೆ ಬಾಕಿ ಇದೆ. ಸುಲಭ ಕಂತಿನಲ್ಲಿ ನಾನು ಒಂದು ವಾಷಿಂಗ್ ಮಿಶಿನ್ ಖರೀದಿ ಮಾಡುವ ವ್ಯವಹಾರ ಕೂಡ ಕುದುರಿಸಿದ್ದೇನೆ. ಆದರೆ ಅದಕ್ಕೆ ಆರಂಭ ಠೇವಣಿ ಕಟ್ಟಲೇಬೇಕು.

ಅದಕ್ಕೆ ತನ್ನ ಸೊಸೆ ಕೈ ಜೋಡಿಸಿದುದೂ ಅವಳಿಗೆ ಕೇಳಿಸಿತು.

– ನಿಮಗೆ ಏನೋ ಹೇಳುವುದು ಮರೆತೆ. ಈ ತಿಂಗಳಿನಿಂದ ಅವರು ಸ್ಕೂಲ್‌ಬಸ್ ದರ ಏರಿಸಿದ್ದಾರೆ.

ಅವರೆಲ್ಲ ಮತ್ತೆ ಸುಮ್ಮನಾಗಿದ್ದರು. ಅವಳ ಬಗ್ಗೆ ಯಾವ ಪ್ರಸ್ತಾಪವೂ ಆಗಿರಲಿಲ್ಲ. ತನ್ನ ಸೊಸೆ ಅಡುಗೆ ಮನೆಗೆ ವಾಪಸು ಹೋಗಿದ್ದಿರಬಹುದಾ ಅಂತ ಅವಳಿಗೆ ಅಚ್ಚರಿಯಾಯಿತು. ಮುದುಕಿ ತನ್ನ ಜಾಗದಲ್ಲಿ ಮುದುಡಿಕೊಂಡೆ ಇದ್ದಳು. ಜಿನುಗುತ್ತಿದ್ದ ಮಳೆ ಜೋರಾಗಿ ಸುರಿಯತೊಡಗಿತು. ಅವಳು ಹೇಳಿದಳು:

–ಈ ಸಿನಿಮಾನ ಯಾಕೆ ನೀವು ನಿಲ್ಲಿಸಿಲ್ಲ. ನನಗೆ ಅದನ್ನು ನೋಡೋ ಗೀಳೇನೂ ಇಲ್ಲ.

ದೊಡ್ಡವನು ತಕ್ಷಣ ಬಂದು ಟಿವಿಯತ್ತ ಒಮ್ಮೆ ನೋಟ ಹರಿಸಿದನು. ಮತ್ತೊಬ್ಬರ ದೋಷವನ್ನು ಬಲ್ಲವರು ನಗುವಂತೆ ನಗತೊಡಗಿದ ಅವನು ಹೇಳಿದನು:

-ಇದು ಸಿನಿಮಾನ ನಿನಗೆ! ಎಂಥಾ ತಮಾಷೆ. ಇದು ಇಂಗ್ಲಿಶ್ ನ್ಯೂಸ್, ಅಷ್ಟೆ

ಅವರು ಮೂವರೂ ಅವಳ ಮಾತಿಗೆ ಸಾಕು ಎನಿಸುವವರೆಗೂ ನಕ್ಕರು. ಅವಳು ಕೂಡ ಅವರೊಂದಿಗೆ ಒಂದು ಮಲುನಗೆಯನ್ನು ಬೀರಿದಳು.

ಯಾರು ನೋಡ್ತಿದ್ದಾರೆ, ಸುಮ್ಮನೆ ನಿಲ್ಲು.

ಅನಂತರ ಟಿವಿಯನ್ನು ನಿಲ್ಲಿಸಲಾಯಿತು. ಮಕ್ಕಳು ಒಳಗೆ ಗುಂಪುಗೂಡಿದರು. ರೂಮಿನಲ್ಲಿ ಸದ್ದಿಲ್ಲದಂತಾಯಿತು. ಆದರೆ ತಗಡು ಛಾವಣಿ ಮೇಲೆ ಬಿಡದೆ ಬಾರಿಸುತ್ತಿದ್ದ ಮಳೆಯ ಸದ್ದು ಹೆಚ್ಚಾಗಿ ಮೊರೆಯತೊಡಗಿತು.

ಹೌದು..... ಹೌದು...... ಮಳೆ ಬಂತು ಮಳೆ ಬಂತು...... ಬತ್ತದ ಗದ್ದೆ ...... ಲಕಲಕ ಹೊಳೆಯೊ ಕೊಳದ ನೀರು..... ನಿಧಾನವಾಗಿ ಕುಸಿಯೊ ಬೆಟ್ಟದ ಮಣ್ಣು....... ನಂತರ ಮುಚ್ಚಿ ಹೋಗೋ ಸುಗ್ಗು ಪಟ್ಟಣದ ರಸ್ತೆ... ಕೆರೆಗುಂಟ ಒತ್ತರಿಸೊ ಬತ್ತದ ಗದ್ದೆ...... ಇವತ್ತಿನವರೆಗೂ ಬತ್ತದ ಬಯಲಲ್ಲಿ ಮಾಡಿದ್ದು ಹೊಳಿತಾ ಇದೆ. ಮೂರು ಸಂಗಂ (ಎಕರೆ?) ಉತ್ತು ನೆಲ ಮಟ್ಟ ಮಾಡೋಕೆ ಎರಡು ಮೂರು ದಿನಗಳು ಬೇಕಾಗುತ್ತಾ? ಹೌದು, ಮುದುಕ ಬೆನ್ನುನೋವಿನಿಂದ ನರಳ್ತಾ ಇಲ್ವಾ? ನರಳ್ತಾ ಇರಬೇಕು. ಇಬೆಂಚೋಬಾ ಒಬ್ಬನೇ ಮಾಡಲಾರ. ಏಸು ಕಷ್ಟವಾದರೂ ಉಳಿದವರು ಎರಡು ಸಂಗಂನಲ್ಲಿ ಕೆಲಸಮಾಡಲೇಬೇಕು. ಕೂಲಿಗಾರರಿಗೆ ಕೂಲಿ...... ಹೆಚ್ಚುವರಿ ಬತ್ತದ ಸಸಿಗಳಿಗೆ ದುಡ್ಡು..... ನಾಟಿ ಮಾಡಿಸೋಕೆ..... ರಸಗೊಬ್ಬರದ ಚೀಲಗಳಿಗೆ..... ಆದರೆ ರಸಗೊಬ್ಬರ ಸಿಗುತ್ತಾ? ಎಲ್ಲಿ ಸಿಗುತ್ತೆ? ಹೌದು ಕಾಕ್‌ಚೆಂಗ್, ವಾಬ್‌ಗಯ್ ಪ್ರದೇಶದ ಗದ್ದೆ ಈಗಾಗಲೇ ಹಸುರಾಗಿದೆ. ಇಂಥ ಕಾಲದಲ್ಲಿ ನಮಗಾಗಿ ಕೆಲವು ಜನ ಕೆಲಸ ಮಾಡೋಕೆ ಬರ್ತಾರಾ? ಮಳೆ ಬಂದಂಥ ಈ ಕಾಲದಲ್ಲಿ ತಮ್ಮ ಕೆಲಸ ಬಿಟ್ಟು ಬೇರೆಯವರಿಗೆ ಹೋಗೋದಿಕ್ಕೆ ಯಾರೂ ಒಪ್ಪಲ್ಲ. ನಾವು ಈ ವರುಷ ಶಾನೆ ನಿಧಾನಿಸಿ ಬತ್ತದ ಸಸಿ ನಾಟಿ ಮಾಡ್ತಿದ್ದೀವಾ? ಇಬೆಂಚೋಬಾ ಒಬ್ಬನೇ ಗೆಯಿಮೆ ಮಾಡಿ ಶಾನೆ ದನಿದಿರೋದು ಖಂಡಿತ.

– ಮಮ್ಮೀ ತಿಂಡಿಗೆ ಬರೀ ರೊಟ್ಟಿಯಷ್ಟೆ ಕೊಟ್ಟಿದ್ದೀಯ, ಮೊಟ್ಟೆ ಕೊಟ್ಟಿಯಿಲ್ಲ!

ತನ್ನ ಮೊಮ್ಮಗ ಮನೆಯೊಳಗೆ ಗಟ್ಟಿಯಾಗಿ ಅರಚಿದುದನ್ನು ಕೇಳಿ ಅವಳು ಕನಸಿನಿಂದ ಎಚ್ಚೆತ್ತಳು. ಮುದುಕಿಯು ತನ್ನ ಬತ್ತದ ಗದ್ದೆಯ ಒಳನಾಡಿನಿಂದ ಹಿಂದಿರುಗಿದಳು. ಶಾಲೆಗೆ ಹೋಗುವ ವೇಳೆಯಲ್ಲಿ ಮಕ್ಕಳು ಮಾಡುವ ಗದ್ದಲ ಅವಳ ಕಿವಿಗೆ ಬೇರೆ ರೀತಿಯಾಗಿ ಕೇಳಿಸಿತ್ತು. ಮತ್ತೊಂದು ಸದ್ದು, ಅದು ಕೊಂಬು ಕಹಳೆಯ ರೀತಿಯದಾಗಿತ್ತು, ಹೊರವಲಯದಿಂದ ಕೇಳಿ ಬಂದಿತ್ತು.

– ವ್ಯಾನು ನಿನಗೋಸ್ಕರ ಕಾಯುತ್ತ ಇದೆ. ಫ್ರಿಜ್ಜಲ್ಲಿ ಬೇಯಿಸಿದ ಮೊಟ್ಟೆಯಿದೆ. ಒಂದು ತಗೊ. ಓಡು.

ಅವಳ ಸೊಸೆ ಹೇಳಿದ್ದಳು. ಒಂದು ಕೊಡೆ ಹಿಡಿದು ಮೂರು ಜನ ಮಕ್ಕಳು ಒಬ್ಬರಿಗೊಬ್ಬರು ತಬ್ಬಿಹಿಡಿದು ಹೊರನಡೆದರು. ಅವರ ಸ್ಕೂಲ್ ಸಮವಸ್ತ್ರ ಅಗಸನಿಗೆ ಹಾಕಿದ್ದರಿಂದ ಹೊಸದರಂತೆ ಕಾಣುತ್ತಿತ್ತು. ಅವರು ಅವಳ ಕಡೆ ಒಂದು ವಾರೆನೋಟ ಬೀರಲೂ ಮನಸು ಮಾಡಲಿಲ್ಲ. ಅವರ ಕಣ್ಣಲ್ಲಿ ಅವಳು ಅಸ್ತಿತ್ವವಿಲ್ಲದವಳಾಗಿದ್ದಳು.

ಇಬೆಂಚೋಬಾನ ಮಕ್ಕಳು ಶಾಲೆಗೆ ಹೋದರಾ? ಅವರ ಬಟ್ಟೆ.... ರಥ ಯಾತ್ರೆ ಹಬ್ಬ ಬಂದ ಈ ಕಾಲಕ್ಕೆ ಅವರಿಗೂ ಹೊಸ ಬಟ್ಟೆ ತಗೋಬೇಕಿತ್ತು...... ಆದರೆ ಈ ಮಳೆ ಹೀಗೆ... ಹೌದು ಮನೆ ಹತ್ತಿರ ಅಗಲವಾದ ದಪ್ಪ ಎಲೆ ಬಿಡೋ ಹಾಂಗು ಗಿಡಗಳು ಬೆಳಿತಾ ಇವೆ..... ಮಳೇಲಿ ಅವರು ಅದರ ಎಲೆ ಬಳಸಬೋದು.... ಹೌದು ಹೌದು ಅವರು ಶೂ ಇಲ್ಲದೆ ಹೋಗಬೋದು.

ಅವಳ ಮನಸ್ಸು ತನ್ನ ತವರೂರಾದ ಯೆಲಾಂಗ್ ಖಾಂಗ್ ಪೋಕ್‌ಪಿಗೆ ಹಿಂದಿರುಗಿತು. ಬತ್ತದ ಗದ್ದೆಗಳ ನಡುವೆ ಎದೆಯುಬ್ಬಿಸಿ ಕೆಳ ಹರಿವ ಬೆಟ್ಟದ ತೊರೆಗಳನ್ನು ಮೀನು ಹಿಡಿಯುವ ಬಲೆಯೊಂದಿಗಿನ ಗಂಡಸರು ಹೆಂಗಸರನ್ನೂ ಅವಳು ನೋಡಲು ಮೊದಲು ಮಾಡಿದಳು.

ಈ ತೊಂಬಿಮಾಚ ಅಡುಗೆ ಮುಗಿಸಿರಬೇಕು. ಅವಳು ಉಳಿದವರ ಜೊತೆಗೆಯ್ಮೆ ಮಾಡ್ತಿದ್ದಾಳಾ? ಎತ್ತುಗಳು ತಿನ್ನೋಕೆ ಹೊಟ್ಟು ನೆನಿಸಿ ಇಡಲಿಲ್ಲಾಂದ್ರೆ ಹೇಗೆ? ಅವಳು ಹೊಲ ಮನೆ ಮತ್ತು ಗದ್ದೆಯ ನಡುವೆ ಹರಿದ ಹಳ್ಳದಲ್ಲಿ ಬಲೆ ಹಾಕಿದ್ದರೆ ಖಂಡಿತವಾಗಿ ರಾಶಿರಾಶಿ ಸಣ್ಣ ಮೀನು .ಹಿಡಿತಾಳೆ..... ಆ ಮುದುಕ ....?

ಆತ ಏನು ಮಾಡ್ತಿದ್ದಾನೆ? ಅವನ ಕಾಯಿಲೆ...... ಏನಾದರೂ ಹದಗೆಟ್ಟಿದೆಯಾ?

"ನೀನು ಬೇಗ ವಾಪಸು ಬರಬೇಕು. ಇಂಪಾಲದಲ್ಲಿ ನಿನ್ನಮಗ, ಮೊಮ್ಮಕ್ಕಳ ಜೊತೆ ಸೋಂಭೇರಿಯಾಗಿ ಇದ್ದಬಿಡಬೇಡ. ಇದು ನಾಟಿ ಮಾಡೋ ಕಾಲ ಅಂತಾ ಮರೆತು ಬಿಡಬೇಡ."

ಮುದಕನ ಮಾತು ಅವಳ ಮನಸ್ಸಲ್ಲಿ ಇದ್ದಕ್ಕಿದ್ದಂತೆ ಸುಳಿಯಿತು. ಅವಳು ಹೊರಟು ನಿಂತ ವೇಳೆಯಲ್ಲಿ ಅವನು ಹಾಗೆ ನುಡಿದಿದ್ದನು. ಇನ್ನು ಹೆಚ್ಚುಕಾಲ ಅವಳು ಅಲ್ಲಿ ಕುಳಿತುಕೊಂಡಿರಲಾರಳು. ಹಾಗಂತ ಅವಳು ನಿಂತ ಕಾಲಮೇಲೆ ಹೊರಟು ಬರಲೂ ಆಗದು. ಅವಳು ಅಲ್ಲಿದ್ದ ದಿನಗಳ ಅವಧಿಯನ್ನು ಎಣಿಕೆ ಮಾಡಲು ಯತ್ನಿಸಿದಳು. ಕೇವಲ ಎರಡು ದಿವಸಗಳು, ಅಷ್ಟೆ, ಆದರೆ ಅದು ಒಂದು ವರುಷದಂತೆ ಅವಳಿಗೆ ಕಂಡಿತ್ತು. ಆ ಜಾಗ ತೊರೆದು ಹೊರಟುಬರುವಂಥ ಅದುಮಿಡಲಾಗದ ಹಂಬಲವೊಂದು ಅವಳಲ್ಲಿ ಹುಟ್ಟಿತು. ಅವಳಿನ್ನೂ ಮಗನೊಡನೆ ಮಾತನಾಡಲು ಬಯಸಿದ್ದಾಳೆ. ಬೇಸಾಯಕ್ಕೆ ಅಗತ್ಯವಾದ ಹಣಕಾಸು ನೆರವು ಅವನಲ್ಲಿ ಕೇಳಬೇಕೆಂದು ಕೊಂಡಿದ್ದಾಳೆ. ಸಾಧ್ಯವಾದರೆ ಅವನ ಅಣ್ಣನಿಗೆ ಹೆಚ್ಚು ಹಣದ ನೆರವು ನೀಡುವಂತೆ ಕೂಡ ಕೇಳಲಿದ್ದಾಳೆ. ಅವಳು ಬಂದ ಮೊದಲನೇ ದಿವಸ ಅವಳ ಮಗ ಮನೆಗೆ ತೀರಾ ತಡವಾಗಿ ಬಂದಿದ್ದ. ಎರಡನೇ ದಿವಸ ಅವನು ಬೆಳಗಿನ ಜಾವವೇ ಮನೆಬಿಟ್ಟು ಹೋಗಿದ್ದ. ಮತ್ತೆ ರಾತ್ರಿ ತೀರಾ ತಡವಾಗಿ ಹಿಂದಿರುಗಿ ಬಂದಿದ್ದ. ಅವನು

ಎದ್ದಿರುತ್ತಾನಾ?- ಅವಳಿಗೆ ಸರಿಯಾಗಿ ಗೊತ್ತಿಲ್ಲ. ಅವನ ಜೊತೆ ಮಾತಾಡೋಕೆ ಯಾವುದೇ ಅವಕಾಶ ಇದ್ದಂತೆ ಕಾಣಲಿಲ್ಲ. ಈಗಾಗಲೆ ತನ್ನ ಸೊಸೆಗೆ ತನ್ನ ಮಗನಿಗೆ ಹೇಳಬೇಕಾದ ಮಾತಿನ ತಿರುಳನ್ನು ಅವಳು ತಿಳಿಸಿದ್ದಾಳೆ. ಆದರೆ ಅವಳಿಗೆ ಸಮಾಧಾನವಿಲ್ಲ. ಅವಳು ಅವನ ಜೊತೆ ಆರಾಮಾಗಿ ಕುಳಿತು ತನ್ನ ತಲೇಲಿ ಇರೋದನ್ನೆಲ್ಲ ಹೇಳಿಕೋಬೇಕು ಅಂತಾ ಇಷ್ಟಪಟ್ಟಿದ್ದಾಳೆ.

ತೊಮ್ಲು ಬೊಂಯ್‌ದುಮ್ ಕೆರೆ ಪಕ್ಕದ ತನ್ನ ಬತ್ತದ ಗದ್ದೆ ಮಾರಲಿಕ್ಕೆ ಹೊರಟ್ಟಿದ್ದಾನೆ. ಅದನ್ನ ನನ್ನ ಮಗನೇ ಖರೀದಿ ಮಾಡುದ್ರೆ ಏಸು ಚಂದ ಇರುತ್ತೆ. ಆ ನೆಲ ಬತ್ತದ ಜೊತೆಗೆ ಮೀನು ಕೂಡ ಮಸ್ತಾಗಿ ನೀಡುತದೆ. ಮೀನು ಒಂದರಿಂದಾನೆ ಏಸೆಂದು ಹಣ ಬರತದೆ ಪ್ರತಿ ವರುಷ! ಓ..... ಅವಳಿಗೆ ಈ ವಿಷಯ ಹೇಳೋದೆ ಮರೆತುಬಿಟ್ಟೆ.

- ನಿಮಗೆ ಇವತ್ತು ಸಂಬಳ ಆಗುತ್ತಾ?

- ಇಲ್ಲ ನೆನ್ನೆಯಷ್ಟೆ ಬಿಲ್ಲು ಮಾಡಲು ಆರಂಭಿಸಿದ್ದಾರೆ. ಅವ್ವಾ ಬಂದದ್ದು ಏನು ಸಮಾಚಾರ ಅಂತಾ ಕೇಳ್ದಾ?

ಯಾವುದಕ್ಕಾದರೂ ಆಗಿರಬಹುದು! ಯಾವುದಕ್ಕಾದರೂ ಅಂದರೆ ದುಡ್ಡು ಬಿಟ್ಟು ಬೇರೆ ಯಾವುದಕ್ಕೂ ಅಲ್ಲ. ಸಸಿಕೊಳ್ಳಬೇಕು, ಉಳಬೇಕು, ನಾಟಿ ಮಾಡಬೇಕು, ರಸಗೊಬ್ಬರ ಅದಕ್ಕೆ ಇದಕ್ಕೆ ಯಾವಯಾವದಕ್ಕೊ ದುಡ್ಡುಬೇಕು ಅಂತ ಬಡಬಡಿಸುತ್ತ ಇದ್ದರು. ನಿಮ್ಮಣ್ಣನ ಮಕ್ಕಳಿಗೂ ಹೊಸ ಬಟ್ಟೆ ಬೇಕು ಅಂತ ಹೇಳುತ್ತ ಇದ್ದರು.

ಅವರಿಬ್ಬರ ನಡುವೆ ಕೆಲಕಾಲ ಮೌನ ತುಂಬಿಕೊಂಡಿತು. ತನ್ನ ಗಂಡನಿಗೆ ಆಕೆ ವರದಿ ಒಪ್ಪಿಸಿದ ರೀತಿ ಅವಳ ಮನಸಲ್ಲಿ ರಾಗದ್ವೇಷ ತುಂಬಿಕೊಳ್ಳುವಂತೆ ಮಾಡಿತು. ಹೆಚ್ಚು ಹೊತ್ತು ಕುಳಿತುಕೊಳ್ಳಲಾಗದೆ ಅವಳು ಎದ್ದು ನಿಂತಳು. ಅವಳ ನೆಮ್ಮದಿ ಮಾಯವಾಗತೊಡಗಿತು. ಒಳಗೆ ಕಾಲಿಟ್ಟು ತಪ್ಪು ತಿಳುವಳಿಕೆಯ ಭೂತವನ್ನು ಅವಳು ಓಡಿಸಲು ಆಲೋಚಿಸಿದಳು.

ನಾವು ನಮ್ಮ ಬತ್ತಗದ್ದೆ ಬತ್ತ ಪಡೆದಿಲ್ಲ. ಅಷ್ಟೆಲ್ಲ ನಾವು ಮಾರುಕಟ್ಟೆಯಲ್ಲೆ ಅದನ್ನು ಕೊಂಡಿದ್ದೇವೆ. ನಮ್ಮ ಗದ್ದೆ ಪಾಲಿಗೆ ಕೊಡುವುದೆ ಉತ್ತಮ. ಅವರ ಮನೆ ವ್ಯವಹಾರ ಕೂಡ ನಾವೇ ನೋಡಬೇಕು. ಹಾಗೆ ಆಗಿದೆಯಲ್ಲ? ನಾನು ಸುಮ್ಮನೆ ಇದ್ದುಬಿಡುತ್ತೇನೆ- ನೀನು ನಿನ್ನ ಇಷ್ಟದಂತೆ, ನಿನಿಷ್ಟ ಬಂದಂತೆ ಮಾತನಾಡಿ ಬಿಡು.

ಮುದುಕಿ ಒಳಗೆ ಕಾಲಿಡುವುದರಲ್ಲಿದ್ದಳು. ಅಷ್ಟರಲ್ಲಿ ಆಕೆಯ ಸೊಸೆ ಮಾತು ಅವಳನ್ನು ತನ್ನ ಕಾಲು ಎತ್ತಿಡದಂತೆ ಕಟ್ಟಿಹಾಕಿತು. ಅವಳು ಮೈಮೇಲೆ ಎಚ್ಚರ ವಿಲ್ಲದವಳಂತೆ ಕ್ಷಣಕಾಲ ಕಂಬದಂತೆ ನಿಂತುಬಿಟ್ಟಳು. ಆದರೂ ಆಕೆಯು ಮುನ್ನೆಚ್ಚರಿಕೆಯಿಂದ ಮುಂದಿನ ಮಾತುಗಳಿಗಾಗಿ ಎದುರುನೋಡುವಂತೆ ಮಾಡಿತು. ಮಳೆ ಜೋರಾಗಿ ದಬದಬ ಸುರಿಯುತೊಡಗಿತು. ಅವರು ಏನು ಮಾತನಾಡುತ್ತಿದ್ದಾರೆಂಬುದು ಅವಳಿಗೆ ಕೇಳಿಸದಾಯಿತು. ಆಮೇಲೆ ಅವಳು ಬಿಗಿಹಿಡಿದಿದ್ದ ತನ್ನ ಮನಸನ್ನು ಸಡಿಲಬಿಟ್ಟಳು. ಅವಳು ಬಟ್ಟೆಯ ಚೂರುಗಳನ್ನು

ಆಯ್ದು ಬೇಡವೆಂದ ತಿಂಡಿಗಳ ಗಂಟು ಕಟ್ಟಲು ಬಳಸಿದಳು. ನಂತರ ತಾನುಟ್ಟ ಬಟ್ಟೆಯನ್ನು ಸರಿಪಡಿಸಿಕೊಂಡಳು ಹಾಗೂ ತನ್ನ ಉಳಿದ ಬಟ್ಟೆಬರೆಗಳನ್ನು ಸೇರಿಸಿ ಮತ್ತೊಂದು ಗಂಟು ಮಾಡಿದಳು.

– ಅಮ್ಮಾ ನೀವು ಟೀ ಕುಡಿದೆ ಇಲ್ಲ?

ಅವಳು ತನ್ನ ಬೆನ್ನ ಹಿಂದೆ ನಿಂತಿದ್ದ ಸೊಸೆಯನ್ನು ಕಂಡಳು. ಆಕೆ ತನ್ನ ಅತ್ತೆ ಅವಸರದಲ್ಲಿರುವುದನ್ನು ಕಂಡು ಅಚ್ಚರಿಗೊಂಡು ಕೇಳಿದಳು.

– ನೀವು ಎಲ್ಲಿಗೆ ಹೋಗಲಿಕ್ಕೆ ರೆಡಿ ಆಗಿದ್ದೀರಿ?

ಮನೆಗೆ ನಾಟಿ ಮಾಡೋ ಇಂಥ ಕಾಲದಲ್ಲಿ ನಾನು ಹೆಚ್ಚು ದಿವಸ ನಿಲ್ಲಕಾಗಲ್ಲ.

ಅವಳ ಮಗನು ಹೊರಬಂದ. ಅವನು ಹೇಳಿದ:

ಅವ್ವಾ ಇದ್ದಕಿದ್ದಂಗೆ ಯಾಕೆ ಹೊರಟು ನಿಂತಿದ್ದೀಯಾ? ಕೊನೆಪಕ್ಷ ಕೆಲವು ದಿವಸನಾದರೂ ನಮ್ಮ ಜೊತೆ ಇದ್ದು ಹೋಗಬಹುದಿತ್ತು. ನಿನಗೆ ಹೋಗಲೇ ಬೇಕು ಅನ್ನೋದಿದ್ರ ನನ್ನ ಸಂಬಳ ಆದಮೇಲೆ ಹೋಗಬೋದಿತ್ತು.

ನಿನಗೆ ಸಂಬಳ ಆದಮೇಲೆ ಕಳಿಸೊ ಇಷ್ಟ ಇದ್ರೆ ಸ್ವಲ್ಪಹಣ ಕಳಿಸಿಕೊಡು. ನೀನು ಕಳಿಸದಿದ್ರ ಬೇಜಾರಿಲ್ಲ ಬುಡು.

ಅವಳು ತನ್ನ ಮನಸ್ಸು ಬಿಚ್ಚಿ ಇನ್ನೂ ಸ್ವಲ್ಪ ಮಾತನಾಡುವುದರಲ್ಲಿದ್ದಳು, ಆದರೂ ಸುಧಾರಿಸಿಕೊಂಡಳು. ಅವಳು ಮನೆ ಹೊರಗೆ ಮಳೆಯಲ್ಲಿ ಕಾಲಿಟ್ಟಳು.

ಯಾಕೆ.... ಈ ಮಳೇಲಿ! ನಿನಗೆ ಹೋಗಲೇಬೇಕಿದ್ದರೆ ಊಟನಾದರೂ ಮಾಡಿಕೊಂಡು ಹೋಗು! ನಾನು ನಿನಗೆ ಸ್ಕೂಟರನಲ್ಲಿ ಬಸ್‌ಸ್ಟ್ಯಾಂಡ್‌ವರೆಗೆ ಬಿಡುತ್ತೀನಿ.

ಮುದುಕಿ ಅವನ ಮಾತುಗಳಿಗೆ ಕಿವಿಕೊಡಲಿಲ್ಲ. ಅವಳು ಗೇಟಿನವರೆಗೆ ಹೆಚ್ಚು ಕಡಿಮೆ ಓಡಿಬಿಟ್ಟಿದ್ದಳು. ಅವಳು ತನ್ನ ಮಗನೊಂದಿಗೆ ಹರಟಲು ಹಳ್ಳಿಯ ಸುದ್ದಿಗಳನ್ನೆಲ್ಲ ತನ್ನ ಎದೆಯಲ್ಲಿ ಹುದುಗಿಸಿಕೊಂಡಿದ್ದಳು. ಆದರೆ ತನ್ನ ಪಯಣದ ಉದ್ದೇಶವಾದ – ಬೇಸಾಯದ ಖರ್ಚಿಗೆ ಬೇಕಾದ ಹಣ ಅವನ ತಾಯಿ ಮನೆಯ ಹೆಸರಿಸಲಾಗದ ಅರೆಕೊರೆಗಳ ನಿಭಾಯಿಸಲು ಬೇಕಾದ ಹಣ – ಈ ಯಾವುದರ ಬಗ್ಗೆಯೂ ಅವಳು ಹೇಳಿಕೊಳ್ಳಲೆ ಇಲ್ಲ.

ಅವಳು ಕೆಯ್ ಕಾವ್ ಥಾಂಗ್‌ಗೆ ಹೋಗುವ ರಸ್ತೆಯನ್ನು ಮಳೆಯಲ್ಲಿ ನಡೆಯುತ್ತ ತಲುಪಿದಾಗ– ಅವಳಿಗೆ ತನ್ನ ಹಳ್ಳಿಗರು, ಗಂಡಸರು, ಹೆಂಗಸರು, ಕೆಲವರು ಕೊಡೆಗಳೊಂದಿಗೆ ಮತ್ತೆ ಕೆಲವರು ಬಿದಿರಕೊಡೆಗಳೊಂದಿಗೆ ಮಳೆಯಲ್ಲಿ ಗೆಯ್ಮೆ ಮಾಡುತ್ತ, ಬತ್ತದ ಅಗೆಗಳನ್ನು ನಾಟಿ ಮಾಡುತ್ತ ಇಲ್ಲವೆ ಬಲೆಹಾಕಿ ಮೀನು ಹಿಡಿಯುತ್ತ...... ಮಂಜಿನ ಹನಿಯ ಕೆರೆಯ ನೀರು ಮತ್ತು ಹಬ್ಬಿಹರಡಿರುವ ಬೆಟ್ಟಗಳ ಹಿತವಾದ ಇಳಿಜಾರುನಡುವೆ ಅಡ್ಡ ಹಾಯುವ ಪಾತಿಮಾಡಿದ ಬತ್ತದ ಬಯಲು

ಕೂಡ ಚಿತ್ರವತ್ತಾಗಿ ಕಣ್ಣಿಗೆ ಕಟ್ಟಿದಂತಿತ್ತು. ಇಂಪಾದ ಜನಪದ ಗೀತೆಗಳ ಸಾಲುಗಳು ಅವಳ ಕಿವಿಯನ್ನು ನೇವರಿಸುತ್ತಿತ್ತು. ಮಳೆಯಲ್ಲಿ ಆಕೆಯ ಹಿಂದೆ ಕೊಡೆ ಹಿಡಿದು ಓಡಿಬರುತ್ತಿದ್ದ ತನ್ನ ಸೊಸೆಯನ್ನು ಅವಳು ನೋಡಲೇ ಇಲ್ಲ.

* ರಾಷ್ಟ್ರೀಯ ಹೆದ್ದಾರಿ ೩೯ ಅನ್ನು ಮಳೆಗಾಲದಲ್ಲಿ ಕೆಲಕಾಲ ಮುಚ್ಚಲಾಗುತ್ತದೆ. ಕಣಿವೆಯಲ್ಲಿ ಯಾವುದೆ ಸಾಗಾಣಿಕೆ– ಸರಬರಾಜು ಇರುವುದಿಲ್ಲ. ಇದರಿಂದ ಈ ಸ್ಥಿತಿ.

✧✧

ಕಬೀರರ ವಚನಗಳು

ಆಂಗ್ಲಮೂಲ- ರವೀಂದ್ರನಾಥ ಟ್ಯಾಗೋರ್
ಅನುವಾದ- ಬಿ.ಮಹೇಶ್ ಹರವೆ

೧

ಓ ನನ್ನ ಗೆಳೆಯಾ, ನನ್ನ ಪ್ರೀತಿಯ ಅಂತ:ಕರಣವೇ
ಚನ್ನಾಗಿ ಯೋಚಿಸು, ಪ್ರೀತಿ ನಿನಗೆ ಅಗತ್ಯವಾದರೆ ಏಕೆ ನಿದ್ರಿಸುವೆ?
ನಿನ್ನನ್ನು ಆತ್ಯಂತಿಕವಾಗಿ ಅರ್ಪಿಸಿಕೋ ಆ ಮೂಲಕ ನೀನವನ ಪಡೆಯುವೆ.
ಏಕೆ ನೀನವನ ಮತ್ತೆ ಮತ್ತೆ ಕಳೆದುಕೊಳ್ಳುತ್ತಿರುವೆ?
ನಿನ್ನ ಗಾಢ ನಿದ್ದೆಯಿಂದ ಕಣ್ಣುಗಳಲ್ಲಿ ವಿಶ್ರಾಂತಿಯ ಛಾಯೆ ಹೊರ ಹೊಮ್ಮಿದೆ.
ಏಕೆ ಹಾಸಿಗೆ ದಿಂಬುಗಳಲ್ಲಿ ನಿನ್ನ ಸಮಯ ವ್ಯರ್ಥಗೊಳಿಸುತ್ತಿರುವೆ?
ಕಬೀರ ಹೇಳುತ್ತಾನೆ, ನಾ ನಿನಗೆ ಪ್ರೀತಿಯ ಹಾದಿ ತಿಳಿಸುವೆ!
ನೀ ನನಗೆ ನಿನ್ನ ಚಿಂತಿಸುವ ಮಿದುಳ ನೀಡಲೇ ಬೇಕು
ಏಕೆ, ಹಾಗೇಕೆ ನೀ ಬಿಕ್ಕಳಿಸುವೆ ಇದಕೆ?

೨

ಓ! ಹೇಗೆ ತಾನೆ ನಾನು ಆ ರಹಸ್ಯ ಶಬ್ದವನ್ನು ಅಭಿವ್ಯಕ್ತಿಸ ಬಲ್ಲೆ?
ಅದು ಇದೇ ಎಂದು, ಅದು ಇದು ಅಲ್ಲ ಎಂದು ಹೇಗೆ ತಾನೆ ನಾನು ಹೇಳಲಿ?
ಒಂದು ವೇಳೆ ಅದು ನನ್ನೊಳಗಿದೆ ಎಂದುದಾದರೆ
ಬ್ರಹ್ಮಾಂಡವು ನನ್ನನ್ನು ನಾಚಿಸುವುದಿಲ್ಲವೆ?
ಅದು ಎನ್ನೊಳಗಿಲ್ಲ ಎಂದುದಾದರೆ ನಾನು ಸುಳ್ಳು ನುಡಿದಂತೆ
ಆ ಸತ್ಯಸ್ಯಸತ್ಯ ನನ್ನ ಅಂತರಂಗವನ್ನೂ ಬಹಿರಂಗವನ್ನೂ ರೂಪಿಸಿ

ತಾನೇ ತಾನಾಗಿ ಏಕವಾಗಿದ್ದಾನೆ.
ನನ್ನ ಎಚ್ಚರಿಕೆ ಮರೆವುಗಳೆರಡೂ ಅವನ ಪದಗತಿ
ಅವನು ಗೋಚರನೆಂತೋ ಅಂತೆಯೇ ಅಗೋಚರ
ಅವನು ನನ್ನವನು ಅಂತೆಯೇ ಅನ್ಯನು
ಅವನ್ಯಾರೆಂದು ಹೇಗೆ ಹೇಳಲಿ?
ಅವನು ಶಬ್ದಾತೀತನು.

೩

ನನ್ನೊಡೆಯ ನನ್ನೊಳಗೂ ನಿನ್ನೊಳಗೂ ಇದ್ದಾನೆ
ಅವನೇ ಎಲ್ಲಾ ಜೀವದ ಜೀವ.
ಓ ಜೀವವೇ ! ನಿನ್ನ ಹುಸಿ ಹಮ್ಮುಗಳ ಹೊರಗಾಕು
ಮತ್ತೆ ಅವನ ನಿನ್ನೊಳಗೇ ಹುಡುಕು.
ಕೋಟಿ ಸೂರ್ಯರ ಪ್ರಭೆ ಬೆಳಕಿನೊಡನೆ ಝಗಮಗಿಸುತ್ತಿದೆ
ಸಾಗರದ ನೀಲಿ ಆಗಸದಲಿ ಹರಡಿದೆ.
ನನ್ನಲ್ಲಿನ ಅವನ ಜಗದೊಳಗೆ ನಾ ಕುಳಿತಾಗ
ಜೀವದ ಮನಸ್ಸಿನ ಉದ್ರೇಕ ಸ್ಥಿರವಾಗಿದೆ;
ಮತ್ತು ಎಲ್ಲದರ ರಂಗೂ ತೊಳೆದು ಹೊರ ಹಾಕಿದೆ.
ನಾಲಿಗೆಯಿಲ್ಲದ ಗಂಟೆಯ ನಾದವ ಕೇಳಿ,
ನಿನ್ನ ಪ್ರೀತಿಯೊಂದಿಗೆ ಹರ್ಷದಿಂದಿರು.
ನೀರಿಲ್ಲದ ಮಳೆ ಸುರಿಯುತ್ತಿದೆ, ನದಿಗಳಲ್ಲಿ ಬೆಳಕಿನ ನೆರೆ ಹೊಮ್ಮಿದೆ
ಪ್ರೀತಿಯೊಂದೇ ಇಡಿ ಜಗವ ವ್ಯಾಪಿಸಿದೆ
ಕೆಲವರಿಗೆ ಮಾತ್ರ ಅದರ ಪೂರ್ಣ ಅರಿವಿದೆ.
ಅವರ ಅಂಧತ್ವಕ್ಕೆ, ಬೆಳಕು ಕಾಣುವ ನಿರೀಕ್ಷೆಯ ಕಾರಣಗಳಿಲ್ಲ.
ಅದೇ ಅವರ ಬೇರ್ಪಡಿಸುವ ಕಾರಣವೂ ಹೌದು.
ಹಾಗಾಗಿಯೇ ಆ ಮನೆ ನಮ್ಮಿಂದ ದೂರವಾಗಲು ಕಾರಣವಾಯ್ತು
ಕಬೀರ ಅಭಿನಂದಿಸುತ್ತಾನೆ, ನಮ್ಮ ಹೆಚ್ಚಿನ ಸುಖ ನಮ್ಮ ನಡುವಿಣ
ನಮ್ಮ ಪಾತ್ರೆಯ ಹಾಡಿನೊಳಗೇ ಇದೆ.
ಆ ಸಂಗೀತ ಆತ್ಮದ ಆತ್ಮವ ಕಂಡು ನುಡಿಸಿದೆ,
ಆ ಸಂಗೀತಕ್ಕೆ ದು:ಖ ಮರೆಸುವ ಶಕ್ತಿಯಿದೆ
ನಮ್ಮ ಮುಂದೆ ಅತೀಂದ್ರಿಯ ಸುಖ ತರುವ ಶಕ್ತಿ ಆ ಸಂಗೀತಕ್ಕಿದೆ.

೪

ಓ ನನ್ನ ಅಂತ:ಕರಣವೇ! ಮಹೋನ್ನತ ಚೈತನ್ಯವೇ
ಮಹಾಗುರು ನಿನ್ನ ಸನಿಹವೇ ಇದ್ದಾನೆ
ಏಳು, ಎಚ್ಚರಗೊಳ್ಳು.

ನೀನು ಪ್ರೀತಿಸುವ ನಿನ್ನ ಒಡೆಯ, ನಿನ್ನ ಪ್ರಜ್ಞೆಯ ಹತ್ತಿರವೇ ಇದ್ದಾನೆ.
ಧಾವಿಸು
ಅನಂತಕಾಲದಿಂದ ನೀನು ನಿದ್ರಿಸುತ್ತಲೇ ಇರುವೆ
ನಿನಗೆ ಇಂಥ ಎಚ್ಚರದ ಬೆಳಗು ಮತ್ತೆ ಬರಲಾರದು
ನೀ ಇಂದೂ ಎಚ್ಚರಗೊಳ್ಳಲಾರೆಯಾ?

೫

ಪ್ರಜ್ಞೆ, ಅಪ್ರಜ್ಞೆಗಳೆಂಬ ಗುರಿಗಳ ನಡುವೆ ಮನಸ್ಸಿನ ತೂಗುಯ್ಯಾಲೆ ನಡೆದಿದೆ
ಜಗತ್ತಿನ ಎಲ್ಲಾ ಮೊದಲುಗಳು ಅಲ್ಲಿ ನೇತುಕೊಂಡರೂ ಸಹ
ಉಯ್ಯಾಲೆ ನಿಲ್ಲದೆ ಚಲಿಸುತ್ತಿದೆ.
ಲಕ್ಷಾಂತರ ಸೃಷ್ಟಿಯ ರಚನೆಗಳು ಅಲ್ಲಿವೆ. ಸೂರ್ಯ ಚಂದ್ರರ ಹಿಮ್ಮೇಳಗಳೂ ಸಹ
ಅನಂತ ಮನ್ವಂತರಗಳು ಅಲ್ಲಿಂದ ಹಾದು ಬಂದಿವೆ ತೂಗಿ ನಡೆದಿವೆ
ಎಲ್ಲವೂ ತೂಗುತ್ತಿವೆ ! ಪಂಚಭೂತಗಳೂ ಸಹ
ಅವುಗಳ ಒಡೆಯನಾದ ಬಗವಂತನ ಸ್ವರೂಪವೂ
ಸಹ ಅಲ್ಲಿ ತೂಗುತ್ತಿದೆ.
ಎಲೇ ಜೀವವೇ,
ಕಬೀರ ಇದ ತನ್ನ ಕಾಣ್ಕೆಯಲ್ಲಿ ಕಂಡ.

೬

ಸಂತನೊಬ್ಬನನ್ನು ಯಾವ ಜಾತಿಗೆ ಸೇರಿದವನೆಂದು ಕೇಳುವ ಅಗತ್ಯ ಇಲ್ಲಾ
ಬ್ರಾಹ್ಮಣ, ಕ್ಷತ್ರಿಯ, ವೈಶ್ಯಾರಾದಿಯಾಗಿ ಮುವತ್ತಾರೂ ಜಾತಿಯವರೂ
ಬಗವಂತನನ್ನು ಎಲ್ಲರಂತೆ ಹುಡುಕುತ್ತಾರೆ.
ಆದರೂ ಇದು ಮೂರ್ಖತನ, ಸಾಧುವೊಬ್ಬ ಯಾವ ಜಾತಿಗೆ ಸೇರಿದವನೆಂಬುದು.
ಕ್ಷೌರಿಕ, ಮಡಿವಾಳ, ಬಡಗಿ, ರೈತನೂ ಸಹ ದೇವರ ತನ್ನ ವೃತ್ತಿಯಲ್ಲಿ ಹುಡುಕುತ್ತಾರೆ.
ಋಷಿಯಾದ ಶ್ವಪಚ ಜಾತಿಯಲ್ಲಿ ಚರ್ಮ ಹದ ಮಾಡುವವ,
ಸತ್ಯದ ಸಾಕ್ಷತ್ಕಾರದಲ್ಲಿ ಹಿಂದೂ ಮುಸ್ಲಿಮರಿಬ್ಬರೂ ಒಂದೇ
ಇವರ ನಡುವಿಣ ಅಂತರದ ಗುರುತು ಎಲ್ಲಿ ಉಳಿಯುತ್ತೆ.

✧✧

ಬಿ. ಮಹೇಶ್ ಹೆರವೆ ಕನ್ನಡ ಉಪನ್ಯಾಸಕರು ಸ.ಪ.ಪೂ ಕಾಲೇಜ್ ವೆಂಕಟಯ್ಯನ ಛತ್ರ
ಚಾಮರಾಜನಗರ ತಾಲ್ಲೂಕು ಜಿಲ್ಲೆ.

ಇರಳು ಮಲ್ಲಿಗೆ

ಮೂಲ:ಮಲಯಾಳಂ: ಓ. ಎನ್. ವಿ. **ಕುರುಪ್ಪ**
ಕನ್ನಡಕ್ಕೆ : **ಜಿ. ನವೀನ್‌ಕುಮಾರ**

ಛಾಯಾ ಸರ್ಪಗಳು ಕಣ್ಣು ಕಾಣದೆ ಅಂಡಲೆಯುತಿಹ
ಬೆಳದಿಂಗಳಲಿ, ನಿರಾಶ್ರಿತ ಶೋಕದ ಕಣ್ಣೀರ
ಕುಸುಮಗಳು ಎವೆ ಮುಚ್ಚಿ ನಿಂದಿಹುದು ರಜನಿಯಲಿ
ಓ ಇರುಳು ಮಲ್ಲಿಗೆ ನಿನ್ನಂತರಂಗದಲಿ
ಅಡಗಿಹ ಅದೃಶ್ಯ ಜ್ಯೋತಿ ಯಾವುದು?
ಶಶಿಕಿರಣ ಮೋಹಿಪ ಮೃದುತನವ
ನಿನಗೆ ಕರುಣಿಪರು ಯಾರು?
'ಮೆಡೋನಾ'ಳ ಪರಿಶುದ್ಧ ನಗುವಿಗೂ ನೀ ಮಿಗಿಲು
ಮೌನದಲಿ ನುಡಿಸುವೇ ನೀ ಗಂಧರ್ವ ಸಂಗೀತ
ಇಬ್ಬನಿಯ ಹನಿಯಲ್ಲಿ ತೊಯ್ದು ತಪಗೈವ
ಚಿರ ತರುಣಿಯೇ!
ಓ ಇರುಳು ಮಲ್ಲಿಗೆ ನೀನೆಷ್ಟು ಭಾಗ್ಯವತಿ

ಅರಳಿ ನಿಂತೆಯಾ ಸುಸ್ಮಿತೆ! ನಿನ್ನ ಹೃದಯದ
ಮಡುವಿನಲಿ ತುಂಬಿಹ ಬೆಳಕು ಹೊರಗಿಲ್ಲ
ಇರುಳ. ಗರ್ಭವು ಹಡೆದ ನಾಗಗಳು ನೆಕ್ಕಿ ಕುಡಿಯುತಿಹ
ಬೆಳದಿಂಗಳು, ಬೊಗಸೆ ಬೊಗಸೆಗಳಲಿ ತುಂಬಿ ತುಳುಕುವ
ಬೆಳಕ ಕುಂಭದಲಿ ನೀ ಅರಳಿದೆಯಾ!

ಅರಳಿ ನಿಟ್ಟುಸಿರಿಟ್ಟು ನೀ ನಿಂತೆ!
ಮನದಾರ್ದ್ರ ಭಾವ ಸುಗಂಧಗಳು ನಿನ್ನುಸಿರಲಿ
ಬೆರೆತು ಗಮಗಮಿಸಿ ನಿಂತಿದೆ
ಓ ಇರುಳು ಮಲ್ಲಿಗೆ ನೀನೆಷ್ಟು ಭಾಗ್ಯವತಿ

ನಿನ್ನಲ್ಲಿ ಹುದುಗಿರುವ ಎಲ್ಲವನು ಕಸಿಯಲು
ತವಕಿಸುವ ಇರುಳ ಮಂದಾನಿಲ ಎದ್ದು ಬಿದ್ದೋಡಿ
ಏದುಸಿರು ಬಿಟ್ಟು ನಿನ್ನ ದುಕೂಲದ ಸೆರಗ ಹಿಡಿದೆಳೆವಾಗಲೂ
ಕರ ಮುಗಿದು ಧ್ಯಾನಿಸುತ ಶಾಂತ ಮೌನದಿ ನೀ ಜಪಿಪ
ಶಾಂತ ನಿರ್ವಾಣ ಮಂತ್ರ ಯಾವುದು?
ಚಂದ್ರನಸ್ತಮಿಸಿದ, ಕಣ್ರೆಪ್ಪೆ ಮುಚ್ಚಿದೆ
ಉಸಿರಿನೊಂದಿಗೆ ಕೊನೆಯಾಯ್ತು ಹಂಸಗಾನ*
ಓ ಇರಳು ಮಲ್ಲಿಗೆ ನೀನೆಷ್ಟು ಭಾಗ್ಯವತಿ

ಇವರಿಗಂಧಕಾರದಿ ಮುಳುಗಿಹ ಇಹವು
ತೆರೆಯುವ ಕಾಲಕೆ ಹುಟ್ಟಿದ ತಪ್ಪಿಗೆ ಬಾಳ್ವೆ
ಸವೆಸುವ ದಂಡನೆ ವಿಧಿಸಲ್ಪಟ್ಟಾಗ
ಅಂಧಕಾರದ ಕಿಲುಬಿಡಿದ ಕುಟೀರದಲಿ
ಬಂಧಿಗಳಾದ ಸಂಕಟಗಳು ನಾವಾಗಿರಲು
ಅಗಸೆ ಬಾಗಿಲ ಮುರಿದೆಸೆದು ಒಳಬರುವ
ಕೋಟಿ ಚಂದ್ರರ ತೇಜ ಪುಂಜವ
ಕಾದು ಕಾದಸ್ತಮಿಸುವ ಅಜ್ಞಾನಿಗಳು ನಾವು!
ಬೆದರು ಕಣ್ಣಲ್ಲಿ ಮೃತ್ಯು ಭಯವಿದೆ
ನೀನು ಮೃತ್ಯು ದೇವತೆಯನು ಸ್ವಯಂವರಿಸಿದ ಕನ್ಯೆ
ಓ ಇರಳು ಮಲ್ಲಿಗೆ ನೀನೆಷ್ಟು ಭಾಗ್ಯವತಿ

* ಮೆಡೋನ-(Madonna)ಕನ್ಯೆ ಮಾತೆ
* ಹಂಸಗಾನ-(Swan song) ಅಂತ್ಯಾಗಾನ

✧✧

ನದಿ, ಪ್ರೇಮ ವಿಸರ್ಜನ

ಮೂಲ: ಅಸ್ಸಾಮಿ ನವಸಾಪಕೋಟ
ಹಿಂದಿಗೆ: ಶಾಂತಿಥಾಪಾ
ಕನ್ನಡಕ್ಕೆ:- ಅರ್ಜುನಕೋರಟಕರ,

ನಿಮ್ಮೊಳಗೆ ಹುದುಗಿದ ಪ್ರೇಮವು
ಅದೆಷ್ಟೋ ಛಿದ್ರಗಳನ್ನು
ನನ್ನ ಹೃದಯದೊಳಗೆ ಕೊರೆದು ಬಿಟ್ಟಿದೆ.

ಭೂ ಕೊರೆತಕ್ಕಾಗಿ
ನಮ್ಮೊಳಗಿನ ಗುಪ್ತವಾಹಿನಿಗಾಗಿ
ಪ್ರೇಮವು ನದಿಯಾಗಿಯೂ ಹರಿಯುತ್ತಿದೆ.

ಗುಲಾಬಿಯ ಸುವಾಸನೆಯು
ಸೌಂದರ್ಯವನ್ನು ಹೆಚ್ಚಿಸುವಂತೆ
ನಿಮ್ಮ ಅಂತ:ಪುರವನ್ನು ತುಂಬಲಿಚ್ಚಿಸುತ್ತೇನೆ
ವಯೋಮಾನದ ಬಂಧನದ ಯಂತ್ರದಲಿ ಸಿಕ್ಕಿಸಿಕೊಂಡು
ನಿನ್ನ ಕಗ್ಗಂಟಿನಲ್ಲಿ ಜ್ವಾಲಾಮುಖಿಯಂತೆ
ನಾನೆಂತು ಉರಿಯಬಲ್ಲೆನು?

ಸಹಸ್ರಾರು ಬಲೂನುಗಳು
ಈ ಸಧ್ಯದಲ್ಲೂ ನನ್ನೊಳ ಬಯಲಿನಲ್ಲಿ ವಿಹರಿಸುತ್ತಿವೆ.
ನನ್ನ ಸುತ್ತ-ಮುತ್ತಲಿನ ಮಣ್ಣಿನಲ್ಲಿಯೂ
ಸೂರ್ಯಕಿರಣಗಳಿಂದ

ಈ ಬಲೂನುಗಳ ಬಣ್ಣವೂ ಪರಿವರ್ತನೆಗೊಳ್ಳುತ್ತಿದೆ.

ನನ್ನ ಶ್ವಾಸಕೋಶದಲ್ಲಿ ಈಗಲೂ
ಸಹಸ್ರಾರು ಬಲೂನುಗಳು ವ್ಯಾಪಿಸಿಕೊಂಡಿವೆ.

ಜಲಜನಕ ತುಂಬಿಕೊಂಡಿರುವ ಈ ಬಲೂನುಗಳು
ಈ ಭೂಮಿಯೊಂದಿಗೂ ಸಹಸ್ಪಂದಿಸಲು ಹಾತೊರೆಯುತ್ತಿವೆ.
ಮಣ್ಣಿನೊಂದಿಗೆ ಮಣ್ಣಾಗಲು ಇಚ್ಛಿಸುತ್ತಿವೆ.
ಹೀಗಾಗಿ ನನ್ನೊಳಗಿನ ನನ್ನನ್ನು ಬಿಟ್ಟು ಕೊಡಲು ಬೋಧಿಸುತ್ತಿವೆ.
ಹೀಗೆ ಹೇಳುವುದರಿಂದ
ಬೆಂಕಿಯಿಂದ ಬಾಣಲೆಗೆ ಬಿದ್ದಂತಾಗುವುದೇ ಹೊರತು
ಸುಖ ಲಭಿಸಲಾರದು.

ನಿನ್ನ ಪ್ರೇಮ-ಪ್ರಶಾಂತದ ಅಂತರಾಳವು
ನನ್ನ ಅಂತರಂಗದೊಳಗೆ ಬೆರೆತುಕೊಳ್ಳುತ್ತಿದೆ;
ಆದರೂ,
ನನ್ನ ಅಂಗಾಂಗದ ತುತ್ತತುದಿಯ
ಉಚ್ಛ್ರಾಯದ ಸ್ಥಿತಿ ಹಿಡಿತದ
ವಿಸ್ಥಾಪಿತ ಗತಿ ಸರಿಯುತ್ತ
ಬಹುದೂರದಲ್ಲಿ ಗಿರಕಿ ಹೊಡೆಯುತ್ತಿದೆ.

ಪರಂತು ಈತ ಮಾತ್ರ
ನಿಮ್ಮ ವಿಸ್ಥಾಪಿತ ಪರಂಪರೆಯ ಸಂತಾನದ ಸ್ಥಾಪಿತ
ಸ್ತಂಭಿಭೂತನಾಗುತ್ತಿದ್ದಾನೆ.

ಬಾಳೆ ಹಣ್ಣಿನ ಸಿಪ್ಪೆಹಾಗೆ
ತನ್ನ ವಿಸ್ಥಾಪಿತ ದೇಹದ ಗೊಬ್ಬರಹಾಕಿ
ಫಲವತ್ತತೆಗಾಗಿ ಕಾಯುತ್ತಾನೆ.

ಈ ಬಲೂನುಗಳು ನನ್ನ ಅಂಗಾಂಗದ
ಯುಕ್ಲಿಪ್ಟಸ್‌ಗಳಲ್ಲಿ ಹಾರಾಡುತ್ತಿರಲಿ
ಆದರೆ,
ಮಾನಸಿಕವಾಗಿ ಯಾರೂ ನನ್ನನ್ನು
ಅಲ್ಲಾಡಿಸಲಾರರು;
ನಿಮ್ಮೊಳಗೆ ಹುದುಗಿದ ಪ್ರೇಮದಿಂದ
ನನ್ನ ಹೃದಯದಲ್ಲಿ ಎಂದೆಂದೂ
ಛಿದ್ರಗಳನ್ನು ದಯವಿಟ್ಟು ಕೊರೆಯಬೇಡಿ.

✧✧

ಅರ್ಜುನ ಕೊರವಕರ, ಜಮಖಂಡಿ, ಬಾಗಲಕೋಟೆ (ಜಿ)

ನೆತ್ತರ ಪ್ರಶ್ನೆ

ತೆಲುಗುಮೂಲ: **ಡಾ. ಎಂಡ್ಲೂರಿ ಸುಧಾಕರ್**
ಅನು: **ಡಾ. ಆಂಜನಪ್ಪ**

ನಾನಿನ್ನು ನಿಷಿದ್ಧ ಮಾನವನೇ
ನಂದು ಬಹಿಷ್ಕೃತ ಶ್ವಾಸ.
ತಾಳೆ ಎಲೆ ಸುತ್ತಿ ನನ್ನ ಸೊಂಟಕೆ
ಉಗುಳ ಕುಡಿಕೆ ಕಟ್ಟಿ ನನ್ನ ಕುತ್ತಿಗೆಗೆ
ನಾಲ್ಕು ಜನರಲ್ಲಿ ನನ್ನ
ಜಂತುವ ಮಾಡಿದ ಮನುವು.
ನನ್ನ ಕಪ್ಪು ನೊಸಲು ಮೇಲೆ ಬಲಾತ್ಕಾರದ
ನಿಷಿದ್ಧ ಮುದ್ರೆ ಒತ್ತಿದಾಗಲೆ
ನನ್ನ ಬಳಗವೆಲ್ಲಾ
ಕ್ರಮೇಣ ಕೊಲೆಗೀಡಾಗಿರಲು
ಈಗಿನ್ನೂ ಹೊಸದಾಗಿ ಸಾಯಲಿಹುದೆ?
ನಮ್ಮ ಸಾವುಗಳೆಲ್ಲಾ ಅಕ್ಷರಗೈದರೇ
ಪತ್ರಿಕೆಗಳ ತುಂಬೆಲ್ಲಾ ನಮ್ಮ ಸಾವುಗಳೆ ವಿಜೃಂಭಿಸವೆ?
ಈ ದೇಶದ ಯಾವ ನೆಲದೆದೆಯ ಬಗೆದು, ನೋಡಿದರೂ
ನಮ್ಮ ಅಸ್ಥಿಪಂಜರಗಳ ಮಣ್ಣಕೊರಳುಗಳೇ ಸಾಕ್ಷಿ ನುಡಿಯುತ್ತವೆ.
ವೇದ ಕೇಳಿದ ನನ್ನ ಕಿವಿಯೊಳಗೆ ಕಾದ ಸೀಸವ ಸುರಿದಾಗ
ಅದ್ಯಾವುದೋ ನುಡಿಯಬಾರದ ಭಾಷೆಯ ನುಡಿದೆ ನಾಲಗೆ ಕುಯ್ದಾಗ
ನನ್ನ ವೀರ್ಯ ತೀರಿಸಿದ ದಾಹಕ್ಕೆ ನನ್ನ ತಲೆ ಕಡಿದಾಗ

ಪಶುವಂತೆ ಬಿಗಿದು ಸಾಯುವಂತೆ ಬಡಿದಾಗಲೆ
ನಂದೇ ಶವವಾಗಿದ್ದೆ.
ವಿಜೃಂಭಿಸಬೇಕಿದ್ದ ನಮ್ಮ ಸಾವುಗಳು - ಕನಿಷ್ಟ ಸುದ್ದಿಗಳೂ ಆಗಲಿಲ್ಲ
ಆಯುಧಗಳ ಹೆಸರು ಬದಲಾಗಿವೆ.
ಅಂಕೆ-ಸಂಖ್ಯೆಗಳೂ ಹೆಚ್ಚಾಗಿವೆ.
ಬದಲಾಗದವೆಲ್ಲಾ ನಮ್ಮ ಹತ್ಯೆಗಳೇ
ಹೊಸದೇನಲ್ಲ ನಮ್ಮ ಶವದ ಸುದ್ಧಿ ಕೂಡಾ
ಹೊಸದೇನಲ್ಲ ಹಂತಕರ ಸಹಾನುಭೂತಿ ಅಳಲು.
ಹೊಸದೇನಲ್ಲ ಮೆರವಣಿಗೆಯ ರಾಜಕೀಯ ಮೋಡದ ಮತಗಳ ಕಣ್ಣೀರು
ನೆನ್ನೆಯ ಚರಿತ್ರೆ ಹೆಬ್ಬೆರಳನ್ನು ಬಲಿಗೈದರೇ
ವರ್ತಮಾನ ಕೊರಳನ್ನೇ ಬಲಿಗೈಯುತ್ತದೆ.
ಬಹಿರಂಗವಾಗಿಯೂ, ರಹಸ್ಯವಾಗಿಯೂ
ಘಟಸರ್ಪ ನಮ್ಮ ನೆರಳನ್ನೇ ಬೆನ್ನಟ್ಟುತ್ತಾ
ಹೆಡೆ ಎತ್ತಿ ನಿಂತ ದೃಶ್ಯ.
ಈ ದೇಶದ ಚೌರಸ್ತಾ
ಇಪ್ಪತ್ತನೇ ಶತಮಾನಕ್ಕೂ ನೆತ್ತರ ಪ್ರಶ್ನೆಯೆ?
ಕಾಲವು ಸ್ಪಷ್ಟವಾಗಿ ನಮಗೆ ಶತ್ರುವಾಗುತ್ತಿದೆ.
ಬೆಳೆದಿರುವ ನಮ್ಮ ಕೈಗಳ ಮೇಲಿಂದ ಖಡ್ಗ ತೂರಿ ಬರುತ್ತಲೇಯಿದೆ.
ರಾಜ್ಯಾಂಗ ಬರೆದ ವಾರಸತ್ವಕ್ಕೆ
ಜೈಲುಗಳು, ಬೇಡಿಗಳು, ಸಾವುಗಳು, ಬಹುಮಾನಗಳಾಗಿವೆ.
ನಮ್ಮ ಮಧ್ಯೆ ಇರುವ 'ಕಳೆ'ಯ ಮೊಳಕೆಯೇ
ನಮ್ಮ ಹರಿತ ಶ್ವಾಸಗಳನ್ನು ಪಾತಾಳಕ್ಕೆ ತುಳಿಯುತ್ತಿವೆ.
ನಮ್ಮ ಸಾವಿಗೆ ಬೆಲೆಯನ್ನೂ ಕಟ್ಟಲಾಗಿದೆ.
ನಮಗೀಗ ಬೇಕಾಗಿದ್ದು ನೆತ್ತರ ಹಣವಲ್ಲ
ನಮಗೇನು ಬೇಕೋ ಕೇಳುವ ನಿರ್ಭಯದ ಕಂಠ
ಹೊಸರಾಜ್ಯಾಂಗ, ಹೊಸದೇಶ, ಹೊಸಭೂಮಿ, ಹೊಸ ಆಕಾಶ.

✦✦

ಗೂರ್ಕಾ

ಅವನು ರಾತ್ರಿ ಸೂರ್ಯನು
ಕಣ್ಣ ರೆಪ್ಪೆಯಲ್ಲಿ ನಿದ್ದೆಯ ಚಾಪೆಯನ್ನು ಮಡಿಚಿಟ್ಟು
ಕದೀಮ ಕತ್ತಲೆಯನ್ನು ಬೇಟೆಯಾಡುತ್ತಿರುವನು.
ಬೀದಿಯ ತಿರುವಿನಿಂದ ಅವನ ಪದಧ್ವನಿಗಳನ್ನೂ,
ವಾಸನೆಯನ್ನೂ ಗುರ್ತುಹಿಡಿದ
ಗಲ್ಲಿ ನಾಯಿಗಳು ಗೌರವ ಸೂಚಕವಾಗಿ ಎದ್ದು ಬಾಲವನ್ನಾಡಿಸುವುವು.
ಎಲ್ಲಿಯವನೋ ಗೊತ್ತಿಲ್ಲ, ಆದರೆ
ಅತ್ಯಂತ ಆಪದ್ಬಾಂಧವನಂತೆ ಕಾಣುತ್ತಾನೆ.
ತಲೆಯ ಮೇಲೆ ಕತ್ತಿನ ಕರಚಾಲನೆ ಗುರ್ತಿರುವ ಉಲ್ಲನ್ ಟೋಪಿ,
ಸೊಂಟದ ಮೇಲೆ ನೇತಾಡುವ ತಾತಂದಿರ ವಾರಸತ್ವದ ನಗಿಷೀ ಕತ್ತಿ
ಮಾಸಿಹೋದ ಖಾಕೀ ಯೂನಿಫಾಮ್
ಮಹಾನ್ ಗೌರವ ಹುಟ್ಟಿಸುತ್ತಾ ಗಾಂಭೀರ್ಯವಾಗಿ ಕಾಣುತ್ತಾನೆ.

ಕಾಫೀರಾಗವು ಕೂಗೋ ವೇಳೆಗೆ
ಕಾಲಿನ ನಡಿಗೆ ಶುರುಮಾಡಿ
ಭೂಪಾಳರಾಗದ ಸಮಯಕ್ಕೆ
ಕಾವಲಿ ಕಚೇರು ಕಟ್ಟಿಹಾಕುವನು.

ಬೆಳ್ಳಿ ಚುಕ್ಕೆ ಹುಟ್ಟಿದೆ ಎನ್ನಲಿಕ್ಕೆ
ಬೀಡಿ ತುಂಡು ವಿಶ್ರಾಂತಿಯಾಗಿ ಹೊಗೆ ಚಿಮ್ಮುತ್ತಾಯಿದೆ.

ಅವನು ಆರು ಋತುಗಳ ಜೊತೆಗಾರ.
ಕಾಲ ಅವನ ಕೈಯಲ್ಲಿನ ಟಾರ್ಚ್‌ಲೈಟ್.
ಮಂತ್ರದಂಡದಂತಿರುವ ಅವನ ಕೈಗೋಲಿನ ಸದ್ದು
ನಮ್ಮ ಭಯೋದ್ವೇಗಗಳ ತಗ್ಗಿಸುವ ಮದ್ದಾಗುವುದು.

ನಡುರಾತ್ರಿಯಲಿ ಗೇಟು ತಟ್ಟಿ
ನಿದ್ರಾಭಂಗದಲ್ಲಿಯೂ
ಬೆಟ್ಟದಷ್ಟು ಧೈರ್ಯವನ್ನು ಕರಪತ್ರದಂತೆ ಹಂಚಿ ಹೋಗುವನು.
ಅರ್ಧರಾತ್ರಿಯಲಿ ಅವನು ಬಂದು ಹೋದ ನಂತರ
ಬಾಗಿಲಿನ ಬೀಗ ಸಗರ್ವದಿಂದ ಮೀಸೆಯನ್ನು ತೀಡುತ್ತದೆ.
ನಾವೆಲ್ಲಾ ಗಾಢ ನಿದ್ದೆಯಲ್ಲಿ ಗೊರಕೆ ಹೊಡೆಯುವಾಗ
ಅವನೊಬ್ಬನೇ ದೋಣಿಯಂತೆ ಎಚ್ಚರಿಕೆಯ
ಅಲೆಗಳ ಮೇಲೆ ತಿರುಗುತ್ತಿರುತ್ತಾನೆ.

ಹೆಂಡತಿ ತನ್ನ ಪ್ರೀತಿಯನ್ನೆಲ್ಲಾ
ಕೈಬೆರಳಿನ ಉಲ್ಲನ್ ಸೂಜಿಯೊಳಗೆ ತುಂಬಿ
ಎಣಿದಿಟ್ಟ ಸ್ವೆಟರ್ ಬೆಚ್ಚನೆಯ ಕವಚದಂತೆ ಅಪ್ಪಿಕೊಳ್ಳುತ್ತೆ.
ಪ್ರತಿ ಯೌವನ ರಾತ್ರಿಯೂ
ಬೆಳಗಿನ ಜಾವವೂ,
ಸಾವಿರ ಸಾವಿರ ಅಪ್ಪುಗೆಗಳೂ, ಚುಂಬನಗಳೂ
ಬಿಸಿ ನಿಟ್ಟುಸಿರುಗಳೂ,
ರಹಸ್ಯ ರಸೋದ್ರೇಕಗಳ ಮೇಲೆ
ನಿರ್ಲಿಪ್ತ ಪರಿವ್ರಾಜಕನಾಗಿ ನಡೆದು ಹೋಗುತ್ತಿರುತ್ತಾನೆ.

ಅರ್ಧರಾತ್ರಿ ಮಡದಿ ಮಕ್ಕಳನ್ನು ಬಿಟ್ಟು
ಪ್ರತಿರಾತ್ರಿ ಗೌತಮ ಬುದ್ಧನಾಗುತ್ತಾನೆ.
ಚಳಿ ರಾತ್ರಿಗಳಲ್ಲಿ ದುಕಾಣಗಳ ಮುಂದೆ
ದುಃಖದ ಕಾಗದಗಳಾದ ಭಿಕ್ಷುಕರನ್ನೂ,
ಪಡಸಾಲೆಗಳಲ್ಲಿ ಎಳೆದು ಬಿಸಾಡಿದ
ವೃದ್ಧ ತಾಯಿ ತಂದೆಯರ ನರಳಾಟಗಳನ್ನೂ
ಆಸ್ಪತ್ರೆಯ ಕಿಟಕಿಗಳ ಬಳಿ
ದುಃಸ್ವಪ್ನಗಳನ್ನು ಕಾಣುತ್ತಿರುವ ದೀರ್ಘ ರೋಗಿಗಳನ್ನೂ
ಮಂಜುಸುರಿವ ಗಿಡಗಳ ಕೆಳಗೆ
ಚಳಿಕಾಯಿಸಿಕೊಳ್ಳುತ್ತಿರುವ ಕುಷ್ಠರೋಗಿಗಳನ್ನೂ
ಬಯಕೆ ಸಾಯದೆ ವಿಟರಿಗಾಗಿ ಹಸಿವಿನ ಕಣ್ಣುಗಳಿಂದ
ಎದುರು ನೋಡುವ ವೇಶ್ಯೆಯರನ್ನೂ

ವಿಧವಿಧವಾದ ಸುಖದುಃಖಗಳ ದೃಶ್ಯಗಳನ್ನು ಅವಲೋಕಿಸುತ್ತಾ,
ಮಹಾಕವಿಯಂತೆ ಏನೇನೋ ಭಾವಿಸುತ್ತಾ
ನೀರಿನ ಮೇಲೆ ನಡೆದ ಕ್ರಿಸ್ತನಂತೇ
ಅವನು ಕಣ್ಣೀರಿನ ಮೇಲೆ ನಡೆದು ಹೋಗುತ್ತಾನೆ.

ಯಾವ ಜ್ವರವೋ ತಗುಲಿ ಅವನು ಬಾರದ ದಿನ
ಆಕಾಶದಲ್ಲಿ ತಾರೆಗಳು, ಬೀದಿ ನಾಯಿಗಳು
ಕತ್ತಲಲ್ಲಿ ಕಣ್ಣೀರು ಸುರಿಸುತ್ತವೆ.
ಅವನ ಜೀತ, ಭತ್ಯೆಯ ಬಗ್ಗೆ ಯಾರಿಗೂ ಗೊತ್ತಿಲ್ಲ.
ಅವನ ಬದುಕಿನ ಹಿನ್ನೆಲೆ ಕುರಿತು ಯಾರಿಗೂ ಗೊತ್ತಿಲ್ಲ.
ತನ್ನ ಹೆಂಚಿನ ಮನೆ ಬಿಟ್ಟು,
ಉಳಿದೆಲ್ಲ ಮನೆಗಳನು ಪಹರೆ ಕಾಯುತ್ತಾನೆ.
ನಮಗೆ ಸಂಬಳವಾದಂದಿನಿಂದ, ಅವನು ತನ್ನ
ಸಂಬಳದ ಚಿಲ್ಲರೆಯನ್ನು ಪೋಣಿಸುತ್ತಾ ಹೋಗುತ್ತಾನೆ.
ಒಂದು ರೂಪಾಯಿ ಬಿಲ್ಲೆಯೋ,
ಎರಡು ರೂಪಾಯಿ ನೋಟೋ ಸಾಕು
ನಮ್ರವಾಗಿ ತಲೆಬಾಗಿ 'ಅಚ್ಛಾಸಾಬ್' ಎನ್ನುತ್ತಾ
ವಿನಮ್ರವಾಗಿ ನಿಷ್ಕ್ರಮಿಸುವಾಗ
ಅವನ ಜೇಬಿನ ಬಾವಿಯೊಳಗಿಂದ
ಚಿಲ್ಲರೆ ಕಂಠಗಳು ನೋವಿನಿಂದ ಮುಲಗುತ್ತವೆ.

✧✧

ಡಾ. ಆಂಜನಪ್ಪ, ನಂ ೮೪, ೫ನೇ ಮುಖ್ಯರಸ್ತೆ, ೩ನೇ ತಿರುವು. ಭೋವಿಕಾಲೋನಿ,
ಬಸವೇಶ್ವರ ನಗರ, ಬೆಂಗಳೂರು -೭೯.

ಜುಮ್ಮತ ಕದೆಮೇ ಮೆರೆ ಶಬೊ ಗಮ-

- ವಿಜಯ್ ಕರೋಲಿ

ಮಿರ್ಜಾ ಗಾಲಿಬರ ಗಜಲನ ಛಾಯಾನುವಾದ

ನನ್ನ ಮನವು ಹೊದ್ದುಕೊಂಡ ದುಃಖಸಿಕ್ತ ಕಂಬಳಿಯ ಮೇಲೆ ದುರ್ದೈವ ಮಲಗಿದೆ

ಸುಖದ ದಿನದ ಕನಸು ಕಂಡ ಪಣತಿ ತಲದಿ, ಸುದೈವದ ತೈಲ ತೀರಿ ಬತ್ತಿ ಒಣಗಿದೆ

ರಾತ್ರಿ ಸರಿದ ಸುಳುವುಗಳಿಲ್ಲ ಬೇಗ ಬೆಳಗು ಕಂಡೇನಂದ್ರೆ ಕೋಳಿ ಕೂಡ ಕೂಗಲೊಲ್ಲ

ಕೇಳಿ ಅರಿತು ಸುಖವ ಪಡುವೆನೆನಲು ಕಿವಿಗೇಗೂ ಕೇಳಿಸೊಲ್ಲ, ಕಣ್ಣು ಸಹ ಕಾಣಿಸೊಲ್ಲ

ನಾನೇ ಪರಮನೆಂಬ ಅಹಂ ಹೊತ್ತ ದೊಡ್ಡಸ್ತಿಕೆಯ ಉಡಿಗೆಯನ್ನು ಸುರೆ; ಹರಿದಿಡ

ಪೊಳ್ಳು ಘನತೆ ಗೌರವಗಳಿಗೆ ಆತ್ಮಸಾಕ್ಷಿಯೇ ಎದುರುನಿಂತು ಸವಾಲೆತ್ತಿದೆ

ಪ್ರಿಯೆಯ ಕೊರಳಿಗೆ ನಿಜ ಮುಕ್ತಾಫಲದ ಹಾರ ಅಪೂರ್ವವಾದ ಶೋಭೆ ತರುವಂತಿದೆ

ದೇವರಾಣೆ, ನಿಜದ ವಿಷಯ ಗಾಲಿಬನಿಗೆ ಎಂದಿನಂತೆ ಹಣದ ಕೊರತೆ ತೀವ್ರ ಕಾಡಿದೆ

ನೋಟ ಕೂಟ ಹುರುಪು ಕೊಡುವ ವಹಿವಾಟ ಮಧುಮಾಲಿನಿಯರ ಥಾಟು

ಮನದ ಮಧುಬನದ ಬಾಗಿಲಿಗೆ ಕೀಲಿ ಮಧು ಶಾಲೆಯಲ್ಲ ಮದಿರೆ ಇಲ್ಲವಾಗಿದೆ

ಕೊರಡು ಕೊನರಿದಂತೆ ಮನಕೆ ಸುಳುದು ಕುಣಿದು ಕುಪ್ಪಳಿಸಿ ತಲೆಯಲಿ ಸೇರಿದೆ

ದುಡುಕ ಬೇಡೆಲ್ಲವೋ ಅದಕೆಂದೂ ನೀನು ಮನವೇ ಈ ಚದುರಂಗದ ಆಟ ಬೇರಿದೆ!

ಯಾವದೆಂತು ಒಳಿತುಕೆಡಕು ಪಾಪ ಪುಣ್ಯ ಒಂದನ್ನೂ ಬಳಸಿ ಸುತ್ತದೆ

ಅನಿಕೇತನ-೪೮

.ಆತುರ ಇಲ್ಲವಾಗಿರೆ ಕೇಳುವೆ ನಾನೆಂದಡೆ ನಿನಗೆ ಹೇಳಬೇಕಾದದ್ದು ಬಹಳಿದೆ
ರಾತ್ರಿಯ ವೇಳೆ ಉಪವನದ ಮೂಲೆಯಲ್ಲಿ ಹರಡಿದಂಥ ವನಬಾಲೆಯ ಸೆರಗು ಕಾಣ್ವದೇ!
ಅದೆಂತು ಹೇಳಿ ಅದರ ಮೇಲೆ ಹೂಗಾರನ ಕೈ ಗುರುತು ಕತ್ತಲಲ್ಲಿ ಸಾಧ್ಯವಾಗುವದೇ?
ಇಂದು ಮತ್ತೆ ನನಗೆ ಆ ನೋಟ ಮುತ್ತು ಹಾಗು ಆ ಮಂಜುಳ ಪಿಸುನುಡಿ
ಕಣ್ಣಮುಂದೆ ಅಮರ ಅಮರಾವತಿ, ಕಿವಿಗೆ ದೇವದುಂದುಭಿ ಕೇಳಿ ಬರುತಿದೆ
ಇದೆಲ್ಲ ತೊರೆದ ಜೀವಕೆ ಎಲ್ಲಿ ಸುಖದ ನಿದ್ರೆ ರಮ್ಯ ಕನಸು ನನಗೆ ಎಲ್ಲಿದೆ
ನೀವೆ ಬಂದು ನೋಡಿ ಸಂಜೆಯಲ್ಲಿ ಕುಣಿವ ಶಕ್ತಿ ಮಿಡಿವ ನೋವ ಮನಕೆ ಎಲ್ಲಿದೆ?
ವಿರಹ ಕೊಟ್ಟ ತಪ್ತ ಬರೆಯ ನೋವು ಹೃದಯಕೆ ಬಾನ ತುಂಬ ತಂಗಿದಿರ ಬೆಳಕು
ಸುಖದ ದಿನದ ಕನಸು ಕಂಡ ಪಣತಿ, ತಲದಿ, ಸುದೈವದ ತೈಲ ತೀರಿ ಬತ್ತಿ ಒಣಗಿದೆ
ಇದೆಂಥ ಸೂಜಿಗದ ವಿಚಾರ ಮನದಾಳದಿಂದ ಪುಟಿದು ಮೇಲೆ ಬಂದಿದೆ
ಗಾಲಿಬನ ಲೇಖನಿಯೇ ಸರಿ ಇದಕೆ ಗಂಧರ್ವ / ನರ್ಗಿಸಳ ರಾಗವೇ ಸರಿ ಹೊಂದಿದೆ

ಪ್ರಾಚೀನ ಕನ್ನಡ ಸಾಹಿತ್ಯೋಕ್ತ ಅಪರಾಧಗಳ ಸ್ವರೂಪ

ಡಾ. ಎಚ್.ಎಮ್. ಚನ್ನಪ್ಪಗೋಳ

ಸಾಹಿತ್ಯ ಮಾನವನ ಒಟ್ಟು ಬದುಕಿನ ಅಭಿವ್ಯಕ್ತಿ. ಅಂತೆಯೆ ಸಾಹಿತ್ಯದಲ್ಲಿ ಮಾನವನ ಸಾಂಸ್ಕೃತಿಕ ಬದುಕಿನ ವೈವಿಧ್ಯತೆ ಹಾಗೆಯೇ ವೈಪರಿತ್ಯಗಳನ್ನು ಕಾಣುತ್ತೇವೆ. ಉನ್ನತ, ಉದಾತ್ತ ಜೀವನವನ್ನು ಸಾಗಿಸುತ್ತಿರುವ ಜನರ ಜೊತೆಗೆ ಮೋಸ ವಂಚನೆಗಳಿಂದ ಬದುಕುವ ಜನರೂ ಇದ್ದಾರೆ. ಅನೇಕರು ಪರಿಸ್ಥಿತಿಯ ಒತ್ತಡಕ್ಕೆ ಸಿಲುಕಿಯೋ, ದುರಾಸೆಗೆ ಒಳಗಾಗಿಯೋ ಕೆಟ್ಟ ನಡತೆಯನ್ನೇ ಬದುಕಿನ ರೀತಿಯನ್ನಾಗಿಸಿಕೊಳ್ಳುತ್ತಾರೆ. ಅದು ವೈಯಕ್ತಿಕ ಮಟ್ಟದಲ್ಲಿ ತಾತ್ಕಾಲಿಕ ಲಾಭದ್ದಾದರೂ ಸಾಮಾಜಿಕ ಹಿನ್ನೆಲೆಯಲ್ಲಿ ಆ ಕಾರ್ಯ ಅಪಕಾರ್ಯ, ಅಕೃತ್ಯ. ಸಮಾಜಕ್ಕೆ ಹಾನಿಯುನ್ನುಂಟು ಮಾಡುವ ಕಾರ್ಯ, 'ಅಪರಾಧ'ವಾದರೆ ಇಂಥ ಅಪರಾಧಕ್ಕೊಳಗಾಗಿ ಹಾನಿಯನ್ನು ಅನುಭವಿಸಿದ ವ್ಯಕ್ತಿ ಅಥವಾ ಸಮಾಜವು ಅದನ್ನು ನಿಗ್ರಹಿಸಲು ಕೈಕೊಳ್ಳುವ ಕ್ರಮ 'ದಂಡನೆ'ಯಾಗುತ್ತದೆ.

ಇಂಥ ಅಪರಾಧಗಳ ಪ್ರಸ್ತಾಪಗಳು ಶತಮಾನಗಳುದ್ದಕ್ಕೂ ರಚನೆಗೊಳ್ಳುತ್ತ ಬಂದ ಕನ್ನಡ ಸಾಹಿತ್ಯ ಕೃತಿಗಳಲ್ಲಿ ಸಾಂದರ್ಭಿಕವಾಗಿ ಉಕ್ತವಾಗಿರುವುದು ಗಮನಾರ್ಹ. ಇಂತಹ ಅನೇಕ ಅಪರಾಧ ಕುರಿತ ಉಲ್ಲೇಖಗಳಿರುವುದನ್ನು ಕಾಣಬಹುದಾಗಿದೆ.

ಶಿವಕೋಟ್ಯಾಚಾರ್ಯನ ವಡ್ಡಾರಾಧನೆಯಲ್ಲಿ ಕಳ್ಳತನ ಮುಂತಾದ ವಿವಿಧ ರೀತಿಯ ಅಪರಾಧಗಳು ಅವುಗಳಿಗೆ ಸಂಬಂಧಿಸಿ ದಂಡನೆಗಳ ಉಲ್ಲೇಖಗಳಿವೆ. ಪಂಪನ ಆದಿಪುರಾಣದಲ್ಲಿ ವಜ್ರಜಂಘ ರಾಜನು ತನ್ನ ಪೂರ್ವ ಭವಾವಳಿಯ ಬಗ್ಗೆ

ವಿಚಾರಿಸುವಾಗ ತನ್ನ ಅನುಪಸ್ಥಿತಿಯಲ್ಲಿ ಅನ್ಯಾಯವಾಗಿ ಇಟ್ಟಿಗೆಗಳನ್ನು ಪಡೆಯಲೊಪ್ಪದ ಮಗನ ತಲೆಗೆ ಕೋಲಿನಿಂದ ರಕ್ತ ಸೋರುವಂತೆ ಹೊಡೆದು ನಂತರ ತಳವಾರರಿಗೆ ಹೆದರಿ ತಾನೆ ತನ್ನ ಕೈಕಾಲುಗಳನ್ನು ಕತ್ತರಿಸಿಕೊಳ್ಳುತ್ತಾನೆ. ಅನಂತರ ರಾಜನಿಂದಲೂ ದಂಡನೆಗೆ ಗುರಿಯಾಗುತ್ತಾನೆ'. ಹೀಗೆ ಲೋಭಕ್ಕಾಗಿ ತನ್ನ ಮಗನನ್ನೇ ಕೊಂದ ಅಪರಾಧದ ಉಲ್ಲೇಖವಿದೆ.

ಪೊನ್ನನ ಶಾಂತಿಪುರಾಣದಲ್ಲಿ ಮಹಾವ್ರತಗಳು ಎಂಬಂತೆ ಹೇಳುವ 'ಹಿಂಸೆ ಹುಸಿ ಕಳವು ರತಿ ರಾಗಂ ಸಕಳಪರಿಗ್ರಹಂ'ಗಳು ಸರ್ವಸಾಮಾನ್ಯ ಅಪರಾಧ ಕೃತ್ಯಗಳೇ ಎನಿಸಿವೆ.[೨] ಇದೇ ರೀತಿಯಾಗಿ ರನ್ನ, ದುರ್ಗಸಿಂಹ, ನಯಸೇನ, ಬ್ರಹ್ಮಶಿವಾದಿಗಳೂ ಕೂಡ ತಮ್ಮ ಕಾವ್ಯಗಳಲ್ಲಿ ಅಪರಾಧಗಳ ಉಲ್ಲೇಖ ಮಾಡಿದ್ದನ್ನು ಕಾಣುತ್ತೇವೆ.

'ಒಟ್ಟು ಮಾನವ ಮನಸ್ಸಿನ ಪ್ರವೃತ್ತಿಯನ್ನು ಲಕ್ಷಿಸಿ ಅತಿಮೋಹ, ಇಂದ್ರಿಯ ಅಥವಾ ಮನೋ ಚಾಂಚಲ್ಯ ಈ ಎರಡನ್ನು ಮಾತ್ರ ಪ್ರಮುಖ ಅಪರಾಧ ಮೂಲಗಳೆಂದು ಪರಿಗಣಿಸಬಹುದಾಗಿದೆ.[೩] ಕನ್ನಡ ಸಾಹಿತ್ಯೋಕ್ತವಾದ ಅಪರಾಧಗಳನ್ನು ಇದೇ ಹಿನ್ನೆಲೆಯಲ್ಲಿ ಪರಿಶೀಲಿಸಬಹುದಾಗಿದೆ. ಯಾವುದೇ ಸಾಹಿತ್ಯಾಭಿವ್ಯಕ್ತಿ ಭಾವ ನಿಷ್ಠ ಅಥವಾ ಮನೋನಿಷ್ಠವಾದುದು. ಇದಕ್ಕೆ ಕನ್ನಡ ಸಾಹಿತ್ಯವೂ ಹೊರತಾಗಲಾರದು. ಈ ನಿಟ್ಟಿನಿಂದ ಅವಲೋಕಿಸಿದಾಗ ಕನ್ನಡ ಸಾಹಿತ್ಯದಲ್ಲಿ ಮೋಹ ಮೂಲವಾದ ಅಪರಾಧಗಳಲ್ಲಿ ಕಳ್ಳತನ, ಕೊಲೆ, ಲಂಚ, ವಂಚನೆಗಳು; ಮನೋ ಅಥವಾ ಇಂದ್ರಿಯ ಚಾಂಚಲ್ಯ ಮೂಲ ಅಪರಾಧಗಳಲ್ಲಿ ಸ್ತ್ರೀ ಜಾರತನ, ಪುರುಷವ್ಯಭಿಚಾರ ಮುಂತಾದವುಗಳ ಉಲ್ಲೇಖಗಳು ಕಾಣಸಿಗುತ್ತವೆ.

ಈ ಸಂದರ್ಭದಲ್ಲಿ ಮೋಹಮೂಲ ಅಪರಾಧಗಳನ್ನು ಅದರಲ್ಲೂ ವಿಶೇಷವಾಗಿ ಕಳ್ಳತನದ ಅಪರಾಧಕ್ಕೆ ಸಂಬಂಧಿಸಿದ ಉಲ್ಲೇಖಗಳನಷ್ಟೇ ಈ ಲೇಖನಕ್ಕೆ ಸೀಮಿತಗೊಳಿಸಲಾಗಿದೆ.

ಮೋಹ ಮೂಲ ಅಪರಾಧ : ಕಳ್ಳತನ

ಕನ್ನಡ ಸಾಹಿತ್ಯದ ಆರಂಭದಿಂದಲೂ ಕಳ್ಳತನಕ್ಕೆ ಸಂಬಂಧಿಸಿದ ವಿವಿಧ ಬಗೆಯ ಉಲ್ಲೇಖಗಳು ಕಂಡುಬರುತ್ತವೆ. ಕಳ್ಳತನ ಅಥವಾ ಚೌರ್ಯಕರ್ಮವೊಂದು ನಿಂದ್ಯ ಮತ್ತು ದಂಡನಾರ್ಹ ಅಪರಾಧ. ಪ್ರಾಚೀನ ಭಾರತದಲ್ಲಿ ಇದು ನಿಂದನಾರ್ಹ ಕಾರ್ಯವಾಗಿದ್ದರೂ ಕೂಡ ಅದನ್ನೊಂದು ಕಲೆಯಾಗಿ ಪರಿಗಣಿಸಿದ್ದಿದೆ. ಉದ್ದೇಶಭೇದದಿಂದ ಪ್ರಶಂಸನಾರ್ಹವಾಗಬಹುದಾದ ಈ ಚೌರ್ಯಕರ್ಮವನ್ನು ಪ್ರಾಚೀನರು ೬೪ ಕಲೆಗಳಲ್ಲಿ ಒಂದೆಂದು ಪರಿಗಣಿಸಿದಂತಿದೆ. ಚೌರ್ಯಶಾಸ್ತ್ರಕ್ಕೆ "ಕರಪಟಶಾಸ್ತ್ರ" ಎಂಬ ಇನ್ನೊಂದು ಹೆಸರಿದ್ದಿತು. ಚೌರ್ಯಶಾಸ್ತ್ರದೊಂದಿಗೆ ಚೋರರನ್ನು ಪತ್ತೆಮಾಡುವ "ಸುರಖಿಶಾಸ್ತ್ರ" ಒಂದು ಪ್ರಸಿದ್ಧವಿದ್ದಿತು ಎನ್ನಲಾಗಿದೆ.[೪]

ಕನ್ನಡದ ಪ್ರಾಚೀನ ಗದ್ಯಕೃತಿ ವಡ್ಡಾರಾಧನೆಯ "ವಿದ್ಯುಚ್ಚೋರನೆಂಬ ರಿಷಿಯ ಕಥೆ'ಯಲ್ಲಿ ಬರುವ ಕಳ್ಳತನದ ಉಲ್ಲೇಖ ಅನೇಕ ಕುತೂಹಲಕಾರಿ ಅಂಶಗಳನ್ನು ಒಳಗೊಂಡಿದೆ. ಆ ಕಥೆಯಲ್ಲಿನ ವಿದ್ಯುಚ್ಚೋರನೆಂಬ ಅರಸುಪುತ್ರ ಕಳ್ಳತನದಲ್ಲಿ ಪ್ರವೀಣ. ಆತ ಮತ್ತು ಆ ಊರಿನ ತಳವಾರನ ಮಗನಾದ ಯಮದಂಡ ಬಾಲ್ಯಸ್ನೇಹಿತರು.

ಇಬ್ಬರೂ ಸಿದ್ಧಾರ್ಥ ಎಂಬ ಗುರುಗಳ ಬಳಿ ಶಾಸ್ತ್ರ ಸಾಹಿತ್ಯಾದಿ ವಿಷಯಗಳೊಂದಿಗೆ ಯಮದಂಡನು ತಳಾರನ ಮಗನಪ್ಪುದಱಿಂ ತನಗೆ ತಕ್ಕ ಕಳ್ಳರನಾರಯ್ವ ತೆಱನಂ ಪೇೞ್ವ 'ಸುರಖ' ಶಾಸ್ತ್ರವನ್ನು ವಿಶೇಷವಾಗಿ ಅಧ್ಯಯನ ಮಾಡಿದನು. ವಿದ್ಯುಚ್ಚೋರನು ಕಳ್ಳತನವನ್ನು ಕಲಿಸುವ "ಕರಪಟಶಾಸ್ತ್ರ"ವನ್ನು ಕಲಿತನು. ಒಂದು ದಿನ ಈರ್ವರು ಊರ ಬಳಿಯ ಉದ್ಯಾನದಲ್ಲಿ ಆಡುತ್ತಿರುವಾಗ "ಆಲೋಕನ ವಿದ್ಯೆ" ಬಲ್ಲವನಾಗಿದ್ದ ಯಮದಂಡನು ಅದೃಶ್ಯನಾದನು. ಹುಡುಕಿ ಹುಡುಕಿ ಬೇಸತ್ತ ವಿದ್ಯುಚ್ಚೋರನು ಮಗನೇ ನೀನು ತಳವಾರನಾದಂದು ನಾನೇ ನಿನಗೆ ಶಿಕ್ಷೆಯನ್ನು ಕೊಡಿಸುವೆ', ಎಂದು ಪಂಥ ಮಾಡಿದನು. ಯಮದಂಡನು ಕೂಡ 'ಆಗ ನೀನು ಒಂದು ವೇಳೆ ಕಳುವು ಮಾಡಿದರೆ ಹಿಡಿದು ಕಟ್ಟಿ ಶಿಕ್ಷೆ ಕೊಡಿಸುವೆನು' ಎಂದು ಪ್ರತಿ ಶಪಥ ಮಾಡಿದನು. ಕಾಲಾಂತರದಲ್ಲಿ ವಿದ್ಯೋಚ್ಚೋರನು ಅರಸನಾದನು ಯಮದಂಡ ತಳವಾರನಾದನು. ಪೂರ್ವ ಪ್ರತಿಜ್ಞೆ ನೆನೆದ ಯಮದಂಡನು ಊರು ಬಿಟ್ಟು ಬೇರೊಬ್ಬ ಅರಸನಲ್ಲಿ ತಳವಾರನೆಂದು ಆಶ್ರಯ ಪಡೆದನು. ಗೂಢಚಾರರಿಂದ ವಿಷಯ ಅರಿತ ವಿದ್ಯುಚೋರನು ಮಂತ್ರಿಗೆ ರಾಜ್ಯಭಾರವನ್ನು ಒಪ್ಪಿಸಿ ಯಮದಂಡನಿರುವ ಊರಿಗೆ ಬಂದು ತನ್ನ ಪಂಥ ಪೂರ್ತಿಗಾಗಿ ತಾನು ಕಲಿತ ಜಂಬಿನಿ (ಪ್ರತ್ಯಕ್ಷ ಮತ್ತು ಮಾಯವಾಗುವುದು), ಸ್ತಂಬಿನಿ (ಗತಿನಿರೋದ), ಮೋಹಿನಿ (ಮೂರ್ಛೆ ಉಂಟುಮಾಡುವುದು), ಸರ್ಪಿನಿ (ವಿಷಪ್ರಯೋಗ ಅಥವಾ ಚರ್ಮರೋಗ ಉಂಟು ಮಾಡುವುದು) ತಾಳೋದ್ಘಾಟಿನಿ (ಬೀಗ ತೆಗೆಯುವುದು) ಮಂತ್ರ ಪ್ರಯೋಗ, ಚೂರ್ಣ (ಪುಡಿ ಎರಚುವುದು), ಯೋಗ (ವಂಚನೆ, ಇಂದ್ರಜಾಲ, ಗುಪ್ತಚಾರತ್ವ ಮುಂತಾದವು), ಗುಳಿಗೆ, ಅಂಜನ (ಕಣ್ಣಿಗೆ ಹಚ್ಚುವ ಲೇಪನ) ಇವೇ ಮೊದಲಾದ ತಷ್ಕರ ವಿದ್ಯೆಗಳನ್ನು ಪ್ರಯೋಗಿಸಿ ರಾತ್ರಿಯಲ್ಲಿ ಕಳವು ಮಾಡಿ ಕದ್ದ ವಸ್ತುಗಳನ್ನೆಲ್ಲ ಪಟ್ಟಣದಿಂದ ದೂರದಲ್ಲಿರುವ ಪರ್ವತದ ಗುಹೆಯಲ್ಲಿಟ್ಟು ದೊಡ್ಡ ಬಂಡೆಗಲ್ಲನ್ನು ಮುಚ್ಚಿಬಿಡುತ್ತಿದ್ದನು. ಹಗಲಿನಲ್ಲಿ ಮಾತ್ರ ಅಂಜನ ಹಚ್ಚಿಕೊಂಡು ತೊನ್ನು ರೋಗದವನಾಗಿ ಕಾಣಿಸಿಕೊಂಡು ಭಿಕ್ಷೆ ಬೇಡುತ್ತಿದ್ದನು. ರಾತ್ರಿಯಾಗುವ ಮೊದಲು ಪ್ರತ್ಯಂಜನ ಹಚ್ಚಿಕೊಂಡು ನಿಜ ರೂಪ ತಾಳಿ, ಒಳ್ಳೆಯ ವಸ್ತ್ರಗಳನ್ನುಟ್ಟು ಮೈಗೆ ಸುಗಂಧ ಲೇಪನ ಮಾಡಿಕೊಂಡು ಹೂವನ್ನು ಮುಡಿದು ಕರ್ಪೂರ ಬೆರೆತ ತಾಂಬೂಲ ತಿನ್ನುತ್ತಾ ಸೂಳೆಯರ ಬೀದಿಗಳಲ್ಲಿ ಸುತ್ತಾಡಿ, ತನ್ನನ್ನು ಮೆರೆಯಿಸುತ್ತಾ ತನ್ನ ಮನಸ್ಸಿಗೆ ಬಂದ, ಶ್ರೇಷ್ಠರಾದ ಹೆಂಗಸರಲ್ಲಿ ಸುಖಭೋಗಗಳಿಗಾಗಿ ಹೊನ್ನನ್ನುಕೊಟ್ಟು ಅನುಭವಿಸುತ್ತಾ ಯಾರೂ ತಿಳಿಯದ ಹಾಗೆ ಇರುತ್ತಿದ್ದನು.

ವಿದ್ಯುಚ್ಚೋರನು ಒಮ್ಮೆ ರಾಜನಿಗೆ ವಂಶಪಾರಂಪರವಾಗಿ ಬಂದ, ರಾಜನು ಮಲಗುವ ಕೋಣೆಯ ಭದ್ರವಾದ ಪೆಟ್ಟಿಗೆಯಲ್ಲಿ ಇದ್ದ 'ಸರ್ವರುಜೋಪಹಾರ' ವನ್ನು ಕಣ್ಣಿಗೆ ಅಂಜನ ಹಚ್ಚಿಕೊಂಡು, ಯಾರಿಗೂ ಕಾಣದ ಹಾಗೆ ಚಾಣಾಕ್ಷತನದಿಂದ ಕದ್ದನು. ಹಾರವನ್ನು ಕಾಣದ ರಾಜನು ಗಾಬರಿಯಾಗಿ ಊರಿನ ತಳವಾರನಾದ ಯಮದಂಡನನ್ನು ಕರೆಯಿಸಿ "ಈ ಹಿಂದೆ ಅನೇಕ ದ್ರವ್ಯ ಕದ್ದ ಕಳ್ಳನನ್ನು ಬಂದಿಸದ ಕಾರಣದಿಂದಾಗಿ ಇಂದು ನಮ್ಮ ಹಾರವನ್ನು ಕದ್ದೊಯ್ದಿದ್ದಾನೆ. ಕಳ್ಳನನ್ನು ಹಿಡಿಯಬೇಕು ಇಲ್ಲವಾದರೆ ಕಳ್ಳನಿಗೆ ತಕ್ಕುದಾದ ಶಿಕ್ಷೆಯನ್ನು ನಿನಗೆ ಮಾಡುತ್ತೇನೆ' ಎನ್ನುತ್ತಾನೆ.

ವಡ್ಡಾರಾಧನೆಯ ಸುಕುಮಾರ ಸ್ವಾಮಿಯ ಕಥೆಯಲ್ಲಿಯೂ ಕಳ್ಳತನದ ಅನೇಕ ಉಲ್ಲೆಖಗಳಿರುವುದನ್ನು ಕಾಣಬಹುದಾಗಿದೆ. ಅಗ್ನಿಭೂತಿಯ ಸೋದರ ವಾಯುಭೂತಿಯು ತಾನು ಮಾಡಿದ ಗುರುನಿಂದಾ ಪಾಪದಿಂದಾಗಿ ವಿವಿಧ ಹೀನ ಭವಾವಳಿಗಳನ್ನು ದಾಟಿ ಕೊನೆಗೆ ಸೋಮಶರ್ಮನೆಂಬ ಬ್ರಾಹ್ಮಣನಿಗೆ ನಾಗಶ್ರೀ ಎಂಬ ಮಗಳಾಗಿ ಹುಟ್ಟಿರುತ್ತಾನೆ. ಸೂರ್ಯಮಿತ್ರಚಾರ್ಯರು ಆಕೆಯ ಜನ್ಮಾಂತರಗಳ ಕಥೆ ಹೇಳಿ ಜೈನವ್ರತಗಳನ್ನು ಆಚರಿಸಲು ಹೇಳುತ್ತಾರೆ. ನಾಗಶ್ರೀಯ ತಂದೆ ಅವಳನ್ನು ನಿಂದಿಸಿ 'ಜೈನ ವ್ರತವನ್ನು ಸ್ವೀಕರಿಸಬಾರದು ಮರಳಿ ಹೋಗಿ ಬಿಟ್ಟು ಬಾ' ಎಂದು ಹೇಳಿ ಮಗಳನ್ನು ಕರೆದುಕೊಂಡು ಹೋಗುತ್ತಿರುವ ದಾರಿಯಲ್ಲಿ ಕಂಡು ಬರುವ ಅನೇಕ ಘಟನೆಗಳು ಉಪಕಥೆಗಳಾಗಿ ಬರುತ್ತವೆ. ಆ ಉಪಕಥೆಗಳಲ್ಲಿ ಕಳ್ಳತನದ ಉಲ್ಲೇಖಗಳಿವೆ.

ದಾರಿಯಲ್ಲಿ ಒಬ್ಬ ವ್ಯಕ್ತಿಯು ಕೈಮುರಿಯುವಂತೆ ಹಿಂದೆ ಕಟ್ಟಿ ತಮಟೆ ಬಡಿಯುತ್ತ ಕೊಲ್ಲಲು ಕರೆದೊಯ್ಯುತ್ತಿದ್ದ ದೃಶ್ಯ ಕಂಡ ನಾಗಶ್ರೀ, ತಂದೆಗೆ ಆತನ ಶಿಕ್ಷೆಗೆ ಕಾರಣ ಕೇಳಲು ಆತನು ಈ ಪಟ್ಟಣದ ಶ್ರೀಮಂತ ಇಂದ್ರದತ್ತನ ಮಗ ವರಸೇನ, ಅವನು ಮಿತ್ರನಾದ ಅಕ್ಷದೂತನೊಡನೆ ಜೂಜಾಡಿ ಸೋತು ಜೂಜುಕೊಡದೆ ರಾಜಾಜ್ಞೆ ಮೀರಿ ನಿರಪರಾಧಿಯಾದ ತನ್ನ ಮಿತ್ರ ಅಕ್ಷದೂತನನ್ನು ಕೊಂದನು, ಅದಕ್ಕಾಗಿ ಈ ಶಿಕ್ಷೆ ಎಂಬುದನ್ನು ತಿಳಿಸುತ್ತಾನೆ.

ಮುಂದೆ ಇನ್ನೊಬ್ಬನಿಗೆ ಮರಣದಂಡನೆ ಶಿಕ್ಷೆ ಆಗಿರುವುದನ್ನು ಕಂಡ ನಾಗಶ್ರೀ ಅದಕ್ಕೆ ಕಾರಣವನ್ನು ತಂದೆಗೆ ಕೇಳಿದಾಗ 'ವೈನಿಕನೆಂಬ ಒಬ್ಬ ವ್ಯಕ್ತಿಯು ಕನ್ಯೆ, ಬಂಟ, ವೃದ್ಧಸ್ತ್ರೀ ಹೀಗೆ ಮೂವರ ಕಥೆಗಳಿರುವ ಪಟವನ್ನು ತೋರಿಸಿ, ಅವುಗಳ ಕಥೆ ಹೇಳುತ್ತಾ ಭತ್ತ ಮಾರಲು ಬಂದ ಜನರ ಲಕ್ಷ್ಯವನ್ನು ತನ್ನೆಡೆಗೆ ಸೆಳೆದುಕೊಂಡಾಗ ಇವನ ಸಹಾಯಕನೊಬ್ಬನು ಭತ್ತವನ್ನು ಮೋಸದಿಂದ ಅಳೆದು, ಇನ್ನೊಬ್ಬನು ನೆಲಮನೆಯಲ್ಲಿದ್ದು ಹೆಚ್ಚಿನ ಭತ್ತ ಕದಿಯುತ್ತಿದ್ದುದಕ್ಕೆ ಅವರಿಗೆ ಮರಣದಂಡನೆಯ ಶಿಕ್ಷೆ ವಿಧಿಸಿ ಒಡಿದೊಯ್ಯುತ್ತಲಿರುವರು' ಎಂದನು.

ಆತ ಹೇಳುವ ಮೂರು ಚಿತ್ರಪಟದ ಕಥೆಗಳಲ್ಲೂ ಕಳ್ಳತನದ ವಿಚಾರಗಳು ಬಂದಿವೆ. ಅಂದರೆ ಕನ್ಯೆಯ ಕಥೆಯಲ್ಲಿ ಕೌಶಂಬಿಯೆಂಬ ನಗರದ ಸುಮಿತ್ರನೆಂಬ ಶೆಟ್ಟಿ ವ್ಯಾಪಾರಿ, ಕೋಟಿಚಿನ್ನದೊಡೆಯ, ಆತನ ಮಗ ಹಾವು ಕಚ್ಚಿ ಸಾಯಲು ಶವಸಂಸ್ಕಾರಕ್ಕಾಗಿ ಸ್ಮಶಾನಕ್ಕೆ ಒಯ್ಯಲು ರಾತ್ರಿಯಾಗುತ್ತದೆ. ಅಲ್ಲಿ ಗರುಢನಾಭಿಯೆಂಬ ಮಂತ್ರವಾದಿಯು ಆ ಮಗನನ್ನು ನಾಳೆ ಅಭಿಮಂತ್ರಿಸಿ ಜೀವಂತ ಮಾಡುವುದಾಗಿ ಹೇಳಿ ಹೋಗುತ್ತಾನೆ. ಆ ಸುಮಿತ್ರಶೆಟ್ಟಿಯು ನಾಲ್ವರು ಸುಭಟರನ್ನು ಎಚ್ಚರವಾಗಿದ್ದು ಕಾಯಲು ಹೇಳಿ ಹೋಗುತ್ತಾನೆ. ಮುಂಜಾನೆ ಮಂತ್ರವಾದಿಯು ಮಗನನ್ನು ಬದುಕಿಸಿದ ಮೇಲೆ ಶೆಟ್ಟಿಯು ಸಾವಿರ ದಿನಾರದ ಹಣಗಳ ನಾಲ್ಕು ಪೆಟ್ಟಿಗೆಗಳನ್ನು ಒಗೆಯುತ್ತಾನೆ. ಒಬ್ಬನು ಎಲ್ಲವನ್ನು ಕದ್ದುಕೊಂಡು ಹಣ ಸಿಕ್ಕಿಲ್ಲವೆಂದು ಸುಳ್ಳು ಹೇಳುತ್ತಾನೆ. ಆಗ ಶೆಟ್ಟಿಯು ರಾಜನಿಗೆ ತನ್ನ ಹಣವು ಕಳುವಾದ ಬಗ್ಗೆ ದೂರು ಕೊಡುತ್ತಾನೆ. ಆಗ ರಾಜನು ಪಟ್ಟಣದ ಕಾವಲುಗಾರನಾದ ತಳವಾರನನ್ನು ಕರೆದು 'ಬೇಗನೆ ಕಳ್ಳನನ್ನು ಹಿಡಿ, ಇಲ್ಲದೆ ಹೋದರೆ ಕಳ್ಳನಿಗಾಗುವ ದಂಡನೆ ನಿನಗಾಗುತ್ತದೆ' ಎಂದು ಹೇಳುತ್ತಾನೆ. ತಳವಾರನು ಕಳ್ಳನನ್ನು ಎಲ್ಲಡೆಗೂ ಹುಡುಕುತ್ತಾನೆ. ಸಿಕ್ಕದಿರಲು ಶೆಟ್ಟಿಯ ಸುಭಟರನ್ನು

ತನ್ನ ಮನೆಗೆ ಕರೆದುಕೊಂಡು ಬಂದು ಮುಖಬಾಡಿ ಕುಳಿತಿರಲಾಗಿ, ಮಗಳು ಸುಮತಿ ತಂದೆಯ ಚಿಂತೆ ಅರಿತು ನಾಳೆಯೊಳಗೆ ಕಳ್ಳನನ್ನು ಹಣ ಸಮೇತ ನಿಮಗೊಪ್ಪಿಸುವೆನೆಂದು ತಂದೆಗೆ ಗುಟ್ಟಾಗಿ ಭರವಸೆಯನ್ನು ನೀಡುತ್ತಾಳೆ. ಅದೇ ರಾತ್ರಿ ಆ ಸುಭಟರನ್ನು ಪರೀಕ್ಷಿಸಲು ರಾತ್ರಿ ಅವರೊಂದಿಗೆ ಇದ್ದು ಅವರಿಗೆ ಕಳ್ಳರ ಕಳ್ಳತನದ ಪ್ರಸ್ತಾಪವಿರುವ ಒಂದು ಕಥೆಯನ್ನು ಹೇಳುತ್ತಾಳೆ. ಆ ಮೂಲಕ ಕಳ್ಳನನ್ನು ಗುರುತಿಸುತ್ತಾಳೆ.

ರಾತ್ರಿ ಸುಭಟರಿಗೆ ನಿದ್ದೆ ಹತ್ತಿದಾಗ ನಿಧಾನಕ್ಕೆ ಬಂದು ಗುರುತಿಸಿದ ಕಳ್ಳನನ್ನು ಎಬ್ಬಿಸಿ ಏಕಾಂತಕ್ಕೆ ಕರೆದೊಯ್ದು ನಾನು ನಿನ್ನನ್ನು ಮೆಚ್ಚಿದ್ದೇನೆ. 'ನಿನಗೆ ಆಭರಣ, ತೊಡಗೆ, ಉಡುಗೆ ಮಾಡಿಸಿ ಕೊಡಲು ಸಾಧ್ಯವಾದರೆ ನಿನ್ನನ್ನು ಮದುವೆಯಾಗಿ ನಿನ್ನೊಂದಿಗೆ ಬರುವೆ'ನೆಂದು ನಂಬುವಂತೆ ನುಡಿದಾಗ ಆತನು ಸಾವಿರ ದಿನಾರದ ಪೊಟ್ಟಳಿಗೆಯನ್ನು ತನ್ನ ಮುಂದಿನ ಅಪಾಯದ ಅರಿವಿಲ್ಲದೆಯೇ ತೆಗೆದು ಕೊಟ್ಟಾಗ ಆಕೆ 'ನಿನಗೆ ಮತ್ತು ನನಗೆ ಉಡುಗೆ, ತೊಡುಗೆ ಮಾಡಿಸಿ ಕೊಳ್ಳೋಣ ಹೋಗೋಣ ನಡೆ, ಎಂದು ತನ್ನ ತಂದೆ ನಿದ್ರೆಮಾಡುತ್ತಿರುವಲ್ಲಿಗೆ ಕರೆತಂದು ಸೂಕ್ಷ್ಮವಾಗಿ ತಂದೆಯನ್ನು ಎಬ್ಬಿಸಿ ಕಳ್ಳನನ್ನು ಆತನಿಗೆ ಒಪ್ಪಿಸುತ್ತಾಳೆ. ಆಗ ಆತ ಕಳ್ಳನನ್ನು ಗುರುತಿಸಿ ರಾಜನಿಗೆ ಒಯ್ದುಕೊಡುತ್ತಾನೆ.

ಈ ಕಥೆಯಲ್ಲಿ ಕುರಿ ಕದ್ದು ತಿನ್ನುವ, ಸಿಕ್ಕ ದಿನಾರಗಳನ್ನು ಕಬಳಿಸಿ ಬಿಡುವ, ದಾರಿಗಳ್ಳರ ಪ್ರಸ್ತಾಪವಿದೆ. ಹಾಗೆಯೇ, ಕಳುವಾದ ವ್ಯಕ್ತಿಗಳು ಕಳ್ಳತನದ ಬಗ್ಗೆ ರಾಜನಿಗೆ ದೂರು ಕೊಡುವ, ರಾಜನು ಆ ಕಾರ್ಯವನ್ನು ತಳವಾರನಿಗೆ ಒಪ್ಪಿಸುವ, ಒಂದು ವೇಳೆ ತಳವಾರನು ಕಳ್ಳನನ್ನು ಹಿಡಿಯದೆ ಹೋದರೆ ಕಳ್ಳನಿಗಾಗುವ ಶಿಕ್ಷೆಯನ್ನು ಅನುಭವಿಸಬೇಕಾಗುತ್ತಿದ್ದ ಸಂಗತಿಗಳು ಉಕ್ತವಾಗಿವೆ. ತಳವಾರನು ಕಳ್ಳನನ್ನು ಹಿಡಿಯುವಲ್ಲಿ ವಿಫಲವಾದಾಗ ಅವನ ಬಂಧುಗಳು ಕಳ್ಳನನ್ನು ಹಿಡಿಯಲು ಸಹಾಯ ಮಾಡುತ್ತಿರುವುದು ಕೂಡ ಗಮನಾರ್ಹ. ಅಲ್ಲದೆ, ರಾತ್ರಿಯ ವೇಳೆ ಕಳ್ಳರ ಹಾಗೂ ತಳವಾರರ ಕಾಟ ತಪ್ಪಿದಲ್ಲ ಎಂಬ ಅಂಶವು ಸ್ಪಷ್ಟವಾಗುತ್ತದೆ.

ಇದೇ ಕಥೆಯ ಮುದುಕಿಯ ಉಪ ಕಥೆಯಲ್ಲಿಯೂ ಕಳ್ಳರ ವಿವರವಾದ ಪ್ರಸ್ತಾಪ ಬಂದು, ಆ ಮುದುಕಿಯು ಕಳ್ಳರನ್ನೇ ತನ್ನ ಅಧೀನದಲ್ಲಿಟ್ಟುಕೊಂಡ ಉಲ್ಲೇಖ ಬರುತ್ತದೆ.

ಇದೇ ಕಥೆಯಲ್ಲಿ ಅರಸನ ಗೋವುಗಳನ್ನು ಕಾಯುವ ವೀರಪೂರ್ಣನೆಂಬಾತನು, ಅತಿ ಆಸೆಯಿಂದ ಊರ ಜನರ, ಸೂಳೆಯರ ರಾಣಿಯರ ಕೊನೆಗೆ ಪಟ್ಟದ ರಾಣಿಯ ಗೋವುಗಳನ್ನೇ ಕದ್ದು ಅರಸನಿಂದ ಮರಣದಂಡನೆಯನ್ನು ವಿಧಿಸಿದ್ದು ತಿಳಿಯುತ್ತದೆ.

ಈ ಭಾಗದಲ್ಲಿಯೂ ಕೂಡ ದಾರಿಗಳ್ಳರ, ಕುರಿಯುನ್ನು ಕದ್ದು ತಂದು ಸ್ಮಶಾನದಲ್ಲಿ ಬೇಯಿಸಿ ತಿನ್ನುತ್ತಿದ್ದ ಹಾಗೆಯೆ ಕನ್ನಕೊರೆಯುವ ವಿಚಾರ ಹಾಗೂ ಗೋವುಗಳ್ಳರ ಪ್ರಸ್ತಾಪ ಬರುತ್ತದೆ. ಅಲ್ಲದೆ ಕಳ್ಳರು ಕೂಡ ಅನ್ಯರಿಂದ ಮೋಸಹೋಗುತ್ತಿದ್ದ ವಿಚಾರವನ್ನು ಇಲ್ಲಿ ತಿಳಿಯಬಹುದಾಗಿದೆ.

ವಡ್ಡಾರಾಧನೆಯ ಭದ್ರಬಾಹುಭಟಾರರ ಕಥೆಯಲ್ಲಿ ದಾರಿ ಕಳ್ಳರು ಅಡವಿ ಮಾರ್ಗದಲ್ಲಿ ವ್ಯಾಪಾರಿಗಳ ಬಂಡಿಗಳನ್ನು ಅಡ್ಡಗಟ್ಟಿ ಮೇಲೆ ಬಿದ್ದು ಇರಿದು, ಕೆಲವರನ್ನು ಓಡಿಸಿ ಮಾರಾಟ ಮಾಡುವ ಸರಂಜಾಮು ಸಹಿತ ಬಂಡಿ ಎತ್ತುಗಳನ್ನು ವಶಪಡಿಸಿಕೊಂಡುಹೋದ ಪ್ರಸ್ತಾಪ ಬರುತ್ತದೆ.

ಪಂಪನ ಆದಿಪುರಾಣದಲ್ಲಿ ವಜ್ರಜಂಘನು ಮುನಿಗಳ ಹತ್ತಿರ ಬಂದು ತನ್ನ ಹಾಗೂ ತನ್ನ ಮಕ್ಕಳಾಗಿ ಹುಟ್ಟಲಿರುವ ಭರತ, ಬಾಹುಬಲಿ, ವೃಷಭಸೇನ, ಅನಂತವೀರ್ಯರ ವೃತ್ತಾಂತವನ್ನು ಕೇಳಿ ಕೊನೆಗೆ ಅಲ್ಲಿರುವ ಹುಲಿ, ಹಂದಿ, ಕೋಡಗ ಹಾಗೂ ಮುಂಗುಸಿಗಳ ಭವಾವಳಿಯನ್ನು ತಿಳಿಸಿರಿ ಎಂದಾಗ ಗಗನಚಾರಣರು.–

"ಈ ಹುಲಿ ಹಿಂದಿನ ಜನ್ಮದಲ್ಲಿ ಉಗ್ರಸೇನನು ಕ್ರೋಧದಿಂದ ತಿರ್ಯಗಾಯುಷ್ಯ ಪಡೆದನು. ಅಂದು ಈತನು ಅರಸನ ಉಗ್ರಾಣದ ಸಾಮಗ್ರಿಗಳ ರಕ್ಷಕರನ್ನು ವಂಚಿಸಿ ಕದ್ದು ಒಳಗೊಳಗೆ ಸುಳಿದಾಡುತ್ತಿದ್ದುದನ್ನರಿತು ರಾಜನು ಕಳ್ಳನನ್ನು ಹಿಡಿದು ತರಲು ಆಜ್ಞಾಪಿಸಿದನು. ಅನಂತರ ರಾಜನು ಕೆನ್ನೆಗೆ ಹೊಡೆದು, ಕಾಲಲೊದೆದು ಕೊಲ್ಲಿಸುತ್ತಾನೆ. ಎಂಬ ವೃತ್ತಾಂತದಲ್ಲಿ ಅರಸನ ಉಗ್ರಾಣದಲ್ಲಿಯೇ ವಂಚಿಸಿ ಕದಿಯುತ್ತಿದ್ದ ಕಳ್ಳತನ ಪ್ರಸ್ತಾಪವಿದೆ.[೬]

ಪೊನ್ನ ಕವಿಯು ಶಾಂತಿಪುರಾಣದಲ್ಲಿ "ಬೆಂಬಲಮಿಲ್ಲದ ಕನ್ನಗಳ್ಳನಂತೆ ಚೋವಂಬೊತ್ತಿರ್ಪಿನಂ'[೭] ಎಂದು ಹೇಳಲಾದ ಮಾತು ಕಳ್ಳರು ಒಬ್ಬಂಟಿಗರಾಗಿ ಕನ್ನಕೊರೆದು ಕಳ್ಳತನ ಮಾಡುತ್ತಿರಲ್ಲಿಲ್ಲವೆಂದು ಬಹುಶಃ ಗುಂಪಾಗಿ ಹೋಗುತ್ತಿದ್ದರೆಂಬುದನ್ನು ತಿಳಿಯಪಡಿಸುತ್ತದೆ.

ಚಾವುಂಡರಾಯ ಪುರಾಣದಲ್ಲಿ ವಿದ್ಯುದ್ವೇಗನೆಂಬ ಕಳ್ಳನು ಕಳ್ಳತನ ಮಾಡಿ ಸಿಕ್ಕಿ ಬಿದ್ದಾಗ ಆತನನ್ನು ರಾಜಪುರೋಹಿತರು ಹಿಡಿದು ಶಿಕ್ಷಿಸಿ ಕೇಳಲಾಗಿ ವಿಮತಿಯೆಂಬ ಹೆಗ್ಗಡೆಯ ಕೈಯಲ್ಲಿ ಕದ್ದ ಹಣವನ್ನು ಕೊಟ್ಟಿದ್ದಾಗಿ ಹೇಳುವುದು ರಾಜನ ಆಸ್ಥಾನದಲ್ಲಿರುವ ಹೆಗ್ಗಡೆಗಳು ಕಳ್ಳರೊಂದಿಗೆ ಶಾಮಿಲಾಗಿ ಅವರು ಕದ್ದದ್ದರಲ್ಲಿ ಪಾಲುದಾರರಾಗಿ ಕಳ್ಳತನ ಪ್ರಚೋದಿಸುತ್ತಿದ್ದರೆಂಬ ಸಂಗತಿ ಗಮನಾರ್ಹವಾಗುತ್ತದೆ.

ಇದೇ ಕೃತಿಯ ನೇಮಿ ಪುರಾಣಂ ಭಾಗದಲ್ಲಿ '.... ಅಲ್ಲಿ ಸುರೇಂದ್ರದತ್ತನೆಂಬ ಪರದಂ ಸಕಳಾಗಮ ಪಾರಗಂ ಸದ್ಧರ್ಮವತ್ಸಳಂ ನಿತ್ಯಪೂಜೆಯೊಳ್ಪತ್ತುಷ್ಟಮಿಯೊಳಿಪ್ಪತ್ತ ಮವಾಸ್ಯೆಯೊಳ್ ನಾಲ್ವತ್ತು ಪುಣ್ಣಮಿಯೊಳ್ ಎಣ್ಬತ್ತುಂಯೆಂಯ್ದು ಗದ್ಯಾಣ ಪೊನ್ನನರ್ಹತ್ಪೂಜೆಗಂ ಪಾತ್ರದಾನಕ್ಕಂ ಕೊಟ್ಟು ಶೀಲೋಪವಾಸಂಗಳೊಳ್ ನೆಗಟ್ದು ಧರ್ಮಪರನೆಂದೆಲ್ಲರ್ಗಂ ಸ್ತುತ್ಯನಾಗಿರ್ದೊಂದು ದಿವಸಂ ಪರದು ಪೋಗಲ್ ಬಗೆದು ತನ್ನ ಕೆಳೆಯಂ ರುದ್ರದತ್ತನೆಂಬ ಪಾರ್ವನಂ ಕರೆದು ದೇವ ಪೂಜಾವ್ಯಯಕ್ಕೆ ಪನ್ನೆರಡು ವರ್ಷದ ಪೊನ್ನಂ ಕೊಟ್ಟೆನ್ನಬರ್ಪನ್ನೆಗಂ ಅರ್ಹತ್ಪೂಜೆಗಂ ಪಾತ್ರದಾನಕ್ಕಂ ಮಾಟ್ಪುದೆಂದು ಪೋದೊಡಾ ಪಾರ್ವನುಂ ಸ್ತ್ರೀ ದ್ಯೂತ ವ್ಯಸನಾದಿಗಳಿನಾ ಪೊನ್ನೆಲ್ಲಮುಂ ತವಿಸಿ ಕಳಲ್ತಗುಟ್ಟಡೊಂದು ದಿವಸಮರಸನ ತಳಾಱಂ ಸೇನಕನೊಂಬೊನಿರುಳ್ ಕಂಡು ನಿನ್ನಂ ಬ್ರಾಹ್ಮಣನಾಗಿರ್ದೊಮ್ಮೆಗಂ ಕೊಲ್ವನಲ್ಲೆನೀ ಪುರದಿಂ ಪೊಱಮಟ್ಟು ಪೋಗು. ನಿನ್ನನಿನ್ನೆಲ್ಲಿ ಕಂಡೊಡಂ ಕೊಲ್ವೆನೆಂದೊ

ದಕ್ಷಿಣಮುಖದಿಂದಂ ಬೇಡರಪಳ್ಳಿಯೊಳಿಪ್ಪ ಕಾಳಕನೆಂಬ ವ್ಯಾಧನೊಳ್ ಕೂಡಿ ಪಿಸಿತಾನಗರದ ತುರುಮಂ ಕೊಂಡಲ್ಲಿ ನೇಮಕಂ ಕೊಲೆ ಸತ್ತು ..... ಶ್ರೀಸ್ವಾಮಿದ ದೊಂಬಿಗಳೊಳ್ ಪಲಕಾಲಂ ಕೊಟ್ಟು .....' ಎಂದು ಕಥೆ ಬೆಳೆಯುತ್ತದೆ.

ಅಂದು ಜನರು ನಿರಂತರ ದಾನ ಧರ್ಮಾದಿ ಮುಖ್ಯದಲ್ಲಿ ತೊಡಗಿದ್ದು ತಾವು ಕೆಲವು ದಿನದ ಮಟ್ಟಿಗೆ ಬೇರೆ ಊರಿಗೆ ಹೋಗುವ ಸಂದರ್ಭ ಒದಗಿಬಂದರೆ ತಾವು ಮಾಡುತ್ತಲಿದ್ದ ಮುಖ್ಯ ಕಾರ್ಯವನ್ನು ನಿಲ್ಲಬಾರದೆಂದೂ ತಮಗೆ ಆಪ್ತನಾದ ರುದ್ರದತ್ತನೆಂಬ ಬ್ರಾಹ್ಮಣನಿಗೆ ತಕ್ಕಷ್ಟು ಹಣವನ್ನು ಕೊಟ್ಟು, ತಾವು ನಡೆಸಿಕೊಂಡು ಬಂದಿದ್ದ ದಾನ ಧರ್ಮಾದಿಗಳನ್ನು ನಡೆಸಿಕೊಂಡು ಹೋಗಲು ತಿಳಿಸಿದಾಗ ಅವನು ಹಣ ಪಡೆದು ವ್ಯಸನಿಯಾಗಿ ಆ ಹಣವನ್ನು ದೇವರಿಗೂ ವ್ಯಯಿಸದೇ ಅಪವ್ಯಯ ಮಾಡಿ ಕೊನೆಯಲ್ಲಿ ಕಳ್ಳತನಕ್ಕಿಳಿದು ನಗರದ ತಳವಾರನಲ್ಲಿ ಸಿಕ್ಕಿ ಬೀಳುವುದನ್ನು ಕಾಣಬಹುದು. ಅಪರಾಧಿಯು ಬ್ರಾಹ್ಮಣನಾದ ಕಾರಣ ಗಡಿಪಾರಿನ ಶಿಕ್ಷೆಗೆ ಒಳಗಾಗುತ್ತಾನಾದರೂ ಆ ಬ್ರಾಹ್ಮಣನು ವ್ಯಸನಕ್ಕೊಳಗಾಗಿದ್ದರಿಂದ ಬೇಡರ ಪಳ್ಳಿಯ ಬೇಡನೊಂದಿಗೆ ಸೇರಿ ಗೋವುಗಳ್ಳತನಕ್ಕೆ ಇಳಿಯುವುದನ್ನು ಕಾಣಬಹುದು.

ಕರ್ಣಾಟಕ ಪಂಚತಂತ್ರ- ಕೃತಿಯ ವಿಶ್ವಾಸ ಪ್ರಕರಣದ ನಾರಾಯಣ ಭಟ್ಟನ ಕಥೆಯಲ್ಲಿ ನಾರಾಯಣಭಟ್ಟನೆಂಬ ಬ್ರಾಹ್ಮಣನು ಉಜ್ಜಯಿನಿಗೆ ಬಂದಾಗ ತನ್ನ ಮೇಲೆ ಅನಿರೀಕ್ಷಿತವಾಗಿ ಬಂದ ಕಳ್ಳತನದ ಘಟನೆಯ ವಿವರವು ಹೀಗಿದೆ.

'......... ಕೆಲವಾನು ದಿವಸಕ್ಕುಜ್ಜಯಿನಿಯ ಪೆಂಡವಾಸವುದುವರಾ ಪೊಡಮ್ಯೊದೆಯೊಳೊಂದು ನಂದನ ವನವನದೊಳಗೊರ್ವಂ ತಾಪಸ ರೂಪಧಾರಿಯಾಗಿ ತಪನತಾಪಕ್ಕೆ ಮೊಗದುವೆಯಿತ್ತು ನಾಲ್ಕಂ ದೆಸೆಯೊಳಂ ಕಿಚ್ಚನೊಟ್ಟಿ ನಡುವೆ ನಿಂದಿರ್ದನಂ ಕಂಡು' ಕುತೂಹಲ ತಾಳುತ್ತಾನೆ. ಸೂರ್ಯಾಸ್ತದ ನಂತರ 'ಕುಟಿ ಕಟ್ಟಿಂಯೊಳಾ ಕೃತಕ ತಾಪಸಂ ತಪಮಂ ಸಂಹರಿಸಿ' ನಿಂತಾಗ ಒಬ್ಬ ಸಾಧಕನು ಬಂದು 'ಉದಕಮಂ ತುದಕಮಂ ಮೊದಲಾದುವಂ ತಂದುಕೊಟ್ಟು ಕನ್ನದ ಮುಟ್ಟುಗಳಂ ತಂದೆನೆಂದು ಪೇಳ್ವುದುಂ ಕರಂ ಲೇಸಾಯ್ತು ನಡೆಯಿಂದಿರ್ದರುಂ ಪೋಗಿ ರಾಜಭವನಮಂ ಪೊಕ್ಕು ಕನ್ನಮಿಕ್ಕಿ ಭಂಡಾರಮಂ ಕಳ್ದು ಪೊಱಮಡುವಾಗಳ್ ಕಾಪಿನವರ್ ಕಂಡು ಕಳಕಳಂಗೆಯ್ವ ತಳಾರ್ ಕೇಳ್ದು ಪರಿತಂದು ಬಟ್ಟೆಗಳೆಲ್ಲಮಂ ಕಟ್ಟಿಮೆಂದು ಪೇಳ್ವುದುಮಾ ಕಳ್ಳರ್ ಕೇಳ್ದು ಪೊನ್ನ ಪೊಱಯೊಳೆ ಪೋಗಲಿಂಬಿಲ್ಲದೆ ನಂದನವನಕ್ಕೆ ಬಂದು ತನ್ನ ತಂದ ಪೊನ್ನ ಮುಡಿಕೆಯುಮನವುಂದುವುಮಂ ಒಳಪಾಯುಮಂ ಅಲ್ಲಿ ಪಟ್ಟಿರ್ದ ಭಟ್ಟನ ಮುಂದೆ ತಂದಿಕ್ಕಿ 'ತನ್ನ ಮುನ್ನಿನ ತಪೋವನದಲ್ಲಿ' ಇರುವಲ್ಲಿ ತಳಾರ್ ಪರಿತಂದು ನಿಮ್ಮಿ ನಿಮ್ಮಿತ್ತ್ ಪೋರ್ ಮಾನಸರ್ ಬಂದರೊಳರೆ ಪೇಳೆಮೆನೆ ತಸ್ಕರ ತಾಪಸನಾ ಮುರಿದಿರಿಯೊಳ್ಬೀಗಂ ಬಂದಿರ್ದನೆಂದು ಸನ್ನೆಯಿಂ ಪೇಳ್ದುದುಮವರ್ ಪರಿತಂದು ನೋಡಿ ಪಟ್ಟಿರ್ದ ಭಟ್ಟನ ಮುಂದಿರ್ದ ಭಂಡಾರದ ಮುಡಿಕೆಗಳುಮಂ ಕನ್ನದ ಮುಟ್ಟುಗಳುಮಂ ಕಂಡವಂ ಕೊಂಡಾ ಪಾರ್ವನ ತಲೆಯೊಳ್ಪುಲ್ವಾಗೆ ತಂದೊಟ್ಟಿದಾಗ ಅರಸನು 'ಪಾರ್ವಂ ಪೆರ್ಗ್ಗೆ ಕಳ್ಳನೆಂದು ಬಗೆದು ದುಷ್ಟಂಗೆ ತಕ್ಕುದಂ ಮಾಡಿ' ಎಂದು ಆಜ್ಞಾಪಿಸುತ್ತಾನೆ.

ಆಗ ನಾರಾಯಣ ಭಟ್ಟನು ಅರಸನಿಗೆ 'ಕೃತಕ ತಪೋಧಾರಿಯ ಗುಹೆಯಂ ಶೋಧಿಸಿ ಮುನ್ನ ಪೋಟಲೊಳ್ ಪೋದ ಪಲವು ವಸ್ತುಗಳಂ' ತೋರಿಸಿದಾಗ ಅದನ್ನು ಕಂಡ ಅರಸನು ತಸ್ಕರ ತಪಸ್ವಿಗೆ ತಕ್ಕುದಂ ಮಾಡಿ ನಾರಾಯಣಭಟ್ಟಂಗೆ ಪರಿದಪ್ಪರ್ಥಮಂ ಕೊಟ್ಟುಕಳುಪುತ್ತಾನ್.

ಇದು ಸಭ್ಯರ ಅಥವಾ ಸಜ್ಜನರ ವೇಷ ಹಾಕಿ ರಾತ್ರಿ ಕದಿಯುವ, ಕಳ್ಳರನ್ನು ಕಂಡ ತಳವಾರ ಕಳಕಳ ಎಂಬ ಶಬ್ದ ಮಾಡುವ, ಕಳ್ಳನು ಊರಲ್ಲಿ ಹೊಕ್ಕಿದ್ದಾನೆ ಎಂಬ ಸುದ್ದಿಯನ್ನು ಕೇಳಿದ ಕೂಡಲೇ ಊರಿನಿಂದ ಹೊರಹೋಗುವ ಎಲ್ಲ ದಾರಿಗಳನ್ನು ಮುಚ್ಚುತ್ತಲಿದ್ದ, ವಿಷಯಗಳು ಉಕ್ತವಾಗಿರುವಂತೆ ಅಪರಾಧ, ಅಪರಾಧ ಪರಿಶೀಲನೆ ಹಾಗೂ ದಂಡನೆಗಳ ಬಗೆಗಿನ ಅಂಶಗಳ ಮೇಲೂ ಬೆಳಕು ಬೀರುತ್ತದೆ.

ದುರ್ಗಸಿಂಹನ ಪಂಚತಂತ್ರದ ಭೇದ ಪ್ರಕರಣದ ಶಿವಭೂತಿ ಕಥೆಯಲ್ಲಿಬರುವ ಪ್ರಸಂಗವು ಕೂಡ ಶಿವಭೂತಿಯ ಮೇಲೆ ಬಂದ ಅನಿರೀಕ್ಷಿತ ಕಳ್ಳತನದ್ದೇ ಆಗಿದೆ. ಶಿವಭೂತಿ ಎಂಬ ಬ್ರಾಹ್ಮಣನು ಯಾತ್ರೆಗೆ ಹೋಗುವಾಗ ಕಾಡಿನ ಹಾಳು ಬಾವಿಯೊಂದರಲ್ಲಿ ಬಿದ್ದ ಕಿರಾತನೊರ್ವನನ್ನು, ಅದೇ ಬಾವಿಯಲ್ಲಿ ಬಿದ್ದ ಹುಲಿ ಹಾಗೂ ಹಾವನ್ನು ಹೊರ ತೆಗೆದು ತನ್ನ ತೀರ್ಥ ಯಾತ್ರೆ ಮುಂದುವರೆಸುತ್ತಾನೆ. ಯಾತ್ರೆಯಿಂದ ಮರಳಿ ಬರುವಾಗ ತಾನು ಮಾಡಿದ ಸುಕೃತದ ಫಲವಾಗಿ ದೊರೆತ ಹಣ ಮತ್ತು ಐಶ್ವರ್ಯವನ್ನು ಕಿರಾತನೊಂದಿಗೆ ಹಂಚಿಕೊಳ್ಳಬೇಕೆಂದು ಅವನಿದ್ದಲ್ಲಿಗೆ ಬಂದು ತನ್ನಲ್ಲಿದ್ದ ಎಲ್ಲ ಐಶ್ವರ್ಯವನ್ನು ತೋರಿಸಿ, ಅದು ಸಿಕ್ಕ ಕಥೆಯನ್ನು ಹೇಳಿ, ಆತನಿಗೂ ಸ್ವಲ್ಪ ಐಶ್ವರ್ಯದ ಭಾಗವನ್ನು ಕೊಡುತ್ತಾನೆ. ಆತ ಮಾಡಿದ ಉಪಕಾರವನ್ನು ಸ್ಮರಿಸದ ಆ ಕಿರಾತನು ಮೂರ್ಖತನದಿಂದ ರಾಜನಿಗೆ 'ದೇವಾ! ನಿಮ್ಮ ತುಡುವಾಭರಣಂಗಳಂ ಪಲವಮೂಲ್ಯವಸ್ತುಗಳಂ ತಂದೆನ್ನ ಮನೆಯೊಳೊರ್ವ ಪಾರ್ವನಿರ್ದಪನೆಂದು' ದೂರು ಕೊಟ್ಟಾಗ, ಅರಸನು 'ತಳಾರರ್ಗೆ ಪೇಳೊಡಮವರ್ ಪರಿದಾ ಪಾರ್ವನಂ ಪಿಡಿದು ಪೆಡಗಯ್ಯಂ ಕಟ್ಟಿ ತಂದೊಪ್ಪಿಸುವದುಮರಸನಾತನ ಕಯ್ಯೊಳಿರ್ದ ವಸ್ತುಗಳೆಲ್ಲಮಂ ಕೊಂಡು ಬಟ್ಟೆಕ್ಕೆ ಸೆರೆ'ಯಲ್ಲಿಡುತ್ತಾನೆ.

ಇದೇ ಕಥೆಯ ಮುಂದುವರಿದ ಭಾಗದಲ್ಲಿ ಶಿವಭೂತಿಯು ತಾನು ಯಾವುದೇ ಆಭರಣಗಳನ್ನು ಕದಿಯದೇ ತಾನು ಮಾಡಿದ ಉಪಕಾರಕ್ಕೆ ಹುಲಿಯು ಕೊಟ್ಟಿತೆಂದು ತಿಳಿಸಿ, ಹಾವಿನ ಕಾರ್ಯತಂತ್ರದಿಂದ ರಾಜನ ಸತ್ತ ಮಗನನ್ನು ಬದುಕಿಸಿ ಸತ್ಯವನ್ನೆಲ್ಲಾ ತಿಳಿಸುತ್ತಾನೆ. ಆಗ ಆ ಕಿರಾತನೆ ಸುಳ್ಳು ಆರೋಪ ಹೊರಿಸಿದ್ದಾನೆಂಬುದು ಸಾಕ್ಷಿ ಆಧಾರಗಳ ಮೂಲಕ ಸಾಬೀತಾದಾಗ ರಾಜನು ನಿಜವಾದ ಆರೋಪಿಯಾದ ಕಿರಾತನಿಗೆ ಮರಣದಂಡನೆಯನ್ನು ವಿಧಿಸುತ್ತಾನೆ. ಇಲ್ಲಿ ಕಳುವಿನ ದೂರನ್ನು ಲಕ್ಷಿಸಿ ರಾಜನು ತಳಾರನನ್ನು ಕಳುಹಿಸಿ ಕಳ್ಳನನ್ನು ಹೆಡಗುಡಿಯ ಕಟ್ಟಿ ಹಿಡಿದು ತರಿಸುವ, ಸಾಕ್ಷಿ ಪುರಾವೆಗಳನ್ನು ನೋಡಿ ಅಪರಾಧಿಯೆಂದು ನಿರ್ಣಯಿಸುವ, ಅನಂತರ ಅವನು ನಿರಪರಾಧಿಯೆಂದು ತಿಳಿದರೆ ಅವನನ್ನು ಬಿಟ್ಟು ನಿಜವಾದ ಅಪರಾಧಿಗೆ ಮರಣದಂಡನೆಯಂಥ ಘೋರ ಶಿಕ್ಷೆ ವಿಧಿಸುತ್ತಿದ್ದ ಸಂಗತಿ ತಿಳಿದುಬರುತ್ತದೆ.[೨೦]

ನಯಸೇನನ ಧರ್ಮಾಮೃತದಲ್ಲಿಯೂ ಕಳ್ಳತನ ಮುಂತಾದ ಅಪರಾಧಗಳ ಬಗ್ಗೆ ವಿವರಿಸಿ, ಅದಕ್ಕೆ ಕಾರಣ, ದಂಡನೆ ಇತ್ಯಾದಿ ಸಂಗತಿಗಳನ್ನು ಕುರಿತು ಹೇಳಲಾಗಿದೆ. ಅಲ್ಲಿ ಬರುವ ಲಲಿತಾಂಗನ ಕಥೆಯಲ್ಲಿ ರಾಜನ ಮಗನೊಬ್ಬ ಕಳ್ಳತನಕ್ಕೆ ಇಳಿದ, ಅದಕ್ಕಾಗಿ ಜನರು ರಾಜನಿಗೆ ದೂರು ಕೊಡುವ, ಈ ಕುರಿತ ರಾಜನ ವಿಚಾರಣೆ ಹಾಗೂ ದಂಡನೆ ವಿವರಗಳನ್ನು ಕಾಣಬಹುದಾಗಿದೆ.

ಜಂಬೂದ್ವೀಪದ ಭರತಕ್ಷೇತ್ರದ ಕಾಶ್ಮೀರ ವಿಷಯದಲ್ಲಿ ಅರಿಮಥನುನೆಂಬ ಅರಸ. ಅವನಿಗೆ ಸೌಂದರಿಯೆಂಬ ಪಟ್ಟದರಿಸಿ. ಇವರ ಮಗ ಲಲಿತಾಂಗನು. ತಂದೆ ತಾಯ್ಗಳ ಅಲಕ್ಷದಿಂದಾಗಿ ರಾಜಕುಮಾರನು "ದುರ್ಜನಸಂಗದಿಂದತಿ ಚಪಳನಾಗಿ ಸೊರ್ಕಿಂದಂ ಅಂಕುಶಮಿಲ್ಲದ ಮದದಾನೆಯಂತೆ ಮೆಯ್ಯಱಿಯದೆ" ಬೆಳೆದನು. ಆತ ನಗರದ ಗಾಣಿಗರನ್ನು, ಹೂವಾಡಿಗರನ್ನು, ಕಂಚುಗಾರರನ್ನು, ಹೆಂಡವನ್ನಿಳಿಸುವ ಈಡಿಗರನ್ನು, ಪಟ್ಟಣದ ಸೂಳೆಯರನ್ನು, ಸೀರೆ ವರ್ತಕರನ್ನು, ಮಣಿಗಾರರ ಅಂಗಡಿಗಳನ್ನು, ಅಗಸರನ್ನು ಕೊಳ್ಳೆ ಹೊಡೆದು ಹಿಡಿದು ಹಿಂಸಿಸುತ್ತಾನೆ.

ಹೀಗೆ "ಉರಿಂಯುತ್ತುಮಿರ್ದ ಲಲಿತಾಂಗನ ಪೊಲ್ಲವೆಂಯುಂ ಕಂಡು" ಪೊೞಲೆಲ್ಲಮಲ್ಲೋಲಕಲ್ಲೋಲಮಾಗೆ ಬೆಟ್ಟದ ನಡುವೆ ಪರಿವ ಪೆರ್ದೊಱೆಯಂತೆ ನೆರೆದೆಲ್ಲಮೊಂದಾಗಿ ರಾಜಮಂದಿರದ ಬಾಗಿಲ್ಗೆ ಬಂದು ಪುಯ್ಯಲಿಡಲು ಅರಿಮಥನ ಮಹಾರಾಜಂ ಪುಯ್ಯಲಿದೇನೆಂದು ಬೆಸಗೊಳ್ವುದುಂ....'

"...... ಪೊೞಲೊಳಗಣ ಪ್ರಜೆಗಳೆಲ್ಲಮುಂ ಮಹಾಭಯುಜ್ವರಂಗೊಂಡು ಕುಮಾರನಾಡುವಾಟಕ್ಕ ಮಾಡುವ ಮಾಟಕ್ಕಂ ನಿಲಲುಂ ನಿತ್ತರಿಸುಲುಂಮಾಱೆವೆಮಗೆ, ಬೆಸನಾವುದು ಎಂದು ಕೇಳಲು ತನಯಂಗೆ ನಾಡೆಯುಂ ಮುನಿದ ಅರಸನು "ನೀವಂಜಬೇಡ ಸುಖಮಿರಿವಾವಿದನೆಣಿಸುವರಲ್ಲಮತಿಶಯದಿಂದಂ,'' ಎಂದು ಕಿಱಿಯರ್ಪಿರಿಯರೆನ್ನದೆ ಮನ್ನಣೆಯಿಂ ಕರ್ಪುರ ಸಹಿತಂ ವೀಳೆಯಂಗೊಟ್ಟು ಕಳುಹಿಸಿ - ಪ್ರಧಾನರಿಗೆ, ಸೌಂದರಿದೇವಿಗೆ ಹೀಗೆ ಹೇಳಿದನು. ಕುಮಾರನೊಳಾದ ದೂರ್ತೆಲ್ಲಮೆಮ್ಮಿಂದಾದುದಾತನೊಳ್ ದೋಷಮಿಲ್ಲೆಂತೆನೆ

ಕಸದೊಡನೆ ಕೂಡಿ ಪೆರ್ಚಿದ
ಸಸಿಯುಂ ಶಿಕ್ಷಿಸದ ಮಕ್ಕಳುಂ ಮಾಣದೆ ಚಿಂ
ತಿಸದೋದುಂ ಪಲವಂ ಭಾ
ವಿಸುತಿರ್ಪನ ತಪಮುಮೊಪ್ಪಲಾರ್ಕುಮೆ ಕಡೆಯೊಳ್

.... ಮಗನಂ ಕಿಱಿಯೆಂದಿಂ ತೊಡಗಿ ಶಿಕ್ಷಿಸದಿರ್ದುದಱಿನಿಂತಾಯ್ತೆಂದ" ಅರಸನು ಮಗನಿಗೆ ಕ್ಷತ್ರಿಯ ಧರ್ಮವನ್ನು ತಮ್ಮ ನ್ಯಾಯ ಧರ್ಮವನ್ನು ತಿಳಿಸಿ ಹೇಳಿದನು. ಆದರೆ "ಪಿಂಗದು ಡೊಂಕೆಂಬ ನಾಯಬಾಲದ ತೆಱದಿಂ" "ಮನ್ನಿಸದೆ ತಂದೆಂಯುಂ ಪೊೞಲಂನೆಱೆ ಕಾಡುತ್ತುಮುೞಲಿಸುತ್ತುಂ" ಇದ್ದ ಮಗನನ್ನು ಬರಮಾಡಿಕೊಂಡ ನರೇಂದ್ರನು ಮಗನೆ "ಮೋಹದಿಂ ನೀಂ ಮಾಡಿದ ಪಲವು ಪೊಲ್ಲಮೆಗಳಂ ಸೈರಿಸಿದೊರ್ಡಂ, ನೀಂ ಕೊರ್ವಿಗಾಳಿಯೊಳ್ಕೂಡಿದ ಕಿರ್ಚಿನಂತೆ ದಳ್ಳುರಿದು" ಬಾಳುತ್ತಲಿರುವೆ. "..... ನಿನ್ನನೊಳಗೊಂಡಿರ್ದೆನಗಿಹದೊಳಿರ್ಪ ಕೀರ್ತಿಯುಂ

ಪರದೊಳಪ್ಪ ಸದ್ಗತಿಂಯುಂ ಕಿಡುಗುಮಿನ್ನೆನ್ನಾಳ್ವ ದೇಶದೊಳಿರದೆ ಪೋಱಮೊಟ್ಟುಪೋಗೆಂದು ಜಡಿದು" ನುಡಿದನು. ಆಗ ಅವನು ವಿಜಯಪುರಮಂ ಪೊರಮಟ್ಟು ಪೋಗಿ ನೇಪಾಳದೇಶಮಂ ಪೊಕ್ಕು ಮುನ್ನಿನ ಕಳ್ಳರೆಡೆಗೆ ತಾನೆ ಪ್ರಸಿದ್ಧನಾಗಿ ತನಗವರ್ಕೂರ್ಮೆಯಿಂದುಪದೇಶಂಗೆಯ್ದಂಜನ ಘಟಿಕೆಯಂ ಸಾಧಿಸಿ ತದ್ಘುಟಿಕಾ ಪ್ರಯೋಗದಿಂದ ದೃಶ್ಯರೂಪಂ ಕೈಕೊಂಡು ಜಗಮೆಲ್ಲಮಂ ಮೊಟ್ಟನಾಗೆ ಕಳ್ದ "ಅಂಜನಚೋರ"ನೆಂದು ಕುಖ್ಯಾತನಾದನು. ಅವನು "ಸಪ್ತ ವ್ಯಸನಮನೆ ಬಿಡದೆ ಕೈಕೊಂಡೆಸಗಿ ಸದಾಚಾರಮೆಲ್ಲಮಂ" ಮರೆತನು. ಹೀಗೆ "ತನ್ನ ಮನಕ್ಕೆ ಬಂದಂತೆ ನೆಗಱುತ್ತ ಕರಟದ ಕದಿರಂತೆ ತಿಱ್ಱನೆ ತಿರುಗುತ್ತ' ರಾಜಗೃಹಮೆಂಬ ಪುರಕ್ಕೆ ಬಂದು ತತ್ಪುರದ ಸೂಳೆಗೇರಿಯಂ ಪೊಕ್ಕು ಅನಂಗ ಸೌಂದರಿಯೆಂಬ ಸೂಳೆಯಂ ಕಂಡು ಕಣ್ಬೇಟಂಗೊಂಡೊತ್ತೆಗೊಟ್ಟಾಕೆಯ ಮೇಲೆ ಮೋಹಮುಂ ಸ್ನೇಹಮುಂ ತಿಣ್ಣಮಾಗೆ ಆಕೆ ತಾನು ಬಯಸಿದ ಜ್ಯೋತಿಪ್ರಭೆಯೆಂಬ ಪದಕವನ್ನು ಘಂಟಿಕಾ ಪ್ರಯೋಗದಿಂದ ದೃಶ್ಯರೂಪದಿಂ ಪೋಗಿ ಕಳ್ದು ತಂದು ಕೊಡಬೇಕೆಂದು ಒತ್ತಾಯಿಸುತ್ತಾಳೆ. ಅಂಜನ ಚೋರನು ಶುಕ್ಲಪಕ್ಷಂ ಪೋಪಿನಮಿರ್ದು ಕೃಷ್ಣಪಕ್ಷದಷ್ಟಮಿಯಂದು "....ಅದೃಶ್ಯ ರೂಪಿಂದರಮನೆಯಂ ಪೊಕ್ಕು ಪದಕಮಂ ಕೊಂಡು...... ಪೋಱಮಟ್ಟು .... ಬರೆ ರತ್ನದೀಪ್ತಿ ದೆಸೆದೆಸೆಗಳ್ಲಿಂ ಮಿಱುಗೆ' ದಂಡಕನೆಂಬ ತಳಾನು ಆತನ ಅಂಜನ ವಿದ್ಯೆಯನ್ನು ಕೆಡಿಸಿ ಬೆನ್ನಟ್ಟಿದಾಗ ಭಯದಿಂದ ಅಂಜನಚೋರನು ಪದಕವನ್ನು ಬೀಸಾಡಿ ಕೋಟೆಯನ್ನು ವಿದ್ಯಾಧರಕರಣದಿಂದ ಲಂಘಿಸಿ ದೆಸೆಗೆಟ್ಟೋಡುತ್ತಾನೆ.[೧೧]

ಇಲ್ಲಿ ಒಬ್ಬ ವ್ಯಕ್ತಿ ಹೇಗೆ, ಏಕೆ, ಕೆಟ್ಟು ಕಳ್ಳನಾಗುತ್ತಾನೆ ಎಂಬುದಕ್ಕೆ ಒಂದು ಹಂತದಲ್ಲಿ ತಂದೆತಾಯಿಗಳ ನಿರ್ಲಕ್ಷ, ಇನ್ನೊಂದು ಹಂತದಲ್ಲಿ ರಾಜನಾದ ತಂದೆಯ ಅಧಿಕಾರ ಬಲ ಅದರ ದುರುಪಯೋಗವೂ ಕಾರಣವಾಗಿದೆ. ಇಂಥ ಕಳ್ಳನಿಂದ, ಕಳ್ಳತನದಿಂದ ಜನರಿಗಾಗುವ ತೊಂದರೆ, ಜನರು ಬೇಸತ್ತು ರಾಜನಿಗೆ ದೂರುಕೊಡುವುದು, ರಾಜನು ಮಗನಿಗೆ ಬುದ್ಧಿಹೇಳಿ ತಿದ್ದಲು ಪ್ರಯತ್ನಿಸುವುದು, ಕೊನೆಗೆ ಉಗ್ರ ಶಿಕ್ಷೆ ಕೊಡದೇ ಮಗನೆಂಬ ಮೋಹದಿಂದ ಗಡಿಪಾರಿನ ಶಿಕ್ಷೆಗೊಳಪಡಿಸುವುದು. ಮಗ ಲಲಿತಾಂಗನು ಗಡಿಪಾರಿನ ಶಿಕ್ಷೆಯನಂತರವೂ ಬೇರೆ ದೇಶಕ್ಕೆ ಹೋಗಿ ದೊಡ್ಡಕಳ್ಳನಾಗಿ ಅಂಜನಚೋರನಾಗಿ ರೂಪುಗೊಳ್ಳುವುದು, ಸೂಳೆಯ ಕಾರಣದಿಂದ ದುಸ್ಸಾಹಸದ ಕಳ್ಳತನಕ್ಕೆ ಕೈಹಾಕುವುದು, ಕಳ್ಳತನದ ಪರಮಾವಧಿಯಾಗಿದೆ. ಕೊನೆಗೆ ಕಥಾ ಉದ್ದೇಶದ ಹಿನ್ನೆಲೆಯಲ್ಲಿ ತಾನು ಮಾಡುವುದು ಸರಿಯಲ್ಲವೆಂದೆನಿಸಿ ಜೈನದೀಕ್ಷೆ ಹೊಂದುವುದನ್ನು ಕಾಣಬಹುದು.

ಮಕ್ಕಳು ಕೆಡಲು ಕಳ್ಳರಾಗಲು ತಂದೆ ತಾಯಿಗಳೇ ಕಾರಣರು. ಊರ 'ಹೊರಗಿನ ಉದ್ಯಾನ ಕಳ್ಳರ, ಪುಂಡರ, ಬಿಲ್ಲರ ವಾಸಸ್ಥಾನವಾಗಿರುವುದು. (ನುಗ್ಗಿದ ಕಳ್ಳನನ್ನು ಯಜಮಾನನೇ ಹಿಡಿದು ಹೊಡೆಯುವುದು, ಕಳ್ಳರು ಸೂಳೆಯರ ಸಹವಾಸ, ಕಳ್ಳರನ್ನು ದೋಷಿಗಳನ್ನಾಗಿ ಸೆರೆಗೊಂಡು ಒಯ್ಯುವದು, ಅಪರಾಧಿ ಸಂಬಂಧಿಯಾಗಿದ್ದರೆ ದಂಡನೆ ಮಾಡದಿರುವುದು.) ಊರಿನ ಜನರೆಲ್ಲ ಸೇರಿ ರಾಜನಿಗೆ ದೂರುಕೊಡುವುದು, ರಾಜನ ಕರ್ತವ್ಯಗಳು, ರಾಜನು ನ್ಯಾಯ ವಿಚಾರಣೆಮಾಡಿ ನಿರ್ಣಯಿಸುವ ರೀತಿ, ತಳವಾರನು ತನ್ನ ಊರಿನ ರಕ್ಷಣೆಗೆ ಆಣೆ ಮಾಡಿ ಪ್ರಮಾಣ ಮಾಡುವುದು, ರಾಜಾಜ್ಞೆಮೀರಿದವನಿಗೆ

ಶಿಕ್ಷೆ ವಿಧಿಸುವ ರೀತಿ, ಕಳ್ಳರು ಅಂಜನ, ಘಂಟಿಕಾ, ಪ್ರತಿ ಅಂಜನ ವಿದ್ಯೆಗಳನ್ನು ಸಾಧಿಸುವುದು, ಸಪ್ತವ್ಯಸನಗಳಲ್ಲಿ ಕಳ್ಳತನವೂ ಒಂದೆಂಬುದು, ಕಳ್ಳರಿಗೆ ಶುಕ್ಲಪಕ್ಷಕ್ಕಿಂತ ಕೃಷ್ಣ ಪಕ್ಷವೇ ಇಷ್ಟವೆಂಬುದು, ಕಳ್ಳರ ಸೂಳೆಯರ ಸಹವಾಸ, ತಳವಾರನು ಅಂಜನಚೋರನಿಗೆ ಪ್ರತಿಯಾದ ವಿದ್ಯೆ ಕಲಿತಿರುವುದು, ಕಳ್ಳನನ್ನು ಬೆನ್ನಟ್ಟಿಕೊಂಡು ಬರುವುದು, ವಿದ್ಯಾಧಿಕರಣ ವಿದ್ಯೆಯಿಂದ ಜಿಗಿದು ಹೋಗುವುದು, ಇಂತಿ ರೀತಿಯ ಆಯುಧಗಳು ಹೀಗೆ ಈ ಕಥೆ ಕಳ್ಳತನ, ಕಳ್ಳರ ವಿಶಿಷ್ಟ ಸಾಧನೆ, ತಳವಾರರ ಪ್ರತಿಸಾಧನೆ, ಅಪರಾಧ, ಶಿಕ್ಷೆ, ಪ್ರಾಯಶ್ಚಿತ ಮುಂತಾದ ಅಂಶಗಳ ಮೇಲೆ ಬೆಳಕು ಚೆಲ್ಲುತ್ತದೆ.

ಇಲ್ಲಿಯೇ ಜಿನದತ್ತ ಮುನಿಗಳು ತಾವು ವಿದ್ಯೆ ಸಾಧಿಸಿದ ಬಗ್ಗೆ ಲಲಿತಾಂಗನು ಮುಂದೆ ಹೇಳುವಾಗ ಬರುವ ಕಥೆಯಲ್ಲಿಯೂ ಕಳ್ಳತನದ ಪ್ರಸ್ತಾಪವು ಕಂಡುಬರುತ್ತದೆ.

ಭೂಮಿತಿಲಕ ರಾಜಶ್ರೇಷ್ಠಿ ಸೌಂದರ. ಅವನ ಆರು ಜನ ಮಕ್ಕಳಲ್ಲಿ ಒಬ್ಬ ಧನ್ವಂತರಿ. ಅಲ್ಲಿನ ರಾಜ ಪುರೋಹಿತ ಸೋಮಶರ್ಮನೆಂಬ ಬ್ರಾಹ್ಮಣನ ಮಗ ವಿಶ್ವಾನುಲೋಮ. ಈ ಇಬ್ಬರು ವೈಶ್ಯ, ಬ್ರಾಹ್ಮಣರಾಗಿದ್ದರೂ ಅಪರಾಧ ಕೃತ್ಯವಾದ ಕಳ್ಳತನವೇ ಅವರ ಕೆಲಸವಾಗುತ್ತದೆ.

ಅವರು ದುರ್ಜನ ಸಂಸರ್ಗದಿಂದ ಸಪ್ತವ್ಯಸನಪರರೂ, ದುಶ್ಚರಿತ್ರರೂ ಆದ ಮಕ್ಕಳನ್ನು ತಿದ್ದಲಾರದೆ ಸೌಂದರಸೆಟ್ಟಿ ಮತ್ತು ಸೋಮಶರ್ಮರು ಅರಸನ ಮುಂದೆಯೇ ಅವರನ್ನು ತೊಱೆದು ಬಿಡುತ್ತಾರೆ. ಆಗಲೂ ಕಳ್ಳತನ ಬಿಡದೆ ಅರಮನೆಯನ್ನು ಹೊಕ್ಕು ದಿವ್ಯ ರತ್ನಗಳನ್ನು ಕದ್ದುಕೊಂಡು ಹೋಗುವಾಗ ತಳಾರನು ಹಿಡಿದು ಅರಸನಿಗೆ ಒಪ್ಪಿಸುತ್ತಾನೆ. ರಾಜನು ".....ನೀವಿರ್ವರುಮೀಪುರದಿಂ ಪೊಱಮಟ್ಟುಪೋಗಿಮಿರ್ದೊಡೆ ಕೊಲ್ವೆಂ" ಎಂದು ಆಜ್ಞಾಪಿಸುತ್ತಾನೆ.

ಈ ಈರ್ವರು ತಮ್ಮ ಜನನಿಂಯರ, ಹೆಂಡಂದಿರ ಮುಂದೆ ದೇಶ ತೊರೆಯಬೇಕಾಗಿ ಬಂದ ಸಂದರ್ಭವನ್ನು ತಿಳಿಸಿದಾಗ ಅವರು ಮೋಹಗೊಂಡು ಅವರನ್ನೆ ಬೆಂಬಲಿಸಿಕೊಂಡು ಗಜಪುರಕ್ಕೆ ಹೋಗುತ್ತಾರೆ. ಮುಂದೆ ಯಮದಂಡನೆಂಬ ತಳವಾರನೊಂದಿಗೆ ಒಪ್ಪಂದ ಮಾಡಿಕೊಂಡು ಒಬ್ಬಬ್ಬನೂ ಐನೂರು ಜನ ಬಂಟರನ್ನು ಸಾಕಿ ಐನೂರು ಜನ ಬಂಟರ ನಾಯಕರಾಗಿ ವಿದೇಶ (ಪರದೇಶ)ಗಳಿಗೂ ಹೋಗಿ ಕದ್ದುಕೊಂಡು ಬರುತ್ತಾರೆ[೨].

ಇಲ್ಲಿಯೂ ಕೂಡಾ ಕೆಟ್ಟವರ ಸಹವಾಸಕ್ಕೆ ಬಿದ್ದು ಆ ಇಬ್ಬರೂ ಗೆಳೆಯರು ಕಳ್ಳತನದ ದಾರಿ ಹಿಡಿಯುವುದು ತಿಳಿಯುತ್ತದೆ. ಅದನ್ನು ತಿಳಿದ ತಂದೆ ತಾಯಿಗಳು ತಿದ್ದಲು ಪ್ರಯತ್ನಿಸಿ ವಿಫಲರಾಗಿ ಕೊನೆಗೆ ರಾಜನ ಎದುರಿಗೆ ಆ ಮಕ್ಕಳನ್ನು ತೊರೆದಿರುವುದು ತಿಳಿದು ಬರುತ್ತದೆ. ಆಗ ಅವರು ಮತ್ತೆ ಕಳ್ಳತನದಲ್ಲಿ ತೊಡಗಿ ರಾಜಮನೆತನದ ದಿವ್ಯರತ್ನಗಳನ್ನೇ ಕದಿಯುವಾಗ ತಳವಾರನ ಕೈಯಲ್ಲಿ ಸಿಕ್ಕಿ ಬೀಳುತ್ತಾರೆ. ತಳವಾರನು ಅವರನ್ನು ರಾಜನಿಗೆ ಒಪ್ಪಿಸುತ್ತಾನೆ. ರಾಜನು ರಾಜಶ್ರೇಷ್ಠಿಯ, ರಾಜ ಪುರೋಹಿತನ ಮಕ್ಕಳೆಂಬ ಕಾರಣದಿಂದ ಮರಣದಂಡನೆ ಶಿಕ್ಷೆ ವಿಧಿಸದೆ ಗಡಿಪಾರಿನ ಶಿಕ್ಷೆ ವಿಧಿಸಿರುವುದನ್ನು, ಇನ್ನೊಮ್ಮೆ ಈ ರಾಜ್ಯದಲ್ಲಿ ಕಂಡರೆ ಕೊಲ್ಲಿಸುವುದಾಗಿ ಹೇಳಿರುವುದನ್ನು ಇಲ್ಲಿ ಗಮನಿಸಬಹುದು.

ಇವರು ಐನೂರು ಜನ ಬಂಟರಿಗೆ ನಾಯಕರಾಗಿದ್ದ. ಈ ಬಂಟರು ಕೆಲವೊಮ್ಮೆ ತಮ್ಮ ನಾಯಕನನ್ನೇ ಕೊಲ್ಲುವ ಹುನ್ನಾರ ಮಾಡಿ ಮಾಂಸದಲ್ಲಿ ಹಾಗೂ ಸುರೆಯಲ್ಲಿ ವಿಷ ಬೆರೆಸಿ ತಂದ ಸಂದರ್ಭಗಳು ಲಕ್ಷ್ಯಾರ್ಹ. ನಾಯಕರನ್ನು 'ಚೋರಸೈನ್ಯಾಧಿಪ' ಎಂದು ಕರೆದಿರುವುದನ್ನು ಇಲ್ಲಿ ಗಮನಿಸಬಹುದಾಗಿದೆ. ಬೇರೆಯವರ ವಸ್ತುಗಳನ್ನು, ಐಶ್ವರ್ಯ, ಆಸ್ತಿಗಳನ್ನು ಹಾಗೆಯೇ ಹೆಣ್ಣುಮಕ್ಕಳನ್ನು ಸಲೀಸವಾಗಿ ಕದಿಯುತ್ತಿದ್ದ ಕಳ್ಳರು ತಮ್ಮ ಹೆಂಡರು ಮಕ್ಕಳು ಆಸ್ತಿ, ಸುರಕ್ಷಿತವಾಗಿರಬೇಕೆಂದು ಬಯಸುತ್ತಿದ್ದರೆಂಬುದು ಕೂಡ ಇದೇ ಕಥೆಯಿಂದ ತಿಳಿಯುತ್ತದೆ. ಹಾಗೆಯೆ ಧನ್ವಂತರಿ ತನ್ನ ಮನೆಗೆ ಬಂದು 'ಕವಾಟೋದ್ಘಾಟನ' ವಿದ್ಯೆಯಿಂದ ಪಡಿಯ ತೆಗೆದು ಮೆಲ್ಲನೆ ಒಳಗೆ ಹೋಗುತ್ತಾನೆ ಎಂಬುದು ಗಮನಿಸಬೇಕಾದ ಅಂಶವಾಗಿದೆ.

ಹೀಗೆಯೇ ಕಳ್ಳತನಕ್ಕೆ ಸಂಬಂಧಿಸಿದ ಇನ್ನು ಅನೇಕ ಸಂಗತಿಗಳನ್ನು ಅಂದರೆ ಕಳ್ಳತನ ಮಾಡುವ ಗುಂಪು ಅವರು ವಿಚಾರ ವಿನಿಮಯ ಮಾಡುವ ರೀತಿ, ಬೆಲೆ ಬಾಳುವ ವಸ್ತುಗಳ ಬಗ್ಗೆ ಚರ್ಚೆ, ಅದನ್ನು ಕದಿಯಲು ಯಾರಿಂದಲೂ ಸಾಧ್ಯವಿಲ್ಲ ಎನ್ನುವಾಗ ಕೆಲವೊಮ್ಮೆ ಅದನ್ನು ಕದಿಯಲು ಸವಾಲು ಸ್ವೀಕರಿಸುವುದು, ಸ್ವೀಕರಿಸಿದ ಸವಾಲನ್ನು ಈಡೇರಿಸಲು ಅತೀ ಕಷ್ಟತಮವಾದ ಸಾಹಸಕ್ಕೆ ಕೈ ಹಾಕುವುದು, ಕಳ್ಳನಾದವನು ಸಾಧಿಸಬೇಕಾದ ಸಾಧನೆ, ಹೀಗೆ ಅನೇಕ ವಿಷಯಗಳ ಮೇಲೆ ಬೆಳಕು ಚೆಲ್ಲುವುದನ್ನು ಧರ್ಮಾಮೃತದ ನಾಲ್ಕನೆಯ ಆಶ್ವಾಸದಲ್ಲಿ ಬರುವ ಕಳ್ಳತನದ ಪ್ರಸಂಗವೊಂದರಿಂದ ಅರಿಯಬಹುದಾಗಿದೆ.

ಗದ್ಯ ॥ .... ಮಗದ ವಿಷಯದ ಪಾಟಲಿಪುತ್ರಮೆಂಬ ಪುೞಲನಾಳ್ವಂ ವೀರಧ್ವಜನೆಂಬರಸನಾತನರಸಿ ಸುಸೀಮೆಯೆಂಬಳಾಯಿರ್ವರ್ಗಂ ಪ್ರಿಯನಂದನಂ ವೀರಕುಮಾರನೆಂಬನಾತಂ ದುರ್ಜನ ಪ್ರಿಯನುಂ ವಿಟಜನಾನಂದನುಂ ತಸ್ಕರವಿನೋದನುಂ ದುಷ್ಟ ಪ್ರಸಂಗನುಮಾಗಿ ಪಲವುದಿವಸಂ ಸಮಸ್ತ ದುರಾಚಾರ ಜನಪರಿವೃತನಾಗಿ ಪೊೞವೊೞಲೊಳ್ ಕುಳ್ಳಿರ್ದು ಕಳವಿನೊಳಾದ ಮಾತುಗಳಿಂ ನುಡಿಯಿಸಿ ಕೇಳುತ್ತುಮಿರ್ಪುದುಂ ಅಲ್ಲಿ ಚೋರ ಪ್ರಧಾನನೆಂಬನೊರ್ವನಿಂತೆಂದಂ

"ದೇವಾ! ನಾಂ ಪುಗದ ದೇಶಮುಂ ಕಳದ ವಸ್ತುಗಳುಮಿಲ್ಲ; ಗೊಲ್ಲ ವಿಷಯದೊಳ್ ಕಾಮಲಿಪ್ತಿಯೆಂಬ ಪುರದೊಳೊರ್ವ ಜಿನೇಂದ್ರಭಕ್ತನೆಂಬ ಪರದನ ದೇಹಾರದ ದೇವರ ಮುಕ್ಕೊಡೆಯೊಳೊಂದು ವೈಡೂರ್‍ಯ್ಯವಾಣಿಕಂ ಕೀಲಿಸಿರ್ದುದಾರತ್ನಮುಮನರ್ಘ್ಯ ರತ್ನಮುಮೆನಿಪ್ಪುದದಕ್ಕೆ ಮೂಱುಲೋಕಂ ಬೆಲೆಯಲ್ಲೀಲೋಕದೊಳಪೂರ್ವಮಂ" ಎನ್ನುತ್ತಾನೆ. ವೀರಕುಮಾರನಿಗೆ ಆ ರತ್ನದ ಮೇಲೆ ಆಸೆ ಹುಟ್ಟಿ ಚೋರಪ್ರಧಾನನಿಗೆ "ಸಂದ ಕಳ್ಳರೊಳೆಲ್ಲ ನೀನೆ ಮಹಾವಿವೇಕಿ ..... ಆ ವರರತ್ನಮೇಂ ಗಡ ಸಾಧಿಸಲ್ಕರಿದಾದುದೇ" ಎಂದಾಗ ಅದಕ್ಕೆ ಚೋರ ಪ್ರಧಾನನು ಆ ರತ್ನವು ವಜ್ರದ ನೆಲೆಗಟ್ಟು ಹಾಗೂ ಹನ್ನೆರಡಡೆ ಕಾಪಿನಲ್ಲಿದೆ. ಅಂಥಲ್ಲಿ ಪ್ರವೇಶಿಸಬೇಕಾದವನಿಗೆ ಎಂಟೆರ್ದೆ ಬೇಕು ಎನ್ನುತ್ತಾನೆ.

ಅದಕ್ಕೆ ಬೆರಗಾದ ವೀರಕುಮಾರನು "ಸೂಜಿಯ ಪಿನ್ನೆಯೊಳಂ ಮಣಿಯ ದ್ವಾರದೊಳಂ ನುಸುೞರ್ವರಿರ್ದೆಡೆಯೊಳೊರ್ವನಂ ಕಳ್ವಂತಪ್ಪ" ಕಳ್ಳರಕಳ್ಳನಾದ ನೀನೆ

ಹಿಂಜರಿದರೆ ಆ "ಮಹಾರತ್ನಮಂ ಕಳ್ವಂತಪ್ಪ ಗಂಡರಾರ್" ಎಂದು ಚಿಂತಿಸಿ, ನೆರೆದಿರ್ದ ಕಳ್ಳರನ್ನು ನೋಡಿ ಆ ರತ್ನವನ್ನು ತಂದು ಕೊಟ್ಟರೆ "ಕುಡುವೆಂ ಭಾವಿಸದೆನ್ನರ್ಧ ರಾಜ್ಯಮಂ ನಿಶ್ಚಯದಿಂ" ಎನ್ನುತ್ತಾನೆ. ಆಗ ಸೂರ್ಪನೆಂಬ ಕಳ್ಳನು "ದೇವ ನಾನಾವಸ್ತುವಂ ತಂದಪೆನ್" ಎಂದಾಗ ಅವನಿಗೆ ಕರ್ಪೂರ ವೀಳೆಯನ್ನು ಕೊಡುತ್ತಾನೆ. ಆಗ ವೀರಕುಮಾರನನ್ನು ಬೀಳ್ಕೊಂಡು ತನ್ನ ಮನೆಗೆ ಬಂದ ಆತನು 'ರತ್ನಮಂ ಕಳ್ವ ಉಪಾಯಮಂ ತನ್ನ ಮನದೊಳಗೆ ಭಾವಿಸಿಕೊಳ್ಳುತ್ತಾನೆ. ಆಗ ತಾನೇ ಅವನು ತನಗೆ ತಾನೆ ಆಡಿಕೊಳ್ಳುವ ಮಾತು ಗಮನಾರ್ಹವಾಗಿದೆ.

ತಾಂ ಕನ್ನಮಿಕ್ಕಿ ಧನಮಂ
ಭ್ರಾಂತಿಂದಂ ಕಳ್ವನೆಂಬನುಂ ಕಳ್ಳನೆ ಕೇಳ್
ಎಂತುಂ ನೋವುಂ ಸಾವು
ಚಿಂತೆಯುಮಣಮಾಗದಂತು ಕಳ್ವನೆ ಕಳ್ಳಂ

ಅದು ಕಾರಣದಿಂದ ಉತ್ಸುಕತನದಿಂ ಮೂರ್ಖನಾಗಿ ಪುಗುವುದು ಬುದ್ಧಿಯಲ್ಲದು, ಕೆಲವು ವರುಷಂ ತಡೆದೊಡಂ ಕಡೆಗಲ್ಲಿಗುಪಾಯಮಂ ಲೇಸಾಗಿ ಬಲ್ಲೆನಾತನೆರಡಿಲ್ಲದ ಶ್ರಾವಕಂ ಜಿನಧರ್ಮದೊಳ್ ಸ್ಥಿರಚಿತ್ತಂ ಋಷಿಯರ ಮೇಲೆ ಮಹಾ ಪ್ರೀತನದಱಿಂದೆ ಮಾಯಾ ಋಷಿಯ ರೂಪಂ ಕೈಕೊಂಡುಗ್ರೋಗ್ರ ತಪದೊಳೆನ್ನಂ ಲೋಕದೊಳ್ ಪ್ರಸಿದ್ಧನಂ ಮಾಡಿಕೊಂಡು ಕಾಮಲಿಪ್ತಿ ನಗರಮನೆಯ್ದಿ ಜಿನೇಂದ್ರ ಭಕ್ತಸೆಟ್ಟಿಯ ಮನೆಯಂ ಪೊಕ್ಕು ಮೆಲ್ಲನೆ ಮೆಲ್ಪಡಿಸಿ ರತ್ನಮನೆನ್ನಕಯ್ಗೆ ಮಾಡುವೆನೆಂಬ ಕಜ್ಜಮನೆತ್ತಿಕೊಂಡು ತನ್ನ ಪೆಂಡಿರುಮಂ ಪುತ್ರರುಮಂ ಬಂಧುಗಳುಮಂ ಕರೆದು ನೀವೆಲ್ಲರೆನ್ನ ಬರ್ಪಿನೆಗಂ ಬುದ್ಧಿವಂತರಾಗಿರ್ಪುದೆಂದಪ್ಪೈಸಿ ತತ್ಪುರದಿಂ ಪೊರಮಟ್ಟು ಮಾಯಾ ತಪವನ್ನು ಕೈಕೊಂಡನು. ಅದನ್ನು ಮನದೊಳ್ ಮೆಚ್ಚಿದ ಜಿನೇಂದ್ರಭಕ್ತ ಸೆಟ್ಟಿಯ ಮನೆಯ ಬಾಗಿಲ ಕಾವಲನ್ನು ಕಂಡು ಬೆಚ್ಚಿ ಕೊಳ್ಳುತ್ತಾನೆ. ಮತ್ತು ಇಂತಪ್ಪ ಬಲ್ಗಾವುಲುಂಟಪ್ಪುದಱಿಂದಂತಪ್ಪ ಕಳ್ಳರ ಕಳ್ಳಂ ಮೊದಲಾಗೆ ಪುಗಲ್ಕಣಿದನಿಲ್ಲ, ಬುದ್ಧಿಬಲದಿಂ ಭೋಂಕನೆ ನಂಟರ ಮನೆಯಂ ಪುಗವಂತು ಹೋಗುತ್ತಾನೆ. ಜಿನೇಂದ್ರಭಕ್ತಸೆಟ್ಟಿಯೊಂದು ದಿವಸಂ ಪರದುವೋಪೆನೆಂದು ಸುಭದಿನ ಸುಮುಹೂರ್ತದೊಳ್ ಜಿನೇಂದ್ರಾಭಿಷೇಕಮುಮಂ ಜಿನಮಹಾಪೂಜೆಗಳುಮಂ ಮಾಡಿಸಿ ಪೊಱವೀಡಂ ಬಿಟ್ಟಂ..... ಪುಣ್ಯದಿಂ ಜಿನೇಂದ್ರ ಭಕ್ತಸೆಟ್ಟಿಯುಂ ಪೋದನೊಳ್ಳಿತವಸರವಾಯ್ತೆಂದು ನಡುವಿರುಳಪ್ಪಾಗಳ್ ಕಾಪಿನ ಕಡಿತಕಾಱರ್ ಮಱೆದು ನಿದ್ರೆಗೆಯ್ವುದನಱಿದು ಮೆಲ್ಲನೆ ಟ್ಟು ಗರ್ಭಗೃಹಮಂ ಪೊಕ್ಕು ಮುಕ್ಕೊಡೆಯೊಳಿರ್ದ ವೈಡೂರ್ಯ ಮಾಣಿಕಮಂ ನೋಡಿ 'ನಿನ್ನ ಕತದಿಂದೆ ನಮೆದಂ ನಿನ್ನಂ ನಡೆನೋಡಿ ಸುಖಮನಱಿದೆಂ ......' ಎಂದು....... ಮುಂದೆ 'ರಾಜ್ಯ ವಿಭೂತಿಯನಾಳೋಚಿಸಿ ಸೊಡರಂ ಕಳೆದು ಪೊಱಮಟ್ಟು ಪೋಪುದುಂ ...... ಪೊಲಲೊಳಗೆ ತೊಟಲ್ವರಸನ ತಳಾಱರೋಡುವ ಮಾಂಸಾವಿಂಸ ಕೈಯೊಳ್ಬಾಲಾರ್ಕನಂತೆ ಪ್ರಜ್ವಲಿಸುವ ರತ್ನದ ಬೆಳಗಂ ಕಂಡು ಕಳಕಳ ರವಮಂ' ಮಾಡಲು ಒಳಗಿದ್ದ ಭಂಟರು ಎಚ್ಚತ್ತು ದೇಹಾರ ಮನೆಯಂ ಹೊಕ್ಕು ನೋಡಲಾಗಿ 'ದೇವರ ಮುಕ್ಕೊಡೆಯೊಳಿರ್ದ ವೈಢೂರ್ಯ ಮಾಣಿಕಮಂ ಕಾಣದೆ ಪೊಱಮಟ್ಟು ತಾಮುಂ ತತ್ಪುರದ ತಳಾಱರುಂ ಸುತ್ತಿಮುತ್ತಿಯಿನ್ನೆತ್ತ ಪೋದಪೆಯೆಂದು ಬೆನ್ನಟ್ಟಿ

ತಗುಳ್ಚಿಡುವುದುಮಂ ಕಡುಭಯದಿಂದಂ ನಡುಗಿ. ಇಲ್ಲಿ ನಿಂತರೆ ಸಾವು ನಿಶ್ಚಿತವೆಂದು ಚಿಂತಾಕ್ರಾಂತನಾಗಿ "ನಿಷ್ಠುರನಪ್ಪ ತಳಾಱನ ಕೈಯೊಳ್ ಕಡಿಗಂಡವಾಗೆ ಜೀಱೀಱಿಪೊಯ್ಸಿಕೊಂಡು ಸಾಯದೆ ವಾತ್ಸಲ್ಯರತ್ನಾಕರನ ಮಱೆಯಂ ಪೊಗುವೆ"ನೆಂದು ಪೊಱಮಡು ಹೋಗುತ್ತಾನೆ. ಜಿನೇಂದ್ರಭಕ್ತಶೆಟ್ಟಿ ದುರ್ಜನತ್ವಮುಮಂ ಕಂಡು ಬೆರಗಾಗುತ್ತಾನೆ. ಪುರದ ತಳಾಱರುಂ ತನ್ನ ದೇಹಾರದ ಕಾಪಿನ ಬಂಟರು ಕಳ್ಳನಿಲ್ಲಿ ಪೊಕ್ಕನೆಂದು ಬೀಡಿನೊಳ್ ಪೊಕ್ಕು ಕೈದೀವಿಗೆಯ ಬೆಳಕಿನೊಳ್ ನೋಡುತ್ತುಂ ಕಳಕಳ ರವದಿಂ ಪರಿವಾಗಳವರಂ ವಣಿಗ್ವಂಶಲಲಾಮಮುಂ ಕಂಡು ಸದ್ಧರ್ಮಕ್ಕೆ ಪಱಿಂಬಾಗದಂತೆ ನೆಗೞ್ದನೆಂದು ಪಿರಿಯ ಮಱೆಯ ಮೇಲಾತನನಿರಿಸಿ ಮಹಾಭಕ್ತಿಯಿಂ ಪ್ರತ್ಯಕ್ಷಂ ಮಾಯಾವಿಯ ಕಾಲಸೊತ್ತುತ್ತ ತಳಾಱ ನಾಯಕನ ಮೊಗಮಂ ನೋಡಿ ನೆರವಿಯೆಲ್ಲಂ ಕೇಳ್ವಂತಾಗೆ ಗಂಭೀರನಾದ ದಿಂದಿಂತೆಂದಂ 'ಕಳ್ಳನೆಂದು ಬೆನ್ನಟ್ಟಿದೆಯಿಂತೀ ಸಾಧು ತಪಸ್ವಿ ನಿಶ್ಚಯಂ ಕಳ್ಳನಪ್ಪೊಡೆ ಮತ್ತೊಂದು ದೆಸೆಗೆ ಪೋಗದೆನ್ನ ಬೀಡನೇಕೆ ಪುಗುವನವಱಿಂದಮಱಿಯಲ್ವೇಡಾ' ಎಂದಾಗ ತಳಾಱ ನಾಯಕಂ ಸಿಗ್ಗಾಗಿ ಬಂದ ಬಟ್ಟೆಯನೆ ಮುಗುೞ್ಚಿಸಿರದೆ ಪೋದಂ;

ಆಗ ಜನತೆ ತಳವಾರನನ್ನೇ ಬೈಯ್ಯುತ್ತಾ ಹೋಗುತ್ತಾರೆ. ಇತ್ತ ಜಿನಭಕ್ತ ಸೆಟ್ಟಿಯು ಆ ಮಾಯಾವಿಯನ್ನು ಒಂದೆಡೆ ರಹಸ್ಯ ಸ್ಥಳಕ್ಕೆ ಕರೆದೊಯ್ದು ಆತ ಮಾಡಿದ ನೀಚಕಾರ್ಯವನ್ನು ತಿಳಿಸಿ ನೀನು ಕಳ್ಳನೆಂದರೆ ಜನರಿಗೆ ಮುನಿಗಳ ಮೇಲಿನ ಶ್ರದ್ಧೆ ಕಡಿಮೆಯಾಗಬಾರದೆಂದು ನಿನ್ನನ್ನು ಬದುಕಿಸಿದೆ. ನೀನು ಈಗಿನ ಜನ್ಮದ ಸುಖವನ್ನು ಮಾತ್ರ ನೋಡಿದೆ ಮುಂದಿನ ಜನ್ಮದಲ್ಲಾಗುವ ಮಹಾದುಃಖವನ್ನು ಯೋಚಿಸಲಿಲ್ಲ ಎಂದು ಹೇಳಿ ಪಾಪ ಕೃತ್ಯ ಮಾಡಬಾರದು ಹಾಗೆ ಮಾಡುವುದರಿಂದ ಪಾಪ ತನಗೆ ತಟ್ಟುತ್ತದೆಂದು ಹೇಳುತ್ತಾ ಆ ಕಳ್ಳನನ್ನು ತಿದ್ದಿ ಜಿನಧರ್ಮ ಅನುಸರಿಸುವಂತೆ ಮಾಡುತ್ತಾನೆ.[೧೩]

ಹೀಗೆ ಒಬ್ಬ ಪರಿಣಿತ ಕಳ್ಳನು ಮಾಡುವ ಪ್ರತಿಯೊಂದು ಕೃತ್ಯದ ಬಗ್ಗೆ ಸುದೀರ್ಘವಾಗಿ ತಿಳಿಸುತ್ತಾನೆ. ಇಲ್ಲಿ ಕಳ್ಳನೊಬ್ಬ ಅಮೂಲ್ಯವಾದ ವಸ್ತುವನ್ನು ಕದಿಯಲು ಏನೆಲ್ಲ ಕಸರತ್ತು ಸಾಹಸ ಮಾಡಬೇಕಾಗುತ್ತದೆ ಎಂಬುದನ್ನು ಅರಿಯಬಹುದು. ಕೆಲವು ಸಂದರ್ಭದಲ್ಲಿ ರಾಜನ ಮಕ್ಕಳೇ ಕೆಟ್ಟವರಾಗಿ ಕಳ್ಳರಿಗೆ ಪ್ರೋತ್ಸಾಹ ಕೊಡುತ್ತಿದ್ದ, ಕಳ್ಳರೆಲ್ಲ ಸೇರಿ ಎಲ್ಲೆಲ್ಲಿ ಎಂಥೆಂಥ ಅಮೂಲ್ಯ ವಸ್ತುಗಳಿವೆ ಎಂಬುದನ್ನು ಚರ್ಚಿಸುತ್ತಿದ್ದ, ಅವನ್ನು ದೋಚಲು ಸರಿಯಾದ ಯೋಜನೆಗಳನ್ನು ಮಾಡಿ ಅದಕ್ಕೆ ತಕ್ಕಂತೆ ನಡೆಯುತ್ತಿದ್ದ ಸಂಗತಿ ತಿಳಿಯುತ್ತದೆ. ಹಾಗೆ, ಊರಿನ ತಳವಾರರು ಸದಾ ಜಾಗೃತರಾಗಿರುತ್ತಿದ್ದರೆಂಬುದಕ್ಕೆ ಕದ್ದು ಓಡುತ್ತಿದ್ದ ಸೂರ್ಪನನ್ನು ಬಂಧಿಸಲು ಮಾಡುವ ಪ್ರಯತ್ನದಿಂದ ಗೊತ್ತಾಗುತ್ತದೆ. ಇದೇ ಭಾಗದಲ್ಲಿ ಕಳ್ಳನಾದವನು ಆಸೆಗಾಗಿ ಕದಿಯಬಾರದು ಪ್ರಸಿದ್ಧಿಗಾಗಿ ಕದಿಯಬೇಕೆಂಬ ಅಂಶ, ಹಾಗೆ ನಿಜವಾದ ಕಳ್ಳ ಹೀನ ಧೈರ್ಯತಾಳಿ ಕದಿಯದೆ ಉಪಾಯದಿಂದ ಕದಿಯಬೇಕೆಂದಿರುವುದು ಕೂಡ ಗಮನಾರ್ಹ. ಒಮ್ಮೊಮ್ಮೆ ಬುದ್ಧಿವಂತನಾದ ತಳವಾರನು ಆತನಿಗಿಂತಲೂ ಬುದ್ಧಿವಂತನಾದ ಕಳ್ಳನಿಗೆ ಮೋಸ ಹೋಗುವ ಸಾಧ್ಯತೆಯನ್ನು, ಹಾಗೆ ಮೋಸ ಹೋದಾಗ ಆ ತಳವಾರನನ್ನು ಊರ ಜನರೆಲ್ಲ ಟೀಕಿಸುತ್ತ ಹೋಗುತ್ತಿದ್ದುದ್ದನ್ನು

ಕಾಣುತ್ತೇವೆ. ಒಟ್ಟಾರೆ ಈ ಕಥಾ ಭಾಗದಲ್ಲಿ ಒಬ್ಬ ನಿಷ್ಣಾತ ಕಳ್ಳನ, ಆತನ ಕಾರ್ಯಾಚರಣೆಯ ವಿವರವಾದ ಚಿತ್ರಣವನ್ನು ಕಾಣಬಹುದು.

ಧರ್ಮಾಮೃತದ ಏಳನೇ ಆಶ್ವಾಸದಲ್ಲಿಯೂ ಕಳ್ಳನೊಬ್ಬನ ಪ್ರಸಂಗ ಬರುತ್ತದೆ. ಅಲ್ಲಿಯ ಕಳ್ಳನು ಸೂಳೆಯ ಸಹವಾಸಮಾಡಿ, ಆಕೆಯ ಬೇಡಿಕೆಯಂತೆ ರಾಜಶ್ರೇಷ್ಠಿಯ ಹೆಂಡತಿಯ ಕೊರಳ ಹಾರವನ್ನು ಕದ್ದು ಓಡಿಹೋಗುವಾಗ ಕಳ್ಳನನ್ನು ನೋಡಿದ ತಳವಾರ ದೊಣ್ಣೆ, ಕಲ್ಲು, ಗುಂಡುಗಳಿಂದ ಕಳ್ಳನಿಗೆ ಹೊಡೆಯುತ್ತಾ ಬೆನ್ನು ಹತ್ತುವದನ್ನು ಕಾಣುತ್ತೇವೆ. ಸದಾ ಜಾಗೃತನಾಗಿರುತ್ತಿದ್ದ ತಳವಾರನ ಕೈಯ್ಯಲ್ಲಿ ಸಿಕ್ಕಿಬಿದ್ದು ಮರಣ ದಂಡನೆಗೆ ಗುರಿಯಾಗುತ್ತಿದ್ದ ಕಳ್ಳನು ತಾನು ಒಮ್ಮೆ ಬದುಕಿದರೆ ಸಾಕೆಂದು ಬೇರೆಯವರ ಮೇಲೆ ಸರವನ್ನು ಎಸೆದು, ಅವರ ಮೇಲೆ ಆರೋಪ ಬರುವಂತೆ ಮಾಡಿ ತಾನು ಓಡಿಹೋಗುವದನ್ನು ಕಾಣುತ್ತೇವೆ. ನಿರಪರಾಧಿಯಾದವನು ಅಪರಾಧಿಯಂತೆ ಕಂಡಾಗ ಆತನು ರಾಜನ ಮಗನಾಗಿದ್ದರೂ ಶಿಕ್ಷೆ ಆಗುವುದನ್ನು ಈ ಭಾಗದಲ್ಲಿ ಕಾಣುತ್ತೇವೆ[೧೪]. ಕಳ್ಳತನಕ್ಕೆ ಸಾಕ್ಷಿ ಸಿಕ್ಕರೆ ಸಾಕು ಆತನನ್ನು ದೋಷಿ ಎಂದು ನಿರ್ಧರಿಸಿಬಿಡುತ್ತಿದ್ದಂತಿದೆ. ಕೆಲವು ಸಂದರ್ಭಗಳಲ್ಲಿ ರಾಜನ ಮಗನೆಂಬ ದಂಬಿನಿಂದ ಕುಕೃತ್ಯ ಎಸಗುತ್ತಿದ್ದರೆಂಬುದನ್ನು ಇಲ್ಲಿ ತಳವಾರನ ಮಾತಿನಿಂದ ತಿಳಿಯಬಹುದು. ವ್ಯಭಿಚಾರ, ಕಳ್ಳತನ ಹೀಗೆ ಯಾವುದೇ ಅಪರಾಧ ಮಾಡಿದರೂ ಅಂಥವರನ್ನು ಹಿಡಿದು ಶಿಕ್ಷಿಸುತ್ತಿದ್ದ; ಅರಸನ ಅಧಿಕಾರಿಗಳ ಮಕ್ಕಳೆಂದರೂ ಕೇಳದೇ ಶಿಕ್ಷೆ ವಿಧಿಸುತ್ತಿದ್ದ ಅಂಶವನ್ನು ಇಲ್ಲಿ ಮನಗಾಣಬಹುದಾಗಿದೆ.

ಹಾಗೆಯೇ ಧರ್ಮಾಮೃತದ ದ್ವಾದಶಾಶ್ವಾಸದ ಒಂದು ಉಪ ಕಥೆಯಲ್ಲಿ ಕಳ್ಳತನದ ಪ್ರಸ್ತಾಪವಿದೆ. ರಾಜಶ್ರೇಷ್ಠಿಯ ಮಗುವೊಂದು ದಿನನಿತ್ಯ ಮೈಮೇಲೆ ಒಡವೆಗಳನ್ನು ಹಾಕಿಕೊಂಡೇ ಅಂಗಳದಲ್ಲಾಡುತ್ತಿತ್ತು. ಅದನ್ನು ಕಂಡ ನೆರೆಮನೆಯಾಕೆ ಆಭರಣಗಳ ಆಸೆಗೆ ಮಗುವನ್ನು ಕೊಂದು, ಆಭರಣ ಪಡೆದು, ತನ್ನನ್ನು ರಕ್ಷಿಸಿಕೊಳ್ಳುವುದಕ್ಕೆ ಆ ಊರಿನ ಎತ್ತಿನ ಕೊಂಬಿನಲ್ಲಿ ಮಗುವಿನ ಹೆಣವನ್ನು ಸಿಕ್ಕಿಸಿ ಬರುತ್ತಾಳೆ. ಆ ಎತ್ತಿನ ಕೊಂಬಿನಲ್ಲಿರುವ ಮಗುವನ್ನು ಕಂಡ ಜನ ಅದೇ ಮಗುವನ್ನು ಕೊಂದಿದೆ ಎಂದು ಬಡಿಯುತ್ತಾರೆ. ಆದರೆ 'ದಿವ್ಯ'ದ ಮೂಲಕ ಆ ಎತ್ತು ನಿರಪರಾಧಿ ಎಂದು ಸಾಧಿತವಾದಾಗ ತಳವಾರನ ಮೂಲಕ ನಿಜವಾದ ಕೊಲೆಗಾರ್ತಿಯನ್ನು ಹಿಡಿಯಲಾಗುತ್ತದೆ[೧೫]. ಹೀಗೆ ಹೆಂಗಸರೂ ಕೂಡ ಕಳ್ಳತನದ ಅಪರಾಧ ಎಸಗುತ್ತಿದ್ದರೆಂಬುದನ್ನು ಅರಿಯಬಹುದು.

ಹೀಗೆ ಪ್ರಾಚೀನ ಕನ್ನಡ ಸಾಹಿತ್ಯ ಕೃತಿಗಳಲ್ಲಿ ನೂರಾರು ಅಪರಾಧಗಳ ಉಲ್ಲೇಖಗಳಿದ್ದು; ಇವು ಒಂದರ್ಥದಲ್ಲಿ ಮಾನವನ ದೌರ್ಬಲ್ಯದ ಕ್ರಿಯೆಗಳು ಮನುಷ್ಯನಷ್ಟೇ ಸಂಕೀರ್ಣ ಹಾಗೂ ನಾನಾ ಸ್ವರೂಪದವಾಗಿರುದನ್ನು ಕಾಣಬಹುದಾಗಿದೆ. ಈ ಹಿನ್ನಲೆಯಲ್ಲಿ ಅಪರಾಧಗಳ ವಿಸ್ತಾರವಾದ ಪಟ್ಟಿಯನ್ನು ಕೊಡಮಾಡುವುದಕ್ಕಿಂತ ಆಯಾ ಅಪರಾಧಗಳ ಹಿಂದಿನ ಮಾನವನ ಮನೋಪ್ರವೃತ್ತಿಯನ್ನು ಲಕ್ಷಿಸಿ, ಸಾಧ್ಯವಿದ್ದಷ್ಟು ಮಿತಗೊಳಿಸುವುದು ಅರ್ಥಪೂರ್ಣವೆನಿಸುತ್ತದೆ.

೧. ಆದಿಪುರಾಣ : ಆ.೫ ಪ.೧೯- ೨೦ವ

೨. ಶಾಂತಿಪುರಾಣ : ಆ.೬. ಪ.೪೯. ಪು.೧೧೭

೩. ಭಗವದ್ಗೀತೆಯಲ್ಲಿನ ಕಾಮಾತ್ ಜಾಯತೇ ಕ್ರೋಧಃ . . . . ಶ್ಲೋಕವು ಕೂಡ ಇದೇ ಅಭಿಪ್ರಾಯದ್ದಾಗಿದೆ. ಒಂದರ್ಥದಲ್ಲಿ ಇಂಥ ಮನೋ ವಿಶ್ಲೇಷಣೆಯನ್ನು ಎಲ್ಲ ಧರ್ಮಚಿಂತನೆಗಳು ನಡೆಸಿವೆ.

೪. ಚೌರ್ಯಕರ್ಮ (ಲೇಖನ) - ಭೀಮರಾವ್ ಚಿಟಗುಪ್ಪಿ : ಪು.೨೯೭ (ಅಧ್ಯಯನ- ಡಾ. ಎಂ. ಚಿದಾನಂದಮೂರ್ತಿ (ಸಂ)

೫. ವಡ್ಡಾರಾಧನೆ. ವಿದ್ಯುಚ್ಚೋರನೆಂಬ ರಿಸಿಯ ಕಥೆ : ಪು. ೧೨೮

೬. ಆದಿ ಪುರಾಣ ಆ.೫. ಪ. ೧೪ವ-೧೬ ಪು. ೨೨೨-೨೩

೭. ಪೊನ್ನನಶಾಂತಿಪುರಾಣಂ; ಎ. ವೆಂಕಟರಾವ್ ಮತ್ತು ಎಚ್. ಶೇಷಯ್ಯಂಗಾರ್ (ಸಂ) ಆ. ೪ ಪು. ೬೩

೮. ಚಾವುಂಡರಾಯಪುರಾಣಂ. ಎಂ. ವೆಂಕಟರಾವ್ ಮತ್ತು ಎಚ್. ಶೇಷಯ್ಯಂಗಾರ್ (ಸಂ) ಪು. ೩೧೩

೯. ಕರ್ಣಾಟಕ ಪಂಚತಂತ್ರಂ. ವಿಶ್ವಾಸ ಪ್ರಕರಣ. ಗುಂಡ್ಮಿ ಚಂ. ಐತಾಳ (ಸಂ). ಪು. ೨೮೮-೨೯೦

೧೦. ಕರ್ಣಾಟಕ ಪಂಚತಂತ್ರಂ. ವಿಶ್ವಾಸ ಪ್ರಕರಣ: ಪು. ೧೫೨-೧೫೪

೧೧. ಧರ್ಮಾಮೃತ: ಆ.೬. ಪ.೭ - ೧೫೩. ಪು. ೧೦೯-೧೪೪

೧೨. ಧರ್ಮಾಮೃತ : ಆ೨. ಪ.೧೬೧-೧೬೭. ಪು. ೧೪೮-೧೫೦

೧೩. ಧರ್ಮಾಮೃತ : ಆ.೬. ಪ.೧೩-೧೨೬. ಪು. ೩೬೯-೩೯೯

೧೪. ಧರ್ಮಾಮೃತ; ಆ.೭. ಪ. ೮೩-೯೩. ಪು. ೪೫೫-೫೮

೧೫. ಧರ್ಮಾಮೃತ; ಆ.೧೨. ಪ. ೧೧೩-೧೧೭ ಪು. ೮೩೯-೮೪೦

ಡಾ. ಎಚ್.ಎಮ್. ಚನ್ನಪ್ಪಗೋಳ, ಕನ್ನಡ ಉಪನ್ಯಾಸಕರು, ಜಿ.ಆಯ್. ಬಾಗೇವಾಡಿ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯ ನಿಪ್ಪಾಣಿ. ತಾ: ಚಿಕ್ಕೋಡಿ, ಜಿ: ಬೆಳಗಾವಿ.

ವಚನಕಾರ ವೀರಗೊಲ್ಲಾಳ

ಪ್ರೊ. ಜಿ.ಎಸ್. ಸಿದ್ಧರಾಮಯ್ಯ

ಹೋತನ ಹೊಡೆದು, ಆಡಕೂಡಿ ಕುರಿಯನಿಲಿಸಿ
ತಗರ ತಡೆದು, ಹಿಂಡನೊಬ್ಬುಳಿತೆ ಮಾಡಿ
ಹುಲಿ ತೋಳ ಚೋರ ಭಯಮಂ ಕಳೆದು
ಹಿಂಡಿಗೊಡೆಯನಾಗಿ ಕಾವಗೊಲ್ಲಾಳ ನೀನೆ
ವೀರಬೀರೇಶ್ವರಾ

ಈ ವಚನದ ಪರಿಭಾಷೆಗಳನ್ನು ಗಮನಿಸಿ. ಇದು ಕಾಯಕವೊಂದರ ಕ್ರಿಯಾವಿಧಿಯನ್ನು ಹೇಳುತ್ತಿದೆ. ಆದರೆ, ಬರೀ ಕಾಯಕದ ವರ್ಣನೆಯಲ್ಲಿ ಪರ್ಯವಸಾನಗೊಳ್ಳುತ್ತಿಲ್ಲ; ಕಾಯಕ ವರ್ಣನೆಯ ಮುಖೇನ ಭಗವಂತನ ಪಾರಮ್ಯವನ್ನು ಧ್ವನಿಸುತ್ತಾ ಕಾಯಕದಲ್ಲಿ ಕೈಲಾಸ ಸ್ಥಿತಿಯನ್ನು ಕಾಣಿಸುತ್ತಿದೆ. ಇದು ವಚನಗಳ ವಿಶಿಷ್ಟತೆ. ಶರಣರು ಕಾಯಕವೇ ಕೈಲಾಸವೆಂದು ಬರಿದೆ ನುಡಿಯಲಿಲ್ಲ. ನುಡಿಯೊಳಗಾಗಿ ನಡೆದರು. ನಡೆಯೊಳಗಾಗಿ ನುಡಿದರು. ಮೂಲದಲ್ಲಿ ಕಾಯಕ ಜೀವಿಗಳು ಸಂಘಟಿತವಾದಂತೆ ನಡೆಸಿದ ಚಳುವಳಿ ವಚನ ಚಳುವಳಿ. ಬಸವಣ್ಣನವರ ನೇತೃತ್ವದಲ್ಲಿ ಈ ಸಂಘಟನೆ ಬಲಗೊಂಡು ಹೋರಾಟದ ಒಂದು ದಿಕ್ಕನ್ನು ಕಂಡುಕೊಂಡರೂ ಇದು ಕಾಯಕ ಜೀವಿಗಳ ವಲಯದಲ್ಲಿ ಮೊದಲು ಸಂಚಲನೆ ಪಡೆದುಕೊಂಡಿತೆಂಬುದಕ್ಕೆ ಕಾಯಕ ಜೀವಿ ವಚನಕಾರರ ವಚನಗಳೇ ಪ್ರಬಲ ಆಧಾರ; ಅವೇ ಪ್ರಮಾಣು. ಈ ಕಾರಣದಿಂದಲೇ ವಚನಗಳು ಬರೆಯಬೇಕೆಂಬ ಸಾಹಿತ್ಯಿಕ ಉಮೇದಿನಲ್ಲಿ ಬರೆದವುಗಳಲ್ಲ; ಬರೆಯಲೇ ಬೇಕಾದ ಚಳುವಳಿಯ ಅನಿವಾರ್ಯತೆಯಲ್ಲಿ ರೂಪುತಳೆದವು. ಹೀಗಾಗಿ ಅವು ವಿಶೇಷವಾಗಿ ಮತ್ತೊಬ್ಬರ ಕೂಡೆ ಸಂಭಾಷಿಸಿದ ಶೈಲಿಯಲ್ಲಿ ಇರುತ್ತವೆ. ಆ ಸಂಭಾಷಣೆಯಲ್ಲಿ ಬದುಕಿಗೆ

ಸಂಬಂಧಿಸಿದ ವಿಚಾರ ಚರ್ಚಿತವಾಗಿ ವಚನಕಾರರ ಭಾವನೆ ಆಲೋಚನೆಗಳ ಮೂಲದ ಅನುಭವ ದ್ರವ್ಯ ಆಕೃತಿಗೊಂಡಿರುತ್ತದೆ. ಇದು ಎಲ್ಲ ಶ್ರಮ ಮೂಲದ ವಚನಕಾರರ ವಿಶೇಷತೆ ಹಾಗೂ ಅಸ್ಮಿತೆ.

ಪ್ರಸ್ತುತ ಮೇಲೆ ಉದಾಹರಿಸಿರುವ ವಚನ ವೀರಗೊಲ್ಲಾಳನದು. ಅವನ ಇಷ್ಟದೈವ ವೀರ ಬೀರೇಶ್ವರಾ. ಇವನು ಕುರಿಕಾಯುವ ಕಾಯಕದಲ್ಲಿ ತೊಡಗಿದ್ದು, ಹನ್ನೆರಡನೇ ಶತಮಾನದ ಸಾಮಾಜಿಕ ಚಳುವಳಿಯಲ್ಲಿ ಪಾಲ್ಗೊಂಡಿದ್ದವನು. ಇವನು ಅಕ್ಷರ ಬಲ್ಲವನಾಗಿದ್ದನೇ? ಈ ಪ್ರಶ್ನೆ ಇವನೊಬ್ಬನನ್ನು ಕುರಿತಂತೆ ಹುಟ್ಟುವ ಪ್ರಶ್ನೆ ಅಲ್ಲ. ೧೨ನೇ ಶತಮಾನದಲ್ಲಿದ್ದ ಹಲವು ಜನ ಶ್ರಮಜೀವಿ ವಚನಕಾರರನ್ನು ಸುತ್ತುವರಿದಂತೆ ಬೆಳೆಯುವ ಪ್ರಶ್ನೆ. ಉತ್ತರ ಏನೇ ಇರಲಿ, ಪ್ರಶ್ನೆ ಮಹತ್ತರ ಸಂಗತಿಯೊಂದರ ಕಡೆಗೆ ತೋರು ಬೆರಳು ನೀಡುತ್ತದೆ. ಅದೆಂದರೆ, ಈ ಶ್ರಮಜೀವಿಗಳು ಬರೆದದ್ದಕ್ಕಿಂತ ಬರೆದಿರುವುದೇ ಹೆಚ್ಚು. ಅಂದರೆ, ಇವು ವಾಚಿಸಿದ ವಚನಗಳು. ಹೀಗೆ ಶರಣನೊಬ್ಬ ತಾನು ಸಾಂದರ್ಭಿಕವಾಗಿ ವಾಚಿಸಿದ ವಚನ ಅವನದೆನ್ನುವುದಕ್ಕೆ ಅವನ ಇಷ್ಟದೈವದ ಪ್ರಮಾಣು ಅಂಕಿತ ರೂಪಿಯಾಗಿ ಛಾಪುಗೊಳ್ಳುತ್ತಿತ್ತು; ವಚನಕಾರನ ಇಷ್ಟದೈವ ಪ್ರಮಾಣುವಿನಲ್ಲಿ ಬರೆಯಲ್ಪಟ್ಟ ವಚನಗಳು ಜನರ ಬಾಯಲ್ಲಿ ನೆನಪಿನ ವಾಹಕತ್ವದಲ್ಲಿ ಬದುಕಿನ ಆಚಾರ ವಿಚಾರಗಳಾಗಿ ಪ್ರವಹಿಸುತ್ತಿದ್ದವು. ಹೀಗಾಗಿ ವಚನ ಸಾಹಿತ್ಯ ಬರಹದ ರೂಪದಲ್ಲಿ ಬಂದದ್ದಕ್ಕಿಂತ ಬಾಯಿ ಮಾತಿನಲ್ಲಿ ಸಂಚಲಿಸಿದ್ದೇ ಹೆಚ್ಚು. ಅದರಲ್ಲೂ ವಿಶೇಷವಾಗಿ ಕಾಯಕ ಜೀವಿ ವಚನಕಾರರ ವಚನಗಳ ಸ್ಥಿತಿ ಇದಾಗಿತ್ತು. ಶ್ರಮ ಜೀವಿ ವಚನಕಾರರ ಈಗ ಸಿಕ್ಕಿರುವ ವಚನಗಳ ಸಂಖ್ಯಾ ಪ್ರಮಾಣುವನ್ನು ಗಮನಿಸಿದರೆ ಈ ಮಾತಿನ ಅರಿವಾಗುತ್ತದೆ. ಸೂಳೆ ಸಂಕವ್ವೆಯ ವಚನ ನಮಗೆ ಸಿಕ್ಕಿರುವುದು ಒಂದೇ ಒಂದು. ವರದ ಸಂಕಣ್ಣಗಳ ವಚನ ಕೂಡ ಒಂದೇ ಒಂದು. ಅದೇ ರೀತಿ ವೀರಗೊಲ್ಲಾಳನ ವಚನಗಳ ಸಂಖ್ಯೆ ಕೇವಲ ಹತ್ತು.

ವೀರ ಗೊಲ್ಲಾಳನ ಬಗ್ಗೆ ಹಲವು ಕಾವ್ಯಗಳಲ್ಲಿ ಪ್ರಸ್ತಾಪಬರುತ್ತದೆ. ಹರಿಹರ ಪಾಲ್ಕುರಿಕೆಸೋಮನಾಥ 'ಭೀಮಕವಿ' ಗುಬ್ಬಿಯಮಲ್ಲಣಾರ್ಯ, ಅದೃಶ್ಯಕವಿ ವಿರೂಪಾಕ್ಷಪಂಡಿತ, ಲಕ್ಕಣ ದಂಡೇಶ, ಸಿದ್ಧನಂಜೇಶ, ಶಾಂತಲಿಂಗದೇಶಿಕ ಮುಂತಾದ ವೀರಶೈವ ಕವಿಗಳು ಬರೆದಿರುವ ಕೃತಿಗಳಲ್ಲಿ ಗೊಲ್ಲಾಳನ ಬಗೆಗೆ ಪ್ರಾಸಂಗಿಕವಾಗಿ ಪ್ರಸ್ತಾಪಿಸಲಾಗಿದೆ. ಇದಕ್ಕಿಂತ ವಿಶೇಷವೆಂದರೆ, ಗೊಲ್ಲಾಳನು ಬದುಕಿದ ಪ್ರದೇಶದಲ್ಲಿ ಇಂದಿಗೂ ಅವನನ್ನು ಕುರಿತಂತೆ ಜನಪದರು ಕಥೆ ಹೇಳುತ್ತಾರೆ. ಪದ ಹಾಡುತ್ತಾರೆ. ಹೀಗಾಗಿ ವೀರ ಗೊಲ್ಲಾಳ ಶರಣರ ಸಮುದಾಯದಲ್ಲಿ ಒಬ್ಬ ಪ್ರಭಾವಿ ವ್ಯಕ್ತಿಯಾಗಿದ್ದನೆಂಬುದು ನಿರ್ವಿವಾದ ಸಂಗತಿ. ಅವನ ಬದುಕಿನ ವಿವರಗಳನ್ನು ಕೇಳಿದರೆ, ಅವನೊಬ್ಬ ಹೋರಾಟಗಾರನಾಗಿದ್ದನೆಂಬುದು ವಿಶೇಷವಾಗಿ ಗಮನಿಸಬೇಕಾದ ವಿಚಾರ. ವಚನ ಚಳುವಳಿಯೇ ಸಾಮಾಜಿಕ ನ್ಯಾಯಕ್ಕಾಗಿ ಸಂಘಟಿತನಾದ ಹೋರಾಟದ ಚಳುವಳಿ. ಆ ಚಳುವಳಿಯ ಉಪ ಉತ್ಪನ್ನಗಳಾಗಿರುವ ವಚನಗಳಲ್ಲಿ ಆ ಹೋರಾಟದ ಆಶಯಗಳು ನೇರವಾಗಿ, ಕಾವ್ಯಾತ್ಮಕವಾಗಿ ಪ್ರಕಟವಾಗಿರುವುದು ವಿದಿತ ಸತ್ಯ.

ವೀರ ಗೊಲ್ಲಾಳನು ಕುರುಬರವನು ಎಂಬುದಕ್ಕೆ ಹೊರಗಿನ ಸಾಕ್ಷ್ಯಾಧಾರಗಳ ಅಗತ್ಯವಿಲ್ಲ. ಅವನ ವಚನಗಳೇ ಇದನ್ನು ಪ್ರಮಾಣೀಕರಿಸುತ್ತಿವೆ. ವಿಜಾಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ಗೊಲಗೇರಿ ಗ್ರಾಮದ ಹತ್ತಿರವಿರುವ ಢವಲಾರ ಹೆಸರಿನ ಹಳ್ಳಿಯಲ್ಲಿ ವೀರ ಗೊಲ್ಲಾಳನು ಹುಟ್ಟಿದ್ದನೆಂದು ತಿಳಿದುಬರುತ್ತದೆ. ಕುರುಬ ಜನಾಂಗದಲ್ಲಿ ಹುಟ್ಟಿದ ಇವನು ಸ್ಥಿತಿವಂತ ಕುಟುಂಬಕ್ಕೆ ಸೇರಿದವನಾಗಿದ್ದ. ಇವನ ತಂದೆ ಕಾಟಕೋಟ. ಇವನ ಇನ್ನೊಂದು ಹೆಸರು ಬಲ್ಲುಗ. ಗೊಲ್ಲಾಳನ ತಾಯಿ ದುಗ್ಗಳೆ ದುಗ್ಗಳವ್ವಾ. ಗೊಲ್ಲಾಳನ ಬದುಕಿನಲ್ಲಿ ನಡೆದ ಮಹತ್ವದ ಘಟನೆಯೊಂದು ಅವನ ಜೀವನದ ಬದಲಾವಣೆಗೆ ಕಾರಣವಾಗಿದೆ ಎಂಬುದು ಚರಿತ್ರೆಯಿಂದ ತಿಳಿದುಬರುತ್ತದೆ. ಗೊಲ್ಲಾಳನು ಕುರಿ ಮೇಯಿಸುತ್ತಿದ್ದ ಅಡವಿಯ ಮಾರ್ಗದಲ್ಲಿ ಶ್ರೀಶೈಲದ ಕಡೆಗೆ ಹೊರಟ ಯಾತ್ರಿಗಳ ಗುಂಪೊಂದು ಬರುತ್ತದೆ. ಆ ಗುಂಪಿನಲ್ಲಿದ್ದವರು ಶ್ರೀಶೈಲ ಮಲ್ಲಿಕಾರ್ಜುನ ದೈವದ ಹೆಸರಿಡಿದು ಉಘೇ ಎಂದು ಕೂಗುತ್ತಾ ನಡೆದಿರುತ್ತಾರೆ. ಆಗ ಗೊಲ್ಲಾಳನು ಗುಂಪಿನಲ್ಲಿದ್ದ ನಂದಯ್ಯ ಎಂಬುವನನ್ನು ಮಾತನಾಡಿಸಿ, ಯಾತ್ರೆಯ ವಿವರ ತಿಳಿದುಕೊಳ್ಳುತ್ತಾನೆ. ನಂದಯ್ಯನು ಮಲ್ಲಿಕಾಜುನ ದೈವದ ಬಗ್ಗೆ ಹೇಳಿದ ಮಾತುಗಳಿಂದ ಪ್ರಭಾವಿತನಾದ ಗೊಲ್ಲಾಳನು ಶ್ರೀಶೈಲ ಯಾತ್ರೆಗೆ ಹೊರಡುವ ಮನಸ್ಕನಾಗುತ್ತಾನೆ. ಆದರೆ ಕುರಿ ಕಾಯುವ ಕರ್ತವ್ಯದಿಂದಾಗಿ ಹೋಗಲಾರದವನಾಗಿ ನಂದಯ್ಯನನ್ನು ಹಿಂತಿರುಗಿ ಬರುವಾಗ ತನಗೂ ಶ್ರೀಶೈಲದಿಂದ ಲಿಂಗವೊಂದನ್ನು ತಂದು ಕೊಡಲು ಕಳುಹಿಸುತ್ತಾನೆ. ಆದರೆ, ಹಿಂದಿರುಗಿ ಬರುವಾಗ ನಂದಯ್ಯ ಲಿಂಗ ತರುವುದನ್ನು ಮರೆತಿರುತ್ತಾನೆ. ದೂರದಿಂದಲೇ ತನಗಾಗಿ ಕಾಯುತ್ತಾ ನಿಂತಿದ್ದ ಗೊಲ್ಲಾಳನನ್ನು ನೋಡಿದ ನಂದಯ್ಯನಿಗೆ ಕಸಿವಿಸಿಯಾಗುತ್ತದೆ. ಕೊನೆಗೆ ಉಪಾಯವೊಂದು ಹೊಳೆಯುತ್ತದೆ. ಅದರಂತೆ ಕುರಿಯ ಪಿಚಿಕೆ(ಹಿಕ್ಕೆ) ಯೊಂದನ್ನು ಹಿಡಿದುಕೊಂಡು ಅದನ್ನೇ ಲಿಂಗವೆಂದು ನಂಬಿಸಿ ಗೊಲ್ಲಾಳನಿಗೆ ಕೊಡುತ್ತಾನೆ. ಕೊಟ್ಟು ಪೂಜೆಯ ವಿಧಾನ, ಲಿಂಗದ ಮಹಾತ್ಮೆ ಇತ್ಯಾದಿಗಳನ್ನು ಬೋಧಿಸುತ್ತಾನೆ ಮತ್ತು ಸರ್ವಸಮರ್ಪಣಭಾವದಲ್ಲಿ ಪೂಜಿಸಿದರೆ ಅವನೊಬ್ಬ ಶಿವಶರಣನಾಗುವನೆಂದು ಹೇಳುತ್ತಾನೆ. ಅಲ್ಲದೆ, ಆ ಲಿಂಗವನ್ನು ಒಂದು ಕಡೆ ಸ್ಥಾಪಿಸಿ, ೨೧ ದಿನ ಕುರಿಯ ಹಾಲಿನಲ್ಲಿ ಅಭಿಷೇಕ ಮಾಡುವಂತೆಯೂ ದಿನವೂ ಪ್ರಸಾದವಾಗಿ ನೀಡಿ ಪೂಜಿಸುವಂತೆಯೂ ಬೋಧಿಸಿ ಹೋಗುತ್ತಾನೆ. ಹೀಗೆ ಹೇಳಲು ಕಾರಣ ೨೧ ದಿನಗಳ ಅವಧಿಯಲ್ಲಿ ತಮ್ಮ ಸ್ವಸ್ಥಳಕ್ಕೆ ಹೋಗಿ ಸೇರಿಕೊಳ್ಳಬಹುದು, ಇದರಿಂದ ತಮ್ಮ ಮೋಸಕ್ಕೆ ಗೊಲ್ಲಾಳನು ಬೆನ್ನತ್ತಿ ಬಂದು ಪ್ರತೀಕಾರ ಮಾಡುವುದರಿಂದ ತಪ್ಪಿಸಿಕೊಳ್ಳಬಹುದು ಎಂಬ ಆಲೋಚನೆ ಆ ನಂದಯ್ಯನದಾಗಿರುತ್ತದೆ. ಆದರೆ, ಗೊಲ್ಲಾಳನ ಮುಗ್ಧ ಭಕ್ತಿ ನಂದಯ್ಯನ ಮಾತನ್ನು ನಂಬಿಕೆಯ ನೆಲೆಯಲ್ಲಿ ನಿಜದ ವಿಚಾರವಾಗಿ ಸ್ವೀಕರಿಸುತ್ತದೆ. ಅದರಂತೆ ಆ ಕುರಿಯ ಪಿಚಿಕೆಯನ್ನು ತಮ್ಮ ಕುರಿಯ ಕಳ್ಳೆಯಲ್ಲಿ ಪ್ರತಿಷ್ಠಾಪಿಸಿ, ನಿತ್ಯ ಕುರಿಯು ಹಾಲಿನಿಂದ ಅಭಿಷೇಕ ಮಾಡಲು ಪ್ರಾರಂಭಿಸುತ್ತಾನೆ. ತನಗೆ ಬಂದ ಬೋನವನ್ನು ಪ್ರಸಾದವಾಗಿ ಅರ್ಪಿಸಿ, ಪೂಜೆಗೈಯುತ್ತಾನೆ. ಈ ಪೂಜೆ ಹೀಗೆ ನಿತ್ಯವಿಧಿಯಾಗಿ ನಡೆಯುತ್ತಿರುವಾಗ ಗೊಲ್ಲಾಳನು ಕುರಿಯ ಹಾಲನ್ನು ಮನೆಗೆ ಕಳಿಸದೆ ಇರುವುದು ತಂದೆಗೆ ಗೊತ್ತಾಗಿ ವಿಚಾರಿಸುವ ಸಲುವಾಗಿ ಕುರಿಯ ರೊಪ್ಪಕ್ಕೆ ಬರುತ್ತಾನೆ. ಬಂದು ನೋಡಲಾಗಿ

ಹಾಲಿನ ಹಳ್ಳ ಹರಿಯುತ್ತಿದೆ. ಗೊಲ್ಲಾಳ ಭಕ್ತಿಭಾವದಲ್ಲಿ ಪರವಶನಾಗಿ ಪೂಜೆಯಲ್ಲಿ ನಿರತನಾಗಿದ್ದಾನೆ. ಅವನ ಭಕ್ತಿಯ ಹುಚ್ಚನ್ನು ನೋಡಿದ ತಂದೆಗೆ ಅದೊಂದು ಅವಿವೇಕದ ವರ್ತನೆಯಂತೆ ಕಾಣುತ್ತದೆ. ಮಗನನ್ನು ಆ ಹುಚ್ಚಿನಿಂದ ಹೊರಗೆ ತರಲು ಲಿಂಗವೆಂದು ಪೂಜಿಸುತ್ತಿದ್ದ ಕುರಿ ಪಿಚಿಕೆಯ ಸ್ಥಾಪಿತ ಭಾಗವನ್ನು ಕಾಲಿನಿಂದ ತುಳಿದು ನಾಶವಾಡುತ್ತಾನೆ. ಎಚ್ಚತ್ತ ಗೊಲ್ಲಾಳ ಆವೇಶದಿಂದ ಸಿಟ್ಟುಗೊಂಡು ತಂದೆಯನ್ನು ಕೊಂದುಬಿಡುತ್ತಾನೆ. ಅವನ ವೀರಭಕ್ತಿಗೆ ಮೆಚ್ಚಿದ ಶಿವ ಕುರಿ ಪಿಚಿಕೆಯ ಸ್ಥಾಪಿತ ಜಾಗದಲ್ಲಿಯೇ ಪ್ರತ್ಯಕ್ಷನಾಗುತ್ತಾನೆ. ಅವನ ಭಕ್ತಿಗೆ ಮೆಚ್ಚಿ ಹರಸುತ್ತಾನೆ. ಗೊಲ್ಲಾಳನ ತಂದೆಯನ್ನು ಬದುಕಿಸುತ್ತಾನೆ. ಗೊಲ್ಲಾಳನು ಹೀಗೆ ವೀರಭಾವದ ಭಕ್ತಿ ಮೆರೆದು ಶಿವನನ್ನು ಸಾಕ್ಷಾತ್ಕರಿಸಿಕೊಂಡು ಭಕ್ತನಾದ, ಶಿವಶರಣನಾದ. ಅಂದಿನಿಂದ ಜನತೆ ವೀರಗೊಲ್ಲಾಳನೆಂದು ಕರೆಯುತೊಡಗುವರು. ಅವನು ಆನಂತರದಲ್ಲಿ ವಚನಗಳನ್ನು ಹಾಡಿದ್ದಾನೆ. ಇದಿಷ್ಟು ಅವನ ಬಗ್ಗೆ ಜನತೆಯಲ್ಲಿ ಜನಜನಿತವಾಗಿರುವ ಜೀವನ ಕಥನ.

ಈ ಕಥನ ಪವಾಡ ರೂಪದಲ್ಲಿ ಪ್ರತೀತವಾಗುತ್ತಿದ್ದರೂ ಕೆಲವು ಚಾರಿತ್ರಿಕ ವಸ್ತು ಸಂಗತಿಗಳನ್ನು ರೂಪಕಾಕೃತಿಯಲ್ಲಿ ಹಿಡಿದಿಟ್ಟುಕೊಂಡಿದೆ. ಒಂದು ಗೊಲ್ಲಾಳನ ಭಕ್ತಿಯ ಸ್ವರೂಪವನ್ನು ಅದು ಮನಗಾಣಿಸುತ್ತಿದೆ. ಗೊಲ್ಲಾಳನದು ತೊದಳಿಲ್ಲದ ಭಕ್ತಿ, ಆ ಭಕ್ತಿ ಕರುಹನ್ನು ಜಡವಾಗಿ ಭಾವಿಸಿದ್ದಲ್ಲ; ಅರಿವಾಗಿ ಪರಿಭಾವಿಸಿದ್ದು. ಇಲ್ಲಿ ನಂಬಿಕೆ ದೊಡ್ಡದು. ಹೇಳಿದ ಗುರು ಮೋಸಮಾಡಿರಬಹುದು. ಕೇಳಿದ ಶಿಷ್ಯ ಮೋಸವನ್ನು, ಮೋಸವೆಂದು ಭಾವಿಸದೆ, ಅದೇ ವಸ್ತುಸತ್ಯವೆಂದು ನಂಬಿ ಸಾಧಿಸತೊಡಗಿದ್ದು; ಸಾಧನೆ ವಿಫಲವಾಗದೆ ಸಾಕ್ಷಾತ್ಕಾರದ ಸಾಫಲ್ಯದಲ್ಲಿ ಅವನನ್ನು ನಿಜವಾದ ಸಿದ್ಧಪುರುಷನನ್ನಾಗಿ ಮಾಡಿದ್ದು. ಇವೆಲ್ಲಾ ನಂಬಿ ಕೆಟ್ಟವರಿಲ್ಲಾ ಎಂಬ ತತ್ವದ ಲಕ್ಷ್ಯ ನುಡಿಗೆ ಲಕ್ಷಣದ ರೀತಿಯ ಸಂಗತಿಗಳು. ಇಲ್ಲಿ ಪ್ರತೀತವಾಗುವ ಇನ್ನೊಂದು ವಿಚಾರವಿದೆ. ಗೊಲ್ಲಾಳನ ವಚನಗಳನ್ನು ನೋಡಿದರೆ ಆ ಅಂಶ ಇನ್ನೂ ಹೆಚ್ಚು ಪುಷ್ಟಿ ಪಡೆದಂತೆ ವ್ಯಂಜಿತವಾಗುತ್ತದೆ. ಅದೆಂದರೆ ಅವನು ಲಿಂಗವೆಂದು ಸ್ವೀಕರಿಸಿದ್ದು, ನಂಬಿದ್ದು, ಪೂಜಿಸಿದ್ದು, ಸಾಕ್ಷಾತ್ಕಾರ ಪಡೆದುಕೊಂಡಿದ್ದು, ಕುರಿ ಪಿಚಿಕೆಯಲ್ಲಿ, ಕುರಿ ಪಿಚಿಕೆ ಅವನ ಕಾಯಕದ ಪ್ರತೀಕ – ಶರಣಧರ್ಮ ಸಾರಿದ ಕಾಯಕವೇ ಕೈಲಾಸವೆಂಬ ಜೀವನ ಧರ್ಮ ಅವನ ನಂಬಿಕೆಯ ಆಶಯದ ಆಳ ವಿಸ್ತಾರಗಳನ್ನು ಮನಗಾಣಿಸುತ್ತಿದೆ. ನಮ್ಮ ಜನಪದ ಮನೋಧರ್ಮವೇ ಇಂಥದ್ದು. ಅದು ಯಾವತ್ತೂ ಚರಿತ್ರೆಯನ್ನು ಇತಿಹಾಸವಾಗಿ ಸಂಗತಿಮಾತ್ರದ ದಾಖಲೆಯಾಗಿ ಗಣಿತಾತ್ಮಕ ವರದಿಯಲ್ಲಿ ಉಳಿಸಿಕೊಂಡು ಬರಲಿಲ್ಲ. ಅದಕ್ಕಿಂತ ಭಿನ್ನವಾಗಿ ಸಂಗತಿಗಿಂತ ಸಂಗತಿಯ ಆಶಯ ಸತ್ಯವನ್ನು ರೂಪಕಾಕೃತಿಯಲ್ಲಿ ಉತ್ಪ್ರೇಕ್ಷಿತ ಭಾವ ಸ್ವರೂಪದಲ್ಲಿ ನೆನಪಿನ ನೆಲೆಗಳಲ್ಲಿ ಬಿತ್ತಿದ ಬೆಳೆಯಾಗಿ ನಿತ್ಯ ಪ್ರವಹಿಸುವ ಸಂಸ್ಕೃತಿ ಸತ್ಯಗಳಂತೆ ಅವುಗಳನ್ನು ಬೆಳಸಿಕೊಂಡು ಬಂದಿದೆ. ಆದ್ದರಿಂದ ಜನಪದದಲ್ಲಿ ಇತಿಹಾಸವೆನ್ನುವುದು ಐತಿಹ್ಯವಾಗುತ್ತದೆ; ಪುರಾಣವಾಗುತ್ತದೆ. ಪಾರಾಯಣದ ಪರಂಪರೆಯನ್ನು ಬೆಳೆಸಿದಂತೆ ಸಂಸ್ಕೃತಿ ದ್ರವ್ಯವನ್ನು ವಿಸ್ತರಣೆಗೊಳಿಸುತ್ತಿದೆ. ಇದೆಲ್ಲವನ್ನು ಪರಿಭಾವಿಸಬೇಕಾದಾಗ ನಮ್ಮ ಪ್ರಜ್ಞೆ ಮಾರ್ಗೀಯ ಮಾನದಂಡಗಳನ್ನು ಬಳಸದಂತೆ ದೇಸೀಯ ಪ್ರಮಾಣುಗಳನ್ನು ಮುಂದಿಟ್ಟುಕೊಂಡು ವಿವೇಚಿಸಬೇಕಾಗುತ್ತದೆ. ಕೊನೆಗೆ ಈ ಪ್ರಮಾಣುಗಳೂ ಕೂಡ ಅವರವರ ಭಾವಕ್ಕೆ

ನಿಲುಕಿದ ಪ್ರಮಾಣುವೇ ವಿನಹ ಮೂಲ ಐತಿಹ್ಯ ಹಾಗೂ ಪುರಾಣ ದ್ರವ್ಯವೆಂಬುದು ಅಪ್ರಮಾಣು. ಅಲ್ಲಮಪ್ರಭುಗಳ ಮಾತಿನಲ್ಲಿ ಹೇಳುವುದಾದರೆ-

ನಾನೆಂಬುದು ಪ್ರಮಾಣು ನೀನೆಂಬುದು ಪ್ರಮಾಣು
ಗುಹೇಶ್ವರನೆಂಬುದು ಅಪ್ರಮಾಣು

ಹೀಗಾಗಿ ಇಲ್ಲಿ ಪ್ರತೀತವಾಗುವ ಅನುಭವ ಗೊಲ್ಲಾಳನ ಕಾಯಕ ಧರ್ಮವನ್ನು ಬಿಂಬಿಸುತ್ತಿದೆ. ಈ ಕಥೆಯನ್ನು ವಾಸ್ತವಿಕ ದೃಷ್ಟಿಯ ವಿಮರ್ಶಾ ಕಣ್ಣಿನಲ್ಲಿ ನೋಡಹೋದರೆ ಅವಾಸ್ತವಿಕ ಹುಸಿ ಸಂಗತಿಗಳಾಗಿ ಅಲ್ಲಿನ ವಿಚಾರಗಳು ನಿರಾಕರಣೆಗೆ ಒಳಗಾಗುತ್ತದೆ. ಆದರೆ, ಆಶಯ ಪ್ರತೀತ ಭಾವಸತ್ಯವನ್ನು ಪರಿಭಾವಿಸುವ ಒಳನೋಟ ಹರಿಸಿದರೆ ಸಾಧಕನೊಬ್ಬನ ಸಾಧನೆಯ ಹರವು ತೆರೆದುಕೊಳ್ಳತೊಡಗುತ್ತದೆ.

ಆಗ ಕಥೆಯೆಂಬುದು ಪ್ರಮಾಣುಗಳ ಪರಿಭಾವನಾ ಸತ್ಯಗಳನ್ನೊಳಗೊಂಡ ಅಪ್ರಮಾಣುವಾಗಿ ಅನನ್ಯವೆನಿಸುತ್ತದೆ. ಹೀಗೆ ಐತಿಹ್ಯಗಳು ಕಳೆದು ಹೋಗಬಹುದಾಗಿದ್ದ ಚರಿತ್ರೆಯ ಸಂಗತಿಗಳನ್ನು ಕಾಲ ಪ್ರವಾಹದಲ್ಲಿ ನಿತ್ಯ ಚರಿಸುವ ಸಂಸ್ಕೃತಿ ಸತ್ಯಗಳಾಗಿಸಿವೆ. ಜನಜನಿತವಾಗಿರುವ ಗೊಲ್ಲಾಳನ ಕಥೆಯೊಳಗೆ ಇಂಥ ಜೀವನ ಧರ್ಮವೊಂದು ಅಪ್ರಮಾಣುವಿನೊಳಗೆ ಕಾಣುವ ಪ್ರಮಾಣು ಸತ್ಯವಾಗಿ ಪ್ರತೀತಗೊಳ್ಳುತ್ತಿದೆ. ಈ ಸತ್ಯವನ್ನು ಮನಗಾಣಿಸುವುದಕ್ಕೆ ಅವನ ವಚನಗಳು ಪೂರಕ ಪ್ರಮಾಣುಗಳಂತಿವೆ. ಶರಣರು ನುಡಿದು ಸೂತಕಿಗಳಲ್ಲ. ಅವರ ಮಾತು ಜ್ಯೋತಿರ್ಲಿಂಗರೂಪಿಯಾದದ್ದು. ಇದಕ್ಕೆ ಉದಾಹರಣೆಯಾಗಿ ಈಗಾಗಲೇ ಉದ್ಧರಿಸಿರುವ ವಚನವನ್ನೆ ಗಮನಿಸಬಹುದು.

ಹೋತನ ಹೊಡದು, ಆಡ ಕೂಡಿ, ಕುರಿಯ ನಿಲಿಸಿ,
ತಗರ ತಡದು, ಹಿಂಡನೊಬ್ಬುಳಿತೆಮಾಡಿ,
ಹುಲಿ ತೋಳ ಚೋರ ಭಯಮಂ ಕಳೆದು,
ಹಿಂಡಿಗೊಡೆಯನಾಗಿ ಕಾವ ಗೊಲ್ಲಾಳ ನೀನೆ. ವೀರಬೀರೇಶ್ವರಾ

ಈ ವಚನ ಕುರಿ ಕಾಯುವ ಹೊತ್ತಿನಲ್ಲಿ ಹೋತ ಆಡು ಕುರಿ ತಗರುಗಳನ್ನು ತರುಬಿನಿಲ್ಲಿಸುವ ಅನುಭವ ವಿಶೇಷವನ್ನು ಪ್ರಸ್ತಾಪಿಸುತ್ತಿದೆ. ಇದು ಕುರಿ ಕಾಯುವ ಅನುಭವ ಜ್ಞಾನಿಗೆ ವೇದ್ಯವಾಗುವ ಪರಿಜ್ಞಾನ.

ಇಲ್ಲಿ ಹೋತ ತಗರುಗಳ ಆಟಾಟೋಪವನ್ನು ನಿಯಂತ್ರಿಸುವಲ್ಲಿ ಬಳಸಿರುವ; ಹೊಡೆದು ತಡೆದು ಎಂಬ ಪದಗಳು ಹಾಗೂ ಆಡು ಕುರಿಗಳನ್ನು ಸಂಭಾಳಿಸುವಲ್ಲಿ ಬಳಸಿರುವ ಕೂಡಿ ನಿಲಿಸಿ ಎಂಬ ಪದಗಳು ಅನುಭವ ಜನ್ಯ ವರ್ತನಾ ವ್ಯಾಪಾರವನ್ನು ವ್ಯಂಜಿಸುವ ಪದ ಪ್ರಯೋಗಗಳು. ಈ ಪದಗಳು ಕಾಯಕದ ಸ್ವರೂಪವನ್ನು ಹೇಳುತ್ತಿವೆ. ಹೋತ ತಗರು ಕುರಿ ಆಡು ಎಲ್ಲ ಒಂದೇ ಅಲ್ಲ. ಅವುಗಳ ಸ್ವಭಾವ, ಅವುಗಳನ್ನು ಕಾಯುವ ಹೊತ್ತಿನಲ್ಲಿ ಕುರುಬನೊಬ್ಬನು ಅನುಸರಿಸಬೇಕಾದ ಕ್ರಿಯಾ ವ್ಯತ್ಯಯಗಳ ವಿಧಿವಿಧಾನಗಳು ಈ ಎಲ್ಲವನ್ನೂ ಇಲ್ಲಿ ಬಳಕೆಯಾಗಿರುವ ಪದಗಳು ಸುಸಾಂಗತ್ಯಪೂರ್ಣವಾಗಿ ವ್ಯಂಜಿಸುತ್ತವೆ. ಹೋತನ ಹೊಡೆದು ಎನ್ನುವ ಕಡೆ ಕುರಿಯ ಹೊಡೆದು ಎಂದು ಬಳಸಿದರೆ ಅದು ಅನನುಭವಿಯ ಮಾತಾಗುತ್ತದೆ. ಅಜ್ಞಾನಿಯ ಆಲೋಚನೆಯಾಗುತ್ತದೆ. ಆದ್ದರಿಂದ ಇಲ್ಲಿ ಪದ- ಪದಾರ್ಥಗಳ ಸಂಬಂಧ ಕಾಯಾತ್ಮ ಸಂಬಂಧದ ಅನುಭವ ಬಂಧದಿಂದ

ಕೂಡಿದೆ. ಈ ಅನುಭವದ ದ್ರವ್ಯಮೂಲದಲ್ಲಿ ಜಿಜ್ಞಾಸೆಗೆ ಒಳಗಾದ ಧಾರ್ಮಿಕ ಚಿಂತನೆ ಅನುಭಾವಿಕ ವಿಸ್ತರಣೆಯಲ್ಲಿ ಪ್ರಸಾದಭಾವ ಪಡೆಯುವುದು ಸಹಜವಿದೆ. ಕಾಯಕ ಮೂಲದ ಈ ಪರಿಭಾಷೆಗಳ ಸೂಕ್ಷ್ಮತೆಯು ಅರಿವಿಲ್ಲದವನಿಗೆ ಇಲ್ಲಿ ವ್ಯಂಜಿತವಾಗುವ ಅನುಭಾವಿಕ ವಿಸ್ತರಣೆಯ ಸೂಕ್ಷ್ಮತೆ ಅರಿವಿಗೆ ಬರುವುದು ಸಾಧ್ಯವಿಲ್ಲ.

ಗೊಲ್ಲಾಳನ ಈ ವಚನದಲ್ಲಿ ಹೋತ ತಗರು ಕುರಿ ಆಡುಗಳನ್ನು ಕೂಡಿಕೊಂಡ ಹಿಂಡನ್ನು ಒಬ್ಬುಳಿತೆ ಮಾಡುವ ಪಶುಪಾಲನಾ ಧರ್ಮ ಅನುಭವಪ್ರಣೀತ ವಚನಧರ್ಮವಾಗಿದೆ. ಕುರಿ ಕಾಯುವ ಕುರುಬನ ಅನುಭವ ಜ್ಞಾನ ಕುರಿಯ ಹಿಂಡನ್ನು ಒಬ್ಬುಳಿತ ಮಾಡುವಲ್ಲಿ ಹಿಂಡಿನೊಳಗಿನ ಕಾಮಪೀಡಿತ ಆಕ್ರಮಣ ಶಕ್ತಿಗಳನ್ನು ಹೊಡೆದು ತಡೆದು ನಿಯಂತ್ರಿಸುವ ಕಡೆ ಗಮನ ಹರಿಸಬೇಕಿರುವುದನ್ನು ಹೇಳುತ್ತಿದೆ. ಇದು ಕಳ್ಳಿಯೊಳಗೆ ಹಿಂಡನ್ನು ತರುಬುವಾಗ ಹಾಗೂ ಕಳ್ಳಿಯಿಂದ ಹೊರಗೆ ಹಿಂಡನ್ನು ಬಿಡುವಾಗ ಎರಡೂ ಸಂದರ್ಭದಲ್ಲಿ ಕುರುಬನು ತೋರುವ ಪಶುಪಾಲನಾ ಪ್ರಜ್ಞೆಗೆ ಸಂಬಂಧಿಸಿದ ಅನುಭವ ವಿಶೇಷ. ಹಾಗೆಯೇ ಹೊರಗಿನ ಹುಲಿ, ತೋಳ, ಚೋರರಿಂದ ಹಿಂಡನ್ನು ರಕ್ಷಿಸುವ ಹಿಂಡಿನೊಡೆಯನ ಮೇಧಾಶಕ್ತಿಯನ್ನು ಧ್ವನಿಸುವ ಅನುಭವ ವಿಶೇಷತೆಯ ಕಡೆ ಅರ್ಥಪರಂಪರೆಯನ್ನು ಸಂಚಲಿಸುವಂತೆ ಮಾಡಿದೆ. ಈ ವಚನದ ಅನುಭವ ವಿಶೇಷವನ್ನು ವಿವರಣಾತ್ಮಕ ಭಾವದಲ್ಲಿ ಹಿಡಿದಿಟ್ಟುಕೊಂಡಿರುವ ಇವನ ಇನ್ನೊಂದು ವಚನವನ್ನು ಇಲ್ಲಿ ಗಮನಿಸಬಹುದು.

ಹೋತು ಹುಸಿ ಆಡು ಬಹುಮಾತಿನ ನೀತಿ,
ಕುರಿ ಸಕಲೇಂದ್ರಿಯದ ನೆಲ ಹೊಲ, ತಗರು ತಥ್ಯಮಿಥ್ಯದ ಹೋರಟೆ,
ಹುಲಿ ದ್ವೇಷದಾಗರ, ತೋಳ ಕೊಂದು ತಿಂದು ಕಾಟ.
ಚೋರ ಮೃತ್ಯು ಇಂತಿವು ಮೊದಲಾದ
ಬಹುವಿಧದ ಪ್ರಕೃತಿಗಳಲ್ಲಿ ಕಾಯದ ನೆಲಹೊಲನದಲ್ಲಿ,
ಸಕಲೇಂದ್ರಿಯವೆಂಬ ಹಿಂಡು ಮಂದೆಯಾಗಿವೇಕೋ?
ಇದರ ಸಂಗವ ಬಿಡಿಸು, ನಿಮ್ಮ ನಿಜದಂಗವ ತೋರಿ,
ಭವಪಾಶದಂಗವ ಹರಿದು, ನಿಮ್ಮ ಘನಲಿಂಗದಲ್ಲಿರಿಸು
ನೆರೆ ವೀರಬೀರೇಶ್ವರಾ

ಇಲ್ಲಿ ಇಡೀ ವಚನ ನೇತ್ಯಾತ್ಮಕ ಭಾವದಲ್ಲಿ ಕಾಯಕವನ್ನು ಗಣಿಸಿದಂತೆ ಸಾರುತ್ತಿದೆ. ಇದು ಮೇಲುನೋಟದ ತೋರಿಕೆ. ಆದರೆ ಇಡೀ ವಚನವನ್ನು ಧ್ಯಾನದ ಪರಿಭಾವನೆಗೆ ಒಳಗು ಮಾಡಿದಾಗ ಹಿಂದಿನ ವಚನದ ಭಾವ ಸತ್ಯವೇ ಇಲ್ಲಿ ವಿಸ್ತರಣೆ ವಿವರಣೆಗಳ ಸ್ವರೂಪ ಪಡೆದು ಕಾಯಕ ಧರ್ಮದ ಮರ್ಮವನ್ನು ಮನಗಾಣಿಸುತ್ತಿದೆ. ಇಲ್ಲಿನ ಧರ್ಮ ಕುರಿ ಕಾಯುವ ಕಾಯಕದೊಳಗೆ ಕುರುಬನೊಬ್ಬನು ಪಾಲಿಸಬೇಕಾದ ನೀತಿ ನಿಯತ್ತುಗಳ ನಿತ್ಯ ಸತ್ಯದ ನಡೆಯನ್ನು ಮನಗಾಣಿಸುವಂಥದ್ದು. ಹೋತ ತಗರು ಕುರಿ ಆಡುಗಳ ಸ್ವಭಾವಗಳನ್ನು ಈ ವಚನ ಪದಾರ್ಥರೂಪದಲ್ಲಿ ಹೇಳುತ್ತಿದೆ. ಹಿಂದಿನ ವಚನದಲ್ಲಿ ಕ್ರಿಯೆಯಾಗಿ ಪದವಾಗಿ ಹೇಳಿದ್ದು, ಇಲ್ಲಿ ಪದಾರ್ಥವಾಗಿ ವಿವರಣೆಗೆ ಸಿಕ್ಕಿದೆ. ಪದವನರ್ಪಿಸಬಹುದಲ್ಲದೆ, ಪದಾರ್ಥವನರ್ಪಿಸಲಾಗದು ಎಂಬ ಭಾವ ಸತ್ಯವನ್ನು ಮನಗಂಡು ಹಿಂದಿನ ವಚನದ ಪದಶಕ್ತಿ ಹಾಗೂ ಈ ವಚನದ ಪದಾರ್ಥಮಿತಿ ನಮಗೆ ವೇದ್ಯವಾಗುತ್ತದೆ. ಹೀಗಾಗಿ ಈ ಪದಾರ್ಥ ಮಿತಿಯ ವಚನ

ತೋರಿಕೆಯಲ್ಲಿ ನೇತ್ಯಾತ್ಮಕ ಅರ್ಥಧೋರಣೆಯನ್ನು ಎಸೆಯುತ್ತಿದೆ. ಆದರೆ, ಈ ಪದಾರ್ಥವ ಎಸೆಯುವ ಬೀಸಿಗೆ ಓದಿನ ಗ್ರಹಿಕೆಯನ್ನು ಒಡ್ಡದೆ, ಒಳ ಹೊಕ್ಕಾಗ ಧ್ಯಾನ ಗುಹೇಶ್ವರನ ಪ್ರಸಾದ ಭಾವ ಸಂವೇದ್ಯವಾಗುತ್ತದೆ.

ಬಹುವಿಧದ ಪ್ರಕೃತಿಗಳಲ್ಲಿ ಕಾಯದ ನೆಲಹೊಲನಲ್ಲಿ,
ಸಕಲೇಂದ್ರಿಯವೆಂಬ ಹಿಂಡು ಮಂದೆಯಾಗಿವೇಕೋ?
ಇದರ ಸಂಗವ ಬಿಡಿಸು, ನಿಮ್ಮ ನಿಜದಂಗವ ತೋರಿ,
ಭವಪಾಶದಂಗವ ಹರಿದು, ನಿಮ್ಮ ಘನಲಿಂಗದಲ್ಲಿರಿಸು
ನೆರೆ ವೀರಬೀರೇಶ್ವರಾ

ವಚನದ ಈ ಸಾಲುಗಳು ಕಾಯಕದ ಅನುಭವ ದ್ರವ್ಯವನ್ನು ಕಾಯಕಧರ್ಮದ ಅನುಭಾವಿಕ ವಿಸ್ತರಣೆಗೆ ಸಂಲಗ್ನಗೊಳಿಸಿವೆ. ಭವದಲ್ಲಿನ ಭವಿಯ ರೂಪದಿಂದ ಬಿಡಿಸಿ ಘನಲಿಂಗ ಸ್ವರೂಪಿಯಾಗಿಸುವಲ್ಲಿನ ನೆರೆಯುವ ಪರಿಯನ್ನು ಇದು ವ್ಯಂಜಿಸುತ್ತಿದೆ. ಈ ಪ್ರಸಾದ ಗುಣವನ್ನು ಈ ವಚನ ಪದಾರ್ಥ ರೂಪದಲ್ಲಿ ಅರ್ಪಿಸುತ್ತಿದ್ದರೆ, ಹಿಂದಿನ ವಚನ ಇದೇ ಭಾವ ಸತ್ಯವನ್ನು ಪದರೂಪದಲ್ಲಿ ವ್ಯಂಜಕ ಗುಣದಲ್ಲಿ ನಿವೇದಿಸಿದೆ.

ಕಾಯಕವನ್ನೇ ಧರ್ಮವೆಂದು ಅರಿಯಲು ಅವನ ವಚನಗಳು ಬಿಂಬ ರೂಪಿಗಳಂತಿವೆ. ಅವನ ಇನ್ನೊಂದು ವಚನ ಹೀಗಿದೆ.

ಕಲ್ಲು ಲಿಂಗವಲ್ಲ ಉಳಿಯ ಮೊನೆಯಲ್ಲಿ ಒಡೆಯಿತ್ತು.
ಮರ ದೇವರಲ್ಲ, ಉರಿಯಲ್ಲಿ ಬೆಂದಿತ್ತು.
ಮಣ್ಣುದೇವರಲ್ಲ, ನೀರಿನ ಕೊನೆಯಲ್ಲಿ ಕದಡಿತ್ತು.
ಇಂತಿವನೆಲ್ಲವನರಿವ ಚಿತ್ತ ದೇವರಲ್ಲ.
ಕರಣಂಗಳ ಮೊತ್ತದೊಳಗಾಗಿ ಸತ್ವಗೆಟ್ಟಿತ್ತು.
ಇಂತಿವ ಕಳೆದುಳಿದ ವಸ್ತುವಿಪ್ಪೆಡೆ ಯಾವುದೆಂದಡೆ:
ಕಂಡವರೊಳಗೆ ಕೈಕೊಂಡಾಡದೆ,
ಕೊಂಡ ವ್ರತದಲ್ಲಿ ಮತ್ತೊಂದನೊಡಗೂಡಿ ಬೆರೆಯದೆ,
ವಿಶ್ವಾಸ ಗ್ರಹಿಸಿ ನಿಂದಲ್ಲಿ ಆ ನಿಜಲಿಂಗವಲ್ಲದೆ,
ಮತ್ತೊಂದು ಪೆರತನರಿಯದೆ ನಿಂದಾತನೆ ಸರ್ವಾಂಗಲಿಂಗ,
ವೀರಬೀರೇಶ್ವರಲಿಂಗದೊಳಗಾದ ಶರಣ.

ಗೊಲ್ಲಾಳನು ಕುರಿ ಪಿಚಿಕೆಯನ್ನು ಲಿಂಗವೆಂದು ಪರಿಭಾವಿಸಿದವನು. ಭಕ್ತಿಯಿಂದ ಪೂಜಿಸಿದವನು. ಕುರಿ ಪಿಚಿಕೆ ಅವನಿಗೆ ಲಿಂಗರೂಪಿಯಾಗಿ ಕಂಡಿದ್ದು ಆ ಕೃತಿ ಸತ್ತೆಯಾಗಿ ಅಲ್ಲ; ಪ್ರಕೃತಿ ಧರ್ಮದ ನಿತ್ಯ ಸತ್ಯವಾಗಿ. ಇಲ್ಲಿಯ ಪ್ರಕೃತಿ ಅವನ ಪರಿಭಾವನೆಯ ಮನೋಸ್ಥಿತಿ. ಇಲ್ಲಿಯ ಧರ್ಮ ಆ ಮನೋಸ್ಥಿತಿ ನಂಬಿದ ಕಾಯಕ ವಿಧಿ. ಹೀಗಾಗಿ ಕುರಿ ಪಿಚಿಕೆ ಅವನಿಗೆ ಅರಿವಿನ ಗುರುವಾದ ಕುರುಹು. ಈ ಕುರುಹು ಕೂಡ ಪದರೂಪಿಯೇ ಹೊರತು ಪದಾರ್ಥ ರೂಪಿಯಲ್ಲ. ಆದ್ದರಿಂದಲೇ ಪದಾರ್ಥ ರೂಪಿಯಾಗಿ ಒದಗಿ ಬರುವ, ಆಕೃತಿ ಮಾತ್ರವಾಗಿ ಅರಿವಾಗದೆ ಹೋಗುವ ಕುರುಹನ್ನು ಗೊಲ್ಲಾಳ ಇಲ್ಲಿ ನಿರಾಕರಿಸುತ್ತಿದ್ದಾನೆ. ಅದನ್ನು ಜಡವೆಂದು ತಿರಸ್ಕರಿಸುತ್ತಿದ್ದಾನೆ. ಹೀಗೆ ಕಾಯಕ ಜೀವಿಯೊಬ್ಬನ ಬದುಕಿನ ಬಿಂಬ ರೂಪಿಗಳಾಗಿ ಒದಗಿ ಬರುವ ಕಾಯಕ ಪರಿಭಾಷೆಗಳು ವ್ಯಂಜಿಸುವ ಒಳಸತ್ಯ ವಿಸ್ಮಯ ಹುಟ್ಟಿಸುತ್ತದೆ.

ಇಡೀ ವಚನ ರಾಶಿಯನ್ನು ಪರಿಭಾವಿಸಿದಾಗ ತಿಳಿದುಬರುವ ಸಂಗತಿ: ಕಾಯಕ ಮೂಲದಿಂದ ಬಂದ ವಚನಕಾರರ ರಚನೆಗಳಲ್ಲಿ ಅವರ ವೃತ್ತಿ ಧರ್ಮ ಮತ್ತು ವೃತ್ತಿ ಧರ್ಮದ ಪರಿಭಾಷೆ, ಧಾರ್ಮಿಕ ಆಧ್ಯಾತ್ಮಿಕ ಚಿಂತನೆಗೆ ಪರಿಕರ ವಸ್ತುವಾಗಿ ಪರಿಭಾಷೆಯಾಗಿ ಬಳಕೆಯಾಗಿರುವುದು. ಆದರೆ, ಕಾಯಕಜೀವಿಗಳಲ್ಲದವರ ವಚನದ ಭಾಷೆ ಪರಿಭಾಷೆ ಲೋಕೋಪಯೋಗಿ ಸಾಮಾನ್ಯತಾ ಪ್ರಮಾಣುವಿನಲ್ಲಿ ಪರಿಚಲನೆಗೊಂಡಿರುವುದು. ಆದರಲ್ಲೂ ಬಸವಣ್ಣ, ಅಕ್ಕ, ಅಲ್ಲಮ, ನೀಲಾಂಬಿಕೆ, ಗಂಗಾಂಬಿಕೆ, ಮುಂತಾದ ಮೇಲುಸ್ತರದ ವಚನಕಾರರಲ್ಲಿ ವೀರಶೈವ ಧರ್ಮದ ಗುರುಲಿಂಗಜಂಗಮ ಪಾದೋದಕ ಪ್ರಸಾದ ಇತ್ಯಾದಿ ಯಾವುದೇ ಸಿದ್ಧಾಂತಗಳ ಜಿಜ್ಞಾಸೆಯೆಂಬುದು ಬದುಕಿನ ನಡಾವಳಿಯ ವ್ಯಾಪ್ತಿಯಲ್ಲಿ ಸಾಮಾನ್ಯೀಕರಣಗೊಂಡ ಚಿಂತನೆಯಾಗಿದೆ. ಈ ಕಾರಣದಿಂದಲೇ ಅವರ ವಚನಗಳಲ್ಲಿ ಧರ್ಮ ಕಾಯಕಧರ್ಮ ಎರಡಾಗದೆ ಒಂದೇ ಆಗಿ ವಿಶ್ವಮಾನ್ಯವಾಗುವ ಸಲುವಳಿಯಲ್ಲಿ ಸಾರ್ವಕಾಲಿಕವಾಗಿವೆ. ಆದರೆ ಚನ್ನಬಸವಣ್ಣ ಸಿದ್ಧರಾಮಯ್ಯ ಮೊದಲಾದವರ ವಿಧಾನಗಳಿಗೆ ಈ ವ್ಯಾಪ್ತಿಯ ಬಹುಮುಖತೆ ಸಾಧ್ಯವಾಗುವುದಿಲ್ಲ. ಅವು ಧರ್ಮದ ಚೌಕಟ್ಟಿನಲ್ಲಿ ಶಾಸ್ತ್ರ ಸಮ್ಮತ ಜಿಜ್ಞಾಸೆಯಲ್ಲಿ. ಅರ್ಥವಿವಕ್ಷೆಗೆ ಸೀಮಿತಗೊಳಿಸಿಕೊಂಡ ರಚನೆಗಳಾಗಿವೆ.

ಕಾಯಕ ಜೀವಿ ವಚನಕಾರರ ರಚನೆಗಳು ಈ ಎರಡೂ ನೆಲೆಗಳಿಗಿಂತ ಭಿನ್ನ ರೀತಿಯಲ್ಲಿ ಹರಿದ ಆಲೋಚನೆಗಳು. ಇಲ್ಲಿ ಕಾಯಕ ಮೂಲದ ಪರಿಭಾಷೆ, ಧಾರ್ಮಿಕ ಜಿಜ್ಞಾಸೆಯ ಸಲಕರಣೆಗಳಂತೆ ಬಳಕೆಯಾಗುತ್ತಿವೆ. ವೃತ್ತಿಯೆಂಬುದು ವಸ್ತುರೂಪಿ ಭಿತ್ತಿಯಾಗಿ ನಿರೂಪಿತವಾಗುತ್ತದೆ. ವೃತ್ತಿ ಮತ್ತು ಸಲಕರಣೆಗಳ ಸಂಬಂಧ ಹೇಗೆ ಪರಸ್ಪರ ಅವಿನಾಭಾವದ ಅನುಕೂಲತ್ವದಲ್ಲಿ ಆಗುವ ಕ್ರಿಯೆಯೋ ಅದೇ ರೀತಿ ಇಲ್ಲಿನ ಚಿಂತನ ಮತ್ತು ವೃತ್ತಿ ಧರ್ಮದ ಪರಿಭಾಷೆಗಳ ಪದ ಮೈತ್ರಿಯ ಸಂಬಂಧ. ಇನ್ನೂ ವಿಸ್ತರಿಸಿ ಹೇಳುವುದಾದರೆ, ವೃತ್ತಿಧರ್ಮದ ಅನುಭವ ಸಾಮಾನ್ಯತೆ ಧಾರ್ಮಿಕ ಜಿಜ್ಞಾಸೆಯ ಅನುಭವ ವಿಶೇಷತೆಯನ್ನು ವ್ಯಂಜಿಸುವುದಕ್ಕೆ ವಾಹಕ ವಸ್ತುರೂಪವಾಗಿ ಒದಗಿ ಬರುತ್ತದೆ; ಕಾಯ - ಕಾಯಕದಂತೆ ಪದ - ಪದಾರ್ಥಗಳ ಸಂಬಂಧದಂತೆ. ಹೀಗಾಗಿ ಗೊಲ್ಲಾಳನ ವಚನಗಳಲ್ಲಿ ಪದ - ಪದಾರ್ಥಗಳೆಂಬ ಎರಡೂ ರೀತಿಯ ರಚನೆಗಳನ್ನು ಕಾಣಬಹುದು. ಇದು ಗೊಲ್ಲಾಳನೊಬ್ಬನಿಗೆ ಅನ್ವಯಿಸುವ ಮಾತಲ್ಲ, ಬಹುತೇಕ ಕಾಯಕ ಜೀವಿ ವಚನಕಾರರಿಗೆ ಅನ್ವಯಿಸುವ ಸೂತ್ರ.

◆◆

ಪ್ರೊ. ಎಸ್. ಜಿ. ಸಿದ್ಧರಾಮಯ್ಯ, ಅಧ್ಯಕ್ಷರು, ಕನ್ನಡ ಪುಸ್ತಕ ಪ್ರಾಧಿಕಾರ 'ಕನ್ನಡಭವನ'
ಜೆ.ಸಿ. ರಸ್ತೆ - ಬೆಂಗಳೂರು.

ಐದು ಗಜಲ್‌ಗಳು

ಚಿದಾನಂದ ಸಾಲಿ

-೧-

ಕವಿಯ ತ್ರಾಸು ಯಾರು ಅರಿತವರು ಬರೆದರಾಗದು ತೋಚಿದಂತೆ ಕವಿತೆ
ಸುಲಭವಲ್ಲ. ಎಚ್ಚರದಿ ಮಲಗಿಹರ ಯಾಮಾರಿಸಿ ದೋಚಿದಂತೆ ಕವಿತೆ॥೧॥

ಸಿಗದೆ ಕಾಡುವ ಚಿಟ್ಟೆ, ಎಲ್ಲ ಹೇಳಿಯೂ ಏನೂ ಹೇಳದ ಗುರುವಿನಂತೆ ಕವಿತೆ
ಹೇಳದೆಯೇ ಏನೆಲ್ಲ ತಿಳಿಯುವಂತೆ ತರುಣಿ ಮರೆಯಲ್ಲಿ ನಾಚಿದಂತೆ ಕವಿತೆ ॥೨॥

ಕಾಡ ಕುಸುಮದ ಪುನುಗ ಹಿಡಿಯಲಿ ಹಿಡಿದಿಡಲಾಗದೆ ಚಡಪಡಿಸಿದಂತೆ ಕವಿತೆ
ಅಷ್ಟೇಕೆ? ಎತ್ತೆತ್ತಲೋ ಹಾರುವ ತಲೆಗೂದಲ ಹಿಡಿದು ಬಾಚಿದಂತೆ ಕವಿತೆ ॥೩॥

ಬಳಿ ಸುಳಿದು ಕಾಡುವ ರೂಪಕಗಳು. ಸಿಗದೆ ಹೇನುಗಳು ಬುಳುಬುಳಿಸಿದಂತೆ ಕವಿತೆ
ಮಿಂಚಿ ಮಾಯವಾಗುವ ಸಾಲುಗಳು. ನೀರ ಮೇಲೆ ಗೆರೆಯ ಗೀಚಿದಂತೆ ಕವಿತೆ ॥೪॥

ಕಾವ್ಯ ಕನ್ನಿಕೆಯೊಲುಮೆ ಕಡು ಕಷ್ಟ. ಕೇಳದೆಯೇ ದೇವರು ವರ ನೀಡಿದಂತೆ ಕವಿತೆ
'ಸಾಲಿ' ನಿಜವೆಂದರೆ ಸೂಜಿಯಲಿ ಪದಗಳ ಹಾಕಿ ಸಲಿಕೆಯಲಿ ಅರ್ಥಗಳ
ಬಾಚಿದಂತೆ ಕವಿತೆ ॥೫॥

-೨-

ಉದುರಿ ಬೀಳುತಿಹ ಫಲ ಏನು ಪಕ್ವ, ಎಂಥ ಮೈಮಾಟ. ಕೊರಗು ಬೇಡ
ಕಂಡು ಸೂತ್ರ ಹರಿದ ಗಾಳಿಪಟದ ಸ್ವಚ್ಛಂದ ಹಾರಾಟ. ಕೊರಗು ಬೇಡ ॥೧॥

ಹಾಲ್ದುಟಿಯ ಸ್ನಿಗ್ಧ ನಗು, ಅಡಿಗಡಿಗೂ ಕಂಗಳಲಿ ಮಿನುಗುವ ಬೆರಗು
ನೋಡು ಸುಮ್ಮನೆ ಮುದ್ದು ಮಗುವಿನ ತನ್ಮಯದ ಜೂಟಾಟ ಕೊರಗುಬೇಡ ॥೨॥

ಎಲ್ಲೆಡೆಯೂ ನಗುವಿನ ಯಾವಾಗಲೂ ಮಗುವಿನ ಚಿನ್ನಾಟಗಳೇ ಚೆಲುವು
ಕಳೆದು ಹೋದ ಬಾಲ್ಯದ್ದು ಎಂದೂ ಮುಗಿಯದ ಮೆಲುಕಾಟ. ಕೊರಗುಬೇಡ ॥೩॥

ಬೆರಳುಗಳ ವೀಣೆ, ಹೃದಯಗಳ ಪಿಸುಮಾತು, ಮುತ್ತುಗಳ ಹುಡುಕಾಟ
ಆಹಾ! ಎಂಬುದರಲಿ ಮುಗಿಯಿತಲ್ಲ ಯೌವನ ಹುಡುಗಾಟ. ಕೊರಗುಬೇಡ ॥೪॥

ಯಾಕೋ ಅಶನ-ವಸನ-ಮಿಲನಗಳೊಂದರಲೂ ಈಗ ರುಚಿಯುಳಿದಿಲ್ಲ
ಮುಗಿಯುವುದಲ್ಲ 'ಸಾಲಿ', ಸತ್ಯದ ಸೌಂದರ್ಯದ ಹುಡುಕಾಟ. ಕೊರಗುಬೇಡ ॥೫॥

-೩-

ಕತ್ತಲಲಿ ಕಳೆದು ಹೋದವನ ಕಾಲಿಗೆ ಬೆಳಕ ಕಣ್ಣ ಕರುಣಿಸಿದ ಗುರುವು
ಬದುಕ ಭಾಗ್ಯವೇನೆಂದು ಭವದ ಕೊನೆಯೆನಿತೆಂದು ಕಣ್ಣುತೆರೆಸಿದ ಗುರುವು ॥೧॥

ದಾರಿಯಲಿಹ ನಗೆಯ ಹೂಗಳ ಮೇಲೆ ನಡೆದು ಪುಳಕಗೊಳುತಿರಲು
ಬೆನ್ನಲ್ಲೇ ಇರುವ ನೋವ ಮುಳ್ಳನು ಕಿವಿ ಹಿಂಡಿ ತೋರಿದ ಗುರುವು ॥೨॥

ಜಗವು ಬೆಳಕಲ್ಲಿ ಮಿಂದು ಮುಳುಗೇಳುತ್ತ ಸುಷುಪ್ತಿಯಲ್ಲಿರಲು
ಕತ್ತಲೆಯೊಳಡಗಿಹ ಬೆಳಕ ನೋಡುವುದನು ಕಲಿಸಿದ ಗುರುವು ॥೩॥

ಹೆಸರಿಗಾಗಿ ಉಸಿರು ಬಿಡುವವರು ಪರಸ್ಪರ ತುರಿಸಿಕೊಳ್ಳುವುದ ನೋಡಿ
ನಗುತಿಹನು 'ಸಾಲಿ', ಹರಟೆ-ಆತ್ಮರತಿಗಳ ಹಂಗೇ ಅರಿಯದ ಗುರುವು ॥೪॥

-೪-

ಬಾಗಿಲು ಮುಚ್ಚಿಕೊಂಡು ಬಾಯಿಗೆ ಬೀಗ ಹಾಕಿಕೊಂಡು ಎಲ್ಲ ಹೊರಗೆ ಹೋಗಿರಿ
ಕವಿಯ ಸಮಯವಿದು ಒಂಟಿಯಾಗಿರಬಿಟ್ಟು ದಯಮಾಡಿ ಎಲ್ಲ ದೂರ ಹೋಗಿರಿ ॥೧॥

ದಮ್ಮಯ್ಯ ಖಾಲಿಕೂರದೆ ಅನುಕ್ಷಣವೂ ನಿಮ್ಮ ಬದುಕುಗಳ ಬದುಕಿರಿ
ತಿಳಿದ ಕೆಲಸವೊಂದೇ ನನಗೆ. ಅದಕೆ ಕನ್ನಡಿ ಹಿಡಿಯಲು ನನ್ನ ಬಿಟ್ಟು ಬಿಡಿರಿ॥೨॥

ಈ ಬದುಕು ಹಕ್ಕಿಗಾನ, ಚುಕ್ಕಿನರ್ತನ, ಶೋಷಿತನ ಆಕ್ರಂದನ..... ಕೇಳಿರಿ
ಅದೇ ರಾಗ ಅದೇ ಹಾಡೆನ್ನದೆ ಬದುಕೆ ಕವಿತೆಯೆಂದು ತಿಳಕೊಳ್ಳಿರಿ ॥೩॥

ಹೊಟ್ಟೆಪಾಡಿಗಾಗಿ ಕನ್ನಡಿ ಮಾರುವವನ ಮಾತೆಂದು ತಾಚಕಾರ ಮಾಡದಿರಿ
ನಿಮ್ಮೊಳಹೊರಗುಗಳ ಕಾಣಲು ಕಾವ್ಯದ ಕಣ್ಣಾಸರೆ ಬೇಕೆಂಬುದ ಮರೆಯದಿರಿ ॥೪॥

ಎಲ್ಲವನು ಮುಖಕೆ ಹೊಡೆದು ತೋರುವ ಈ ಕನ್ನಡಿಗೆ ಬದುಕೇ ಪಾದರಸ ಅರಿಯಿರಿ
ಬರೆವ ಕೈಯಿಲ್ಲದೆ, ಮಿಡಿವ ಮನಸಿಲ್ಲದೆ ಬದುಕಿಗೂ ಬೆರಗಿಲ್ಲ ತಿಳಿಯಿರಿ ॥೫॥

ಮೊಡವೆಗಳ ಮುಚ್ಚಿ ಒಡವೆಗಳನಷ್ಟೇ ತೋರಿದರೆ ಕಂಬಕ್ಕೆ ಕಟ್ಟಿ ಕಲ್ಲಲ್ಲಿ ಹೊಡೆಯಿರಿ
ಅಕ್ಷರ ಹಾದರವು ತರವಲ್ಲ ಸಾಲಿ ಎಂದು ಅನುಭವಿಕರು ಕರೆದು ಕಿವಿ ಹಿಂಡಿ ಹೇಳಿರಿ ॥೬॥

-೫-

ಕೊಡುವ ಪ್ರೀತಿಯನು ಬಾಚಿ ಪಡೆವುದೇ ನಿಜವಾದ ಜಾಣತನವು
ನೀನೆಷ್ಟು ಪ್ರೀತಿಸುವಿ ಎಂದು ಕೇಳಿದರೆ ಪ್ರೇಮಕೇ ಅವಮಾನ ॥೧॥

ಎಲ್ಲವನೂ ಎಲ್ಲರನೂ ಕ್ಷಮಿಸುವುದು ಪ್ರೇಮದ ಜಾಯಮಾನ
ತಾಯ ಹಾಲಿನಲೂ ಕಸುರ ಹುಡುಕುವರು ಎಂಥದಿದು ಕಾಲಮಾನ ॥೨॥

ಕಾಲವನು ಸೆಕೆಂಡಿನಲು, ಸಾಲವನು ರೂಪಾಯಿಯಲೂ ಅಳೆವುದು ಜಗವು
ಪ್ರೇಮವೊಂದೇ ಪದಾರ್ಥ ಅದಕೆ ಪ್ರೇಮವೇ ಎಲ್ಲೆಡೆಯೂ ಏಕಮಾನ ॥೩॥

ಅನುರಾಗ, ವಾತ್ಸಲ್ಯ, ಸ್ನೇಹ, ಎನಿತು ರೂಪಗಳಲಿ ಮೆರೆದಿಹುದು ಪ್ರೇಮ 'ಸಾಲಿ'
ಪ್ರೇಮವುಳಿದೆಲ್ಲ ಹಾಲಾಹಲ. ಮಾನವತೆಗೆ ಪ್ರೇಮವೇ ನಿಜಮೂಲಮಾನ. ॥೪॥

✧✧

ಚಿದಾನಂದ ಸಾಲಿ ಶಿಕ್ಷಕರು, ಸಿರವಾರ (ಪೋಸ್ಟ್) ರಾಯಚೂರು (ಜಿ)

ಅಯ್ಯೋಧ್ಯೆಯಲ್ಲೊಂದು ಸಂಜೆ

ಲಕ್ಕೂರ. ಸಿ. ಆನಂದ

ಬಯಲು ಬಯಲನೆ ಬಿತ್ತಿ
ತಾಯಗರ್ಭದ ಬಯಲನ್ನು ನಿಚ್ಚಾರನೆ ಸೀಳಿ
ಸೋತ ಕೈಯನು ಮುಡಿಯಲು
ಬಂದೆಯಾ ಜಾನಕಿ
ಬೆಂದೂಡಲ ಮುಡಿಗೆಲ್ಲಾ ಮದರಂಗಿ
ನುಡಿ ಮುಡಿದು ಚಪ್ಪರದ ಕೆಳಗೆ ಕರಿನೆರಳು ಚೆಲ್ಲಿ

ಬದುಕು ಕಟ್ಟದ ನೊಗದ ಬುಡಕೆ
ಕಳೆದ ಕಾಲದ ಆದಿ ಅಂತ್ಯವನು ಜಿಗಿದಿದ್ದ ಧರೆಯಲ್ಲಿ
ಜನಕನು ಬಿತ್ತಿದ್ದ ನವಿಲ ಗದ್ದೆಯ ಬಯಲಲ್ಲಿ
ನೊಗದ ಬುಡಕೆ ಸಿಕ್ಕಿ ಬಯಲಾಗಿ
ಯಾರು ಹೆತ್ತ ಕುಡಿಯೊ ತುಟಿಯಂಚಿನ ನಗೆಯೊ
ಏನು ಮಾಯೆಯೊ ಶಿವನೆ ಎಂದು

ಕಳೆದಂತೆ ದಿನ ಕಳೆದು ಕರಗಿ ಹೋಯಿತು ನೋವು
ಎದೆ ಎತ್ತರಕ್ಕೆ ಬೆಳೆದಂತೆ ಅವಳು
ಸುತ್ತ ಮುತ್ತಿದ್ದ ಬಲೆಯನ್ನು ಸುಡಲು
ಇಟ್ಟರು ಸ್ವಯಂವರದ ಬೆರಗು ಬೆಡಗಿನ ಗೋಳು

ದೂರದ ದಾರಿಯ ಶಕುನದ ಹಕ್ಕಿಗಳು
ಹೇಳಲಾಗದ ದನಿಗೆ ಎತ್ತರಿಸದೆ ಕುಣಿಯುತ್ತಿವೆ
ಕುಣಿದಂತೆ ಬೆಳಕನ್ನು ಅಲ್ಲೆಲ್ಲ ಚೆಲ್ಲುತ್ತಿವೆ

ಎದೆಗೆ ಮೆತ್ತಿದ ಬಿಲ್ಲು
ಬಗಲ ಬತ್ತಳಿಕೆಯೊಳಗೆ ಸುಡುವ ಕಣ್ಣು
ಕುಲದೇವಿ ನೆರಳಲ್ಲಿ ಕರಿಮಾಯಿ ಕವಚದ
ತೊಟ್ಟುದುರಿ ನಡೆದಂತೆ ನಾಗಬೆತ್ತದ ಹಾಡು

ಬೊಗಸೆ ಮುಟ್ಟಿದ ಮಾತು
ದಾಖಲಾಗದ ನೋವು
ಯಾರದೋ ಹಾಡಿಗೆ ಇನ್ಯಾರದೋ ಚಪ್ಪಾಳೆ
ಬಂಗಾರವಿಲ್ಲದ ಬೆರಳಿಗೆ ಕರಿಹಾವಿನ ಉಂಗುರ

ನಿಂತ ನಿಲುವಿನಲ್ಲೇ ಕಳೆದು ಹೋದವು ಹಗಲುಗಳು
ಯಾರ ಹಂಗು ಅಪ್ಪಣೆಯಿಲ್ಲದೆ
ಕದ್ದಿದ್ದ ಮಾತುಗಳು ಎತ್ತಿಡಲಾರದ ಅಲಗುಗಳು
ಬಿತ್ತರಿಸಿ ಹೋಗುತ್ತಿವೆ ಯಾರಿಗೂ ನಿಲ್ಲದೆ

ಬಯಕೆ ಕಣ್ಣುಗಳೆಲ್ಲ ಕದ್ದು ಕಾಡುತ್ತಿವೆ
ಸೆರಗಿನ ಅಂಚಲ್ಲಿ ಮುಗಿದಿದೆ ಬೆಳಕು
ಕಾಣದ ಕಣ್ಣಿಗೆ ಹಳದಿ ಬಣ್ಣ ಬಳಿದಂತೆ
ಬಿಗಿಯುತ್ತಿದೆ ಕತ್ತುಗಳಿಗೆ ಬಂಗಾರದ ಹಿಡಿಕೆ

ನಿಂತು ನೋಡುತ್ತಿವೆ ಸುತ್ತ ಹರಡಿದ ನೆರಳುಗಳು
ಮುಟ್ಟಿದರೆ ಮುನಿದಂತೆ ಭಗ್ನ ಅವಶೇಷಗಳು

ಊರಿ ಹೋದಂತೆಲ್ಲಾ ಪಾದಗಳ ಅಡಿಗೆಲ್ಲಾ
ಬರಿ ಎಲುಬು ಅಸ್ಥಿಪಂಜರಗಳು ಬತ್ತುತ್ತಿವೆ
ಜಾನಕಿ ನಿಂತ ಮರದ ರೆಕ್ಕೆಗಳೆಲ್ಲಾ
ಅವಳ ಬಿಕ್ಕಳಿಕೆ ಎದುರುತ್ತಿವೆ.

ಒಂದು ಪಾವು ಅಕ್ಕಿ

ಅಕ್ಕಿ ಇದ್ದರೆ ಒಂದು ಪಾವು ಕೊಡು ದೇವರೆ
ಜನಿವಾರಗಳ ಜಗ್ಗಾಟದಲ್ಲಿ
ಎಂದೆಂದೂ ಎದುರಾಗದ ಪ್ರಶ್ನೆಗಳಿಗೆ ಉತ್ತರ-
ತಡಕುವ ಅಗ್ರಹಾರದ ಮಂದಿಗೊಂದಷ್ಟು
ಅನ್ನ ಮಾಡಿ ಬಡಿಸಬೇಕಿಗಾ?
ಅವರನ್ನು ಮುಟ್ಟಿ ಪಾಪಾತ್ಮನಾಗುವುದಕ್ಕಿಂತ
ಮುಟ್ಟಿಸಿಕೊಳ್ಳದೇ ಪವಿತ್ರನಾಗಿರಬೇಕು

ಮಿಕ್ಕಿಲ್ಲದ ನಾಳೆಗಳಿಗೆ, ಕಳೆದು ಹೋದ ನೆನ್ನೆಗಳಿಗೆ
ರುಜುಮಾಡಿ ಜಮಾಬಂಧಿ ಬರೆದು
ನಕ್ಷತ್ರ, ವಾರ, ತಿಥಿ, ರಾಶಿ ಅದು- ಇದು
ಎಂದು ಹೇಳುವ ಇವರಿಗೊಂದಷ್ಟು
ನನ್ನ ಕಲಾಯಿ ಕಾಣದ ಮಡಿಕೆಯಲ್ಲಿ
ಅನ್ನಮಾಡಿ ಬಡಿಸುತ್ತೇನೆ
ಒಂದಿಷ್ಟು ಅಕ್ಕಿ ಇದ್ದರೆ ಕೊಡು ಸ್ವಾಮಿ

ಒಂದು ಹಿಡಿಯಾದರೂ ಸಾಕು..
ಒಂದಿಷ್ಟೇ ಇಷ್ಟು ಆದರೂ ಸರಿ

ಮಸುಕು ಹಗಲಿನ ತುಂಬ ಎತ್ತರಗಳ ಅಳೆಯುತ್ತ
ಉತ್ತರವನ್ನುಡುಕಲು ಪಂಚಾಂಗ ಹಿಡಿದು

ಸುಸ್ತಾಗಿದ್ದಾರೆ ಇವರೆಲ್ಲಾ
"ಬಂದು ಬಿಡಬಹುದೆ ಹೀಗೆ?" ಎಂದು
ಕಷ್ಟಗಳಿಗೆ ಎದಿರೇಟು ಆಕುತ್ತ
ಸಾಧ್ಯವಾದರೆ ಅದರೊಂದಿಗೆ ಮಾತನಾಡಲಾದರೂ
ಶಕ್ತಿ ಬೇಕಲ್ಲವೆ
ಅದಕ್ಕಾದರೂ ಅವರಿಗೊಂದಷ್ಟು ಅನ್ನಮಾಡಿ ಬಡಿಸಬೇಕು.

ಅವರು ಕೊಟ್ಟ ಮಾತುಗಳಿಗೆಲ್ಲಾ ಆಕಾರ ಬರೆದು
ನೆರಳನ್ನು ಹೆತ್ತು ಹೊತ್ತು ಸಾಕಿ ಸಲಹಿ
ಬಿಸಿಲನ್ನು ನುಂಗುತ್ತ ನಾವು ನಿಂತಿರುವಾಗ
ಜಡಿಮಳೆಗೆ ಕೊಡೆ ಹಿಡಿಯಿರಿ ಎಂದು ಅಂಗಲಾಚುವ
ಅವರಿಗೊಂದಷ್ಟು ಅನ್ನ ಮಾಡಿ ಬಡಿಸುತ್ತೇನೆ
ಒಂದು ಪಾವು ಅಕ್ಕಿ ಕೊಡು ದೇವರೆ...

ಜಂಗಮನ ಬಯಲಲ್ಲಿ
ನಮ್ಮ ಹಟ್ಟಿ ಕೂಸುಗಳಿಗೆಲ್ಲಾ ಹಣೆಬರಹ ಬರೆದು
ಹುಟ್ಟು ಜೋಯಿಸನಂತೆ
ತಾನೇ ಮೂಲೋಕದ ಮಾದೇವನಂತೆ
ಅನಾದಿ ಕಾಲದಿಂದಲ್ಲೂ ಮಲಗುತ್ತ ಎದ್ದೇಳುತ್ತ
ನಡೆದಾಡುತ್ತ ನಗುವ
ಇವರಿಗೊಂದಷ್ಟು ಅನ್ನ ಮಾಡಿ ಬಡಿಸುತ್ತೇನೆ

ದೇವರೆ ಒಂದು ಪಾವು ಅಕ್ಕಿ ಇದ್ದರೆ ಕೊಡು
ಒಂದೇ ಒಂದು ಪಾವು...

✧✧

ಲಕ್ಕೂರು ಸಿ. ಆನಂದ, 'ಪದ್ಮಗೌರಿ' ಪೊಲೀಸ್ ಠಾಣೆ ಎದುರು, ಲಕ್ಕೂರು (ಅಂಚೆ)
ಮಾಲೂರು (ತಾ) – ೫೬೩೧೩೦ ಕೋಲಾರ (ಜಿಲ್ಲೆ)

ಬದುಕು ಜಟಕಾ ಬಂಡಿ.....

ಉಮೇಶ ತಿಮ್ಮಾಪುರ

ರೈಲು ನಿಲ್ದಾಣದ ತುಂಬ ಜನಜಂಗುಳಿ. ಗಂಟು ಮೂಟೆ ಮುಂದಿಟ್ಕೊಂಡು ಜನ ಗಾಡಿ ಕಾಯ್ತಿದ್ರು, ನಿಲ್ದಾಣ ಛಾವಣಿ ಮ್ಯಾಗ 'ಕಿಸೆಗಳ್ಳರಿಂದ ಎಚ್ಚರಿಕೆ' ಬೋರ್ಡ ಕೂಡಿದ ಮಂದೀನ ಹದ್ದು ಬಂದಿಯೊಳಗೆ ಇಟ್ಟಿತ್ತು. ಗಡಿಯಾರದ ಮುಳ್ಳು ಎರಡು ಗಂಟೆಗೆ ತಿರುಗಿದ್ರು ರೈಲಗಾಡಿ ಬರ್ಲಿಲ್ಲ. ನಿಂತಲ್ಲೇ ನಿಂತು ಕಾಲ್ನೋತು ಕುಂದರ್ಬೇಕು ಅಂತ ಜಾಗಾ ನೋಡಿದ್ಯಾ ಎಲ್ಲ ಭರ್ತಿಯಾಗಿದ್ವು. ನಿಂತ ಬ್ಯಾಸರಾಗಿ ಎರಡ ಹೆಜ್ಜಿ ಮುಂದ ಹೋದ್ಯಾ ರೈಲು ಅರ್ಧತಾಸು ತಡ ಆಗ್ತೈತಿ ಅನ್ನೊ ವಿಷಯ ತಿಳೀತು. ಉತ್ರಿ ಬಿಸಲು ಜ್ಯಾಸಗಿ ಮೀರಸಂಗಿತ್ತು. ನಾನು ಗ್ಯಾಂಗ್‌ಮನ್ ಖತೀಬ ಮಾತಾಡ್ತ ನಾಕ ಹೆಜ್ಜಿ ಮುಂದ ಹೊದ್ವಿ. ನಿಲ್ದಾಣದ ಒಂದ ಮೂಲ್ಯಾಗಿಂದ ಇಂಪಾದ ಹಾಡೊಂದು ನನ್ನ ಮನಸ್ಸಿನ ಮೌನ ಕದಲಿಸ್ತು. ಬರಿ ದನಿ ಮನಷ್ಯಾ ಯಾರು ಅಂತ ಗೊತ್ತಾಗ್ಲಿಲ್ಲ. ಖತೀಬ ಇದು ಹೊಸದೇನಲ್ಲಬಿಡು ಅನ್ನೋರಂಗ ಸುಮ್ನಿದ್ದ. ಯಾರೊ ಖತೀಬ ಆ ಮನುಷ್ಯಾ ಎಷ್ಟು ಚಂದ ಹಾಡ್ತಾನ? ಅಂತ ಕೇಳಿದ್ಯಾ. ಯಾರೋ ಗೊತ್ತಿಲ್ಲ ಸಾಹೇಬರ ಒಂದು ತಿಂಗಳ ಆತು ಇಲ್ಲೇ ಅದಾನ ಎರಡೂ ಕಣ್ಣೂ ಕಾಣುದಿಲ್ಲ ಅಂದ. ನನಗ ಆ ಮನುಷ್ಯನ ನೋಡ್ಬೇಕು ಅನ್ನಿಸ್ತು. ಖತೀಬನ್ನ ಅಲ್ಲೆ ಬಿಟ್ಟು ಆ ವ್ಯಕ್ತಿ ಕಡೆ ಬಂದ್ಯಾ.

ಚಪ್ಪಟೆಯಾದ ತಲಿ ಕೂದಲು. ಹರಕು ಗಡ್ಡ. ಕಳೆ ಇಲ್ಲದ ಮಾರಿ. ಸುಕ್ಕುಗಟ್ಟಿದ ಮೈ ಮ್ಯಾಲಿನ ಚರ್ಮ. ಹರಿದು ಹೋದ ನಕಾಶದಂತೆ ಅರಿಬಿ. ನೋಡಾಕ ಒಂದ ಥರ ಇಚಿತ್ರ ಮನಷ್ಯಾ. ಇಂಥಾ ಮನುಷ್ಯಾ ಎಷ್ಟು ಛಂದ ಹಾಡ್ತಾನ ಅನಿಸ್ತು. ಹಾಡಾಕ ಕುಂತ ಮುದುಕ ಕೈಯಿಂದ ತೊಡೆಗೆ ತಾಳಾ ಹಾಕ್ತಿದ್ದ, ತಾಳಕ್ಕ ತಕ್ಕಂಗ ಹಾಡ್ತಿದ್ದ. ಅವ್ನ ಮಗ್ಗಲದಾಗ ಒಂದು ಸಣ್ಣ ಹುಡುಗಿ ಕುಂತಿದ್ಲು. ಹಾಡು ಹೇಳ್ಕೋತ ದುಖದಾಗ ಮುಳುಗಿದ ಮುದುಕನ ಕಣ್ಣಾಗ ನೀರು ತುಂಬ್ಕೊಂಡ್ವು ದೊಡ್ಡ

ಕಂದಕದಾಗ ಮಿನುಗೊ ಕಣ್ಣ ದೃಷ್ಟಿ. ಹಿಂಗ ಎಷ್ಟೋ ಸಲ ಅತ್ತು ಅತ್ತು ಸುರಿದ ಕಣ್ಣೀರ ಕಲಿ ಮುದ್ಕನ ಮುಖದ ಮ್ಯಾಗ ಇನ್ನೂ ಮಾಸಿರ್ಲಿಲ್ಲ. ಅಳು ಹೊಸದೇನಲ್ಲಂತ ಖಾತ್ರಿ ಮಾಡ್ಕೊಂಡ ಆ ಸಣ್ಣ ಹುಡುಗಿ ತಪ್ಪಡಿ ಬಾರಸೋದ ಬಿಡ್ಲೇ ಇಲ್ಲ. ಜನ ಬಂದು ಸೇರಿದಂಗೆಲ್ಲ ಅವಳ ತಪ್ಪಡಿ ಬಡಿತ ಜೋರಾತು. ಮುದುಕನ ಆ ಬಡಕಲ ದೇಹದಾಗ ಹಾಡು ಜೋರಾದಂಗೆಲ್ಲ ನರ ಆಕಾರ ಪಡ್ಕೊಂತಿದ್ವು ಸ್ವಲ್ಪ ಹೊತ್ನ್ಯಾಗ ಆ ದನಿ ಜನರ ಕಿವಿ ಮುಟ್ಟಿ ಅವರ ಮನಸ್ಸ ತಟ್ಟಿ ಬಂತು. ಆ ಕ್ಷಣದಾಗ ಜನರ ದೊಡ್ಡ ಗುಂಪು ಅವನ ಮುಂದ ಸೇರ್ತು. ನಿಂತ ಮಂದಿ ಅವ್ನ ಹಾಡಿಗೆ ಕೈಕಟ್ಟಿ ತಲಿ ಆಡ್ಸಿದ್ರು. ಹಾಡಿನ ಅರ್ಥ ಗೊತ್ತಾದ ಕೆಲ ಮಂದಿ ಕಣ್ಣೀರ ಹಾಕಿದ್ರು. ಕೆಲವು ಮಂದಿ ಟೈಂ ಪಾಸಿನ ಸಲುವಾಗಿ ನಿಂತವ್ರಂಗ ಹಲ್ಲ ಕಿರಿತಿದ್ರು. ಮುದಕನ್ ಕಂಠದಾಗಿಂದ ತೇಲಿ ಬರುವ;

"ಜೀವನದಲ್ಲಿ ಏನಿದೆ ಸುಖವು
ಮರುಳೇಶನ ಲೀಲೆ
ಓ.................. ಮರುಳೇಶನ ಲೀಲೆ".

ಹಾಡು ಕೇಳೋರ್ನ ಆಶ್ಚರ್ಯಗೊಳಿಸ್ತು. ಆ ಹಾಡು ಬರಿ ಹಾಡಾಗಿರ್ದ ಭೀಕರ ಬದುಕಿನ ಸಾಲಾಗಿತ್ತು. ಕೂಡಿದ ಮಂದಿ ಅನುಕಂಪದಿಂದ್ಲೋ, ಗೌರವದಿಂದ್ಲೋ ಚಿಲ್ಲರ ರೊಕ್ಕನ ಮುದುಕನ ಮುಂದು ಒಗದು ಪಾಪ ಏನ್ ಮಾಡೋದು ಹೊಟ್ಟಿ ಪಾಡಿಗೆ ಏನರ ಮಾಡ್ಬೇಕಲ್ಲ ಅಂತ ಗೊಣಗುತ್ತ ಹ್ವಾದ್ರು.

ತಪ್ಪಡಿ ಹುಡಗಿ ಚಿಲ್ಲರ ಬಿದ್ದ ಕಡೆ ಕೈಯಾಡ್ಸಿ ಒಂದ ಕಡೆ ಕೂಡಿ ಹಾಕಿದ್ಲು. ಮುದುಕ ಹಾಡ್ತಾನ ಇದ್ದ ರೈಲು ಬರೋ ಸೂಚನೆ ಆತು. ನಿಂತ ಮಂದೆಲ್ಲ ಚದುರಿದರು. ನನ್ ಮನಸ್ಸು ಭಿಕ್ಷುಕ ಮುದುಕನ ಭಾವದಾಗ ಮಿಳಿತಗೊಂಡಿತ್ತು. ವಾಸ್ತವಕ್ಕೆ ಜೀವ ತುಂಬೊ ಇಂತ ಎಷ್ಟೋ ದೃಷ್ಯನ ಕಂಡಾಗ ಮನಸ್ಸು ಒಂದ್ಸಲನಾರ ಮರಗ್ಲಿಕ್ಕರ ಎಂತ ಕಠೋರ. ಮನುಷ್ಯತ್ವದ ಸಂಬಂಧ ಅನುಭಾವ ಅನನ್ಯತೆ ಅಂತಾರಲ್ಲ ಅವುಕ್ಕ ಬೆಲೆ ಇರ್ತಿರಲಿಲ್ಲ. ಭೂಮಿ ಮ್ಯಾಗ ಬದುಕೋ ಎಲ್ಲಾ ಮನುಷ್ಯ ಸುಖವಾಗಿದ್ರ ಇಂತ ಇಚಾರಕ್ ಅವಕಾಶ ಇರ್ತಿರಲಿಲ್ಲ ಅಂದ್ಕೊಂಡು ನಿಂತ ಜಾಗದಿಂದ ಪ್ಲಾಟ್ ಫಾರ್ಮಿನ ತುದಿಗೆ ಬಂದೆ. ಜನರ ನೂಕು ನುಗ್ಗಲಿನಿಂದ ಸ್ವಲ್ಪ ಹಿಂದೆ ಸರಿದು ನಿಂತು ರೈಲು ಬಿಡೊ ಮುಂದ ಹತ್ತಿ ಜಾಗಾ ಇದ್ದ ಕಡೆ ಕುಂತ್ಕೊಂಡೆ. ಆ ಮುದುಕನ ನೆನೆಪು ನನ್ನ ಮನಸ್ಸ ಕೊರಿತಿತ್ತು. ಈ ಇಚಾರದಾಗ ನಮ್ಮೂರ ಕಡೆ ಮನಿ ಭೀಮವ್ವನ ನೆನಪಾತು.

ಮದಿವ್ಯಾಗಿ ಬಾಳ ವರ್ಷ ಕಳದಹೋದರು ಮಕ್ಕಳಾಗಿರ್ಲಿಲ್ಲ. ಭೀಮವ್ವನ ಬದುಕು ಸಂಜಿ ಕತ್ತಲಿಗೆ ಪರಕಿಲ್ಲದ್ದು. ಮನಿತನಕ್ಕ ಆಸ್ತಿ ಇರ್ಲಿಲ್ಲ ದುಡುಕಿಯಿಂದ ಜೀವ ನಡೆಸ್ಕೊಂಡು ಇದ್ರು. ಭೀಮವ್ವ ಬ್ಯಾಸಗಿ ಸುರು ಆಯ್ತು ಅಂದ್ರ ತುಂಬ್ರಿ ಎಲಿ ತರಾಕ ಅಡವಿಗೆ ಹೋಗ್ತಿದ್ಲು. ಹೊಂಗೇಕಾಯಿ ಬೀಜ ಮಾಡೊ ಕೆಲ್ಸಾನೂ ಮಾಡ್ತಿದ್ಲು. ಮಳೆಗಾಲದಾಗ ಊರ ರೈತರ ಹೊಲದಾಗ ಕೆಲಸ ಮಾಡ್ತಿದ್ಲು. ಗಂಡ ಹೆಂಡ್ತಿ ಒಂದಿನಾನೂ ಕೆಲಸ ಇಲ್ದ ಇರ್ತಿರಲಿಲ್ಲ. ಸುಗ್ಗಿ ಕಾಲದಾಗ ಇಬ್ಬರಿಗೂ ಕೂಳ ತಿನ್ನಾಕ ಪುರುಸೊತ್ತು ಇರ್ತಿರಲಿಲ್ಲ. ಇಂದಿನ ಅನ್ನದ ದಾರಿ ನೀಗಿಸಿ ನಾಳಿ ದಾರಿ ಹುಡ್ಕೊದೆ ಅವರ ಬುದ್ಧಿಗೆ ನಿಲ್ಕೊ ವಿಚಾರ. ಅವರಿಗೆ ಅವರ್ದೇ ಆದ ಜಗತ್ತು.

ಕೆಟ್ಟ ಬರಗಾಲದಾಗ ಗಟ್ಟಿ ಧೈರ್ಯ ಮಾಡಿ ಕೆರಿ ಹೊಲದಾಗ ಅಂಗಾರದ ಉಡಚಪ್ಪ ಭಾವಿ ಕಡ್ಸಾಕ ಹಚ್ಚಿದ್ದ. ಊರು ಬಿಟ್ಟು ಎರಡ ಹರದಾರಿ ದೂರ ಅದು. ಮಳೆ ಇಲ್ದ ಕೆರಿ ಅಂಗಳ ಬತ್ತಿ ಹೋಗಿತ್ತು. ಅಡವಿ ಕೆಲಸಕ್ಕ ಹೋದ ಕೂಲಿ ಆಳಿಗೆ ಸೆರಿ ನೀರು ಕುಡ್ಯಾಕ ಸಿಗ್ತಿರಲಿಲ್ಲ. ನೀರಡಕಿ ಆದ್ರ ಊರಿಗೆ ಬಂದ ನೀರ ಕುಡಿಬೇಕು. ಕಾಗಾರದನದ ಗೋಳಂತೂ ಕೇಳ್ಬಾರ್ದು. ಅಡ್ವ್ಯಾಗ ದನ–ಕರಕ್ಕ ಹುಲ್ಲಿಲ್ಲ. ಬೋಳ ಬೆಟ್ಟ, ಇದ್ದ ಒಣ ಬಾದಿಗೆ ಕಿಡಗೇಡಿಗೊಳು ಕಡ್ಡಿ ಕೂರ್ದ ಬೆಂಕಿ ಬಾಯಿಗೆ ಕೊಟ್ರು. ಇಂತ ಭೀಕರ ಕಾಲಮಾನದಾಗ ಪುಣ್ಯಾತ್ಮ ಭಾವಿ ಕಡ್ಸಾಕ ಶುರುಮಾಡಿದ್ದು ಊರ ಜನಕ್ಕ ವರದಾನ ಆತು. ರಾಚ ಮತ್ತು ಭೀಮವ್ವ ಭಾವಿಕೆಲ್ಸಕ್ಕ ನಿಂತ್ರು. ಭೀಮವ್ವ ಎಂತಾ ಕೆಲ್ಸಾ ಆದ್ರೂ ನೀಗ್ಸಿ ಬಿಡಾಕಿ. ಬಾವಿ ಕೆಲಸ ಮುಗಿಯೊವರಿಗೂ ದುಡ್ಡು ನಾಕ ದುಡ್ಡು ಮಾಡಿಕೊಂಡ್ರು.

ಸರಕಾರ ಬರಗಾಲ ಕಾಮಗಾರಿ ಅಂತ ಊರಾಗ ರೋಡ ಕೆಲ್ಸ ಶುರುಮಾಡಿದ್ರು. ರಾಚ ಎರಡ ದಿನಾ ಮುಂಚಿತವಾಗಿ ಸಲಕಿ, ಪಿಕಾಸಿ, ಹಣಿಸಿಟ್ಟಿದ್ದ. ಊರಿಂದೂರ ಕೊಡ್ಲಿ, ಸಲಿಕಿ, ಪಿಕಾಸಿ ಹಿಡ್ಕೊಂಡು ರೋಡ್ ಮ್ಯಾಲ ನಿಂತಿದ್ರು. ಸರಕಾರಿ ಕೆಲಸ ಅಂದಾಗ ಬೇಡ ಅನ್ನೋರ್‍ಯಾರು. ಹಾಜರಿ ಬರಕೊಳ್ಳೋ ಗ್ಯಾಂಗ್ ಮನ್ ಜೊತೆ ಹಲ್ಲ ಕಿಸ್ಕೊಂಡು ನಿಂತ್ರ ಒಂದ ದಿನದ ಕೂಲಿ ಬಂದಹೋತು ಅನ್ನೋ ಜನ್ರೊಳಗ ರಾಚ, ರಾಚನಂತ ನೀಯತ್ತಿನ ಪ್ರಾಣಿಗಳು ಬೆವರು ಸುರಿಸಿ ಕೂಲಿ ಕೇಳವ್ರು ಇದ್ರು. ಕಟ್ಟಿಗೆ ಇಂತಿಷ್ಟು ಅಂತಾ ಕರಾರಿನ ಮ್ಯಾಗ ಕೆಲಸಾ ನಡೀತಿತ್ತು. ರಾಚ ಭೀಮವ್ವ ಎಲ್ಲರಿಗಿಂತ ಒಂದಕಟ್ಟಿ ಜಾಸ್ತಿ ಹಾಕ್ಬೇಕು ಅನ್ನೋ ಹ್ಯಾವದ ಮ್ಯಾಗ ಕೆಲ್ಸಾ ಮಾಡ್ತಿದ್ರು. ಹಿಂಗ ನಡೆದ ಕೆಲಸದ ಜಟಾಪಟಿಯೊಳಗ ರಾಚನ ಕೈ ಮ್ಯಾಲೆತ್ತಿದ ಪಿಕಾಸಿ ಕೈ ಜಾರಿ ಎಡಗಾಲ ಪಾದದ ಮ್ಯಾಲ ಬಿತ್ತು. ಬಿಗಿ ಹೊಡೆತ, ಪಿಕಾಸಿಯ ಚೂಪಾದ ತುದಿ ಪಾದಕ್ಕ ಬಿದ್ದು ಪಾರಾಗಿ ಭೂಮ್ಯಾಗ ಮುಖ ಊರಿ ನಿಂತಿತ್ತು. ಕೂಡಿದ ಮಂದಿ ಕೈ ಹಾಕಿ ಕಿತ್ತು ತೆಗದ್ರು. ಒಬ್ಬಿಬ್ರ ಓಡ್ಹೋಗಿ ಬೇಲಿ ಮ್ಯಾಗಲ ತಪ್ಪಲಾ ತಂದು ಹಿಂಡಿದ್ರು. ನಾಲ್ಕೈದು ಜನ ಅನಾಮತ ಹೊತ್ಕೊಂಡು ಹೋಗಿ ಊರ ಮುಟ್ಸಿದ್ರು. ಅವತ್ನಿಂದ ಆರೇಳು ತಿಂಗಳ ತನಕ ರಾಚ ಆಳಾಗ್ಲಿಲ್ಲ. ದುಡಿಮಿ ನಿಂತ ಹೋತು. ನಾಲ್ಕು ತಿಂಗಳ ಗರ್ಭಿಣಿ ಹೆಂಗ್ಸು ಭೀಮವ್ವನ ದುಡಿಮೆಯಿಂದ ಮನೆ ನಡೀತಿತ್ತು. ಹಿಂಗ ಎಂಟ್ಹತ್ತ ತಿಂಗಳ ಹೋತು. ರಾಚನ ಕಾಲು ಪಸಂದ ಆಗ್ಲಿಲ್ಲ. ಊರ ಜನ ಬೈದು ಗದುಗಿನ ದವಾಖಾನೆಗೆ ಹಾಕಿದ್ರು. ಸ್ವಲ್ಪ ದಿನ ಹ್ವಾದ ಮ್ಯಾಲ ಕಾಲೂರಿ ನಡೆಯುವಷ್ಟು ಆರಾಮಾದ. ಆದ್ರೆ ಭೀಮವ್ವ ಗಂಡನಿಗೆ ಕೆಲ್ಸಕ್ಕ ಕಳ್ಸಲಿಲ್ಲ. ಇನ್ನ ಸ್ವಲ್ಪ ದಿನ ಆರಾಮ ತೊಗೊಳ್ಳಿ ಅನ್ನೋದೇ ಅಕೀ ವಿಚಾರ.

ಕಡೆ ಶ್ರಾವಣ ಹದಿನೈದು ದಿನ ಮುಂದಿತ್ತು. ದೇವರ ಜಾತ್ರಿ ಸಲುವಾಗಿ ಊರಾಗ ಮಳಪ್ಪನ ಗುಡಿ ಸುಣ್ಣ–ಬಣ್ಣ ಬಳಿಯೋ ಕೆಲಸ ನಡಿದಿತ್ತು. ಅವತ್ತು ಊರಾಗ ಮುರಾಸಂಜೆಲ್ಲೆ ತಣ್ಣಗ ಗಾಳಿ ಬೀಸಿ ಮಳೆ ಆಕಾರ ಹುಟ್ಟಿಸ್ತು. ಗಾಳಿ ಕೆಂದೂಳ ಎಬ್ಬಿಸಿ ಒಂಟೆಲೆರ ಹೊಲದಾಗ ಲಗೋರಿ ಆಡುವ ಸಣ್ಣ ಹುಡುಗರೆಲ್ಲ ಓಡಿ ಬಂದು ಮಠದ ಅಂಗಳಕ್ಕ ನಿಂತ್ರು. ಇದ್ದಕಿಂದಂಗ ಓಡಿ ಬಂದ ಪರಿಸ್ಯಾ ರಾಚಗ ಪಾರ್ಶಿ ಹೊಡೆದೈತಿ ಮಾತಾಡಕ ಬರವಲ್ದು ನೋಡ ಬರ್‍ರೀ ಅಂತ ಹೇಳಿದ್ದು ಗುಡ್ಯಾಗಿನ ಮಂದಿಗೆ ದಿಕ್ಕ ತಪ್ಪಿಸ್ತು. ಸಂದಿಗೊಂದಿ ತೂರಾಡಿಕೊಂಡು ಬಂದ ಜನರ

ಗುಂಪು ರಾಚನ ಮನೆ ಅಂಗಳಕ ಜಮಾ ಆತು. ಪರಿಸ್ಥಾನ ಮಾತು ಸುಳ್ಳಾಗಿರಲಿಲ್ಲ. ದೇವರ ಕಾಡಾಟ ಇರಬೇಕು. ಶ್ರಾವಣದಾಗ ಅಜ್ಜನ ಪಾಲ್ಕಿಗೆ ಅಡ್ಡ ಹಾಕ ದಾಟಿ ಹೋಗ್ಲಿ ಎಲ್ಲ ಅವಂದ ಐತಿ ನೀನೇನ ಹೆದರಬ್ಯಾಡ ಭೀಮಿ ಧೈರ್ಯ ತಗೋ ಬಸರಿದ್ದಾಕಿ ಅಂದ್ಲು ಹನಮವ್ವ. ಏನ್ ಮಾಡೊದು ಎವ್ವ ಯ್ಯಾವಾಗ ಏನಾಗತ್ತ ಯ್ಯಾರ ಕಂಡಾರ. ಎಲ್ಲಾ ದೇವ್ರ ಆಟ ಅಂತ ಗಂಗವ್ವ ದೇವ್ರ ಗುಡಿ ಕಡೆ ಮುಖಾ ಮಾಡಿ ಕೈ ಮುಗದ್ಲು. ಭೀಮವ್ವ ಮಾತ್ರ ತನಗ ಬಂದ ಪಡಿಪಾಟಲ ತೋಡಿಕೊಂಡು ಅತ್ಲು. ಬಡಬಗ್ಗರಿಗೆ ಗನ ಕಾಡಾಟ ಯವ್ವ ಕಣ್ಣ ಮುಚ್ಕೊಂಡಿದ್ದಾನೇನು ಆ ಕರಿ ಹನಮ ಅಂತ ಉಡಚವ್ವ ಕಣ್ಣೀರ ತಂದ್ಲು. ಹಣೆಬರದಾಗ ಇದ್ದದ್ದು ತಪ್ಸಾಕ ಯಾರ್ಗೂ ಆಗೋದಿಲ್ಲಂತಾ ಎಲ್ಲರಿಗೂ ಗೊತ್ತಿದ್ರು ಏನೆಲ್ಲ ಹೇಳಿ ಭೀಮವ್ವಗ ಧೈರ್ಯ ತುಂಬಾಕ ನಿಂತಿದ್ರು.

ಮುಂದ ತೋರ್ಸಾಕ ದುಡ್ಡ ಇಲ್ದಂಗಾಗಿ ರಾಚ ಹಾಸಿಗ್ಯಾಗ ಕೊಳೆತ. ಭೀಮವ್ವಗ ದಿವಸ ತುಂಬಿ ದೇವರ ದಯೆದಿಂದ ಗಂಡ ಕೂಸು ಹಡದ್ಲು. ಬಡತನ ಸ್ಥಿತಿ ಸಣ್ಣ ಮಗನ್ನ ಬೆನ್ನಿಗೆ ಕಟ್ಟಿಕೊಂಡು ದುಡಿಯಾಕ ನಿಂತ್ಲು. ರಾಚ ಒಂದೊದ್ಸಲ ಮಲ್ಕೊಂಡಲ್ಲೇ ಎಲ್ಲಾ ಮಡಿರವ. ಭೀಮವ್ವ ಹೇಸಿಗೆ ಮಾಡಿಕೊಳ್ಳಾರದ ಗಂಡನ ಜೊಪಾನ ಮಾಡಿದ್ಲು. ಸಣ್ಣಾಕಿ ಇರತ್ಲೇ ಬಡತನದಾಗ ಬೆಳೆದ ಬಂದ ಆಕೀಗೆ ಕಷ್ಟ ಏನು ಹೊಸದಲ್ಲ. ಆದರ ಕೈಕಾಲ ಗಟ್ಟಿ ಇದ್ರ ದುಡುದ ಬದುಕಬಹುದಲ್ಲಾ ಅನ್ನೋ ಮಾತು ಈಗ ಹುಸಿಯಾಗಿತ್ತು. ನನಗಂಡ ದುಡಿಲಿಕ್ರ ಅಷ್ಟ ಹೋತು ನನ್ನ ಕಣ್ಮುಂದ ಬದುಕಿದ್ರ ಸಾಕು ಅಂತಿದ್ಲು ಭೀಮವ್ವ.

ಆ ವರ್ಷ ಬಿಟ್ಟು ಬಿಡದ ಒಂದ ವಾರ ಸ್ವಾತಿ ಮಳಿ ಹತ್ತಿ ಸುರೀತು. ಅತೀವೃಷ್ಟಿಯಾಗಿ ಹೊಳಿ ತುಂಬಿ ದಂಡ್ಯಾಗಿನ ಊರಹೊಕ್ಕು, ಮನಿ ಹೊಸ್ತಿಲ ಮೆಟ್ಟಿ ನಿಂತಿತ್ತು. ಸಾಕಿದ ಕುರಿ-ಕೋಳಿ ನೀರಪಾಲಾಗಿ ಸೆರೆಮುಕ್ಕ ಜ್ವಾಳ ಸುರುವಿದ ಹಗೆಯಲ್ಲ ಹಾಳ ಬಿದ್ದ ಹೋದ್ವು. ಭೀಮವ್ವಂದು ಕಡೆಬೀಸಿನ ಮನಿ ಧೋ........... ಅಂತಾ ಮಳಿ ಹೊರಗ ಸುರಿತಿತ್ತು. ಭೀಮವ್ವ ಸಣ್ಣ ಮಗನ್ನ ಮಗ್ಗಲ್ದಾಗ ಹಾಕ್ಕೊಂಡು ಗಂಡನ ಹತ್ರ ಕಟ್ಟಿ ಮ್ಯಾಗ ಮಲಗಿದ್ಲು. ವಾರದಿಂದ ಊರಾಗ ಕರೆಂಟ್ ಇರ್ಲಿಲ್ಲ. ರಾತ್ರಿ ಗುಡುಗ-ಮಿಂಚು ಭರ್ಜರಿ ಕೆಲ್ಸ ಮಾಡ್ತಿದ್ವು. ಸಣ್ಣ ಹುಡುಗನ ಹಾಕ್ಕೊಂಡು ಮಲಕೊಂಡಿದಿ ಗುಬ್ಬಿ ಲಾಟೀನರ ಹಚ್ಚಿಹಾಕು ಭೀಮಿ ಅಂದ ರಾಚ. ಲಾಟೀನದಾಗ ಸೆರಿ ಚಿಮಣಿ ಎಣ್ಣಿ ಇಲ್ಲ. ಎಲ್ಲಿಂದ ತರ್ಲಿ ಸುಮ್ನ ಮಲಗ ಮಾರಾಯಾ ಹೊರಗ ಮಳೆ ಚಂಡ ಚಾಚಲಾರ್ದಂಗ ಐತಿ ಅಂದ್ಲು. ರಾಚ ಕಾಲ ಹತ್ರ ಬಿದ್ದ ಕೌದಿ ಎಳೆದು ಮೈಮ್ಯಾಲ ಹಾಕ್ಕೊಂಡು ಮುದ್ಯಾಗಿ ಮಲಗಿದ. ಹಂಚಿನ ಮನಿ ಒಳಗ ತಟತಟ ಹನಿ ಸುರುವ ಇತ್ತು. ಗುಡುಗು-ಮಿಂಚು ಏಕಾಗಿ ಭಡಲ್ ಅಂತ ಸಿಡ್ಲು ಹಳ್ಳದ ದಂಡ್ಯಾಗಿನ ಒಂಟೆಲೆರ ಮಾವಿನ ಗಿಡಕ ಬಡ್ದು ಗುಡ್ಡದ ವಾರಿಗೆ ಸೌಳ ಹಿಡಿಸ್ತು. ಭೀಮವ್ವಗ ಕಣ್ಣಾಗ ದೀಪ ಹಚ್ಚಿದಂಗಾಗಿ ಗಂಡನ ಕೌದ್ಯಾಗ ಒಂದಾದ್ಲು.

ರಾತ್ರಿ ಹನ್ನೊಂದು ಗಂಟೆ ಆಗಿರ್ಬೇಕು. ಭೀಮವ್ವ ಕೆಟ್ಟ ದನಿ ಮಾಡಿ ಚೀರಿದ್ಲು. ಏನಾತ ಅಂತಾ ಬೆಚ್ಚಿಬಿದ್ದ ರಾಚ ಮಗನ ಬಗಲಾಗ ಹಿಡ್ಕೊಂಡು ಕಾಲಿನ ಕಬರ ಇಲ್ದ ವಾರ ದೂರ ಜಿಗದ. ಭೀಮವ್ವ ಸಂಗಟ ಸಂಗಟ ಅಂತ ಒದ್ಯಾಡಿದ್ಲು.

ಗಾಬರಿಯಾದ ರಾಚ ಕತ್ತಲದಾಗ ಕಲ್ಲೆಡಿವಿ ಎದ್ದು ಬಿದ್ದು ಮಗ್ಗಲ ಮನಿ ಮಂದಿ ಎಲ್ಲ ಸೇರಿಸಿದ. ಜನ ಬಂದು ಭೀಮವ್ವನ ಬಾಯ್ಯಾಗ ಬುರುಗ ಬರೋದ ನೋಡಿ ಹಾವು ಕಡ್ಡಿದ್ದು ಖಾತ್ರಿ ಮಾಡ್ಕೊಂಡ್ರು. ಮನಿ ಮುಂದ ದೊಡ್ಡ ಕಲ್ಲ ಗುಂಪಿ. ಹಿತ್ತಲ್ದಾಗ ಮೊಣಕಾಲ ಮಟ ಹುಲ್ಲು ಬೆಳೆದಿತ್ತು. ಕೋಲು ಭರ್ಚಿ ತಗೊಂಡು ಬ್ಯಾಟ್ರಿ, ಲಾಟೀನ ಹಿಡಿದು ಹುಡುಕಿದ್ರು. ಹಾವು ಸಿಗ್ಲಿಲ್ಲ. ಲೇ ತಮ್ಮ ಇಂತಹ ಸೀಗರವಾಗ ನಿಮಗೇನ ಹಾವು ಸಿಕ್ಕೀತು. ಆ ಹೆಣಮಗಳ ಗತಿ ಏನಾಗೈತಿ ನೋಡ್ರಿ ಅಂದ ಮರಡೆಪ್ಪ. ಜನ ಬಂದು ನೋಡೋ ಅಷ್ಟೊತ್ತಿಗೆ ಭೀಮವ್ವಗ ಪ್ರಜ್ಞೆ ಇಲ್ದಂಗ ಆಗಿತ್ತು. ಜಿಟಿ-ಜಿಟಿ ಮಳ್ಯಾಗ ಚಕ್ಕಡಿ ಕಟ್ಕೊಂಡು ತಾಂಡೆಕ ಬಂದ್ರು. ಲಾಲಸಿಂಗಪ್ಪನ ಹತ್ರ ಮದ್ದ ಹಾಕ್ಸಿದ್ರು. ಏನರ ಯ್ಯಾಕ ಆಗ್ಲಿ ತಮ್ಮ ಹುಳ ಮುಟ್ಟಿ ಬಾಳೊತ್ತಾಗೈತಿ ಡಾಕ್ಟರ್ ಕಡೆ ಸ್ವಲ್ಪ ತೋರ್ಸಿದ್ರ ಒಳ್ಳೇದು ಅಂದ. ಅಲ್ಲಿಂದ ಜನ ಚಕ್ಕಡೀನ ಬಾಗೇವಾಡಿಗೆ ತಿರುಗಿಸಿದ್ರು. ಬಾಗೇವಾಡಿ ಬಾಗಲದಾಗ ಹೋಗೋದ್ರೊಳಗ ಬಾಯ್ಯಾಗಿನ ಬುರುಗ ಹೆಚ್ಚಾಗಿ ಭೀಮವ್ವನ ಮೈ ತಣ್ಣಗಾತು.

ಇತ್ತ ಭೀಮವ್ವನ್ನ ದವಾಖಾನಿಗೆ ಕರ್ಕೊಂಡು ಹೋದಮ್ಯಾಲೆ ಊರಿಂದೂರಿಗೆ ನಿದ್ದಿ ಇಲ್ಲಿಲ್ಲ. ಸವಾರಾತ್ರಿ ಯಾಗಿತ್ತು ಹೆಣ ಚಕ್ಕಡ್ಯಾಗ ಹಾಕ್ಕೊಂಡು ತಿರುಗಿ ಊರ ಅಗಸಿಗೆ ಬರೋದ ತಡ ಜನ ಬಂದು ಮುಕ್ರಿದ್ರು. ರಾಚ ಹೌ ಹಾರಿ ಭೀಮವ್ವನ ಹೆಣ ನೋಡ್ಕೊಂತ ನಿಂತ. ಮುಗಿಲ ಹರದ ಬಿದ್ದವರಂಗ ಸುರುಯೋ ಮಳಿಯಾಗ ಭೀಮವ್ವನ ಹೆಣ ಚಕ್ಕಡಿ ಬಿಟ್ಟು ಕೆಳಗ ಇಳಿಲಿಲ್ಲ. ಹೆಣ ಸುಡಾಕ ಒಣಾ ಕಟಿಗಿ ಸಿಗದಂಗಾಗಿ ಬಾಪಿ ಕೊಳದಾಗ ಮಣ್ಣ ಮಾಡಿ ಊರ ಜನ ಮನಿಗೆ ಬಂದ್ರು. ರಾಚನ ನಸೀಬಕ ಕತ್ತಲ ಮಾರಿ ಆವರಿಸಿಕೊಂಡಗಾಗಿ ಸಣ್ಣ ಮಗನ ತೊಡಿ ಮ್ಯಾಲೆ ಹಾಕ್ಕೊಂಡು ಮನಿ ಮುಂದಿನ ಬೇವಿನ ಗಿಡದ ಕಟ್ಟಿಗೆ ಆತ್ಗೊಂತ ಕುಂತ. ನೋಡಿದ ಯಜಮಾನಕಿ ಜನ ಅವನ ಮುಂದು ಕುಂತು ಬುದ್ದಿ ವಾದ ಹೇಳಿ ಹೋದ್ರು. ರಾಚ ನಿಶ್ಕ್ರೀಯ ಭಾವದಿಂದ ಮತ್ತೊಮ್ಮೆ ಮಗನ ಮುಖ ನೋಡಿದ ಏನೂ ತಿಳಿದಂಗಾಗಿ ಮತ್ತ ಮತ್ತ ಉಕ್ಕಿ ಬರೊ ದುಃಖಾನ ಸಂಬಳಸಾಕೂ ಆಗದ ಚಟಪಡಿಸಿದ. ಅವನ ಕಣ್ಣೀರಿಗೆ ಭಾಷೆ ಇರದ ಬರಿ ದುಃಖ ತುಂಬಿಕೊಂಡಿತ್ತು. ತನ್ನ ಬದುಕಿನುದ್ದಕ್ಕೂ ತಾಪತ್ರೆಗಳನ್ನು ತಳಕು ಹಾಕಿಕೊಂಡೇ ಬದುಕಿದ. ಅವನ ಮನಸ್ಥಿತಿ ಭೀಮವ್ವನ ಅಗಲಿಕೆಯಿಂದ ಇನ್ನಷ್ಟು ಬಿಗಡಾಯಿಸ್ತು. ರಾಚನ ಒಳ್ಳೆ ಗುಣ ಕಂಡುಂಡ ಊರಾಗಿನ ಜನ ಎರಡು ರೊಟ್ಟಿ ಮ್ಯಾಲ ಪಲ್ಯೆ ಹಚ್ಚಿ ಕೊಡ್ತಿದ್ರು. ಹಿಂಗ ಕೆಲವು ದಿನ ಜೀವನ ನಡ್ಸಿದ. ಎಷ್ಟು ದಿನಾಂತ ರಾಚನ ಕರುಣೆ ಕಕುಲಾತಿ ಊರಾಗ ಕಲ್ಲಾಗಿ ನಿಲ್ಲೈತಿ ಅವರಿವರು ಅಗಾಗ ಅಂದುಕೊಳ್ಳೊ ಮಾತಿಗೆ ನೊಂದ್ಕೊಂಡು ರಾಚ ಮಗನ ಕಟ್ಕೊಂಡು ಊರು ಬಿಟ್ಟು ಹ್ವಾದ. ಹುಬ್ಬಳ್ಳಿ ರೈಲು ನಿಲ್ದಾಣದಾಗ ರಾಚ ಹಾಡೋದನ್ನ ಮಗ ತಪ್ಪಡಿ ಬಾರಿಸಿ ಭಿಕ್ಷೆ ಬೇಡೋದನ್ನ ನೋಡಿ ಬಂದ ಊರಾಗಿನ ಜನ ಕಟ್ಟಿಗೆ ಕುಂತು ಮಾತಾಡ್ಕೊಂತಿದ್ರು.

✧✧

ಉಮೇಶ್ ತಿಮ್ಮಾಪುರ. ಸುನಗದ ಬಿಲ್ಡಿಂಗ್, ರೂರಲ್ ಪೊಲೀಸ್ ಸ್ಟೇಷನ್ ಎದುರಿಗೆ,
ಲಕ್ಷ್ಮೀನಗರ ಬಾಗಲಕೋಟ - ೫೮೭೧೦೧

ಖಾಲಿಯಾದ ಮಾಂಸದ ಕಡಾಯ (ಪ್ರಬಂಧ)

ಬಿಳುಮನೆ ರಾಮದಾಸ

ನಾನು ಚಿಕ್ಕವನಿದ್ದಾಗ ನನ್ನ ಚಿಕ್ಕಮ್ಮ ಶಾರದಾಳ ಮದುವೆ ನಡೆಯಿತು. ಆಕೆಗೆ ತಂದೆ ಇಲ್ಲದ್ದರಿಂದ ಅವಳ ಇಬ್ಬರು ಅಣ್ಣಂದಿರಂತೆ ಅವಳೂ ನಮ್ಮ ಮನೆಯಲ್ಲಿಯೆ ಬೆಳೆದಿದ್ದಳು. ಮೇಗರವಳ್ಳಿಯ ನಮ್ಮ ಮನೆಯಲ್ಲಿ ಮದುವೆ ಮಾಡಿಕೊಡಲು ಯಾವ ಅನುಕೂಲ ಇಲ್ಲದ್ದರಿಂದ ದೂರದ ಕುಗ್ರಾಮ ಬೇಗದಾಳಿಯ ಗಂಡಿನ ಮನೆಯಲ್ಲಿಯೆ ಧಾರೆ ಎರೆದುಕೊಡುವುದೆಂದು ತೀರ್ಮಾನವಾಗಿತ್ತು. ಬೇಗದಾಳಿ ಹಳ್ಳಿಯು ನಮ್ಮೂರಿನಿಂದ ಏಳು ಮೈಲಿ ದೂರದ ಕಗ್ಗಾಡಿನ ಮಧ್ಯೆ ಇತ್ತು. ಅಲ್ಲಿ ಕೇವಲ ಎರಡು ಮೂರು ಮನೆಗಳಿದ್ದವು. ಮಲೆನಾಡಿನಲ್ಲಿ ಹಳ್ಳಿಗಳಲ್ಲಿ ಮನೆಗಳಿರುವುದು ಹಾಗೆಯೆ ಗದ್ದೆ ತೋಟದ ಸಮೀಪ ಹಳ್ಳಿಗರು ಮನೆ ಕಟ್ಟಿಕೊಂಡಿರುತ್ತಾರೆ. ಗಂಡಿನ ಮನೆಯವರು ಆರ್ಥಿಕವಾಗಿ ಅನುಕೂಲವಾಗಿದ್ದು ಜಾನುವಾರುಗಳನ್ನಲ್ಲದೆ ಸಾಕಷ್ಟು ಮೇಕೆಗಳನ್ನು ಹಂದಿಗಳನ್ನು ಕೋಳಿಗಳನ್ನು ಸಾಕಿಕೊಂಡಿದ್ದರು. ಅದರಿಂದಲೂ ಅವರಿಗೆ ಸಂಪಾದನೆ ಇತ್ತು. ಅವರು ಅಕ್ಷರ ಜ್ಞಾನವಿಲ್ಲದೆ ಅನಾಗರಿಕರಾಗಿದ್ದರು. ಪೇಟೆಯ ಜನಗಳನ್ನು ಸರ್ಕಾರಿ ಅಧಿಕಾರಿಗಳನ್ನು ವೈದ್ಯರನ್ನು ಅನುಮಾನದಿಂದ ನೋಡುತ್ತಿದ್ದರು. ಕಾಯಿಲೆ ಕಸಾಲೆಯಾದರೆ ಅಳಲೆಕಾಯಿ ಪಂಡಿತರನ್ನು ದೆಯ್ಯ ದೇವರನ್ನು ಅವರು ನಂಬಿಕೊಂಡಿದ್ದರು. ಅಂತಹ ಮನೆಗೆ ಚಿಕ್ಕಮ್ಮನನ್ನು ಕೊಟ್ಟು ಮದುವೆ ಮಾಡುವುದು ನನಗೆ ಬಹಳ ಯಾತನೆಯನ್ನು ಕೊಟ್ಟಿತ್ತು. ಆ ಯಮು ಕಾಡಿನ ದಾರಿಯಲ್ಲಿ ಚಿಕ್ಕಮ್ಮನನ್ನು ನೋಡಲಿಕ್ಕೆ ಹೋಗಿ ಬರುವುದು ಹೇಗೆ? ಆ ಅನಾಗರಿಕ ಜನಗಳ ಮನೆಗಳಲ್ಲಿ ಚಿಕ್ಕಮ್ಮ ಕಾಲ ಹಾಕುವುದಾದರು ಹೇಗೆ? ಅವರಿವರ ಮನೆಯಲ್ಲಿ ಕೆಲಸ ಮಾಡಿಕೊಂಡು ಜೀವನ ಮಾಡುತ್ತಿದ್ದ ನಮ್ಮಜ್ಜಿ ಮಗಳನ್ನು ನೋಡಲಿಕ್ಕೆ ಹೋಗಿ ಬರುವುದು ಸಾಧ್ಯವೆ? ಎಂದು ಮುಂತಾಗಿ ನನಗೆ ಚಿಂತೆಯಾಗಿತ್ತು. ನನ್ನ ಚಿಂತೆ

ಹಿರಿಯರಿಗೆ ಕಾಡಿದಂತೆ ಕಾಣಲಿಲ್ಲ. ಎಲ್ಲರೂ ಆಕೆಯನ್ನು ಮದುವೆಮಾಡಿಕೊಟ್ಟು ಕೈ ತೊಳೆದುಕೊಳ್ಳುವಂತೆ ಹರ್ಷದಿಂದ ಬೀಗುತ್ತಿದ್ದರು.

ಆಗ ಆ ಹಳ್ಳಿಗೆ ಮಲೆನಾಡಿನ ಇತರೇ ಹಳ್ಳಿಗಳಂತೆ ವಾಹನ ಸೌಕರ್ಯವಿರಲಿಲ್ಲ. ವರಾಹಿ ಅಣೆಕಟ್ಟಿನಲ್ಲಿ ಆ ಹಳ್ಳಿಯೊಂದಿಗೆ ಸುತ್ತ ಮುತ್ತಿನ ಹಳ್ಳಿಗಳು ಮುಳುಗುವ ಹೊತ್ತಿಗೆ ಶಿವಮೊಗ್ಗೆಯಿಂದ ಒಂದು ಖಾಸಗಿ ಬಸ್ಸು ಆ ಹಳ್ಳಿಗೆ ದಿನಕ್ಕೆರಡು ಸಾರಿ ಹೋಗಿ ಬರುತ್ತಿತ್ತು. ಅಲ್ಲಿಯ ತನಕ ಆ ಹಳ್ಳಿಯ ಜನಗಳು ಏನಾದರು ಕೆಲಸದ ಮೇಲೆ ಬೆಳಿಗ್ಗೆ ಮೇಗರವಳ್ಳಿ ಪೇಟೆಗೆ ಬಂದರೆ ಹಳ್ಳಿಗೆ ಸಂಜೆಯ ಹೊತ್ತಿಗೆ ಸೇರಿಕೊಳ್ಳುತ್ತಿದ್ದರು. ಹಗಲು ಹೊತ್ತಿನಲ್ಲಿ ರಸ್ತೆಯಲ್ಲಿ ಹುಲಿಗಳು ಕೂತಿರುತ್ತಿದ್ದರಿಂದ ಆ ದಾರಿಯಲ್ಲಿ ಒಬ್ಬೊಬ್ಬರೆ ಸಂಚರಿಸಲು ಭಯಪಡುತ್ತಿದ್ದರು. ಎತ್ತಿನಗಾಡಿಯಲ್ಲಿ ಸಂಚರಿಸುವವರು ರಸ್ತೆಯಲ್ಲಿ ಕೂತ ಹುಲಿಗಳನ್ನೋಡಿಸಲು ತುತ್ತೂರಿಯೂದುತ್ತಿದ್ದರು. ಆಗ ಹುಲಿಗಳನ್ನು ಕೊಂದವರಿಗೆ ಬಹುಮಾನವನ್ನು ಕೊಡುತ್ತಿದ್ದರು. ಹುಲಿ ಹೊಡೆದವರು ಜನಗಳ ಕಣ್ಣಿಗೆ ಹೀರೋಗಳಾಗಿ ಕಾಣಿಸುತ್ತಿದ್ದರು. ಅವರಿಗೆ ಬಹಳ ಮರ್ಯಾದೆಯು ಇತ್ತು.

ಚಿಕ್ಕಮ್ಮನ ಮದುವೆಗೆ ನಮ್ಮ ತಂದೆಯವರು ಇಪ್ಪತ್ತೈದು ಎತ್ತಿನ ಗಾಡಿಗಳನ್ನು ಮಾಡಿದ್ದರು. ಎತ್ತಿನ ಗಾಡಿಗಳಲ್ಲಿ ಜನಗಳು ದಿಬ್ಬಣದವರು ಕೂತು ಹೊರಟೆವು. ಕಾಡಿನಲ್ಲಿ ಎತ್ತುಗಳ ಕೊರಳ ಗಂಟೆ ಗಗ್ರಳ ಧ್ವನಿ ಎದ್ದು ಕೇಳಿಸುತ್ತಿತ್ತು. ರಸ್ತೆಯ ಎರಡೂ ಕಡೆಗಳಲ್ಲಿ ಕಾಡು ದಟ್ಟವಾಗಿ ಬೆಳೆದು ಹಗಲು ಹೊತ್ತಿನಲ್ಲಿ ನೋಡಲು ಭಯವಾಗುತ್ತಿತ್ತು. ನಾನಾ ತೆರನಾದ ಹಕ್ಕಿಗಳು ನಾನಾ ತೆರನಾದ ಧ್ವನಿ ತೆಗೆದು ಹಾಡುತ್ತಿದ್ದವು. ಪ್ರಕೃತಿಯ ಬಗ್ಗೆ ಆಸಕ್ತಿ ಇದ್ದವರಿಗೆ ಅದನ್ನೆಲ್ಲ ಅನುಭವಿಸಲು ರಸಕವಳ. ಆಸಕ್ತಿ ಇಲ್ಲದವರಿಗೆ ಕೋಣನ ಮುಂದೆ ಕಿಂದರಿ ಬಾರಿಸಿದಂತೆ. ದಾರಿಯಲ್ಲಿ ಯಾವುದಾದರು ಹಳ್ಳಿ ಸಿಕ್ಕಿದಾಗ ವಾದ್ಯದವರು ವಾದ್ಯ ಊದುವುದು, ಬ್ಯಾಂಡು ಬಾರಿಸುವುದು ಮಾಡಿ ಗಲಾಟೆ ಮಾಡುತ್ತಿದ್ದರು. ಅದರಿಂದಾಗಿ ಹಳ್ಳಿಯವರಿಗೆ ಯಾವುದೋ ಮದುವೆ ದಿಬ್ಬಣ ಹೋಗುತ್ತಿದೆ ಎಂದು ಅರಿವಾಗುತ್ತಿತ್ತು. ಜನ ದಾರಿ ಬದಿ ನಿಂತು ಯಾರಿಗೆ ಮದುವೆ ಎಂದು ತಿಳಿದುಕೊಳ್ಳುತ್ತಿದ್ದರು. ಹಳ್ಳಿ ಮುಗಿದ ಮೇಲೆ ಬ್ಯಾಂಡು ವಾದ್ಯದ ಸದ್ದು ನಿಂತುಹೋಗುತ್ತಿತ್ತು. ಅಂತು ಸೂರ್ಯ ಮುಳುಗುವ ಹೊತ್ತಿಗೆ ದಿಬ್ಬಣವು ಬೇಗದಾಳಿ ಹಳ್ಳಿ ತಲುಪಿತು. ಗಂಡಿನಮನೆ ತಗ್ಗಿನಲ್ಲಿ ಹೊಂಡದಲ್ಲಿತ್ತು. ಎತ್ತಿನ ಗಾಡಿಗಳು ಅಲ್ಲಿಗೆ ಹೋಗುವಂತಿರಲಿಲ್ಲವಾದ್ದರಿಂದ ಮೇಲೆ ಬಯಲಿನಲ್ಲಿ ನಿಂತವು. ಹೆಣ್ಣಿನ ಮನೆಯುವರನ್ನು ಎದುರುಗೊಳ್ಳಲು ಗಂಡಿನ ಮನೆಯವರು ಕಾದಿದ್ದರು. ಮಹಿಳೆಯರು ಹೊಸ ಸೀರೆ ಉಟ್ಟು ಹೂವು ಹಿಂಗಾರ ಕಳಸ ಹಿಡಿದು ಕಾದಿದ್ದರು. ಎರಡೂಕಡೆಯ ವಾದ್ಯದವರು ಕಿವಿಗಡಚ್ಚಿಕ್ಕುವಂತೆ ಪೈಪೋಟಿಯ ಮೇಲೆ ಬ್ಯಾಂಡು ಬಜಾಯಿಸಿದರು. ವಾದ್ಯದವರು ಅಂದಿನ ಕಾಲದ ನಾಗಿನ್ ಅನಾರ್ಕಲಿ ಸಿನೆಮಾ ಹಾಡು ನುಡಿಸುತ್ತಿದ್ದರು. ಅದರಿಂದಾಗಿ ಜನಗಳಿಗೆ ಸಿನೆಮಾ ದೃಶ್ಯಗಳು ತೀರ್ಥಹಳ್ಳಿಯ ಎಳ್ಳಮವಾಸೆ ಜಾತರೆ, ಹೋಟೆಲು, ರಸ್ತೆ ಬದಿಯ ಕಟ್ಲೇರಿ ಅಂಗಡಿಗಳು ಗುಬ್ಬಿವೀರಣ್ಣನವರ ನಾಟಕಗಳು ನೆನಪಾಗುತ್ತಿದ್ದವು. ಮನೆಗೆ ಹೋಗುವ ದಾರಿಯಲ್ಲಿ ಬಾಳೆಮರಗಳು ಜಂಜರಿಗೆ ಗಿಡಗಳು ಹಸಿರು ತೋರಣ ಸಿಂಗರಿಸಿಕೊಂಡು ನಿಂತಿದ್ದವು.

ಎತ್ತಿನಗಾಡಿ ನಿಂತಕೂಡಲೆ ನಾವು ಹುಡುಗರು ಗಾಡಿಯಿಂದ ಧುಮುಕಿ ಮದುವೆಮನೆ ಅಂಗಳಕ್ಕೆ ಓಡಿದೆವು. ಹೆಣ್ಣಿಗೆ ಆರತಿ ಎತ್ತುವ ಶಾಸ್ತ್ರ ನೋಡಲು ನಾವು ಕಾಯಲಿಲ್ಲ. ಏಕೆಂದರೆ ಅದೆಲ್ಲ ದೊಡ್ಡವರಿಗೆ ಸಂಬಂಧಿಸಿದ್ದು ಎಂದು. ನಮ್ಮ ವ್ಯವಹಾರವೆ ಬೇರೆ ಇತ್ತು. ಮದುವೆ ಮನೆ ಚಪ್ಪರದಲ್ಲಿ ಬಾಳೆ ಹಣ್ಣು ಕದಿಯಲು ಎಂತೆಂತಹ ಬಾಳೆಗೊನೆ ಕಟ್ಟಿದ್ದಾರೆಂದು ನೋಡುವ ತವಕ ನಮಗೆ. ದೈತ್ಯ ಶರೀರದ ಗಿರಿಜಾ ಮಿಸೆ ಬಿಟ್ಟ ಗೌಡರುಗಳು ಲೋಡಾಗಿ ಯಜಮಾನಿಕೆ ಮಾಡುತ್ತ ಒಂದು ಕಾಲಿನ ಕಚ್ಚೆಯನ್ನು ಎತ್ತಿ ಹಿಡಿದುಕೊಂಡು ಕಾಲು ತೊಡೆಗಳಲ್ಲಿ ಸುರುಳಿ ಸುತ್ತಿಕೊಂಡಿದ್ದ ಕರಿಯ ಕೂದಲನ್ನು ತೋರಿಸುತ್ತ ಗಸ್ತುತಿರುಗುತ್ತಿದ್ದರು. ಚಪ್ಪರಕ್ಕೆ ನೇತುಬಿಟ್ಟ ಬಾಳೆಗೊನೆ ಬಣ್ಣದ ಸೌತೆ ಕಾಯಿಗಳನ್ನು ನೋಡುತ್ತ ಓಡಿಯಾಡುತ್ತಿದ್ದ ನಮಗೆ "ಚೇಷ್ಟೆ ಮಾಡಿದರೆ ಲಾತಾ ಬೀಳತದೆ ಹುಸಾರ್" ಎಂದು ಗಂಡಿನ ದಾಯಾದಿ ಪರ್ವತಗೌಡರು ನಮಗೆ ಮೊದಲೇ ಎಚ್ಚರಿಕೆ ಕೊಟ್ಟರು. ಅವರು ನೋಡಲು ಪರ್ವತದಂತೇ ಇದ್ದರು. ಅಲ್ಲಿಗೆ ನಮ್ಮ ಪುಂಗಿ ಬಂದಾಯಿತು. ಬಾಳೆಹಣ್ಣು ಕದಿಯುವ ನಮ್ಮಾಸೆ ಇಂಗಿ ಹೋಯಿತು. ಮಾಂಸ ಬೇಯಿಸುವ ಕಂಪು ಚಪ್ಪರದ ಕಡೆಗೆ ಹೊಡೆಯುತ್ತಿದ್ದುದರಿಂದ ಅಡಿಗೆ ಕೊಟ್ಟಿಗೆ ಕಡೆಗೆ ನಾವು ಧಾವಿಸಿದೆವು. ದೊಡ್ಡ ದೊಡ್ಡ ಕಡಾಯದಲ್ಲಿ ಕುರಿ ಸಾರು ಮಾಂಸ ಬೇಯಿಸುವ ಎಲ್ಲಾ ಕರಿಯ ಕೊಣೆಯರು. ಬೆಂಕಿಯಿಂದ ಕಡಾಯದಿಂದ ಏಳುವ ಹೊಗೆಗೆ ಅವರು ಬೆವತು ಬಸವಳಿದಿದ್ದರು. ಅವರ ಮೈಯಿಂದ ಬೆವರು ಧಾರಾಕಾರವಾಗಿ ಹರಿಯುತ್ತಿತ್ತು. ಧಗಧಗಿಸಿ ಉರಿಯುವ ಬೆಂಕಿ ಕಡಾಯಗಳ ತಳವನ್ನು ನೆಕ್ಕುತ್ತಿತ್ತು. ಆ ದಿನ ಅವರಿಗೆ ಇಲ್ಲದ ಮರ್ಯಾದೆ. ಮರುದಿನ ಅವರನ್ನು ಕೇಳುವವರಿಲ್ಲ. ಶುಭ ಕಾರ್ಯದಲ್ಲಿ ಮಾಂಸದಡಿಗೆ ಮಾಡುವುದನ್ನು ನಾನು ನೋಡಿದ್ದು ಅದೇ ಮೊದಲು ಅದೇಕೆ ಮಾಂಸದಡಿಗೆ ಮಾಡಿದ್ದೀರಿ ಎಂದು ಕೇಳುವವರಿಲ್ಲ. ಎಲ್ಲರಿಗೂ ಬೇಕಾದದ್ದು ಅದೆ ಅಡಿಗೆಯಾದದ್ದುರಿಂದ ಯಾರದ್ದೇ ತಕರಾರಿಲ್ಲಿಲ್ಲ. ಆ ವಿಚಾರದಲ್ಲಿ ಮಾತ್ರ ಬಹಳ ಒಗ್ಗಟ್ಟು ಹಿರಿಯ ಗೌಡರಲ್ಲಿತ್ತು. ಏಕೆಂದರೆ ಹೆಂಡಕ್ಕೂ ಬಾಡಿಗೂ ಅವಿನಾಭಾವ ಸಂಬಂಧವನ್ನು ಅವರು ಕಲ್ಪಿಸಿದ್ದರು. ಮನೆಯಲ್ಲಿ ಸಪ್ಪುಕುರಿಗಳು ಬೇಜಾನು ಇದ್ದುದರಿಂದ ಮಾಂಸದ ಅಡಿಗೆ ಮಾಡಿ ಖರ್ಚು ಕಡಿಮೆ ಮಾಡುವುದು ಅವರ ಲೆಕ್ಕಾಚಾರ ಎಂದು ಆಮೇಲೆ ತಿಳಿಯಿತು.

ಆ ಕಡೆ ಅಡಿಗೆ ಕೊಟ್ಟಿಗೆಯಲ್ಲಿ ಮಾಂಸದಡಿಗೆಯ ಭರಾಟೆ ಜೋರಾಗಿ ನಡೆಯುವಾಗ ಈ ಕಡೆ ಬೈಗಾಗಿ ಧಾರೆ ಮುಹೂರ್ತ ಜೋರಾಗಿ ನಡೆಯುತ್ತಿತ್ತು. ಮಂಟಪದ ಸುತ್ತಮುತ್ತ ಹೆಂಗಸರು ಗಂಡಸರು ಘೇರಾಯಿಸಿದ್ದರು. ಪುರೋಹಿತರು ಧಾರೆ ಎರೆದು ಕೊಡುವ ನಮ್ಮ ತಾಯಿಯ ಸೋದರಮಾವ ಅತ್ತೆಗೆ ಏನೇನೊ ಹೇಳಿ ಕೊಡುತ್ತಿದ್ದರು. ಅಜ್ಜಯ್ಯ ಅಮಲಿನಲ್ಲಿ ತಪ್ಪುತಪ್ಪಾಗಿ ಇನ್ನೇನನ್ನೋ ಹೇಳುತ್ತಿದ್ದರು. ಅವರು ಯಾವಾಗಲೂ ಕುಡಿದೇ ಇರುತ್ತಿದ್ದುದರಿಂದ ಅವರ ಬಾಯಿಯಿಂದ ಹೊರಟ ಶರಾಬಿನ ವಾಸನೆಗೆ ಪುರೋಹಿತರು ಗಳಿಗೆಗೊಮ್ಮೆ ಮೂಗಿನತ್ತ ಕರವಸ್ತ್ರ ಮುಚ್ಚಿಕೊಳ್ಳುತ್ತ ಮಂತ್ರ ಹೇಳುತ್ತಿದ್ದರು. ತರುಣ ವಿದ್ಯಾವಂತರು ಪುರೋಹಿತರ ಕಷ್ಟಕ್ಕೆ ನಗುತ್ತಿದ್ದರು. ಅಂತು ಧಾರೆಯ ಶಾಸ್ತ್ರ ಮುಗಿಯಿತು. ಅದು ಮುಗಿಯುತ್ತಿದ್ದಂತೆಯೆ ಊಟಕ್ಕೆ ಎಬ್ಬಿಸಿದರೂ ಬಾಡಿನ ಊಟವಾದದ್ದರಿಂದ ಜನ ಮುಗಿಬಿದ್ದು ಅತ್ತ ಓಡಿದರು.

ಊಟದ ಚಪ್ಪರಕ್ಕೆ ಮರೆಯಾಗಿ ಕಟ್ಟಿದ ತಟ್ಟೆಯನ್ನು ಮುರಿದು ನುಗ್ಗಿದರು. ನಾನು ಗೆಳೆಯರನ್ನು ಕೂಡಿಕೊಂಡು ಒಂದು ಕಡೆ ಹೋಗಿ ಕೂತೆ. ಚಪ್ಪರದ ಕಂಬದಲ್ಲಿ ಅಲ್ಲಲ್ಲಿ ಗ್ಯಾಸಲೈಟುಗಳು ಲಾಟೀನಗಳು ಉರಿಯುತ್ತಿದ್ದವು. ದೀಪದ ಪ್ರಖರ ಬೆಳಕಿಗೆ ಯಜಮಾನಿಕೆ ಮಾಡುವ ಗೌಡರುಗಳ ಕಣ್ಣುಗಳು ಕೆಂಪಾಗಿ ಕ್ರೂರವಾಗಿ ಗಿರಿಗಿರಿ ತಿರುಗುತ್ತಿದ್ದವು. ಕುಡಿಯುವ ಅಭ್ಯಾಸ ಇಲ್ಲದವರು ಅವರನ್ನು ಹಿಂದಿನಿಂದ ಪಿಸುಮಾತಿನಲ್ಲಿ ಆಡಿಕೊಳ್ಳುತ್ತಿದ್ದರು. ಮಾಂಸ ಬಡಿಸುವಾಗ ಲಾಟೀನು ಹಿಡಿದವರೊಬ್ಬರು ಹುಡುಗರು ಮಕ್ಕಳಿಗೆ ಕಡಿಮೆ ಬಡಿಸಬೇಕೆಂದು ದೊಡ್ಡವರಿಗೆ ಹಿರಿಯ ಗೌಡರುಗಳಿಗೆ ಕೈದೊಡ್ಡದು ಮಾಡಿ ಬಡಿಸಬೇಕೆಂದು ನಿರ್ದೇಶನ ಕೊಡುತ್ತಿದ್ದರು. ಇದರಿಂದಾಗಿ ಒಂದು ವರ್ಗದ ಜನಗಳಿಗೆ ಅಸಮಾಧಾನವಾಯಿತು. ಆದರೆ ಅವರು ಬಾಯಿಬಿಡುವಂತಿರಲಿಲ್ಲ. 'ಬಡವನ ಸಿಟ್ಟು ದವಡೆಗೆ ಮೂಲ' ಎನ್ನುವಂತೆ ಅವರು ಗೊಣಗಿಕೊಂಡು ಸುಮ್ಮನಾದರು. ನಮಗೆ ಹುಡುಗರಿಗೂ ಅಸಮಾಧಾನವಾಗದೆ ಇರಲಿಲ್ಲ. ತಿನ್ನುವುದರಲ್ಲಿ ಮಕ್ಕಳು ದೊಡ್ಡವರಿಗೆ ಏನು ಕಡಿಮೆ ಎಂಬುದು ನಮ್ಮವಾದ. ಅದು ದೊಡ್ಡವರಿಗೆ ಅರ್ಥವಾಗಬೇಕಲ್ಲ?

ಬೇಗನೆ ಊಟ ಮುಗಿಸಿದ ನಮ್ಮ ಮಾವ ಗೋಪಾಲಗೌಡರು ಕೈತೊಳೆಯುವಲ್ಲಿ ಜನಜಂಗುಳಿ ಇರುವುದೆಂದು ನೀರು ಕುಡಿಯಲು ಕೊಟ್ಟ ದೊನ್ನೆಗೆ ಕೈಮುಳುಗಿಸಿ ಕೈತೊಳೆಯ ಹತ್ತಿದರು. ಅದು ಬಿರುಸಿನಿಂದ ಉಸ್ತುವಾರಿ ನೋಡುತ್ತ ಓಡಿಯಾಡುತ್ತಿದ್ದ ಪರ್ವತಗೌಡರ ಕಣ್ಣಿಗೆ ಬಿದ್ದಿತು. ಅವರು "ಯಾವನೋ ಅವನು ದೊನ್ನೆಲಿ ಕೈ ತೊಳೆಯವನು" ಎಂದು ಗುಟುರು ಹಾಕೇ ಬಿಟ್ಟರು. ಅಂದಿನ ದಿನಗಳಲ್ಲಿ ಮದುವೆ ಮನೆಗಳಲ್ಲಿ ಗಲಾಟೆಗೊಂದಲ ಇಲ್ಲದೆ ಮದುವೆಗಳು ನಡೆಯುತ್ತಿರಲಿಲ್ಲ. ಗಲಾಟೆ ಹೊಡೆದಾಟ ಇಲ್ಲದ ಮದುವೆಗಳು ಜನಗಳಿಗೆ ಸಪ್ಪೆ ಎನ್ನಿಸುತ್ತಿತ್ತು. ಅದು ಹೇಗೆಂದರೆ ಬಾಡೂಟ ಉಂಡು ಅಭ್ಯಾಸವಾದವರಿಗೆ ಸಿಹಿಯೂಟ ಉಂಡಷ್ಟು ಬೇಸರವಾದಂತೆ. ಗಂಡಿನ ಕಡೆಯವರಿಗೆ ನಾವು ಗಂಡಿನ ಕಡೆಯವರು ನಾವು ಹೇಳಿದಂತೆ ಹೆಣ್ಣಿನ ಮನೆಯವರು ಕೇಳಬೇಕು ಎಂಬ ದೌಲತ್ತು. ಹೆಣ್ಣಿನ ಕಡೆಯವರಿಗೆ ನಮ್ಮನ್ನೇನು ನೀವು ಇಷ್ಟು ಕನಿಷ್ಟವಾಗಿ ನೋಡುತ್ತೀರಿ? ನಾವು ನಿಮಗೆ ಯಾವುದರಲ್ಲಿ ಕಡಿಮೆ ಎಂಬ ಹುಂಭತನ ಇರುತ್ತಿತ್ತು. ಒಟ್ಟಿನಲ್ಲಿ ಜಗಳ ಕಾಯಲಿಕ್ಕೆ ಏನಾದರು ಕಾರಣ ಬೇಕಿತ್ತಷ್ಟೆ. ನಮ್ಮ ಮಾವನಿಗೆ ಹೆಣ್ಣಿನ ಅಣ್ಣನಿಗೆ ಗೌಡರು ಹೀಗೆ ಹೇಳಬಹುದೆ? ಎಂಬ ಪ್ರತಿಷ್ಠೆಯ ಪ್ರಶ್ನೆಯಾಗಿ ಬಿಟ್ಟಿತು. ಅವರು "ನೀನು ಯಾವನೊ ಕೇಳಾಕೆ ದಲಿಂಧರ್ ನನ್ಮಗನೆ" ಎಂದು ಬಿಟ್ಟರು. ಮಾವನೊಂದಿಗೆ ವಕೀಲಿ ಓದುತ್ತಿದ್ದ ಅಪ್ಪಣ್ಣ ಹೆಗಡೇರು ಎಂಬುವರು ಅವರ ಗೆಳೆಯರ ಗುಂಪು ಇದ್ದಿತು. ಅಂದು ಕಾಲೇಜು ಓದುವ ತರುಣರಿಗೆ ಅಕ್ಷರ ಜ್ಞಾನ ಇಲ್ಲದ ಜನಗಳು ಬಹಳ ಗೌರವ ಕೊಡುತ್ತಿದ್ದರು. ಅಪ್ಪಣ್ಣ ಹೆಗಡೇರ ಶರೀರ ಶಾರೀರ ಎರಡೂ ಯಾವ ಹಿರಿಯ ಗೌಡರಿಗೆ ಕಡಿಮೆ ಇರಲಿಲ್ಲ. ಅವರು ಸಟ್ಟನೆ ಎದ್ದು "ಹಿಡೀರೊ ಆ ನನ್ಮಗನ್ನ" ಎಂದು ಅಪ್ಪಣೆ ಕೊಡಿಸಿಬಿಟ್ಟರು. ಜನ ನಾಯಕ ಹೇಳಿದ ಮೇಲೆ ಕೇಳಬೇಕೆ? ನಾಲ್ಕಾರು ಜನ ಪರ್ವತ ಗೌಡರನ್ನು ಹಿಡಿದು ತದುಕಲು ಎದ್ದೇ ಬಿಟ್ಟರು. ಪರ್ವತ ಗೌಡರು ಭಯವಿದ್ದು ಕಚ್ಚೆ ಎತ್ತಿಕೊಂಡು ಯಾರ ಯಾರದೋ ಎಲೆಯ ಮೇಲೆ ಕಾಲಿಟ್ಟು ಮನೆಯ ಪಕ್ಕದಲ್ಲಿದ್ದ ತೋಟದಲ್ಲಿ ಕಣ್ಮರೆಯಾದರು. ಪುಣ್ಯಕ್ಕೆ ಗೌಡರ ಪರವಾಗಿ ಯಾರೂ ತರುಣರ ಮೇಲೆ

ಬೀಳಲ್ಲಿಲ್ಲ. ಹಾಗೇನಾದರು ನಡೆದ್ದಿದರೆ ಭಾರೀ ಹೊಡೆದಾಟವಾಗುತ್ತಿತ್ತು. ಸ್ವಲ್ಪದರಲ್ಲೇ ಅನಾಹುತ ತಪ್ಪಿ ಹೋಯಿತು. ಬಹುಶಃ ಬಾಡಿನ ಊಟವಾದದ್ದರಿಂದ ಆ ಮೇಲೆ ನೋಡಿಕೊಳ್ಳೋಣವೆಂದು ಊಟದಲ್ಲಿ ಮಗ್ನರಾದರೇನೊ ಗಂಡಿನ ಕಡೆಯವರು. ಇತ್ತಕಡೆ ಊಟದ ಚಪ್ಪರದಲ್ಲಿ ಗಲಾಟೆ ನಡೆಯುತ್ತಿದ್ದರೆ ಅತ್ತಕಡೆ ಅಡಿಗೆ ಕೊಟ್ಟಗೆಯಲ್ಲಿ ಎರಡು ಮೂರನೆ ಪಂತಿಯವರಿಗೆ ಬಡಿಸಲು ಮಾಂಸವೇ ಇರಲ್ಲಿಲ್ಲ. ಶರಾಬು ಕಳ್ಳು ಹೆಂಡ ಕುಡಿಯುವರು ಮಾಂಸವನ್ನು ಎತ್ತಿಕೊಂಡು ಕಾಡು ಬಿದ್ದಿದ್ದರು. ಉಳಿದ ಜನಗಳಿಗೆ ಮಧ್ಯೆ ರಾತ್ರಿಯಲ್ಲಿ ದೊಡ್ಡಿಯಲ್ಲಿ ಬಾಯಾಡಿಸುತ್ತ ನಿದ್ರಿಸುತ್ತಿದ್ದ ಮೇಕೆಗಳನ್ನು ಎಳೆದು ತಂದು ಕಡಿದು ಹೊಸದಾಗಿ ಅಡಿಗೆ ಮಾಡಿ ಊಟ ಹಾಕಿದರು. ಅಂತು ಬೆಳಗಿನ ಜಾವದಲ್ಲಿ ದಿಬ್ಬಣವು ನಮ್ಮೂರಿನ ಕಡೆಗೆ ಪ್ರಯಾಣಿಸಿತು.

✧✧

ಬಿಳುಮನೆರಾಮದಾಸ್, ೧೪೦೧, ೩೭ನೇ ಬಿ. ಕ್ರಾಸ್ ೧೧ನೇ ಮುಖ್ಯರಸ್ತೆ ಜಯನಗರ,
೪ನೇ 'ಟಿ' ಬ್ಲಾಕ್ ಬೆಂಗಳೂರು - ೫೬೦೦೪೧

‘ಮುಕ್ತಿ’ ಪಡೆದ ದೇಸಾಯಿಯೊಂದಿಗೆ....

ಪ್ರೊ. ಜಿ.ಬಿ. ಸಜ್ಜನ

ಡಾ. ಶಾಂತಿನಾಥ ದೇಸಾಯಿಯವರು ನನ್ನ ಸನ್ಮಿತ್ರರಲ್ಲೊಬ್ಬರಾಗಿದ್ದರು. ಒಂದು ಕಾಲಕ್ಕೆ ಸಹೋದ್ಯೋಗಿಗಳೂ ಆಗಿದ್ದೆವು ಕೊಲ್ಹಾಪುರದ ರಾಜಾರಾಮ ಕಾಲೇಜಿನಲ್ಲಿ. ನಾನು ಅವರನ್ನು ಮೊದಲು ಸಂಧಿಸಿದ್ದು ಮುಂಬಯಿಯ ಎಲ್‌ಫಿನ್‌ಸ್ಟನ್ ಕಾಲೇಜಿನಲ್ಲಿ. ಸರ್ಕಾರೀ ಕಾಲೇಜಿನ ಉಪನ್ಯಾಸಕ ಹುದ್ದೆಗಳಿಗೆ ಸಂದರ್ಶನಗಳು ನಡೆದಾಗ. ಐವತ್ತು ವರ್ಷಗಳೇ ಗತಿಸಿ ಹೋದವು. ಆದಾಗ್ಯೂ, ನಿನ್ನೆಯೋ ಮೊನ್ನೆಯೋ ಎಂಬಷ್ಟು ಸ್ಫುಟವಾಗಿ ಕಣ್ಮುಂದೆ ಕಟ್ಟಿವೆ ಆ ದಿನಗಳು.

‘ಕುಲುಕುಲು’ ನಗೆಗೆ, ಅಂಥ ನಗೆಯರಳಿದ ಮುಖಕ್ಕೆ, ಉದಾಹರಣೆಯೆಂದರೆ ನೆನಪಾಗುತ್ತಾರೆ ದೇಸಾಯರು. ಅಂಥ ನಗೆಮೊಗದ, ಲಕ-ಲಕ ಹೊಳೆಯುವ ಕನ್ನಡಕ ಧರಿಸಿದ, ಕೋಟು-ಟೈನಲ್ಲಿದ್ದ ದೇಸಾಯರನ್ನು ಸಂದರ್ಶನ ವೇಳೆಯಲ್ಲಿ ಹೆಚ್ಚುಕಡಿಮೆ ಹಳ್ಳಿಯ ಹೈದನಂತಿದ್ದ ನಾನು ಆ ಆಢ್ಯತೆಯ, ನಿರಂಬಳತೆಯ ವ್ಯಕ್ತಿತ್ವವನ್ನು ನೋಡಿದಾಗ, Perfect Bombayite ನಂತಿದ್ದ ಈತ ಕನ್ನಡಿಗನಾಗಿರುವುದು ಸಾಧ್ಯವೇ ಎಂಬ ಪ್ರಶ್ನೆ ಕೂಡ ನನ್ನ ತಲೆಯಲ್ಲಿ ತೂರಿಬರಲಿಲ್ಲ. ಆಗಲೇ, ವಿಲ್ಸನ್ ಕಾಲೇಜಿನಲ್ಲಿ ಸರ್ವಿಸು ಮಾಡಿ, ಸರ್ಕಾರೀ ಕಾಲೇಜಿನ ಲೆಕ್ಚರರ್ ಹುದ್ದೆಗೆ ಅರ್ಜಿಹಾಕಿ ಕೊಂಡು ಬಂದಿದ್ದರು ಅವರು. (ವಿಲ್ಸನ್ ಕಾಲೇಜಿನಿಂದ ಎಂ.ಎ. ಆಗಿ, ಅಲ್ಲಿಯೇ Fellow ಅಂತಾ ಇದ್ದವರವರು ಎಂದು ತಿಳಿದುದು ಆನಂತರದಲ್ಲಿ, ಮುಂಬೈಗೆ ಎಷ್ಟೊಂದು ಒಗ್ಗಿಕೊಂಡಿದ್ದರು ದೇಸಾಯರು ಎಂದು ಅವರ "ಮುಕ್ತಿ’ ಕಾದಂಬರಿಯಿಂದ ತಿಳಿಯಬಹುದಾಗಿದೆ. ಆದಾಗ್ಯೂ, ಅವರು ಮುಂಬಯಿಯಿಂದ ಹೊರಗಡೆಗೆ ವರ್ಗವಾಗಿ ಹೋಗುವ ಸಂಭಾವ್ಯವಿದ್ದಾಗ್ಯೂ, ಸರ್ಕಾರೀ ಸೇವೆ ಅರಸಿಕೊಂಡು

ಬಂದದ್ದೇಕೆ ದೇಸಾಯರು ಅನ್ನುವ ಪ್ರಶ್ನೆಗೆ ನನಗೆ ಉತ್ತರ ದೊರೆತದ್ದು ಆನಂತರವೇ. ಎಂದಾದರೊಮ್ಮೆ, ಕೊಲ್ಲಾಪುರಕ್ಕೆ ವರ್ಗವಾಗಿ ಬರಬೇಕಾಗಿತ್ತವರಿಗೆ, ಏಕೆಂದರೆ ಅವರ ಶ್ರೀಮತಿಯವರು ಕೊಲ್ಲಾಪುರದವರು – ಅಲ್ಲಿನ ಪ್ರಸಿದ್ಧ ಮಗದುಮ್ ಮನೆತನದವರು. ದೇಸಾಯಿಯವರು ನೇಮಕಗೊಂಡು ಮುಂಬೈಯ ಜೋಗೇಶ್ವರೀ ಕಾಲೇಜಿಗೆ ನಿಯೋಜಿಸಲ್ಪಟ್ಟರು. ನಾನು ಕೊಲ್ಲಾಪುರದ ರಾಜಾರಾಮ ಕಾಲೇಜು ಸೇರಿಕೊಂಡೆ. ಆಗ ದೇಸಾಯರ ಶ್ರೀಮತಿಯವರು ಪಿ.ಯು.ಸಿ. ವಿದ್ಯಾರ್ಥಿನಿ. ಹಾಗಾಗಿ ನನ್ನ ವಿದ್ಯಾರ್ಥಿನಿಯೂ ಹೌದು. ದೇಸಾಯರ ಬಗೆಗೆ ನಾನು ಅರಿತಿದ್ದುದು ಅವರ ಮುಖಾಂತರವೇ.

ಮುಂದೆ ಒಂದು ವರ್ಷೊಪ್ಪತ್ತಿನಲ್ಲಿ ದೇಸಾಯರು ವರ್ಗವಾಗಿ ಕೊಲ್ಲಾಪುರಕ್ಕೆ ಬಂದರು. ನಾವು ಸಹೋದ್ಯೋಗಿಗಳಾದೆವು. ಮೂಲತಃ ಹಳಿಯಾಳದವರಾದ ದೇಸಾಯರಿಗೆ ಕನ್ನಡ ಬರೋದು ಅಷ್ಟಕ್ಕಷ್ಟೇ ಇರಬೇಕು ಎಂದುಕೊಂಡಿದ್ದ ನನಗೆ ಅವರು 'ಕಥೆ'ನೂ ಬರೀತಾರೆ, 'ಮಂಜುಗಡ್ಡೆ' ಎಂಬ ಒಂದು ಕಥಾ ಸಂಕಲನವನ್ನೂ ಹೊರತಂದಿದ್ದಾರೆ ಎಂದು ತಿಳಿದಾಗ ಅಚ್ಚರಿಯುಂಟಾಯಿತು. ಆದಾಗ್ಯೂ ಅವರು ಬರೆಯುವ ಕಥೆಗಳೆಂತಹವು ಎಂದು ಜಿಜ್ಞಾಸೆ ತಾಳಲಿಲ್ಲ, ಅವುಗಳನ್ನು ಓದಲಿಲ್ಲ. ಆದಾಗ್ಯೂ ಬರಹಗಾರರಿಗಿರುವ ಸಾಮಾನ್ಯ ಅಹಮಿಕೆ (ತಮ್ಮ ಕಥೆಗಳನ್ನು ಓದದವರ ಬಗೆಗೆ ಅನಾದರ) ಇದ್ದವರಲ್ಲ ದೇಸಾಯರು. ತೆರೆದ ಹೃದಯ ಅವರದು. ನಗೆ ಹೂನಗೆ, ಗಟ್ಟಿಸಿ ಮಾತನಾಡಿದರೆ ಹವೆಗೆ ಹಿಂಸೆಯಾದೀತು ಎನ್ನುವಂತೆ ಹೂವಿನ ತೂಕದ ಮಾತು. ಯಾರೊಬ್ಬರ ಬಗೆಗೆ ಒಂದು ಹಾಸ್ಯಚಟಾಕಿ ಹಾರಿಸಬೇಕೆಂದರೂ ಎಷ್ಟೊಂದು ಮೀನ-ಮೇಷ. ನಾವೇನು ಅವರಿಗೆ ಸಾಹಿತಿ-ಮಿತ್ರರಲ್ಲದಿದ್ದರೂ, ಸಹೋದ್ಯೋಗಿಯ ಸಲುಗೆ, ಅವರ ಸಹಜ ಸ್ನೇಹ ಪ್ರಾಪ್ತವಾಗಿದ್ದವು. ಹೀಗೆ ಒಂದು ವರ್ಷೊಪ್ಪತ್ತು ಕಳೆಯುವುದರೊಳಗೆ, ಅಪಘಾತಕ್ಕೀಡಾಗಿ ಅಕಾಲಿಕವಾಗಿ ಮರಣವನ್ನೈದ ತಮ್ಮನ ಸಾವಿನ ದುಃಖದ ಹಿನ್ನೆಲೆಯಲ್ಲಿ, ನಾನು ಸರ್ಕಾರೀ ಸೇವೆ ಬಿಟ್ಟು ಸ್ವಗ್ರಾಮಕ್ಕೆ, ಮಾತೃವಿದ್ಯಾಸಂಸ್ಥೆಗೆ, ಮರಳಿದೆ; ದೇಸಾಯರು ಬ್ರಿಟಿಶ್ ಕೌನ್ಸಿಲ್ ಸ್ಕಾಲರ್‌ಶಿಫ್‌ಪಡೆದು ಇಂಗ್ಲೆಂಡಿಗೆ ಹೋದರು. ಇಂಗ್ಲೆಂಡಿನಲ್ಲಿ ತಮ್ಮ ಪಿಎಚ್.ಡಿ. ಮುಗಿಸಿಕೊಂಡು ಬಂದು, ಅಥವಾ ಮರಳಿಬಂದ ಹೊಸತರಲ್ಲಿ ಮುಗಿಸಿಯೋ, ಔರಂಗಾಬಾದ ಸರ್ಕಾರೀ ಕಾಲೇಜು ಸೇರಿದರು. ಅಲ್ಲಿಂದ ರೀಡರ್ ಅಂತ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಬಂದರು.

ದೇಸಾಯಿಯವರು ಧಾರವಾಡಕ್ಕೆ ಬಂದ ಮೇಲೆ ನಮ್ಮ ಹಳೆಯ ಸ್ನೇಹ ಹೊಸ ಚಿಗುರು ಬಿಟ್ಟಿತು. ಅವರು ಕೊಲ್ಲಾಪುರದ ಶಿವಾಜಿ ವಿಶ್ವವಿದ್ಯಾಲಯಕ್ಕೆ ಪ್ರೊಫೆಸರ್ ಆಗಿ ಹೋದ ಮೇಲೆ, ನಮ್ಮ ಸ್ನೇಹ ಇನ್ನೂ ಹುಲುಸಾಗಿ ಬೆಳೆಯಿತು. ಅವರ ಕಾರ್ಯಕ್ಷಮತೆ ನನ್ನಲ್ಲಿ ಅಚ್ಚರಿ ಮೂಡಿಸಿತ್ತು. ನಾನು ಯಾವಾಗ್ಗೆ ಹೋದರೂ, ಒಳಗಿನಿಂದ ಕುಲು-ಕುಲು ನಗುತ್ತ ಹೊರಬಂದು, ನನ್ನೊಂದಿಗೆ ಕುಳಿತು, ಹರಟುತ್ತ ತಿನಿಸು-ಚಹ ಸೇವಿಸುತ್ತಿದ್ದರು. ಅವರು ಓದುವುದರಲ್ಲಿಯೋ, ಬರೆಯುವುದರಲ್ಲಿಯೋ ತಲ್ಲೀನರಾಗಿದ್ದು ಅವರನ್ನು ನಾನು disturb ಮಾಡ್ತಾ ಇದೇನೆ ಅಂತ ಎಂದೂ ಅನ್ನಿಸಲೇ ಇಲ್ಲ. ಅದಕ್ಕೆ ತದ್ವಿರುದ್ಧವಾಗಿ ಡಾ.ನಾಯಕ (ಕ.ವಿ.ವಿ. ಇಂಗ್ಲೀಷ ವಿಭಾಗದ

ಮುಖ್ಯಸ್ಥರಿವರು)ರ ಮನೆಗೆ ಹೋದಾಗ್ಗೆ 'the complete bookman' ಆದಂಥ ಅವರು ಓದು-ಬರಹದಲ್ಲಿಯೇ ತೊಡಗಿರುತ್ತಿದ್ದರು. ನನ್ನಿಂದ ಅವರ ಕೆಲಸಕ್ಕೆ ತಡೆಯುಂಟಾಗುತ್ತಿದೆ ಎನ್ನುವ ಭಾವನೆ ಬಂದೇಬಿಡುತ್ತಿತ್ತು. ಎರಡು ನಿಮಿಷಗಳಲ್ಲಿ ವಿದಾಯ ಹೇಳಿ ಹೊರಬಂದದ್ದುಂಟು. "ಇಷ್ಟೆಲ್ಲಾ ಬರೀತೀರಿ, ದೇಸಾಯ್ರೇ – ನೀವು ಅದನ್ನು ಮಾಡುವುದ್ಯಾವಾಗ, ರಾತ್ರಿ ಬಹಳ ಹೊತ್ತು ಕೂಡ್ರತೀರಾ?' ಅಂತಕೇಳಿದ್ದೆ. ಅದನ್ನೆಲ್ಲಾ, ಬೆಂಗಳೂರಿಗೋ, ಇನ್ನೆಲ್ಲಿಗೋ ಹೋಗಿ, ಹತ್ತಾರು ದಿನ ಹೊಟೇಲಿನಲ್ಲಿ ವಾಸ್ತವ್ಯ ಮಾಡಿ ಬರೆದು ಮುಗಿಸ್ತೇನೆ ಅಂತ ಹೇಳಿದ್ದರು. ಯುನಿವ್ಹರ್ಸಿಟಿ ಪ್ರೊಫೆಸರ್ ಎಂದರೆ ಕೆಲಸದ ಭಾರ ಕಡಿಮೆಯೇನಲ್ಲ. ಪಿಎಚ್.ಡಿ. ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಬೇಕು. ಎಂ.ಎ. ಕ್ಲಾಸುಗಳಿಗೆ ಬೋಧನೆಯಂತೂ ಇದ್ದೇ ಇರ್ತದೆ, ಪರೀಕ್ಷೆಯ ಕೆಲಸ, ಮೀಟಿಂಗುಗಳು ಇತ್ಯಾದಿ. ಅದೆಷ್ಟು ಭಾರವಿದ್ದರೂ, ದೇಸಾಯರ ಮುಖದಲ್ಲಿ ಅದು ಕಾಣಬರುತ್ತಿರಲಿಲ್ಲ. ಅವರ ಕುಲು-ಕುಲು ನಗೆಯ ನೆನಪೇ ನೆನಪು.

ದೇಸಾಯಿರು, ಗುಲ್ಬರ್ಗಾದಲ್ಲೊಂದು ಮೀಟಿಂಗು ಮುಗಿಸಿಕೊಂಡು ಮರಳುವಾಗ ವಿಜಾಪುರದಲ್ಲಿಳಿದು, ಟಾಂಗಾದಲ್ಲಿ (ಆಗ, ಆಟೋಗಳು ವಿಜಾಪುರಕ್ಕೆ ಇನ್ನೂ ಬಂದಿರಲಿಲ್ಲ) ಮನೆ ಹುಡುಕಿಕೊಂಡು ಬಂದ ನೆನಪು. ನಾಗಪುರದಲ್ಲಿ ಸಮಾವೇಶಗೊಂಡ All lara English Teachers Conference ಗೆ ಮುಖ್ಯ ಅತಿಥಿಯಾಗಿ ಬಂದಿದ್ದರು. ಅವರು ಕೊಡಲಿದ್ದ speech (-a broadside against those among indo Anslian writers who wangled scholarships and went abroad ಇದ್ದುದಾಗಿತ್ತು.) ಕಟಕಿಗಳಿಂದೊಡಗೂಡಿದ್ದಾಗಿತ್ತು – ನಿಸೀಮ್ ಎಝೆಕಿಯಲ್ ನಂಥವರಿಗೂ ಬಿಸಿಮುಟ್ಟಿಸಿತ್ತು. ಅದಕ್ಕಾಗಿಯೇ ಏನೋ, ಸ್ವಲ್ಪ ಅಳುಕು ಕಂಡು ಬರ್‍ತಾ ಇತ್ತು. ಅಂಥದರಲ್ಲಿ, ನನ್ನನ್ನು ಕಂಡವರೇ, ಧೈರ್ಯ ಇಮ್ಮಡಿಸಿದಂತೆ, ಹರ್ಷಿಸಿದರು, ಅಪ್ಪಿಕೊಂಡರು.

ನಾನು ಗುಲ್ಬರ್ಗಾ ಬಿಟ್ಟು ಬಂದ ಮೇಲೆ, ಶಿವಾಜಿ ವಿ.ವಿ. ಯಲ್ಲಿನ ಉಪನ್ಯಾಸಕ ಹುದ್ದೆಗೆ ಅರ್ಜಿಹಾಕಿಕೊಂಡಿದ್ದೆ. (ತಾವು ಪ್ರೊಫೆಸರ್ ಆಗಿರುವಾಗ) ನಾನು ಅಲ್ಲಿ ಉಪನ್ಯಾಸಕನೆಂದು ಸೇರ್ಪಡೆಯಾಗುವುದು ದೇಸಾಯರ ಮನಸ್ಸಿಗೆ ಎಷ್ಟರಮಟ್ಟಿಗೆ ಒಪ್ಪಿತವಿತ್ತೋ ತಿಳಿಯಲಿಲ್ಲ, ಅಲ್ಲಿ ಆಗಲೇ ಮುಖ್ಯಸ್ಥರಾದ ಅವರು ಕನ್ನಡಿಗರು, ನಂತರದ ಸೇವಾಜೇಷ್ಠತೆಯುಳ್ಳ ಡಾ. ಶಾಸ್ತ್ರಿ ಎಂಬುವರು ಕನ್ನಡಿಗರು, ಇನ್ನೊಬ್ಬರೂ ಕನ್ನಡಿಗರಾಗಿದ್ದರೆಂದು ನನ್ನ ತಿಳುವಳಿಕೆ, ಅಂಥ ಸನ್ನಿವೇಶದಲ್ಲಿ ನನ್ನನ್ನು ಆಯ್ಕೆ ಮಾಡುವುದು ಎಂದರೆ, ಇವರು ಕನ್ನಡಿಗರ ಬಗೆಗೇ ಒಲವು ತೋರಿಸ್ತಾರೆ ಎಂಬ ಆರೋಪ ಆಹ್ವಾನಿಸಿದಂತೆ. ಆ ಉಭಯಸಂಕಟದಿಂದ ದೈವವೇ ಪಾರುಮಾಡಿತು ಅನ್ನಬೇಕು. ಒಂದು ಸಲ ಸಂದರ್ಶನಕ್ಕೆ ಹೋದಾಗ ಕಾರಣಾಂತರದಿಂದ ಸಂದರ್ಶನ ಏರ್ಪಡಲಿಲ್ಲ. ಇನ್ನೊಂದ್ಸಲ ಸಂದರ್ಶನವಿದ್ದಾಗ, ನನಗೆ ಹೋಗಲಾಗಲಿಲ್ಲ.

ದೇಸಾಯರನ್ನು ಒಮ್ಮೆ ಚಡಚಣದ ಶ್ರೀ ಸಂಗಮೇಶ್ವರ ಕಾಲೇಜಿನ ವಾರ್ಷಿಕ ಸ್ನೇಹಸಮ್ಮೇಳನಕ್ಕೆ ಮುಖ್ಯ ಅತಿಥಿಯೆಂದು ಕರೆಯಿಸಿದ್ದೆ. ಮುಂದಿನ ಮನರಂಜನೆ ಕಾರ್ಯಕ್ರಮಕ್ಕಾಗಿ ವೇದಿಕೆ ಮುಂದೆ ಕಾಯ್ದು ಕುಳಿತಿದ್ದ ಸಣ್ಣ ಹುಡುಗರು ಕಿಲಿಬಿಲಿ

ಹಚ್ಚಿದ್ದರು. ಇಂಥದರಲ್ಲಿ ನನಗೆ ಭಾಷಣ ಮಾಡುವುದಾಗುವುದಿಲ್ಲ ಎಂದರು ದೇಸಾಯರು ಮುನಿಸಿನಿಂದಲ್ಲ. "ಇಂಥದ್ರಲ್ಲಿ ಹ್ಯಾಗ್ರೀ ಭಾಷಣಾ ಮಾಡೋದು?" ಅಂತ ಕುಲು-ಕುಲು ನಗುತ್ತಲೇ ನನ್ನೆಡೆ ತಿರುಗಿ ಕೇಳಿದರು. ಅದೃಷ್ಟವಶಾತ್ ಪ್ರೊ. ಬಿ.ಟಿ. ಸಾಸನೂರರವರು ದೇಸಾಯರೊಂದಿಗೆ ವಿಜಾಪುರದಿಂದ ಬಂದಿದ್ದರು. ಆಗಲಿ, ಅವರ ಬದಲಿ ನಾನು ಮಾತನಾಡ್ತೇನೆ ಅಂತ ಎದ್ದು ಆ ಕೆಲಸ ಪೂರೈಸಿದರು ಬೀಟೀಯವರು.

ಪ್ರೊ. ಸದಾನಂದ ಕನವಳ್ಳಿಯವರು ಸಂಪಾದಿಸಿದ ಪ್ರೊ. ಮಾಳವಾಡರವರ ಅಭಿನಂದನ ಗ್ರಂಥ ವ್ಯಾಸಂಗ'ಕ್ಕೆ ನಾನು 'ಪ್ರಜ್ಞಾಪ್ರವಾಹ ತಂತ್ರ'ದ ಮೇಲೆ ಲೇಖನ ಬರೆದುಕೊಡಬೇಕಾಗಿತ್ತು. ಆಗ ದೇಸಾಯರ ಮುಕ್ತಿ ಕಾದಂಬರಿಯನ್ನು ಅಳೆದು-ಸುರಿದು ನೋಡಬೇಕಾಗಿ ಬಂದಿತು ಪ್ರಸಂಗ.

ನನ್ನ ಲೇಖನದಲ್ಲಿ 'ಪ್ರಜ್ಞಾಪ್ರವಾಹತಂತ್ರ'ವನ್ನು ವ್ಯಾಖ್ಯಾನಿಸಿದ ರೀತಿಯನ್ನು ಇಲ್ಲಿ ಒಂದು ಉದ್ಧರಣದ ಮೂಲಕ ವಿವರಿಸಬಯಸುತ್ತೇನೆ.

"ಸತ್ಯಾನ್ವೇಷಣೆಯ ಹಾದಿಯಲ್ಲಿ - ನಾವು ಅರಸುವ ಸತ್ಯ ಒಬ್ಬ ವ್ಯಕ್ತಿಯ ಅಂತಃಸತ್ಯವಾಗಿದ್ದಾಗ - ಮುಂದಿನ, ಇನ್ನೂ ಮಹತ್ವದ ಮೈಲುಗಲ್ಲು ಎಂದರೆ ಫ್ರಾಯ್ಡ್, ಬರ್ಗ್ಸನ್, ಆ್ಯಡ್ಲರ್, ಯೂಂಗ್ ವಿವರಿಸುವ ನಮ್ಮ ಪ್ರಜ್ಞಾಲೋಕ ಮಾನವನ ಮನಸ್ಸು ಯಾವಾಗಲೂ ಸರಳರೇಖೆಯಲ್ಲಿ, ತಾರ್ಕಿಕವಾಗಿ ಕಾರ್ಯಮಾಡುವುದಿಲ್ಲ. ಮಾನವನ ಮನಸ್ಸೆಂದರೆ ಅದೊಂದು ಹುಚ್ಚುಹೊಳೆಯ ಪ್ರವಾಹ, ಅದಕ್ಕೆ ತಡೆಯೆಂಬುದಿಲ್ಲ. ಈ ಪ್ರವಾಹ ಕಾಲನಿರ್ದೇಶನಕ್ಕೆ ಅಥವಾ ವರ್ತಮಾನ, ಭೂತ ಹಾಗೂ ಭವಿಷ್ಯತ್ತುಗಳೆಂಬ ಕಾಲವಿಭಜನೆಗೆ ಒಳಪಟ್ಟುದಲ್ಲ. ಗಡಿಯಾರದ ಕಾಲಮಾನಕ್ಕೆ ಭೂತ ವರ್ತಮಾನಗಳುಂಟು. ಪ್ರಜ್ಞಾಪ್ರವಾಹದ ಕಾಲ ಬೇರೆ. ಅದಕ್ಕೆ ಭೂತ-ವರ್ತಮಾನ-ಭವಿಷ್ಯವೆಂಬುದಿಲ್ಲ. ಇದರಲ್ಲಿ ಪ್ರಜ್ಞಾರೇಖೆಯ ಕೆಳಗೆ ಸಾಮಾನ್ಯವಾಗಿ ಮುಳುಗಿರುವ (ಕಹಿ ಅನುಭವಗಳ) ನೆನಪುಗಳು ಆಗಾಗ ಗುಳ್ಳೆಗಳಂತೆ ಮೇಲೇಳುವುದುಂಟು. ಒಟ್ಟಾರೆ ಈ ಪ್ರವಾಹಗತಿಯನ್ನು ಕ್ಯಾಮರಾ ಮೂಲಕ ಸೆರೆಹಿಡಿದಂತೆ ಕಾದಂಬರಿಕಾರ ಶಬ್ದ ಕ್ಯಾಮರಾ ಮೂಲಕ ಸೆರೆಹಿಡಿಯ ಬಯಸುತ್ತಾನೆ. ಮನೋಲೋಕದ ನಿರಂತರ ನಾಟಕದ ಯಥಾರ್ಥ ಚಿತ್ರಣವನ್ನು ನಮಗೆ ಕೊಡಬಯಸುತ್ತಾನೆ'."

"ತಾರ್ಕಿಕ ಆಲೋಚನೆಯ ಸೂಕ್ಷ್ಮಗಳನ್ನು (ಮನಸ್ಸು, ಮರಿಮನಸ್ಸು, ವ್ಯಾವಹಾರಿಕ ವಿಚಾರದ ಧ್ವನಿ, ಸದಸದ್ವಿವೇಕದ ಧ್ವನಿ, ಸಂಸ್ಕಾರದ ಧ್ವನಿ, ಪ್ರಾಕೃತಿಕ ಪ್ರೇರಣೆಗಳ ಧ್ವನಿ- ಇವುಗಳ ತೊಯ್ದಾಟವನ್ನು) ಎಳೆಎಳೆಯಾಗಿ ಮನೋವೈಜ್ಞಾನಿಕನ ಹಾಗೆ ಬಿಡಿಸಿ ಹೇಳುವುದು ಬೇರೆಯೇ. ವಿಚಾರದ ಎಳೆಗಳ ಜತೆಗೆ, ಅವುಗಳನ್ನು ಬೆಂಬತ್ತಿ, ತಾನೇ ತಾನಾಗಿ ಹರಿದುಬರುವ ನೆನಪುಗಳು, ಸ್ಮೃತಿಚಿತ್ರಗಳು, ಅವುಗಳು ಬಡಿದೆಬ್ಬಿಸುವ ಭಾವನೆಗಳು, ಆನುಷಂಗಿಕ ವಿಚಾರಗಳು ಇವೆಲ್ಲವುಗಳ ಓತಪ್ರೋತವಾದ ಪ್ರವಾಹಕ್ಕೆ ಮೂವ್ಹೀ ಕ್ಯಾಮರಾ ಹಿಡಿದು, ಕತೆಗಾರ ತಾನು ಹಿಂದೆ ಸರಿದು ನಿಂತು ಕ್ಯಾಮರಾನೇ

ಆ ಚಿತ್ರವನ್ನು ಸೆರೆ ಹಿಡಿಯುವಂತೆ ಕೆಲಸಮಾಡಲು ಬಿಟ್ಟು, ಲೇಖಕೀಯ ಟಿಪ್ಪಣಿ (authorial comment)ಯನ್ನು ಅತ್ಯಾವಶ್ಯಕವಿರುವಷ್ಟೇ ಪೂರೈಸುವುದು ಪ್ರಜ್ಞಾಪ್ರವಾಹತಂತ್ರ."'

ಇನ್ನು ಮುಕ್ತಿಯ ಬಗೆಗೆ ಲೇಖನದಲ್ಲಿ ಬಂದ ವಿಶ್ಲೇಷಣೆ/ ವಿಮರ್ಶೆ.

... ಶಾಂತಿನಾಥ ದೇಸಾಯರ ಮುಕ್ತಿ ಹೊಸ ತಂತ್ರ ಪ್ರಯೋಗದ ದೃಷ್ಟಿಯಿಂದಲೂ ಹೊಸ ಕಥಾವಸ್ತುವಿನದೃಷ್ಟಿಯಿಂದಲೂ ಮಹತ್ವಪಡೆದ ನವ್ಯಕಾದಂಬರಿ. ಯಶವಂತ ಚಿತ್ತಾಲರ ಮಾತಿನಲ್ಲಿ "ತಂತ್ರದ ವಿಷಯದಲ್ಲಿ ಗಮನಾರ್ಹವಾದ ಪ್ರಯೋಗ ನಡೆಸಿದ ಕೆಲವು ಕಾದಂಬರಿಗಳನ್ನು ನೆನೆದಾಗ ಮುಕ್ತಿ ಥಟ್ಟನೆ ಮನಸ್ಸಿನಲ್ಲಿ ನಿಲ್ಲುವಂಥದ್ದು. ಮುಕ್ತಿ ತನ್ನ ತಂತ್ರನಾವೀನ್ಯತೆಯಿಂದಲೇ (ಅದೊಂದರಿಂದಲೇ ಅಲ್ಲ ಮತ್ತೆ!) ಪ್ರಕಟವಾದದ್ದೇ ಅನೇಕರ ಲಕ್ಷ್ಯ ಸೆಳೆದುಕೊಂಡು ಬಹುಶಃ ಕನ್ನಡದ ಮೊಟ್ಟಮೊದಲಿನ ನವ್ಯ ಕಾದಂಬರಿ ಎಂದು ಕೀರ್ತಿವೆತ್ತ ಕೃತಿ."''

ಇಲ್ಲಿನ ತಂತ್ರವನ್ನು ಸ್ಮೃತಿಪ್ರವಾಹ ಎಂದು ಕರೆಯಬಹುದೇನೋ ಎಂದಿದ್ದಾರೆ ಚಿತ್ತಾಲರು. ಈ ಕಾದಂಬರಿಯಲ್ಲೂ ಎರಡು ಕಾಲ ಸಂಯೋಜನೆಗಳು ಒಂದರೊಡನೆ ಇನ್ನೊಂದು ಹೊಸೆದುಕೊಂಡಂತೆ ಮೇಳವಿಸಿವೆ. ಕಾದಂಬರಿಯ ಕಥಾವಿನ್ಯಾಸವು ನಾಯಕನಾದ ಗೌರೀಶ ಉಪಾಸನಿಯ ಆತ್ಮ-ಕಥನ-ಇದು ಆತನು ತನ್ನ ಮುಕ್ತಿಯನ್ನು ಕಂಡುಕೊಂಡ ಬಗೆಯ ವೃತ್ತಾಂತ-ಗೆಳೆಯ ಸತ್ಯೇಂದ್ರನ ಪ್ರೇರಣೆಯಿಂದ ಬರೆಯಲಾರಂಭಿಸಿದ್ದು. ಗೌರೀಶನ ಮುಕ್ತಿಯ ಮೊದಲ ಸೋಪಾನವೇ ಈ ಬರೆಯುವ ಅನುಭವ. ಎರಡನೆಯದೆಂದರೆ ತನ್ನ ಜೀವನದಲ್ಲಿನ ಎರಡು ಆಘಾತಗಳಿಂದ ಒಂದು ಮಿತ್ರ ಶ್ರೀಕಾಂತನ ಮರಣ. ಇನ್ನೊಂದು ಆತನ ತಂಗಿಯಲ್ಲಿ ಅನುರಕ್ತನಾದ ತನಗೆ ಉಂಟಾದ ಪ್ರೇಮಭಂಗ - ಇವೆರಡರಿಂದ ಮುಕ್ತನಾಗಿ ತನ್ನ ಜೀವಿತದ ತರ್ಕರೇಖೆಯನ್ನು ಕಂಡುಕೊಳ್ಳುವುದು.

ಕಾದಂಬರಿಯ ಆರಂಭವನ್ನು ಅವಲೋಕಿಸೋಣ:

ಬಾಂದ್ರಾ,
ಮುಂಬಯಿ
ಎಪ್ರಿಲ್ ೧, ೧೯೫೩

ಕೊನೆಗೆ, ಕೊನೆಗೊಮ್ಮೆ -
ನನ್ನ ಭೂತಕಾಲದ ಭೂತದಿಂದ ಒಮ್ಮೆ ಮುಕ್ತನಾಗುವೆ!
ನನ್ನ ಪಾಸ್‌ಪೋರ್ಟ ಸಿದ್ಧವಾಗಿದೆ. ಎಸ್.ಎಸ್. ಒಲಿಂಪಿಯಾದಲ್ಲಿ
ಒಂದು ಬರ್ಥ್ ಕೂಡ ರಿಜರ್ವ ಆಗಿದೆ.
ನೈರೋಬಿ? ಎಂಥ ಊರೋ ಏನೋ!
ಒಳ್ಳೆಯ ನೌಕರಿ!..... ಒಳ್ಳೆಯದೋ ಕೆಟ್ಟದ್ದೋ
ಯಾರಿಗೆ ಗೊತ್ತು?

ನಾನು ಹೋಗುತ್ತಿರುವುದು ಒಳ್ಳೆಯದೋ?

ಇದು ಒಳ್ಳೆಯದು ಇದು ತಪ್ಪು ಇದು ಕೆಟ್ಟದ್ದು - ಎಂದು ಯಾರು ತಾನೇ ಶಾಶ್ವತವಾಗಿ ಹೇಳಬಲ್ಲರು?

ಇಪ್ಪತ್ತೆರಡು ದಿನಗಳ ನಂತರ ಹಿಂದುಸ್ತಾನವನ್ನು - ಎಲ್ಲರೂ ಕೂಗುವ ಭಾರತಮಾತೆಯನ್ನು ಮಾತೃಭೂಮಿಯನ್ನು ಬಿಟ್ಟು ಹೊರಡುವೆ.

ಪುರಾತನವಾದ ಆಫ್ರಿಕೆಯ ಕತ್ತಲೆಯ ಖಂಡಕ್ಕೆ. ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ. ಇರಬಹುದು ಭಾಗ್ಯವಂತರಿಗೆ, ನನಗಲ್ಲ!

ಕೆಲವು ಜನರಿಗೆ ಅಸೂಯೆ- ನಾನು ಪರದೇಶಕ್ಕೆ ಹೋಗುವುದರ ಬಗ್ಗೆ, ನನ್ನ ಅಲ್ಲಿಯ ಸಂಬಳದ ಬಗ್ಗೆ.... ನಾನು ಮುಖ್ಯ ಹಣಗಳಿಸಲಿಕ್ಕೆ ಹೊರಟಿದ್ದೇನೆಂದು ಕೆಲವರ ನಂಬಿಕೆ. ಮೊನ್ನೆ ಸತ್ಯೇಂದ್ರನ ಮನೆಯಲ್ಲಿ ಯಾರೋ - ಬಹುಶಃ ... ಅಂತ ಕಾಣಿಸುತ್ತದೆ - ಅನ್ನಲಿಲ್ಲವೇ....

ಇಲ್ಲಿನ ಆತ್ಮಕಥನ ಪ್ರಜ್ಞಾಪ್ರವಾಹವನ್ನು ಸೆರೆಹಿಡಿಯುವ ರೀತಿಯಲ್ಲಿ ಓಡುತ್ತದೆ. ಸಾಮಾನ್ಯವಾಗಿ ಆತ್ಮಕಥನ 'ದಿನಚರಿಯ ರೂಪದಲ್ಲಿದ್ದುದಾದರೆ ಕಾಲಚಕ್ರದ ಉರುಳನ್ನು ಅನುಸರಿಸಿ ಹೋಗುವಂಥದು. ಆದರೆ ಮೇಲೆ ಉಲ್ಲೇಖಿಸಿದಂತೆ ಇಲ್ಲಿ ಕಾಲಪ್ರವಾಹ ಒಂದು 'ಅನಂತ'ದ ದಡವನ್ನು ತಟ್ಟುತ್ತಲೂ ಹರಿಯುತ್ತದೆ. ಗತಕಾಲದ ಸ್ಮೃತಿಗಳ ಹಾಗೂ ವರ್ತಮಾನದ ವಸ್ತುಸ್ಥಿತಿಯ ಮಿಳಿತವನ್ನು, ವಿಚಾರದ ಆಳ- ನಿರಾಳಗಳನ್ನು, ಹಾಸು-ಬೀಸುಗಳನ್ನು, ಕನಸುಗಳ ಹೊಳಹನ್ನು, ಲೋಕದೃಷ್ಟಿಯನ್ನು, ಮಾನವೀಯ ಸಂಬಂಧಗಳ ಜಾಲವನ್ನು, ವಿಮರ್ಶಾಕಿರಣಗಳನ್ನು, ಆತ್ಮಶೋಧನೆಯ ಮುಳುಗುಗಳನ್ನು ಎಲ್ಲವನ್ನು ಸಮನಿಸಿಕೊಂಡು ಸಾಗುವ ಪ್ರವಾಹ ಬಹಳ ಸಮರ್ಥವಾಗಿ ಮೇಲಿನ ಉದ್ಧರಣದಲ್ಲಿ ಮೂಡಿಬಂದುದನ್ನು ಕಾಣಬಹುದಾಗಿದೆ.

ಪುಟ ೩ರ ಮೇಲೆ ಕಥನ ಡಾಲಿಯ ವಿಚಾರದಕಡೆಗೆ ತಿರುಗುತ್ತಲೇ, ಆಕೆ ಇಂದು ಮಧ್ಯಾಹ್ನ (ರವಿವಾರ ತಾನೆ) ಕೋಣೆಗೆ ಬಂದ ಸಂಗತಿ ಉಲ್ಲೇಖಿತವಾಗುವುದು - ಆಮೇಲೆ ಆಕೆಯೊಡನೆ ಸಮುದ್ರ ದಂಡೆಗುಂಟ ಕೈಕೊಂಡ ವಿಹಾರದ ಪ್ರಸ್ತಾಪ, ಅವರೀರ್ವರ ಮಾತು ಹಾಗೂ ಮಧ್ಯೆಮಧ್ಯೆ ಸಮುದ್ರದ ತೆರೆಗಳ, ಜನಜಂಗುಳಿಯ ವೀಕ್ಷಣೆ, ತನ್ನ ಹಾಗೂ ಕಾಮಿನಿಯ ಪ್ರೇಮಪ್ರಕರಣದ (ಭಾನಗಡಿಯ) ಬಗೆಗೆ ಸತ್ಯೇಂದ್ರನ ಪ್ರಶ್ನೆ, ಶ್ರೀಕಾಂತ ಹಾಗೂ ಕಾಮಿನಿಯರು ತನ್ನ ಜೀವನದ ಮಧ್ಯವರ್ತಿ ಬಿಂದುಗಳಾಗಿದ್ದ ಕಾಲ, ಶ್ರೀಕಾಂತನ ಮರಣಾನಂತರ ಗತಿಸಿದ ಏಳು ತಿಂಗಳ ಅವಧಿ, ಆತನ ಮರಣದ ನೆನಪು ಮರುಕಳಿಸುತ್ತಲೇ ಕಣ್ಣಿಗೆ ಕತ್ತಲು ಕವಿಯುವ ಅನುಭವ, ದೂರ ಓಡಿಹೋಗಬೇಕೆಂಬ ವಿಚಾರ, ದೂರದ ದಕ್ಷಿಣ ಆಫ್ರಿಕೆಯಲ್ಲಿ ತನ್ನ ಮುಕ್ತಿ ಕಾಡಿದೆಯೆಂಬ ಅನಿಸಿಕೆ - ಹೀಗೆ ಕಥನ ವರ್ತಮಾನದಿಂದ ಭೂತಕ್ಕೂ, ಭೂತದಿಂದ ವರ್ತಮಾನಕ್ಕೂ ಭವಿಷ್ಯತ್ತಿಗೂ ಒಂದನ್ನು ಇನ್ನೊಂದರೊಳಗೆ ಪೋಣಿಸುತ್ತ ಸಾಗುತ್ತದೆ. ಅಲ್ಲಲ್ಲಿ ಗಡಿಯಾರದ ಕಾಲಯೋಜನೆ ಮೈಲುಗಲ್ಲುಗಳಂತೆ ನಿಂತುಕೊಂಡಿದ್ದು ಅನಂತಕಾಲದಲ್ಲಿನ ನಮ್ಮ ಹಾಗೂ ನಿರೂಪಕನ ವಿಹಾರದ ನಂತರ ಅಲ್ಲಿಗೆ ಮರಳುತ್ತ ಮುಂದೆ ಸಾಗುತ್ತೇವೆ.

ಕಥೆ ವರ್ತಮಾನದ ಒಂದು ನಿರ್ದಿಷ್ಟ ಕಾಲಕ್ಕೆ ಪ್ರಾರಂಭಿಸಿ ಹಿನ್ನೆಲೆಯಾಗಿ ಭೂತದ ಅವಲೋಕನ ಮಾಡುತ್ತ ಮಧ್ಯೆ ಮಧ್ಯೆ ವರ್ತಮಾನಕ್ಕೆ, ಪ್ರಸ್ತುತವಾಸ್ತವಕ್ಕೆ ಮರಳುತ್ತ ಮತ್ತೆ ಮತ್ತೆ ಭೂತದಲ್ಲಿ ಇಳಿಯುತ್ತ ಹೋಗಿ ಕೊನೆಯಲ್ಲಿ ಪ್ರಸ್ಥಾನಬಿಂದುವಿಗೆ ಬಂದಿದ್ದರೆ ಅದಕ್ಕೊಂದು ವರ್ತುಲದ ಪರಿಪೂರ್ಣತೆ ಇರುತ್ತಿತ್ತು. ಹಾಗಿರುವ ಬದಲು ವರ್ತಮಾನದ ಕತೆ ಮೊದಲ ಪುಟದಲ್ಲಿ ಬರುವ ಹಂತವನ್ನು ಮೀರಿದ ಬೆಳವಣಿಗೆಯನ್ನು ಕೊನೆಯಲ್ಲಿ ಪಡೆಯುತ್ತದೆ. ಆಫ್ರಿಕೆಗೆ ಹೋಗಲು ಇರುವ ೨೨ ದಿನಗಳ ಅವಧಿಯಲ್ಲಿ ಈ ಬೆಳವಣಿಗೆ ಆಶ್ಚರ್ಯಕರ ಹಾಗೂ ಆಘಾತಕರ. ಇದು ಒಂದು ಪತ್ತೇದಾರಿ ಕತೆಯಲ್ಲಿನ ಸಮಾಪ್ತಿಯಂತಿದೆ.' ಇದು ತಂತ್ರದೋಷವಾಗಿರದೆ, ಕಥಾವಿನ್ಯಾಸದೋಷ ಎನ್ನಬಹುದಾದರೂ, ಈ ೨೨ ದಿನಗಳ ಗಡಿಯಾರದಕಾಲವನ್ನು ನಿಷ್ಕೃಷ್ಟವಾಗಿ ದಾಖಲಿಸಬಹುದಿತ್ತು. ಪತ್ರಲೇಖನದಲ್ಲಿನಂತೆ ಸ್ಥಳ, ದಿನಾಂಕ ನಿರ್ದೇಶನಗಳೊಂದಿಗೆ ದಿನಚರಿಯನ್ನು ಪ್ರಾರಂಭಿಸಿರುವ ಲೇಖಕರು ನಡುನಡುವೆ 'ಅಂದು' ('ಅಂದು' ಅಂದರೆ ಯಾವದಿನ?) ಎಂದು ಅನಿರ್ದೇಶಿತ ದಿನವನ್ನು ಸೂಚಿಸುವ ಬದಲು ದಿನಚರಿಯ ಟಿಪ್ಪಣಿಯ ದಿನ (ಎಪ್ರಿಲ್ ೧, ೧೯೫೩) ದಿಂದ ಸ್ಪಷ್ಟ ಸೂಚನೆಯನ್ನು ನೀಡುತ್ತ ಹೋಗಿದ್ದಿದ್ದರೆ ತಂತ್ರ ಇನ್ನೂ ಬಿಗಿಗೊಳ್ಳಬಹುದಿತ್ತು. ಅನಿರ್ದಿಷ್ಟ ಸಂಜೆ–ಮುಂಜಾವುಗಳ ತೊಡಕು, ತಂತ್ರಪ್ರಬುದ್ಧತೆಯನ್ನು ಅಪೇಕ್ಷಿಸುವ ಓದುಗನಿಗೆ ಬೇಸರ ತರುತ್ತದೆ.

ಬೇರೆ ರೀತಿಯಲ್ಲೂ ಲೇಖಕರು ಎಡವಿದ್ದುಂಟು. ಹಲಕೆಲವು ಸಲ ಸಂಬಂಧ ಕಲ್ಪಿಸುವ ಎಳೆ ಹರಿದು ಹೋಗಿದೆ. ಉದಾಹರಣಾರ್ಥವಾಗಿ, ಪುಟ ೧೫೦ರ ಮೇಲೆ ಬರುವ ವೃತ್ತಾಂತ 'ನಿನ್ನೆ ರಾತ್ರಿ ಡಾಲಿ ಬಂದು ಹೋದರೂ ಅವಳ ಬಗ್ಗೆ ನಡುವೆಯೇ ಬರೆಯುವ ಮೋಹ ತಡೆಹಿಡಿದಿರುವೆ' ಎಂದು ಪ್ರಾರಂಭಿಸುತ್ತದೆ. ಇಲ್ಲಿ ಹಿಂದಿನ ಭಾಗಕ್ಕೂ ಇದಕ್ಕೂ ಜೋಡಣೆಯ ಕೊಂಡಿ ಇಲ್ಲದಂತಿದೆ. ಇನ್ನು ಪು. ೧೫೨ರ ಮೇಲೆ ಉಲ್ಲೇಖಿತವಾಗಿರುವ 'ಸಪ್ಟೆಂಬರ ತಿಂಗಳಲ್ಲಿ ನಾಲ್ಕುದಿನ ಸಿರ್ಸಿಗೆ ಹೋಗಿ ಬಂದೆ' ಎಂಬುದು ಭೂತಕ್ಕೆ ಸಂಬಂಧಿಸಿದುದು. ಆದರೆ ಪು. ೧೫೫ರ ಮೇಲಿನ 'ಎರಡು ಮೂರು ದಿನಗಳ ನಂತರ ನಾನು ಸಿರ್ಸಿಗೆ ಹೋಗಲಿರುವೆ' ಎಂಬುದು ವರ್ತಮಾನದಲ್ಲಿನದು. ಇಂಥ ಗೊಂದಲ ನಿವಾರಿಸುವುದು ಸಾಧ್ಯವಿತ್ತು.

ಅಲ್ಲದೆ, ಇಂಥ ವಿಸಂಗತಿಗಳೂ ಎದುರಾಗುತ್ತವೆ. ನಿನ್ನೆಯ ಕಥೆಯನ್ನು ಬರೆದು ಮುಗಿಸಬೇಕೆಂದಿರುವ ಗೌರಿ (ಗೌರೀಶ ಎಂದು ಓದಿಕೊಳ್ಳಿ) ಸಂಜೆ ೫ ಗಂಟೆಗೆ ಡಾಲಿಯ ಮನೆಗೆ ಹೋಗಿ ಪತ್ರವೊಂದನ್ನು ಅವಳ ತಾಯಿಯ ಕೈಯಲ್ಲಿ ಕೊಟ್ಟು ಬಂದ ವೃತ್ತಾಂತವನ್ನು ಬರೀತಾನೆ (ಪು.೨೨೭). ನಂತರ ಸತ್ಯೇಂದ್ರನ ಮನೆಗೆ ಭೇಟಿ, ರಾತ್ರಿ ಇವನ ಪತ್ರದ ಮೇರೆಗೆ ಡಾಲಿ ಬಂದಿದ್ದಾಳೆ. ಆಕೆಯ ಮುಂದೆ ಈತ ಹೇಳುವದು ಹೀಗೆ: (ತನ್ನ ಹೃದಯದ ಅರ್ಥ ಸ್ಪಷ್ಟವಾದುದು) ಇಂದು ಮಧ್ಯಾಹ್ನ ಈ ಆತ್ಮಕಥನವನ್ನು ಬರೆಯುವಾಗ ಅನಂತರ ಮರಳಿ ಒಮ್ಮೆ ಓದುವಾಗ – ಅನಂತರವೇ ನಿಮ್ಮ ಮನೆಗೆ ಹೋದೆ. ಪತ್ರಕೊಟ್ಟೆ... "ಕಾದಂಬರಿಯ ಕಾಲಸಂಯೋಜನೆಯ ಬಗೆಗೆ ಅರೆಬರೆ ಮನಸ್ಸಿನ ಅಸ್ಪಷ್ಟ ನಿರ್ದೇಶನಗಳನ್ನು ಕೊಡುತ್ತ ಹೋದರೆ ಅದು ತಂತ್ರಸಿದ್ಧಿಯಾಗಲಾರದೆಂದು ಹೇಳದೆ ಗತ್ಯಂತರವಿಲ್ಲ.'

ದೇಸಾಯರನ್ನು ನಾನು "ಲೇಖನ ಓದಿದಿರಾ?" ಎಂದು ಕೇಳಲಾಗಿ ಅವರು ಮೆಚ್ಚುಗೆಯ ಮಾತನ್ನು ಆಡಿದರೇಹೊರತು, ಅನ್ಯತಾ ಪ್ರತಿಕ್ರಿಯೆ ಅವರಿಂದ ಬರಲಿಲ್ಲ. ಅವರೊಂದಿಗೆ ಸಮಕ್ಷಮ ಮೇಲ್ಕಾಣಿಸಿದ ಅಂಶಗಳ ಕುರಿತು ಚರ್ಚಿಸಬೇಕೆಂದಿದ್ದೆ. ಆದರೆ, ಸಾಧ್ಯವಾಗಲಿಲ್ಲ.

ದೇಸಾಯರು ಸಾಹಿತ್ಯಿಕ ಸೃಜನಕಾರ್ಯಕ್ಕಾಗಿ ತಮ್ಮ ಆರೋಗ್ಯವನ್ನೇ ಬಲಿಕೊಟ್ಟರು. ಅವರ ಕೊನೆಯದಿನಗಳಲ್ಲಿ, ಆಕ್ಸಿಜನ್ನಿನ ಕೃತಕ ಪೂರೈಕೆಯ ಮೇಲೆಯೇ ಜೀವಿಸಿದ್ದು "ಓಂಣಮೋ" ಕಾದಂಬರಿಯನ್ನು ಮುಗಿಸಿದರೆಂದು ಕೇಳಿದ್ದೇನೆ.

ಅಂಥ ನಿಷ್ಕಲ್ಮಷ ಹೃದಯದ, ಸ್ನಿಗ್ಧತೆಯನ್ನು ಮೊಗದಲ್ಲಿ ಸದಾ ಸೂಸುವ, ಜೀವನಪ್ರೇಮಿ-ಇಲ್ಲವಾದದ್ದು ನನ್ನ ಅಭೌತಿಕ ಪ್ರಪಂಚದ ಒಂದು ಖಂಡವೇ ಕಳಚಿ ಹೋದಂತಾಗಿದೆ.

ದೇಸಾಯರ ಆತ್ಮಕ್ಕೆ 'ಓಂಣಮೋ'!

*. ಪ್ರಕಾಶನ. ವೀರಶೈವ ಅಧ್ಯಯನ ಸಂಸ್ಥೆ. ಶ್ರೀ ಜಗದ್ಗುರು ತೋಂಟದಾರ್ಯಮಠ, ಗದಗ (೧೯೮೧)

**. ಉಪರೋಕ್ತಗ್ರಂಥ, ಪು. ೩೬೫-೬೬

***. ಅದೇ ಗ್ರಂಥ, ಪು ೩೬೫ ಅಡಿಟಿಪ್ಪಣಿ

****. ಸಾಹಿತ್ಯ, ಸೃಜನಶೀಲತೆ ಮತ್ತು ನಾನು, ಪು. ೧೦೮-೯ ಜ್ಯೋತಿಷ್ಮತಿ ಪ್ರಕಾಶನ ೧೯೮೧,

*****. ಇದು ಅಸ್ತಿತ್ವವಾದವನ್ನು ಸೂಚಿಸುತ್ತದೆಂದು ಕೆಲವರು ವಿವರಣೆ ನೀಡಬಹುದು. ಆ ಪಕ್ಷದಲ್ಲಿ, ಕಾದಂಬರಿಯ ಹಿನ್ನೆಲೆಯಲ್ಲಿ ಬೆಳೆದುಬಂದ ವೈಚಾರಿಕತೆ ಹಾಗೂ ಭಾವುಕ ಸಂಬಂಧ ಎಲ್ಲ ನಿರರ್ಥಕ ಎನಿಸುತ್ತವೆ.

✧✧

ಪ್ರೊ. ಜಿ.ಬಿ. ಸಜ್ಜನ ಮಠಪತಿಗಲ್ಲಿ, ವಿಜಾಪುರ ೫೮೬೧೦೧

ಕಾಡುತ್ತದೆ

ಎ.ಸಿ. ಅಪ್ಪಾಜಿಗೋಳ್

ನಾನು ನಿಮ್ಮ ಮಧ್ಯದಲ್ಲಿದ್ದರೂ
ಎಲ್ಲೋ ಬಂದು ಬಿದ್ದಿದ್ದೆನ್ನಿಸುತ್ತದೆ.
'ಒಂಟಿತನ' ಕಾಡುತ್ತದೆ.

ನಾನು ನಡೆದಾಡುತ್ತಿದ್ದರೂ
ಕುಳತಿದ್ದೆನೆಂದು ಭಾಸವಾಗುತ್ತದೆ.
'ವೇಗ' ಕಾಡುತ್ತದೆ.

ನಾನು ಕಣ್ಣುತೆರೆದಿದ್ದರೂ
ಹಾಡೇ ಹಗಲು ಕತ್ತಲೆಯಾಗಿದೆಯೆನಿಸುತ್ತದೆ.
'ಬೆಳಕು' ಕಾಡುತ್ತದೆ.

ನಾನು ಮಲಗಿದ್ದರೂ ಕನಸು ಬೀಳುವದಿಲ್ಲ
ಸತ್ತಿದ್ದೇನೆನಿಸುತ್ತದೆ.
'ಜೀವ' ಕಾಡುತ್ತದೆ.

ಸಂತೋಷದ ಕ್ಷಣಗಳು ಬರಲಾರವೇ?
ನಾನೆಲ್ಲಿದ್ದೇನೆ?
"ದುಃಖ" ಕಾಡುತ್ತದೆ.

ನಿಮ್ಮ ನೆರವು ಸಿಗದೇ?
ಭರವಸೆಯಿಲ್ಲವೆನಿಸುತ್ತದೆ
"ವಿಶ್ವಾಸ" ಕಾಡುತ್ತದೆ.

ಪ್ರೀತಿಸಿ ಬಿಡುವುದಿಲ್ಲ. . . .

ನಾನು ಪ್ರೀತಿಸಿ ಬಿಡುವದಿಲ್ಲ
ನಿನ್ನನ್ನು ಪ್ರಾಣಬಿಂದುವಿನ
ಅಮೃತಧಾರೆಯಲ್ಲಿ ನೆನೆಸುತ್ತೇನೆ
ನೀನು ಮಿಳಿತರೆ ಸುಖ
ಮಿಂದರೆ ಪಾವನ.

ನಾನು ಪ್ರೀತಿಸಿ ಬಿಡುವದಿಲ್ಲ
ನನ್ನೆದೆಯ ಬೆಚ್ಚಗಿನ ಗೂಡಿನಲ್ಲಿ
ಜೋಪಾನವಾಗಿ ಬಚ್ಚಿಡುತ್ತೇನೆ
ನೀನು ಹೆಪ್ಪುಗಟ್ಟಿದರೆ ನನ್ನ ಅಸ್ತಿಯಾಗುವೆ
ಕರಗಿ ಹರಿದರೆ ನನ್ನ ರಕ್ತವಾಗುವೆ.

ನಾನು ಪ್ರೀತಿಸಿ ಬಿಡುವದಿಲ್ಲ
ನಿನ್ನನ್ನು ಉಸಿರುತ್ತೇನೆ
ನೀನು ಭಾವದಿಂದ ಹೊರ ಬಂದರೆ ಹೂವಾಗುವೆ
ಬುದ್ಧಿಯಿಂದ ಹೊರಬಂದರೆ ವಜ್ರವಾಗುವೆ
ಕಲ್ಪನಾ ಲಹರಿಯಲ್ಲಿ ಸುಂದರ ಕನಸಾಗುವೆ.

ನಾನು ಪ್ರೀತಿಸಿ ಬಿಡುವದಿಲ್ಲ
ನನ್ನ ಮನಸ್ಸಿನ ಜೊತೆ ನಿನ್ನನ್ನು ಬೆರೆಸುತ್ತೇನೆ
ಬೆಸೆದು ಲೀನವಾಗುವಂತೆ
ಅವರಿವರು ನನ್ನ ಕದಿಯದಂತೆ
ನನ್ನನ್ನೇ ನಾನು ಮರೆಯುವಂತೆ.

ಎ.ಸಿ. ಅಪ್ಪಾಜಿಗೋಳ, ಉಪನ್ಯಾಸಕರು, ಎಸ್.ಆರ್. ಕಂಠಿ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಮಹಾವಿದ್ಯಾಲಯ – ಮುಧೋಳ್ ಬಾಗಲಕೋಟೆ (ಜಿ)

ಅಗಾಧ ವಿಸ್ಮಯಗಳಿಗೆ ತೆರೆದ ಕಣ್ಣು 'ಚಂಚಲ ನಕ್ಷತ್ರಗಳು'

ಡಾ. ಬೈರಮಂಗಲ ರಾಮೇಗೌಡ

'ಚಂಚಲ ನಕ್ಷತ್ರಗಳು' ಕವನ ಸಂಕಲನದ ಪ್ರಾರಂಭದಲ್ಲಿ 'ಆತ್ಮೀಯರನ್ನು ನೆನೆನೆನೆದು.......' ಕೆಲವು ಮಾತುಗಳನ್ನು ಹೇಳುತ್ತ, ಎಂ.ಆರ್. ಭಗವತಿಯವರು ಅದನ್ನು ಹೀಗೆ ಮುಗಿಸುತ್ತಾರೆ: "ನನ್ನ ಪ್ರೀತಿಯ ಇಂಕು, ಪೆನ್ನು, ಹಾಳೆ, ಬರೆಯಲು ನೆನಪಿಸುವ ಪುಸ್ತಕ, ಸದಾ ಕಾಡುವ ನೀಲಿ, ಮರುಳು ಗಡಿಯಾರ, ಬೆಕ್ಕು, ಬೆರಗು ಹುಟ್ಟಿಸುವ ಗಾಳಿ, ಮಳೆ, ಮೋಡ, ಆಕಾಶ, ಗ್ರಹ, ತಾರೆಗಳನ್ನೆಲ್ಲ ನೆನೆಯದೆ ಇರಲಿ ಹೇಗೆ?'– ಇವು ಅಚ್ಚರಿಯೊಂದಿಗೆ ಹುಬ್ಬು ಕೆಳಗಿಳಿದು ಕಣ್ಣು ಸಣ್ಣದಾಗಿ ಕುತೂಹಲಕ್ಕೆ ಕಾರಣವಾಗುವ ಮಾತುಗಳು. ಸ್ವರತಿ ಸಂಪ್ರೀತ ಕಾವ್ಯಗಳ ಜಾತ್ರೆಯಲ್ಲಿ ಬೇಂದ್ರೆ, ಕೆ.ಎಸ್. ನರಸಿಂಹಸ್ವಾಮಿಯವರಂಥ ಕವಿಗಳ ಕಾವ್ಯವನ್ನಾದರೂ ಪ್ರೀತಿಯಿಂದ ಮತ್ತೆ ಮತ್ತೆ ಓದಿ, ನಿಜವಾದ ಕಾವ್ಯಾನಂದವನ್ನು ಅನುಭವಿಸಿ, ಆ ಆನಂದದ ಅಮಲಿನಲ್ಲಿ ತೇಲುವಾಗ ಗಾಳಿ ಮಳೆ ಮೋಡ ಆಕಾಶ ಬೆಕ್ಕುಗಳಲ್ಲಿ ಅನುಭವದ ಒಂದು ಭಾಗವಾಗಿ ಹೇಗೆ ಕಂಡವೋ ಹೇಗೆ ಕಾಡಿದವೋ ಅದನ್ನೇ ರಕ್ತಮಾಂಸ ಮಿದಿದು ಜೀವ ತುಂಬುವ ಹಾಗೆ ಕವಿತೆಗಳನ್ನು ಸೃಷ್ಟಿಸಿರುವ ಎಂ.ಆರ್. ಭಗವತಿ ಕುತೂಹಲ ಹುಟ್ಟಿಸುತ್ತಾರೆ. ಚಂಚಲ ನಕ್ಷತ್ರಗಳಲ್ಲಿರುವ ೪೩ ಕವಿತೆಗಳಲ್ಲಿ ಬಹಳಷ್ಟು ಮತ್ತೆ ಮತ್ತೆ ಓದಿಸಿಕೊಳ್ಳುತ್ತವೆ. ಕೆಲವು ಸಾಲುಗಳು ಮುಂದಕ್ಕೆ ಓದಲು ಬಿಡದೆ ಅಲ್ಲೇ ಸ್ವಲ್ಪ ಹೊತ್ತು ನಮ್ಮ ಕಣ್ಣು ಕೀಲಿಸುವಂತೆ ಮಾಡುತ್ತವೆ. ಸಾಲುಗಳೊಳಗಿಂದ ದಳದಳ ಬಿಚ್ಚಿಕೊಳ್ಳುವ ಭಾವಗಳು ನಮ್ಮನ್ನು ಧ್ಯಾನಲೀನವಾಗಿಸುತ್ತವೆ. ಹತ್ತು ಜನರ ನಡುವೆ ಎಂದೂ ಮಾತಿಗೆ ಹಾತೊರೆಯದ, ಮಾತಾಡುವ ಸರದಿ ಬಾರದಿರಲೆಂದೇ ಹಾರೈಸುವ, ಮಾತು ಸೂತಕವಾದ ಭಗವತಿಯೊಳಗೂ ಎಂಥ ಮಾತುಗಳು ಹುದುಗಿವೆ! ಮಥಿಸಿ ಮಥಿಸಿ ಘನೀಭೂತಗೊಂಡ ಮಾತುಗಳು ಹರಟೆ, ಚರ್ಚೆ, ಭಾಷಣ ಸಂವಾದಗಳಲ್ಲಿ ವ್ಯರ್ಥ

ಬಸಿದು ಹೋಗದಿರಲೆಂದೇ ಅವರು ಸಾರ್ವಜನಿಕ ವಾಚಾಳಿತನಕ್ಕೆ ಎರವಾಗಿದ್ದರೆ ಅದರಿಂದ ಕಾವ್ಯಕ್ಕೆ ನಿಜವಾಗಿ ಲಾಭವೇ ಆಗಿದೆ. ಇಲ್ಲೂ ಅಷ್ಟೆ ಅವರದು ಲೆಕ್ಕಾಚಾರ ಹಾಕಿ ಪ್ರಯೋಗಿಸಿದಂಥ ಗುಲಗಂಜಿ ತೂಕದ ಮಾತು! ಇದೇ ಕಾವ್ಯದ ಬಂಡವಾಳ ಮತ್ತು ಶಕ್ತಿಯಲ್ಲವೇ?

ಸಂಕಲನದ ಹೆಸರೂ ಆಗಿರುವ 'ಚಂಚಲ ನಕ್ಷತ್ರಗಳು' ಇಪ್ಪತ್ತೈದು ಸಾಲುಗಳ ಪುಟ್ಟ ಕವಿತೆಯಾದರೂ ನಕ್ಷತ್ರಗಳೊಂದಿಗೆ ಬೆಸೆದುಕೊಂಡ ನಮ್ಮ ಬಾಲ್ಯದ ಬದುಕೆಲ್ಲ ಅಡಕವಾಗಿ, ಆಪ್ತವಾಗಿ ಅಭಿನೀತವಾಗಿಬಿಟ್ಟಿದೆ. ಇವತ್ತಿನ ಮಕ್ಕಳು 'ವಿಜ್ಞಾನ ಅಧ್ಯಯನದ ಒಂದು ಭಾಗವಾಗಿ ನಕ್ಷತ್ರಗಳ ಪರಿಚಯ ಮಾಡಿಕೊಳ್ಳುತ್ತಾರೆಯೇ ಹೊರತು, ರಾತ್ರಿ ನೀಲಾಕಾಶದ ಕೆಳಗೆ ಮನೆಯ ಮುಂಭಾಗದಲ್ಲಿ ಚಾಪೆಯ ಮೇಲೆ ಮಲಗಿ ನಕ್ಷತ್ರಗಳನ್ನು ಎಣಿಸುತ್ತ, ಅವುಗಳೊಂದಿಗೆ ಕಣ್ಮುಚ್ಚಾಲೆ ತನ್ಮಯರಾಗುತ್ತಿದ್ದ ನಮ್ಮ ಪಾಲಿನ ಆ ಅಪೂರ್ವ ಕ್ಷಣಗಳು ಈ ದುರದೃಷ್ಟಶಾಲಿಗಳಿಗೆಲ್ಲಿ? ಇದಿಷ್ಟೇ ಆಗಿದ್ದರೆ ಸುಂದರ ಅನುಭವಕ್ಕೆ ಸೊಗಸಾದ ಶಬ್ದಾರ್ಥಗಳ ಚೌಕಟ್ಟು ತೊಡಿಸಿ, ನೋಡಿದವರೆಲ್ಲ "ವಾಹ್! ಚಿತ್ರ ಬಹಳ ಸೊಗಸಾಗಿದೆ" ಎನ್ನುವ ಕ್ಷಣದ ಉದ್ಗಾರಕ್ಕಷ್ಟೇ ಸೀಮಿತವಾಗಿಬಿಡುತ್ತಿತ್ತು. ಬಾಲ್ಯ ದಾಟಿ ಎಷ್ಟೋ ವರ್ಷಗಳಾದ ಮೇಲೂ ಬದುಕಿನ ಕುಲುಮೆಯಲ್ಲಿ ಬೆಂದು ಬಡಿಸಿಕೊಂಡು ಯಾವ್ಯಾವುದೋ ಆಕಾರದಲ್ಲಿ ಆತಂಕಗೊಂಡು ನಿಂತಿರುವಾಗಲೂ – ನಿಂತ ನೆಲದಲ್ಲಿ ಏಕಾಕಿ ಎನಿಸುವಾಗ, ಚಿಂತೆ ಹತ್ತಿ ನೆತ್ತಿಗೆ ತಾಳಿದಾಗ, ಸೂರು ದಿಟ್ಟಿಸುತ್ತಾ ಕೊರಗುವಾಗ, ಕಾಸಿಲ್ಲದ ಸೂರಿಲ್ಲದ ಜನ ಅನಿವಾರ್ಯವಾಗಿ ನಕ್ಷತ್ರಗಳ ಕೆಳಗೆ ಬದುಕುತ್ತಿರುವಾಗ "ಕೂಗಿ ಕೂಗಿ ಕರೆಯಬೇಕು ನಕ್ಷತ್ರಗಳ" ಎಂದು ಅನ್ನಿಸುವುದರಲ್ಲಿಯೇ ಈ ಕವನ ಮಹತ್ವದ ನೆಲೆಯೊಂದಕ್ಕೆ ಸದ್ದು ಮಾಡದೆ ಹೊರಳಿಕೊಂಡು ಬಿಡುತ್ತದೆ. ಇದು ಉಸಿರುಕಟ್ಟಿಸುವ ವಾಸ್ತವದಿಂದ ಸ್ವಲ್ಪ ಹೊತ್ತು ಕಣ್ಮರೆಯಾಗಿ ಹೊಸ ಆಸೆ ಭರವಸೆಗಳೊಂದಿಗೆ ಮತ್ತೆ ಅಲ್ಲಿಗೇ ವಾಪಸ್ಸು ಬರುವ ಸಲುವಾಗಿ ನಕ್ಷತ್ರ ಲೋಕಕ್ಕೆ ರೈಲು ಬಿಡುವ ರೀತಿ! ಭಗವತಿಯವರೇ ಹೇಳಿಕೊಂಡಿರುವಂತೆ ಬೆಕ್ಕು, ಕಾಗೆ, ಹೊಂಗೆಮರ, ದೀಪ, ಮೋಡ, ಮಳೆ, ಪರಿಷೆ ಇತ್ಯಾದಿಗಳಂತೆ ನಕ್ಷತ್ರಗಳನ್ನೂ ಗಮನಿಸಿಕೊಳ್ಳದಿದ್ದರೆ, ಹೊಸ ಅರ್ಥ–ಭಾವಗಳ ಲೋಕಕ್ಕೆ ಜಿಗಿಯಲಾಗದಿದ್ದರೆ ಈ ಬದುಕು ಎಷ್ಟೊಂದು ಘೋರ, ಎಷ್ಟೊಂದು ಯಾತನಾಮಯ! ಸೌಂದರ್ಯದ ಮಗ್ಗುಲಲ್ಲೇ ಇರುವ ನಿರಾಶೆ, ವಿಷಾದ, ಸಂಕಟಗಳನ್ನು ಧ್ವನಿಸಲಾಗದ ಕಾವ್ಯದ ಸಾರ್ಥಕತೆಯಾದರೂ ಏನು? ಭಗವತಿಯವರ ಕಾವ್ಯಕ್ಕಿರುವ ಹೊಸತನ ಮತ್ತು ವೈಶಿಷ್ಟ್ಯ ಇದೇನೆ.

ಕತ್ತಲ ಬಸಿರನ್ನು ಬಗೆದು ಬೆಳಕಿನ ಕಿರಣಗಳನ್ನು ತೂರಿಬಿಡುವ ಸೂರ್ಯೋದಯದ ಸಂದರ್ಭ ಬೇಂದ್ರೆಯವರ ದೃಷ್ಟಿಯಲ್ಲಿ "ಇದು ಬರಿ ಬೆಳಗಲ್ಲೋ ಅಣ್ಣ!" ಕಾವ್ಯ ಕೂಡ ಓದಿದಾಗ, ಕೇಳಿದಾಗ ಅದರ ಅರ್ಥಸ್ಫುರಣೆಯಾಗುವ 'ಬೆಳಗು' ಮಾತ್ರ ಅಲ್ಲ; ಅದರಾಚೆಗಿನ ಬೆರಗು, ಬೆಡಗು ಇತ್ಯಾದಿ ಏನೇನೋ. ಈ ತೆರನಾದ ಶಕ್ತಿಸ್ಫೋಟದಿಂದಲೇ ಬೆರಗುಗೊಳಿಸುವ ಹದಿಮೂರೇ ಸಾಲುಗಳ ಪುಟಾಣಿ ಬೆಡಗಿ 'ಬೆಕ್ಕಿನ ಕಣ್ಣು ಪಾಪೆ'. ಕೆ.ವಿ. ತಿರುಮಲೇಶರ 'ಮುಖಾಮುಖಿ' ನೋಟ ನಡಿಗೆ ಹೊಂಚು ಸಂಚು ಎಲ್ಲದರೊಂದಿಗೆ ಬೆಕ್ಕನ್ನು ಹಿಡಿದಿಟ್ಟು ಬಿಟ್ಟಿದ್ದರೂ ಅದಕ್ಕಿಂತ ಭಿನ್ನ

ವಿನ್ಯಾಸದಲ್ಲಿ, ಬೆಕ್ಕಿನ ಕಣ್ಣು ಪಾಪೆಯನ್ನೇ ದೃಷ್ಟಿಕೇಂದ್ರವಾಗಿಸಿಕೊಂಡು, ಅದನ್ನು ಹೋಲಿಕೆಯ ಚಿತ್ರಗಳೊಂದಿಗೆ ವರ್ಣಿಸುತ್ತ, ಕೊನೆಗೆ ಅಷ್ಟೆಲ್ಲ ಅರ್ಥದ ದುಡಿತವನ್ನು ಕಾವ್ಯಸೃಷ್ಟಿಯ ಕಡೆಗೆ, ಅರ್ಥವನ್ನು ಹುದುಗಿಸಿಟ್ಟುಕೊಂಡು ಥಟ್ಟನೆ ಚಿಮ್ಮಿಬಿಡುವ ಕವಿತೆಯ ಕಡೆಗೆ ಹೊರಳಿಸಿಬಿಡುವುದರಿಂದ ಉಂಟಾಗುವ ಮಿಂಚಿನ ಸಂಚಲನ ಅದ್ಭುತವಾದದ್ದು. ಹೇಳಬೇಕಾದುದನ್ನು ಅಂತ್ಯದವರೆಗೂ ಜತನವಾಗಿ ಕಾಪಿಟ್ಟುಕೊಂಡು, ಅಲ್ಲಿಯವರೆಗೆ ಕವಿತೆ ನಿರಾಯಾಸವಾಗಿ ಸಾಗುತ್ತ ಹೋಗುವದಕ್ಕೆ ಬಾಧಕವಾಗದಂತೆ ಕಟ್ಟಡವೆಬ್ಬಿಸುವ ಕೌಶಲ ನಿಜಕ್ಕೂ ಶ್ಲಾಘನೀಯ.

ಮಾತಾಡಲು ಮುಜುಗರಪಡುವ ಹಿಂಜರಿಯುವ ಭಗವತಿಯವರಿಗೆ ಕವಯಿತ್ರಿಯಾಗಿ ಮಾತಿನ ಮಹತ್ವ ಏನೆಂಬುದು, ಅದರ ಪರಿಣಾಮ ಎಂಥದ್ದೆಂಬುದು ಚೆನ್ನಾಗಿಯೇ ಗೊತ್ತು. ಕಾವು ಕೂತೂ ಕೂತೂ ಕೊನೆಗೆ ಮೊಟ್ಟೆಯೊಡೆದು ಹೂಮರಿ ಹೊರಬರುವಂತೆ ಮಾತು ಸಕಾಲಿಕವಾಗಿ, ಅರ್ಥವತ್ತಾಗಿ ಬರುವುದರತ್ತ ಅವರ ಒಲವು. ಆಡಲೇಬೇಕಾದ ಸಂದರ್ಭದಲ್ಲೂ ಆಡಬೇಕಾದಷ್ಟು ಮಾತುಗಳನ್ನು ಆಡದಿದ್ದರೆ ಅವರ ದೃಷ್ಟಿಯಲ್ಲಿ ಅದೊಂದು ಅಪರಾಧ. ಈ ಅಭಿಮತಕ್ಕೆ, ಸ್ಪಂದಿಸಿರುವ ಮೂರು ಕವಿತೆಗಳಲ್ಲಿ ಒಂದರ ಹೆಸರು 'ಮಾತುಕತೆ'. ಪ್ರೀತಿಯ ಗುಟ್ಟನ್ನು ಮಾತಿನಲ್ಲಿ ರಟ್ಟಾಗಿಸುವುದು ಎಷ್ಟು ಕಷ್ಟ ಎನ್ನುವುದು ಒಲಿದ ಹೃದಯಗಳಿಗಷ್ಟೇ ಗೊತ್ತು. ಹೃದಯದ ಮಾತುಗಳನ್ನು ಬಿಚ್ಚಿಕೊಳ್ಳಲೆಂದೇ ಭೇಟಿಯಾದರೂ ದೇಶದ ಸಮಾಚಾರ ಹವಾಮಾನ ವಿಹಾರ, ದೇಶ ಸಂಚಾರ ಏನೆಲ್ಲ ಹರಿಯಬಿಟ್ಟರೂ ಕೊನೆಗೆ ಹೊರಡುವ ಸಮಯಕ್ಕೆ ಅನ್ನಿಸುವುದು ಮಾತ್ರ "ಏನೋ ಹೇಳದೆ ಬಿಟ್ಟೆ". ದಾಂಪತ್ಯ ಜೀವನದ ಏರುಪೇರುಗಳು ನಿಟ್ಟುಸಿರಿನ ರಾತ್ರಿಗಳನ್ನು ಹೆಚ್ಚಿಸುತ್ತ ಕೊರಳು ಹಿಸುಕುವಾಗ ಇಬ್ಬರಲ್ಲೊಬ್ಬರಾದರೂ ವಿವೇಕಿಗಳಾದರೆ, ಮೌನಮೊಗ್ಗೆಯನೊಡೆದು ಮಾತರಳಿಸುವಲ್ಲಿ ಯಶಸ್ವಿಯಾದರೆ ಆ ಬಿರುಕುಗಳನ್ನು ಮುಚ್ಚುವುದು ಸಾಧ್ಯವಾಗುತ್ತದೆ, ಮುಂದಿನ ಅನೂಹ್ಯ ದುರಂತವನ್ನು ತಪ್ಪಿಸುವುದು ಸಾಧ್ಯವಾಗುತ್ತದೆ. ಈ ಬಗೆಯ ಆಲೋಚನೆಗೆ 'ಒಂದೇ ಒಂದು' ಕವಿತೆಯಲ್ಲಿ ಮಾತು ಮೂಡುವುದು ಹೀಗೆ: "ಇಂಥ ನಿಟ್ಟುಸಿರುಗಳ ನಡುವೆ ಒಂದು ಮಾತು ಇದ್ದಿದ್ದರೆ ಗೋಡೆ ಕೆಡವಬಹುದಿತ್ತು". ಇರುವುದರಲ್ಲೇ ಬದುಕು ಕಟ್ಟಿಕೊಂಡು ಸುಖಿಸುವ ಬದಲು ಇಲ್ಲದ್ದಕ್ಕೆ ಕೈಚಾಚುವುದರಿಂದ ಬರಮಾಡಿಕೊಳ್ಳುವ ದುಃಖ ಅನಂತರೂಪಿಯಾದದ್ದು. "ಬೆಚ್ಚನೆಯ ಮಹಲು, ಹಣ, ವಾಹನದ ಭರಾಟೆ, ಎಲ್ಲಾ ಮೀರಿದ ಸುಖದ ಸುಪ್ಪತ್ತಿಗೆಗೆ ಹಂಬಲಿಸುತ್ತ ನರಳುವುದಕ್ಕೆ ಭಗವತಿ 'ಶಮನ'ದಲ್ಲಿ ಕೊಡುವ ಕಾರಣ – "ಮಾತುಗಳದೇ ಬರ"

ಎಂ.ಆರ್. ಭಗವತಿ 'ಏಕಾಂತದ ಮಳೆ' ಯಿಂದ 'ಚಂಚಲ ನಕ್ಷತ್ರಗಳು' ಸಂಕಲನಕ್ಕೆ ಮರದೊಳಗಣ ಮಂದಾಗ್ನಿಯಂತೆ ಬೆಳೆದಿದ್ದಾರೆ. ಅಖಂಡ ಬೆವರುಗಳು ತೇಯ್ದು ಗಂಧವಾಗಿ, ಅಗಾಧ ವಿಸ್ಮಯದ ಕಣ್ಣುಗಳನ್ನು ಹಾಗೆಯೇ ಉಳಿಸಿಕೊಳ್ಳುವ ಮಾಟವಾಗಿ, ಆತ್ಮದ ಮಾತುಗಳನ್ನು ಕವಿತೆಯಾಗಿ ಅನುರಣನಗೊಳಿಸುವ ಕಲೆಯಲ್ಲಿ ಭಗವತಿಯವರ ಪ್ರತಿಭೆ ಬೆಳಗುತ್ತಿರುವುದಕ್ಕೆ 'ಚಂಚಲ ನಕ್ಷತ್ರಗಳು' ಸಾಕ್ಷಿಯಾಗಿದೆ. ಇತ್ತೀಚಿನ ಕಾವ್ಯಸಂತೆಯಲ್ಲಿ ಏಳುತ್ತಿರುವ ದನಿಗಳಲ್ಲಿ ಭಗವತಿಯವರನ್ನು ಪ್ರತ್ಯೇಕವಾಗಿ ಗಮನಿಸಬೇಕಾಗಿದೆ. ಈ ಸಂಕಲನದ ಕವಿತೆಗಳಿಂದ ಬೇರೆಬೇರೆ ನೆಲೆಯ ಚರ್ಚೆಗಳು

ಹೊರಡಬೇಕಾಗಿದೆ. ಅಂಥ ಚರ್ಚೆಗಳಿಗೆ ಡಾ. ಎಚ್.ಎಸ್. ರಾಘವೇಂದ್ರರಾವ್ ಅವರ ಮುನ್ನುಡಿ ಮಾರ್ಗಸೂಚಿ ದೀಪದಂತಿದೆ.

ಡಾ. ಭೈರಮಂಗಲ ರಾಮೇಗೌಡ, ೮೪, ಚಿತ್ತಾರ, ಪುಷ್ಪಗಿರಿ ನಗರ ಹೊಸಕೆರೆಹಳ್ಳಿ – ಅಂಚೆ, ಬನಶಂಕರಿ ೩ನೇ ಹಂತ, ಬೆಂಗಳೂರು-೫೬೦೦೮೫.

ಅಡಿಗರು ಮತ್ತು ಸ್ತ್ರೀವಾದ

ಡಾ. ಅಣ್ಣಮ್ಮ

ನವ್ಯಕಾವ್ಯದ ಪ್ರಮುಖ ಕವಿಯಾದ ಗೋಪಾಲಕೃಷ್ಣ ಅಡಿಗರ ಕಾವ್ಯದಲ್ಲಿ ಸ್ತ್ರೀವಾದಿ ಧೋರಣೆ ವಿಪುಲವಾಗಲ್ಲದಿದ್ದರೂ ವಿರಳವಾಗಿ ಕಾಣಿಸಿಕೊಂಡಿದೆ. ನವೋದಯ ಕವಿಗಳು ಹೆಣ್ಣನ್ನು ಆರಾಧಿಸಿ ಕಾವ್ಯ ಬರೆದಂತೆ ನವ್ಯ ಕವಿಗಳು ಆರಾಧಿಸಲಿಲ್ಲ. ನವೋದಯ ಕವಿಗಳು ತಮ್ಮ ಕಾವ್ಯದಲ್ಲಿ ಸುಂದರ, ಭವ್ಯ, ಎನ್ನುವ ವಾಸ್ತವವನ್ನಷ್ಟೇ ಆರಿಸಿಕೊಂಡರು. ಇವರು ವಾಸ್ತವವೆಂದು ಪರಿಗಣಿಸದೆ ಬಿಟ್ಟಿದ್ದ ಹೆಣ್ಣಿನ ಅಂತರಂಗದ ಭಾವನೆಗಳನ್ನು ಅಡಿಗರು ತಮ್ಮ ಕಾವ್ಯದಲ್ಲಿ ಸಾಧಿಸಿ ತೋರಿಸಿದರು.

ಅಡಿಗರನ್ನು ಹೊಸ ಜನಾಂಗದ ಕಣ್ಣು ತೆರೆಸಿದ ಕವಿಯೆಂದು ಕರೆಯುತ್ತಾರೆ. ಇವರು ಕೆ.ಎಸ್. ನರಸಿಂಹಸ್ವಾಮಿಯವರಂತೆ, ಕುವೆಂಪು ಅವರಂತೆ, ಬೇಂದ್ರೆಯವರಂತೆ ಹೆಚ್ಚು ಪ್ರೇಮಗೀತೆಗಳನ್ನೂ, ಕೌಟುಂಬಿಕ ಗೀತೆಗಳನ್ನು ಬರೆಯಲಿಲ್ಲ. ಆದರೆ ಆದರ್ಶದ ಗದ್ದುಗೆಯ ಮೇಲೆ ಕೂರಿಸಿದ್ದ ಹೆಣ್ಣನ್ನು ರಕ್ತ ಮಾಂಸದ ಹಂದರವೆಂದು ಚಿತ್ರಿಸಿ, ಅವಳೊಳಗಿನ ಮೋಸ, ನಟನೆ, ಕಪಟ. ಅಪ್ರಬುದ್ಧತೆಯನ್ನು ಬಯಲು ಮಾಡುತ್ತಾರೆ. ಇದು ಕವಿಯೊಳಗಿನ ಅಪ್ರಬುದ್ಧತೆಗೂ ಸಾಕ್ಷಿಯಾಗುತ್ತದೆ. ಹೀಗೆ ಹೆಣ್ಣನ್ನು ಬರೀ ರಕ್ತಮಾಂಸದಿಂದ ಕೂಡಿದ ಜೀವಂತ ಪಶು ಎಂದರೆ ಮುಗಿಯಿತೆ? ಹೆಣ್ಣಿನ ಪರಿಪಕ್ವ ಮನಸ್ಸು, ಸೇವಾಭಾವನೆ, ಬೌದ್ಧಿಕ ಬೆಳವಣಿಗೆ, ಸಾಮಾಜಿಕ ಸ್ಥಾನಮಾನಗಳ ಬಗ್ಗೆ ಗಮನ ಹರಿಸುವಿಕೆ ಇವೆಲ್ಲಾ ನವ್ಯಕಾವ್ಯದ ಪ್ರಾರಂಭದಲ್ಲಿ ಇರಲಿಲ್ಲ. ಇದಕ್ಕೆ ಮುಖ್ಯಕಾರಣ ಸ್ವಾತಂತ್ರ್ಯ ಪೂರ್ವದ ಧೋರಣೆಗಳು. ಅಡಿಗರನ್ನು ಇಂಥ ಧೋರಣೆಗಳು ಕಾಡದೆ ಬಿಡಲಿಲ್ಲ. ಹಾಗಾಗಿಯೇ ವ್ಯಕ್ತಿತ್ವಕ್ಕಾಗಿ, ತನ್ನತನದ ಪ್ರತಿಭೆಗಾಗಿ ತುಡಿಯುವ ಕವಿಯ ಮನಸ್ಸು ಕ್ರಮೇಣ ಕಾವ್ಯವಸ್ತುವಿನಲ್ಲಿ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿತು. ಈವರೆಗಿನ ತಮ್ಮ ಕಾವ್ಯದಲ್ಲಿ ಆದರ್ಶವಿಲ್ಲ ಎನಿಸಿತು.

೧೯೯೬ರಲ್ಲಿ ಪ್ರಕಟವಾದ 'ಭಾವತರಂಗ' ಅವರ ಹೆಸರೇ ಸೂಚಿಸುವ ಹಾಗೆ ಭಾವಪ್ರಧಾನವಾದದ್ದು. ಸ್ನೇಹ, ಪ್ರೀತಿ, ದೇಶಪ್ರೇಮ, ಭಾಷಾ ಪ್ರೇಮ, ಹೊಸವರ್ಷಾಗಮನದ ಕಾವ್ಯವನ್ನು ಬರೆಯುವ ಹಂಬಲ ಇವುಗಳನ್ನು ಕುರಿತ ಭಾವನೆಗಳು ಈ ಸಂಗ್ರಹದಲ್ಲಿ ಪ್ರಕಟವಾಗಿವೆ.

ಈ ಸಂಗ್ರಹದಲ್ಲಿ ಪ್ರೀತಿಯನ್ನು ಕುರಿತ ಕೆಲವು ಕವಿತೆಗಳನ್ನು ಅತಿಗರು ಬರೆದಿದ್ದಾರೆ. ಅವುಗಳಲ್ಲಿ 'ಹಿಂದು ಮುಂದಿನೆಣಿಕೆಯೇಕೆ?' 'ನನ್ನ ಕಣ್ಣ ಮುಂದೆ ನಿಲ್ಲು' 'ಮೃತ್ಯು ಲಾಲಿತ್ಯ', 'ನನ್ನ ನಿನ್ನ ಬಳಿವಳಿ' – ಇಂತಹ ಕವಿತೆಗಳು ಅಸಫಲ ಪ್ರೀತಿಯನ್ನು ಕುರಿತ ಭಾವನೆಗಳನ್ನು ಅಸಫಲ ರೀತಿಯಲ್ಲಿ ಚಿತ್ರಿಸುತ್ತವೆ. 'ಹಿಂದು ಮುಂದಿನೆಣಿಕೆಯೇಕೆ?' ಕವಿತೆಯಲ್ಲಿ ಪ್ರೇಮದ ಬಗೆಗಿನ ಚಿಂತನೆ ಇದೆ. ಈ ಪ್ರೇಮ ಎಷ್ಟು ಚಂಚಲವಾದದ್ದು, ಹೇಗೆ ಅಧ್ವಾನಕಾರಿಯಾದದ್ದು ಎಂದು ಕವಿ ಅತಿಗರು ಚಿಂತಿಸಿದ್ದಾರೆ.

ಅವಿವೇಕದಿಂದ ಪ್ರೇಮ ಹುಟ್ಟಿ
ಮೂರು ದಿನದ ಸರಸ ಹಾಸ,
ಬಳಿಕ ತಿಳಿವಾದಾಗ ಮೋಸ,
ಪ್ರೇಮವೊಂದು ಆಭಾಸ,
ಬರಿ ಅಂಧ ವಿಶ್ವಾಸ!

ಪ್ರೇಮ ಅಸಫಲವಾದಾಗಿನ ಭಾವನೆಗಳು ಇಲ್ಲಿವೆ. ಇದು ಕೇವಲ ಮೂರು ದಿನದ್ದು, ಅನಂತರ ಪ್ರೇಮ ಮೋಸ ಎಂದು ಗೊತ್ತಾದಾಗ ಅದೊಂದು ಆಭಾಸ, ಅಂಧ ವಿಶ್ವಾಸ ಎಂಬ ಭಾವೋದ್ವೇಗದ ಸ್ಥಿತಿಯನ್ನು ಮುಟ್ಟುವುದು ಸಹಜ. ಹೀಗೆ ಭಾವೋದ್ವೇಗದ ಪರಾಕಾಷ್ಠೆಯ ಸ್ಥಿತಿಯಲ್ಲೇ ಮೂಡಿದ ಮತ್ತೊಂದು ಕವಿತೆ 'ಮೃತ್ಯು ಲಾಲಿತ್ಯ'. ಇಲ್ಲಿ ಪ್ರೇಮ ನಿರಾಕೃತವಾದದ್ದು, ಜೀವಂತದಲ್ಲಿ ತಾನು ಪ್ರೀತಿಸಿದವನ ಒಲವಿಕೆಯನ್ನು ಪಡೆಯಲಾರದೆ ಇಲ್ಲಿದ್ದ ನನ್ನ, ತಾನು ಪ್ರೀತಿಸಿದ ಅವನು ಬಂದರೆ ಎಷ್ಟು ಲವಲವಿಕೆ ಬರುತ್ತದೆಂದರೆ,

ಅವನಿರುವೆಡೆಯಲ್ಲಿ ಮುಗಿದ ಬೆಳಕಿನಲ್ಲಿ,
ಅವನೆದೆ ಏರಿಳಿತದ ರಭಸದ ಕೇಳ್ದು
ಅವನ ನಗೆ ಮುಗುಳಿತಿರೆ ಹೂವಿನ ಹೊದೆಯ ಸೃಷ್ಟಿ
ಅವನ ಕಣ್ಣುಹೊಳೆಯುತಿರೆ ಎದೆಯೊಳು ಹೂಗಳು,
ಅವನ ಮತಿ ಮಿನುಗುತಿರೆ ಮಿಂಚಿನಂತಹ ಹೊಳಪು!

ಹೀಗೆ ತಾನು ಪ್ರೀತಿಸಿದ ಗೆಳೆಯನ ಸಾನ್ನಿಧ್ಯದಿಂದಲೇ ಆನಂದವಾಗುತ್ತದೆ ಎಂಬ ಅರಿವಿದ್ದರೂ ಬರಿದೇ ಮಾತಿನಲ್ಲಿ ಈ ಪ್ರೇಮ ಕಳೆದಿದೆ. ಇದು ನಿರಾಶಾದಾಯಕ ಕವನವಾಗಿದೆ. ಅಂತೆಯೇ ಇದು ಮುಗಿಲವರೆಗೂ ಬೆಳೆದಿದೆ. ಆದ್ದರಿಂದ ಮಿಂಚಿಹೋದ ಈ ಪ್ರೇಮ ಸಾಫಲ್ಯವನ್ನೇನೂ ಪಡೆದಿಲ್ಲ ಎನ್ನಬಹುದು. ಕಾವ್ಯ ನಾಯಕಿಯ ಬಂಧ ಮಾತುಗಳು ಹಣೆಬರಹದ ಹಾಲುಗಾಸುಗಳ ಹಾಗಿವೆ.

ಇದನ್ನೇ ಹೋಲುವ ಮತ್ತೊಂದು ಕವಿತೆ 'ನನ್ನ ಕಣ್ಣ ಮುಂದೆ ನಿಲ್ಲು' ಈ ಕವಿತೆಯು ನಿವೇದನೆಗೆ ತನ್ನ ನಲ್ಲ ಕಣ್ಣೆದುರು ಬಂದು ನಿಂತು ಬಿಟ್ಟರೆ,

ನೂರು ವರ್ಷದ ದುಃಖವನ್ನಾದರೂ ಸಹಿಸಬಲ್ಲ, ತನ್ನ ಮನೋನೇತ್ರದ ಮುಂದೆ ಹಲವಾರು ಹೊನ್ನ ಕನಸುಗಳನ್ನು ಸೃಷ್ಟಿಸಬಲ್ಲ ಎಂಬ ಹಂಬಲ ಇಲ್ಲಿ ವ್ಯಕ್ತವಾಗಿದೆ. ಏಕೆಂದರೆ ತನ್ನ ಪ್ರೇಮವನ್ನು ಆತನಿಗೆ ಹೇಳಿಕೊಳ್ಳಲಾಗಲೇ ಇಲ್ಲ; ಅದಕ್ಕೆ ಕಾರಣ ಹೀಗಿದೆ.

ನಿನ್ನ ನೋಡಿದೊಡನೆ ನಲ್ಲೆ,
ಕೊರಲು ಬಿಗಿದು ಬರುತಿದೆ;
ಯುಗ ಯುಗಗಳ ಹೃದಯತಾಪ,
ಚಿಮ್ಮುತಿಹುದು ಕಣ್ಣೊಳೆ!
ಮಾತು ಬತ್ತಿ ಹೋಗುತಿಹುದು
ನನ್ನ ಬಗೆಯ ಬುಡದೊಳೆ!
ನಗುವು ಹಿಂಗಿ ಇಂಗುತಿಹುದು
ತುಟಿಗಳ ಬೆಂಗಡೆಯೊಳೇ.

ತನ್ನ ನಲ್ಲೆಯನ್ನು ನೋಡಿದೊಡನೆ ಕೊರಲು ಬಿಗಿಯುವಿಕೆ, ಮಾತು ಬತ್ತಿ ಹೋಗುವಿಕೆ, ತುಟಿಯ ನಗುವೆಲ್ಲ ಹಿಂಗುವಿಕೆ ಇತ್ಯಾದಿ ಅನಿಸಿಕೆ ಇದೆ. ನಾಯಕನ ತಳಮಳ, ತಲ್ಲಣಗಳಷ್ಟೇ ಪ್ರೇಮವಾಗುವುದಿಲ್ಲ. ಇದು ಒಬ್ಬ ಮೂಕ ಪ್ರೇಮಿಯ ಮನಸ್ಸಿನೊಳಗಿನ ಭಾವನೆಗಳು ಎನ್ನಬಹುದು. ಮುಂದಿನ ಕವಿತೆ 'ನನ್ನ ನಿನ್ನ ಬಳುವಳಿ'ಯಲ್ಲಿ ಮತ್ತೊಂದು ಹೆಜ್ಜೆ ಮುಂದಿಟ್ಟು, ತನ್ನ ನಲ್ಲೆಯ ವಿರಹ ಭಾವನೆಯನ್ನು ಒಟ್ಟಾಗಿ ಪ್ರಕಟಪಡಿಸುತ್ತದೆ. ತನ್ನ ಪ್ರೇಯಸಿ ಮತ್ತು ಅವಳ ಪ್ರೇಮವನ್ನು ಕುರಿತು. ಹಾಡಿರುವ ಗೀತೆ ಇದು.

ಸುತ್ತುತಿಹುದು ನಿನ್ನ ಸುತ್ತ ನನ್ನ ಚಿತ್ತ ಭೃಂಗವು;
ಈ ಒಡಲು ಕಡಲು ವ್ಯೋಮ ಭೂಮ ನಮ್ಮ ಪ್ರೇಮರಂಗವು
ಅಲ್ಲಿ ಸುತ್ತು ಮುತ್ತು ಮುಳ್ಳು ನಡುವೆ ಒಲವು ಕುಸುಮವು;
ಅಲ್ಲಿ ನಾವು ಹೊರಳಿಯುರುಳಿ ನೆತ್ತರಲ್ಲಿ ನಾಂದರೂ,
ಹೂವಿನೊಂದು ಕಂಪೆ, ತಂಪೆ, ಸೊಂಪೆ ನಮ್ಮ ಆಸರು!

ಇಲ್ಲಿ ಪ್ರೇಮಕ್ಕೆ ಎಲ್ಲೆಕಟ್ಟಿಲ್ಲ. ಈ ಒಡಲು, ಕಡಲು, ವ್ಯೋಮ, ಭೂಮವೆಲ್ಲಾ ಇವರ ಪ್ರೇಮರಂಗವಾಗಿರುವದಾಗಿಯೂ ಅಲ್ಲಿ ತನ್ನ ಬದುಕು ಸದಾ ಹೋರಾಟದಿಂದ ಕೂಡಿರುವುದಾಗಿಯೂ ಕವಿತೆಯ ನಾಯಕ ಹೇಳುತ್ತಿದ್ದಾನೆ. ಕವಿತೆಯ ಕೊನೆಯ ಸಾಲುಗಳು ಕಳೆದುಹೋದ ತನ್ನ ಪ್ರೇಮವನ್ನು ನೆನಪಿಸಿಕೊಳ್ಳುವಂತಿವೆ. ಅದನ್ನು ಕನಸಿನ ಶಬ್ದವೆಂದು ಕರೆದಿರುವುದು ವಿಶೇಷವಾಗಿದೆ. ಆದರೂ ಇಲ್ಲಿ ಭಾವಗಳು ಸಮರ್ಪಕವಾಗಿ ಮೇಳೈಸಿಲ್ಲ. ತನ್ನ ಅಪಕ್ವ ಮನಃಸ್ಥಿತಿಯಲ್ಲಿ ರಚನೆಯಾದ ಅಸಫಲ ಪ್ರೇಮ ಕವಿತೆಗಳ ಮಧ್ಯೆಯೂ ಒಂದು ಪ್ರೇಮದ ಕವಿತೆ 'ಸಖಿ, ಬಾ' ಮೆಚ್ಚುವ ಹಾಗಿದೆ. ಇಲ್ಲಿ ಸಫಲ ಪ್ರೇಮದ ಕನಸುಗಾರಿಕೆಯನ್ನು ಕುರಿತು ಹಾಡಿದ್ದಾರೆ.

ತನ್ನ ಸಖಿಯನ್ನು ನಾಯಕ ನೆನಪಿನ ನಂದನವನಕ್ಕೆ ಆಹ್ವಾನಿಸಿದ್ದಾರೆ. ಶಾರೀರಿಕವಾದ ಈ ಪ್ರೀತಿ ಇಂದಿನದಲ್ಲ; ನೆಲವು ಕಳೆದರೂ ನಲುಗದ ಪ್ರೇಮ ಬಂಧನ ತಮ್ಮಿಬ್ಬರದು ಎಂದು ವ್ಯಾಖ್ಯಾನಿಸುತ್ತಿದ್ದಾರೆ. ಬರದೇ ಹೋದ ದಿನಗಳ ಮಣಿಯನ್ನು ಪೋಣಿಸುತ್ತ ಹೋಗುವ ಈ ಕವಿತೆಯ ಕೆಲವು ಸಾಲುಗಳು ಹೀಗಿವೆ:

ಅನಿಕೇತನ-೧೦೮

ಎದೆಯ ತೆರೆದು ಮೈ ತೆರೆದು ಬಾಳ ತೆರೆದಪ್ಪಿದ ದಿನಗಳನು,
ಸೋಂಕು ಸೋಂಕಿನಲಿ, ಮುತ್ತು ಮುತ್ತಿನಲಿ ಸೆಗಳಿದ ದಿನಗಳನು,
ಇಲ್ಲಿ ನೋಡು ಎದೆಯಲಿ; ನೋಡಿ ಹಾ, ಬಿಡು ನಿಟ್ಟುಸಿರೊಂದ;
ನಲವು ಕಳೆದರೂ ನಲುಗದು, ಹಾ ಪ್ರಿಯೆ, ನಮ್ಮ ಪ್ರೇಮಬಂಧ!

ಪ್ರೇಮ ಇಲ್ಲಿ ಸಫಲವಾಗಿಲ್ಲ. ಅಪ್ರಬುದ್ಧನ ಭಾವನೆಗಳನ್ನು ತೋರಿಸುವುದರಲ್ಲಿ ಕವಿತೆ ಸಫಲವಾಗಿದೆ. ಹೀಗೆ ಕಾಣಿಸಿರುವ ಹೊಸತಿನ ಹಂಬಲ, ಗೆಳೆತನದ ಹಂಬಲ, ಪ್ರೇಮದ ಹಂಬಲ, ಹದಿವಯಸ್ಸಿನಲ್ಲಿ ಹಾದು ಹೋಗುವ ಅಶರೀರ ಭಾವಗಳಾಗಿವೆ. ಈ ಭಾವನೆಗಳು ವಾಸ್ತವದ ನೆಲಗಟ್ಟಿಲ್ಲದ ಅಂತರ ಪಿಶಾಚಿಗಳ ಹಾಗಿವೆ. ಇವುಗಳಲ್ಲಿ ಅನಿಸಿಕೆಗಳಿವೆಯೇ ಹೊರತು ಅನುಭವವಿಲ್ಲ.

ಒಟ್ಟಾರೆಯಾಗಿ ಇಲ್ಲಿ ಹೆಣ್ಣಿನ ಬಗ್ಗೆ ಅಸಮಾಧಾನ ವ್ಯಕ್ತವಾಗಿದೆ. ಹೆಣ್ಣನ್ನು ಗೆಲ್ಲಲಾರದವನೊಬ್ಬ ಅವಳನ್ನು ಬೈದುಕೊಳ್ಳುತ್ತ ಒದ್ದಾಡುವುದನ್ನು ನೋಡಿದರೆ ಅವನಿಗೆ ವಾಸ್ತವದ ಹಿಡಿತ ಸಿಕ್ಕಿಲ್ಲವೆನ್ನುವುದು ಸ್ಪಷ್ಟವಾಗುತ್ತದೆ. 'ಭಾವ ತರಂಗ'ದ 'ಸಖಿ ಬಾ', 'ಪ್ರೀತಿ', 'ನನ್ನ ನಿನ್ನ ಬಳುವಳಿ'- ಮೊದಲಾದ ಕವಿತೆಗಳಲ್ಲಿ ಹೆಣ್ಣಿನ ಬಗ್ಗೆ ಮಾರ್ದವತೆ, ಕೋಮಲ ಭಾವಗಳು ಕಂಡುಬಂದರೆ, ನಂತರದ 'ನಡೆದು ಬಂದ ದಾರಿ' ಸಂಕಲನದ ಕವಿತೆಗಳ ಧೋರಣೆಯಲ್ಲಿ ಬದಲಾವಣೆ ಕಂಡು ಬಂದಿದೆ. ಈ ಸಂಕಲನ ೧೯೫೨ರಲ್ಲಿ ಪ್ರಕಟವಾದರೂ ಇದರಲ್ಲಿನ ಅನೇಕ ಕವನಗಳನ್ನು ೧೯೪೮ರಲ್ಲೇ ಅಡಿಗರು ಬರೆದಿದ್ದರು "ಈ ಸಂಕಲನದ ಮಧ್ಯಭಾಗದಲ್ಲಿ 'ಜೀವಸಖಿ' ಎಂಬ ಕವನದಿಂದ 'ಪರಿತಾಪ' ಎಂಬ ಕವನದವರೆಗೆ ಇರುವ ಪ್ರಣಯಕ್ಕೆ ಸಂಬಂಧಪಟ್ಟ ಕವನಗಳಲ್ಲಿ ಹೆಚ್ಚಿನವನ್ನು ಬರೆದದ್ದು ೧೯೪೮-೫೨ರ ಸುಮಾರಿನಲ್ಲಿ ಎಂಬುದನ್ನು ರಸಿಕರು ಗಮನಿಸಬೇಕು. ಅವುಗಳಲ್ಲಿ ಕಾಣಬಹುದಾದ ಅಪ್ರಬುದ್ಧ ಭಾವಾತಿರೇಕವನ್ನು ಆ ದೃಷ್ಟಿಯಿಂದ ವಿವೇಚಿಸಬೇಕು.' ಎನ್ನುವ ಮಾತುಗಳನ್ನು ಅಡಿಗರು ಮುನ್ನುಡಿಯಲ್ಲಿ ಹೇಳಿದ್ದಾರೆ.

ಹೆಣ್ಣು-೧ ಕವಿತೆಯಲ್ಲಿ

ನೂರು ಹೆಗ್ಗುಲಿಗಳನು ಹುಗಿದ ಹೆಗ್ಗೋರಿ ಇದು.
ಹೆಣ್ಣು ಜೀವದ ಆದಿ ಸಾವಿನಾದಿ
ಎಂದೂ,
ಎಂಥ ಕಣ್ಣು! ಕವಿತೆಯಲ್ಲಿ,
ಎಂಥ ಕಣ್ಣು ಎಂಥ ಕಣ್ಣು
ಎಂಥ ಕಣ್ಣು ನಿನ್ನದೆ!
ಅದರ ನೆನಹು ನಾಡಿನಲ್ಲಿ
ತಿರುಗುತಿಹುದು ನನ್ನದೆ!

-ತನ್ನ ನಲ್ಲೆಯ ಕಣ್ಣಿನ ಹೊಳಪು, ಅದರ ಕಳೆ, ಅದರ ಆಕರ್ಷಣೆಗೆ ಕವಿಮನಸ್ಸು ಸೋತಿದೆ. ಆ ಕಣ್ಣುಗಳನ್ನು ಹಿಮದ ಧವಳತೆಗೆ ಹೋಲಿಸಲಾಗಿದೆ. ಕಮಲ ಗರ್ಭದಲ್ಲಿರುವ ದುಂಬಿ ಮರಿಗಳಿಗೂ, ಅಮೃತದ ಹನಿಗಳಿಗೂ ಮತ್ತು ಹೊನ್ನಗಣಿಗೂ ಹೋಲಿಸಿರುವುದು ಕಣ್ಣಿನ ಅದ್ಭುತ ಚೆಲುವಿಗೆ ಸಾಕ್ಷಿಯಾಗಿದೆ. ಅಷ್ಟೇ ಅಲ್ಲ ಈ ಕವಿತೆಯ ನಾಯಕಿ ಸಂತೋಷವನ್ನು ಕೊಟ್ಟು ತೆಗೆದುಕೊಳ್ಳುವವಳು. ಇವಳು

ಭೋಗವಸ್ತುವಾಗಿ ಬರದೆ, ನಾಯಕನನ್ನು ಕೇವಲ ಅನುಸರಿಸುವವಳು. ಇಂಥ ಹೆಣ್ಣುಗಳನ್ನಲ್ಲವೆ ನಮ್ಮ ಕವಿಗಳು ಬಯಸಿದ್ದು? ಅಡಿಗರ ಇಂಥ ಆಲೋಚನೆಗೆ ೧೯೫೨ರಲ್ಲಿ ಒಂದು ಹೊಸ ಚೌಕಟ್ಟು ಬಂತು. ಆಗ ಹೊಸ ಹೊಸ ಪ್ರಯೋಗಗಳನ್ನು ಕಾವ್ಯದಲ್ಲಿ ತಂದರು. ಅದಕ್ಕಿಂತ ಮೊದಲು ದೇಶ ಮುಖ್ಯವಾಗಿತ್ತೇ ಹೊರತು, ಸ್ವಸಂತೋಷ ಮುಖ್ಯ ಅನಿಸಲಿಲ್ಲ. ಹಾಗೆ ಅನ್ನಿಸುವ ಹೊತ್ತಿಗೆ ಕಾಲ ಮಿಂಚಿ ಹೋಗಿತ್ತು. ಅನಂತರ ಅಡಿಗರು ಅದರ ಬಗ್ಗೆ ಪಶ್ಚಾತ್ತಾಪವನ್ನೂ ಪಟ್ಟರು. ಒಂದೆರಡು ಕೌಟುಂಬಿಕ ಗೀತೆಗಳನ್ನು ರಚಿಸಿದರು. ಆದರೆ ಬೇಂದ್ರೆಯವರು ಕರುಳಿನ ವಚನದ ಜೊತೆಗೆ ಬಿಸಿಲುಗುದುರೆ, ನಾನು ಬಡವಿ, ಪೋರಿ-ಪೊರ ಮೊದಲಾದ ಪ್ರೇಮ ಗೀತೆಗಳನ್ನು ಬರೆಯುವುದರ ಜೊತೆಗೆ ಕನ್ನಡ ಸಾಹಿತ್ಯ ಲೋಕ ಸದಾ ಸ್ಮರಿಸುವ 'ಮನದನ್ನೆ'ಯಂಥ ಗೀತೆಯನ್ನೂ ಬರೆದರು. ಬೇಂದ್ರೆಯವರ 'ಮನದನ್ನೆ'ಗೆ ಸರಿಸಾಟಿಯಾಗಿ ನಿಲ್ಲಬಲ್ಲ ಅಡಿಗರ ಕೌಟುಂಬಿಕ ರಚನೆಗಳೆಂದರೆ 'ಬಾ ಇತ್ತ ಇತ್ತ ಇನ್ನೂ ಇತ್ತ' ಮತ್ತು "ಮೌನದ ಸುವರ್ಣಪುತ್ಥಳಿ' ಎನ್ನುವ ಕವಿತೆಗಳು. ಈ ಎರಡೂ ಕವಿತೆಗಳಲ್ಲಿ ಅಡಿಗರು ಸ್ತ್ರೀವಾದವನ್ನು ಪ್ರತಿಪಾದಿಸುತ್ತಾರೆ. ಸ್ತ್ರೀಯರ ಪರವಾಗಿ ಈ ಮುಂಚೆ ಉಲ್ಲೇಖಿಸಿದ ಯಾವ ಕವಿತೆಯಲ್ಲೂ ಅಡಿಗರು ನಿಲ್ಲುವುದಿಲ್ಲ. ಬದಲಾಗಿ ಸ್ತ್ರೀಯನ್ನು ಪ್ರಾರಂಭಿಕ ಹಂತದಲ್ಲಿ ಹೇಗೆ ಕಂಡಿದ್ದರು, ನಂತರ ಅವರ ದೃಷ್ಟಿಕೋನ ಬದಲಾಗಲು ಕಾರಣವೇನು? ಎನ್ನುವುದನ್ನು ಶೋಧಿಸುವುದು ನನ್ನ ಉದ್ದೇಶವಾಗಿದೆ.

ಕೌಟುಂಬಿಕ ಪ್ರಪಂಚ ಒಂದು ಆಪ್ತ ಪ್ರಪಂಚ. ಆತ್ಮೀಯ ಪ್ರಪಂಚ. ಒಂದು ರೀತಿಯಲ್ಲಿ ಖಾಸಗಿ ಪ್ರಪಂಚ. ಇನ್ನೊಂದು ರೀತಿಯಲ್ಲಿ ಸಮಾಜದ ಒಂದು ಭಾಗವಾದ ಪ್ರಪಂಚ. ಈ ಸಲಿಗೆಯು ಒಂದು ರೀತಿಯಲ್ಲಿ ಅತ್ಯಂತ ಗಾಢ ಭಾವನೆಗಳ ಅನುಭವದ ಲೋಕದ ಬಗ್ಗೆ ಯಾವ ಕವಿಗೂ ಬರೆಯುವುದು ಕಷ್ಟ. ಆದರೆ ನವೋದಯದ ಮತ್ತು ನಂತರ ಬಂದ ಯಾವ ದೊಡ್ಡ ಕವಿಯೂ ಅದರ ಬಗ್ಗೆ ಬರೆಯದೇ ಇರಲಾರ. ಈ ಆಪ್ತ ಪ್ರಪಂಚದ ವಾಸ್ತವದ ಬಗ್ಗೆ ಅಡಿಗರಿಗೆ ಹಿಡಿತ ಸಿಕ್ಕುವ ಹೊತ್ತಿಗೆ ಸಮಾಜದ ಮತ್ತು ದೇಶದ ಸಮಸ್ಯೆಗಳನ್ನು ಕಾವ್ಯಾತ್ಮಕವಾಗಿ ಎದುರಿಸುವುದು ಮುಖ್ಯವಾದದ್ದಾಗಿ ಕಂಡು ಬಂದದ್ದರಿಂದ ಅಡಿಗರು ಕೌಟುಂಬಿಕ ಕಾವ್ಯ ರಚನೆಯನ್ನು ಬದಿಗಿಟ್ಟರು.

ತಮ್ಮ ಆಪ್ತ ಕೌಟುಂಬಿಕ ಪ್ರಪಂಚವನ್ನು ಕಾವ್ಯದಿಂದ ಹೊರಗಿಟ್ಟಿದ್ದರ ಬಗ್ಗೆ ಅಡಿಗರಿಗೆ ಆಮೇಲೆ ಪಶ್ಚಾತ್ತಾಪವಾಯಿತು. ಹಾಗೆ ಬರೆಯದೆ ಇದ್ದದ್ದು ಒಂದು ರೀತಿಯಲ್ಲಿ ಅವರ ಕಾವ್ಯದಲ್ಲಿ ಕೊರತೆಯೂ ಆಗಿತ್ತು. ಅದನ್ನು ತುಂಬಿಕೊಳ್ಳುವ ಹಾಗೆ ಅಡಿಗರು ಕೌಟುಂಬಿಕ ಭಾವಲೋಕದ ಕಡೆಗೆ ಕಣ್ಣುಹಾಯಿಸಿದರು. ಇದರ ಫಲವಾಗಿ ಬಂದ ಎರಡು ಕವಿತೆಗಳನ್ನು ಇಲ್ಲಿ ಗಮನಿಸಲಾಗಿದೆ. 'ಸುವರ್ಣಮುತ್ಥಳಿ' ೧೯೯೦ರಲ್ಲಿ ಪ್ರಕಟವಾಯಿತು. ಇದರಲ್ಲಿ ಬರುವ 'ಮೌನದ ಸುವರ್ಣ ಪುತ್ಥಳಿ' ಅಡಿಗರು ತಮ್ಮ ಹೆಂಡತಿಯನ್ನು ಕುರಿತು ಬರೆದದ್ದು.

'ಸುವರ್ಣ ಪುತ್ಥಳಿ' ಕವಿತೆಯಲ್ಲಿ 'ಬತ್ತೀಸ ಪುತ್ಥಳಿ' ಕಥೆಗೆ ಸಂಬಂಧಿಸಿದ ಪ್ರತಿಮೆಯೊಂದನ್ನು ಅಡಿಗರು ಉಪಯೋಗಿಸುತ್ತಾರೆ. ವಿಕ್ರಮಾದಿತ್ಯರಾಜನ ಸಿಂಹಾಸನದ ಎರಡು ಬದಿಗಳಲ್ಲಿ ೩೨ ಗೊಂಬೆಗಳು ಇದ್ದುವಂತೆ. ಆ ಗೊಂಬೆಗಳಿಗೆ ಜೀವ ಬಂದು

ಅವು ೩೨ ಕಥೆಗಳನ್ನು ಹೇಳಿದುವಂತೆ. ಅಡಿಗರು ತಮ್ಮ ಹೆಂಡತಿಯನ್ನು ೩೩ನೆಯ ಮತ್ತು ಕಥೆಯನ್ನು ಹೇಳದ ಸುವರ್ಣ ಪುತ್ಥಳಿ ಎಂದು ಕರೆಯುತ್ತಾರೆ.

ಅಡಿಗರು ಮದುವೆಯಾದದ್ದು ೮-೧೨-೧೯೪೪ರಲ್ಲಿ, 'ಸುವರ್ಣ ಪುತ್ಥಳಿ' ಕವಿತೆಯನ್ನು ಬರೆದದ್ದು ೧೦-೭-೧೯೮೮ರಲ್ಲಿ. ಅಷ್ಟು ಹೊತ್ತಿಗೆ ಅಡಿಗರಿಗೆ ೧೯೮೬ರಲ್ಲಿ ಪಾರ್ಶ್ವವಾಯು ಬಡಿದಿತ್ತು. ಮದುವೆಯಾಗಿ ಸುಮಾರು ೪೪ ವರ್ಷ ಜೊತೆಗಿದ್ದರೂ ಈ ಕವಿತೆಯಲ್ಲಿ ಕಾಣಿಸುವ ಹೆಂಡತಿ ಮೌನದ ಸುವರ್ಣ ಪುತ್ಥಳಿಯಾಗಿ, ಬಾಯಿರದ ಬಾಳನ್ನು ಬದುಕುತ್ತಾ ಮುದ್ರೆಗಳ ಭಾಷೆಯಲ್ಲೇ ಅಭಿವ್ಯಕ್ತಿಸುತ್ತಾ ಇದ್ದದ್ದು ಏಕೆ ಎಂದು ಕವಿ ಪ್ರಶ್ನಿಸುತ್ತಾರೆ. ತಾಳಿಭಾಗ್ಯಕ್ಕಿಷ್ಟು ಬೆಲೆಯೆ? ಏತಕ್ಕಾಗಿ ಇಷ್ಟು ತೆತ್ತೆ? ಎನ್ನುವ ಪ್ರಶ್ನೆಯನ್ನು ಈ ಕವಿತೆಯ ನಿವೇದಕ ಕೇಳುತ್ತಾನೆ. 'ಮನೆಯ ನಂದನ ಮಾಡಿ ಮರೆನಿಂತ ಸುರಸುರಭಿಯೇ ನಿನ್ನೀ ನಿರಂತರ ಶ್ರಮಕ್ಕೇನು ಸಂಭಾವನೆ? ಅಂತ ಜೀವ ಸಂವಾದದ ಮಾತುಗಳನ್ನಾಡುತ್ತಾನೆ. 'ನೀನು ನಿನ್ನೆದೆಯ ಕಥೆಯನ್ನೇತಕ್ಕಿಂತು ತಡೆದುಕೊಂಡೆ?' ಎಂದು ಹೆಂಗರುಳಿನಿಂದ ಪ್ರಶ್ನಿಸುತ್ತಾನೆ. ಈ ಕಠೋರ ವ್ರತ ಯಾವಾಗ ನಿಲ್ಲುತ್ತದೆ? ಎಂದು ಕವಿತೆಯ ನಿವೇದಕ ತನ್ನ ಹೆಂಡತಿಯನ್ನು ಕೇಳುತ್ತಾನೆ. ಈ ಪ್ರಶ್ನಿಸುವ ಮನೋಭಾವದ ಹಿಂದೆ ಸ್ತ್ರೀವಾದಿ ಮನಸ್ಸೊಂದು ಸಕ್ರಿಯವಾಗಿ ಭಾಗಿಯಾಗಿದೆ.

ಇದೇ ರೀತಿಯ ಮೌನವಹಿಸಿದ್ದ ಪತ್ನಿಯ ಚಿತ್ರ 'ಬಾ ಇತ್ತ ಇತ್ತ ಇನ್ನೂ ಇತ್ತ' ಎನ್ನುವ ಕವಿತೆಯಲ್ಲೂ 'ಮೂಕವಾಗಿಯೆ ಕಳೆದುವೆಷ್ಟೊಂದು ದಿನ ವರ್ಷಗಳು!' ಎನ್ನುವ ಸಾಲಿನಲ್ಲಿ ಕಂಡುಬರುತ್ತದೆ. ಇದೇ ಕವಿತೆಯಲ್ಲಿ ಆಕೆಯನ್ನು ಮೂಕಪಿಕ ಎಂದೂ ಕರೆಯುತ್ತಾರೆ. ಮೌನದ ಸುವರ್ಣ ಪುತ್ಥಳಿ ಕವಿತೆಯ ನಿವೇದಕ ತನ್ನ ಪತ್ನಿಯ ಹೊರರೂಪಕ್ಕೆ ಮರುಳಾಗಿ ಅಂತರಂಗದ ಒಳಚೆಲುವಿಗೆ ಅಷ್ಟುಗಮನ ಕೊಡಲಿಲ್ಲ ಎಂದು ಪರಿತಪಿಸುತ್ತಾನೆ. ನಲ್ಲೆಯಾಗಿ ಬಂದ ಆಕೆ ಈಗ ನಿವೇದಕನಿಗೆ ದೇವಿಯಾಗಿ, ವಾತ್ಸಲ್ಯಮಯಿ ತಾಯಿಯಾಗಿ, ಸ್ನಾನಮಾಡಿಸಿ, ಊಟಮಾಡಿಸಿ, ಊರುಗೋಲಾಗಿ ನಡೆಸುವ ಬದುಕಿನ ರೀತಿಯನ್ನು ಕರ್ಮಯೋಗ ಎಂದು ಕರೆಯುತ್ತಾನೆ. ಆಕೆಯ ಬದುಕು ಒಂದು ಪ್ರೌಢಕಾವ್ಯ ಎಂದು ನಿವೇದಕನಿಗೆ ಅನಿಸುತ್ತದೆ. ಆ ಪ್ರೌಢಕಾವ್ಯದ ಲಕ್ಷಣವನ್ನು ಈ ಸಾಲುಗಳು ಹೇಳುತ್ತವೆ:

> ವಾಚ್ಯದ ಅವಾಚ್ಯ ಪಥದಾಚೆ ಸಂಕೀರ್ಣ
> ಸಂಕೇತಗಳ ಸೂಚ್ಯತೆಗೆ ಬದ್ಧ ಮುಗ್ಧೆ;
> ಕೃತಿಯ ಕೃತಕೃತ್ಯತೆಯ ಬಿಟ್ಟು ಆದರ್ಶವೊಸರುವ ಭಾರಿ
> ಭಾಷಣದ ಸುಲಭೋಪಾಯ ನಿನ್ನದಲ್ಲ.
> ಎರಡು ಮಾತುಗಳಲ್ಲಿ ನೂರೊಂದು ಧ್ವನಿ ಮೊಳಗಿಸುವ
> ಪ್ರೌಢಕಾವ್ಯದ ರೀತಿ ನಿನ್ನ ನೀತಿ.

ಕವಿತೆಯ ಇಂಥ ಸಾಲುಗಳಲ್ಲಿ ಮಾರ್ಮಿಕತೆ ಮತ್ತು ಸೂಚ್ಯತ್ವಗಳನ್ನು ಉಳಿಸಿಕೊಂಡ ಅಡಿಗರು ನೇರವಾಗಿ ಗೃಹಸ್ಥಧರ್ಮವನ್ನು ತರಾಟೆಗೆ ತೆಗೆದುಕೊಳ್ಳುತ್ತಾರೆ. ಅದು 'ಕೃತಿಯ ಕೃತಕೃತ್ಯತೆ' ಎನ್ನುವ ಪದದಲ್ಲಿ ಹುದುಗಿದೆ. ಇಂಥ ನೇರ ನಡೆ ನುಡಿಯಲ್ಲೇ ಕವಿಯ authenticity ಯ ಬಗ್ಗೆ ನಮಗೆ ಸಾಕ್ಷ್ಯಗಳು ಸಿಕ್ಕುತ್ತವೆ. ಇಂಥಲ್ಲಿಯೇ ಅಡಿಗರು ಸ್ತ್ರೀಪರವಾಗಿ ನಿಲ್ಲುತ್ತಾರೆ.

'ಬಾ ಇತ್ತ ಇತ್ತ' - ಕವಿತೆಯ ನಿವೇದಕ ಮೌನದ ಸುವರ್ಣ ಪುತ್ಥಳಿಯ ನಿವೇದಕನೇ ಆಗಿದ್ದಾನೆ. ಅವನು ತಮ್ಮಿಬ್ಬರ ನಡುವಿನ ಮೌನಕ್ಕೆ ತಾನೇ ಕಾರಣ ಎಂದು ಒಪ್ಪಿಕೊಳ್ಳುತ್ತಾನೆ. ತಪ್ಪು ನನ್ನದೆ, ತಪ್ಪುವಾಗ ತಿಳಿಯಲಿಲ್ಲ ಎಂದು ಪಶ್ಚಾತ್ತಾಪವನ್ನೂ ಪಡುತ್ತಾನೆ.

ನೀನು ನನ್ನವಳಾಗಿ ಬಂದಾಗ ಮುಗ್ಧ ಕಿಶೋರಿ;
ನಾನೊ ಪ್ರೌಢವಿದಗ್ಧ, ಅಧ್ಯಾಪಕ ವರಾಕ;
ಆಗ ನಿನಗೆ ನಿನ್ನಂತರಂಗದ ಎಲ್ಲ ತುಡಿತಕ್ಕು
ರಕ್ಷಾಕವಚ ಲಜ್ಜೆ, ಸಂಕೋಚ, ಹಿಂಜರಿಕೆ;
ಆಗ ಹತ್ತಿರ ಕರೆದು ಬರಸೆಳೆದು ಮನವೊಲಿಸಿ,
ಮೂಕಪಿಕ ಕುಕಿಲುವೊಲು ಮಾಡಬೇಕಿತ್ತು, ಹಾಗೆ
ಮಾಡದೇ ಇದ್ದದ್ದು ಮೊದಲ ಭಾರಿ ತಪ್ಪು.

ಈ ರೀತಿಯ ತಪ್ಪಿನಿಂದ ನಿವೇದಕನಿಗೆ ಮನೋವ್ಯಥೆಯಾಗಿದೆ. ಅದರಿಂದ ಕೊರಗುತ್ತಾನೆ. ಹೆಂಡತಿಯ ಕ್ಷಮೆಕೇಳುತ್ತಾ ಈ ಭವಕ್ಕೆ ವಿದಾಯ ಹೇಳಲಿಕ್ಕೆ ಸಿದ್ಧನಾಗಿದ್ದಾನೆ. ಎರಡೂ ಕವಿತೆಗಳಲ್ಲಿರುವ ಹೆಂಡತಿಯ ಮೌನ ಧ್ವನಿಪೂರ್ಣವಾಗಿದೆ. ಇವು ಒಂದು ರೀತಿಯ ಕ್ಲೇಶದಾಯಕ ದಾಂಪತ್ಯದ ಚಿತ್ರಣಗಳಾಗಿವೆ. ಈ ಅಸಫಲತೆಗೆ ಕಾರಣಗಳನ್ನು ನಿವೇದಕ ಯೋಚಿಸಿದ್ದಾನೆ. ಅವಳು ತಾಳಿಭಾಗ್ಯಕ್ಕೆ ಇಷ್ಟು ದೊಡ್ಡ ಬೆಲೆಯನ್ನು ತೆರಬೇಕಾಯಿತೆ ಎಂದು ಇಡೀ ಮದುವೆಯ ವ್ಯವಸ್ಥೆಯನ್ನು ಪ್ರಶ್ನಿಸುತ್ತಾನೆ.

ಇಂಥ ಪ್ರಾಮಾಣಿಕ ಅಭಿವ್ಯಕ್ತಿ ನವ್ಯಕವಿಗಳಲ್ಲಿ ಅಡಿಗರಿಗೆ ಮಾತ್ರ ಸಾಧ್ಯವಾಯಿತು, ಆತ್ಮ ನಿವೇದನೆಯ ಕವಿತೆಗಳ ಸಾಲಿನಲ್ಲಿ ನಿಲ್ಲಬಲ್ಲ ಶ್ರೇಷ್ಠ ರಚನೆಗಳು ಇವಾಗಿದ್ದು, ನವೋದಯದ ಎಲ್ಲ ಶ್ರೇಷ್ಠ ಕವಿಗಳ ಜೊತೆಗೂ ಹೆಗಲೆಣೆಯಾಗಿ ನಿಲ್ಲಲು ಅಡಿಗರು ಸಮರ್ಥರಾದರು. ಅವರ ಮಾತೃಹೃದಯ ಇತರ ಎಲ್ಲ ನೊಂದ ಹೆಣ್ಣುಗಳ ಹೃದಯದೊಡನೆ ಸಂವಾದಕ್ಕಾಗಿ, ಸಾಂತ್ವನಕ್ಕಾಗಿ ಹಾತೊರೆದದ್ದು ಅವರ ಸಾಕ್ಷಿಪ್ರಜ್ಞೆಯನ್ನು ತೋರಿಸುತ್ತದೆ.

✧✧

ಡಾ. ಅಣ್ಣಮ್ಮ ಕನ್ನಡ ಅಧ್ಯಾಪಕಿ, ಸರ್ಕಾರಿ ಕಲಾ ಕಾಲೇಜ್ ಬೆಂಗಳೂರು-೧.

ಬಂಗಾರದ ಪಂಜರ

ಕುಸುಮ ನಕೋಸಾಕರಾಳೆ

ತಂಗಳ ಕನಸುಗಳೆಂದು
ಹಂಗಿಸ ಬೇಡವೋ ಹುಡುಗಾ !
ಅನುಭವದ ಬುತ್ತಿಯ ಬಿಚ್ಚಿ
ಮೆಚ್ಚಿ ಮೆಲ್ಲಗೆ ಮೆಲ್ಲುವ ನನಗೆ
ನಿನ್ನ ಹಂಗಿನ ಹಾಲೋಗರ ಬೇಕಿಲ್ಲ !

ಬಾಳನದಿಯ ಪ್ರವಾಹದಿ ಈಸುತ್ತ
ಸುಳಿಯ–ಸೆಳೆವುಗಳ ದಾ ಟಿ
ಛಲದಿ–ತೋಳ್ಬಲದಿ ದಡದತ್ತ
ಸಾಗಿರುವ ನಾನೆಂ ದೂ ನಿನ್ನ
ಆಸರೆಯನರಸಿಲ್ಲ–ರಕ್ಷಣೆಯ
ಬಯಸಿಲ್ಲ!

ಭೂಮಿ–ಹೇಮಗಳ ಬಲೆಯನ್ನೊಡ್ಡಿ
ಹಿಡಿಯುವ ಛಲವೇತಕೊ
ನಿನಿಕ್ಕಿದ ಮುತ್ತಿನ ಕಾಳುಗಳ
ಹೆಕ್ಕುವವಳು ನಾನಲ್ಲ.

ಬಾನಂಗಳದಿ ಹಾಯಾಗಿ ಹಾರುವ
ಹಕ್ಕಿಗೆ ಬಂಗಾರದ ಪಂಜರದಿ
ಬಂದಿಯಾಗುವ ಬಯಕೆ ಇಲ್ಲ!
ಗೆಳೆಯಾ,ನಿನ್ನ ಹಂಗು ನನಗೆ ಸಲ್ಲ!!.

ಎಲ್ಲದಕ್ಕೂ ಒಂದೇ ಅಂತ್ಯ!

ಎಲೆ ಮನಸೇ,
ಪ್ರೀತಿಯಲ್ಲಿ ನಿನ್ನ ಪಾಲಿಲ್ಲ
ಅದಕ್ಕೆಂದು ದು:ಖಿಸ ಬೇಕಿಲ್ಲ
ನಗುವವರು-ನೊಂದವರು
ಪ್ರೀತಿ ಪಡೆದವರು-ಪಡೆಯದವರೂ
ಎಲ್ಲರಿಗೂ ಒಂದೇ ಅಂತ್ಯ!

ಏಕಾಂತ ಕೋಣೆಯಲ್ಲಿ
ಮಣ್ಣಿನ ಮೃದುವಾದ ಹಾಸಿಗೆಯಲ್ಲಿ
ಹಾಯಾಗಿ-ಮೌನವಾಗಿ ಮಲಗಬೇಕು
ತಕರಾರಿಲ್ಲದೆ ಚಿರನಿದ್ರೆಗೈಯಬೇಕು
ಮಣ್ಣಲ್ಲಿ ಮಣ್ಣಾಗಿ ಬೆರೆಯಬೇಕು.

ಆಗಸದೆತ್ತರಕೆ ಹಾರುವ ಹದ್ದು
ಬೆರೆಯಬೇಕು ಮಣ್ಣಲ್ಲಿ ಬಿದ್ದು
ಇದು ನಿಸರ್ಗ ನಿಯಮ!
ಹೀಗಿರುವಾಗ ನೀ ವಿಷಾಧಿಸಲೇಕೆ?
ವೃಥಾ ಕಣ್ಣೀರ ಸುರಿಸಲೇಕೇ?

ಅನಿಕೇತನ-೧೧೪

ನಿನ್ನ ಸ್ಥಿತಿಗಾಗಿ ಮರುಗಬೇಕಿಲ್ಲ
ದಕ್ಕದ ಪ್ರೀತಿಗಾಗಿ ದು:ಖಿಸಬೇಕಿಲ್ಲ
ಅನಾಥವೆಂದು ನೀ ಕೊರಗ ಬೇಕಿಲ್ಲ
ಯಾಕೆಂದರೆ-ಈ ಮಣ್ಣಿಗೆ ನಿಸರ್ಗದ
ಸ್ಪರ್ಶಕ್ಕಿಲ್ಲ ಪಕ್ಷಪಾತ.

◆◆

ಪ್ರೊ. ಕುಸುಮ ನಕೋಸಾ ಕರಾಳೆ, ನಕೋಸಾ, ೧ನೇ ಮೇನ್, ಶ್ರೀನಗರ, ಧಾರವಾಡ-
೫೮೦ ೦೦೩.

ಭೀತಿಯಿಂದ ಬುದ್ಧನೆಡೆಗೆ

ಡಾ. ಆರ್.ಜಿ. ಮಠಪತಿ(ರಾಗಂ)

"ಒಂದು ಸಾವಿರ ವರ್ಷಗಳ ತನ್ನ ಜೀವನಾನುಭವದ ನಂತರವೂ ಒಬ್ಬ ಪಾಶ್ಚಾತ್ಯನಿಗೆ, ಪೌರ್ವಾತ್ಯರನ್ನು ಅರ್ಥೈಸಿಕೊಳ್ಳುವುದು ಅಸಾಧ್ಯವಾದೀತು".

"ಇವರು ನನ್ನ ಆತ್ಮದ ಹಸಿವಾಗಿದ್ದಾರೆ, ಯಾಕೆಂದರೆ ಇವರ ಶಿಷ್ಯಂದಿರಂತೆ ನಾನು ಇವರನ್ನು 'ಅವಧೂತರು' ಎಂದು ಪೂಜಿಸಿಲ್ಲ ಬದಲಾಗಿ ಒಬ್ಬ ಕರುಣಾ ಸ್ವರೂಪಿ ಮನುಷ್ಯನಾಗಿ ಕಂಡಿದ್ದೇನೆ. ಜಗತ್ತಿನ ಯಾವುದೇ ಸಾಧಕನಿಗಿಂತಲೂ ಭಗವಂತನೆಂಬ ಮಹಾಶ್ರೋತದ ಒಳ ವಿಧಾನವನ್ನು ಚೆನ್ನಾಗಿ ಅರಿತು, ಮತ್ತೆ ಅದನ್ನು ಸಾವಿರ ತೊರೆಗಳ ರೂಪದಲ್ಲಿ ಹರಿಬಿಟ್ಟವರು ಇವರು. ಇವರ ಪವಿತ್ರ ಜೀವನ ಗಂಗೆಯಿಂದ ಲೋಕೋದ್ಧಾರಕ್ಕಾಗಿ ಒಂದು ಬೊಗಸೆಯುಷ್ಟನ್ನು ಮಾತ್ರ ತೆಗೆದುಕೊಳ್ಳುವುದಾಗಿದೆ."

ಈ ದೇಶದ ಆಧ್ಯಾತ್ಮಿಕ, ಉನ್ನತಿಯನ್ನು ಹಾಗೂ ಶ್ರೀರಾಮಕೃಷ್ಣ ಪರಮಹಂಸರ ಸಾಧನೆಯನ್ನು ಕುರಿತು ಫ್ರಾನ್ಸದ ರೋಮಾನ್ ರೋಲಾ ವಿನೀತನಾಗಿ ಆಡಿದ ಈ ಮೇಲಿನ ಎರಡೂ ಮಾತುಗಳಿಗೆ ಇವತ್ತಿಗೆ ಎಂಬತ್ತು ವರ್ಷಗಳ ಮುಪ್ಪು. ಈ ಹೇಳಿಕೆಗಳಿಗೆ ಸರಿಯಾಗಿ ಮೂವತ್ತು ವರ್ಷಗಳ ನಂತರ ಜರ್ಮನ್ ದೇಶದ ಶ್ರೇಷ್ಠ ಚಿಂತಕ, ಕಾದಂಬರಿಕಾರ ಹೆರ್ಮನ್ ಹೆಸ್ ಬುದ್ಧನನ್ನು ಬೆಳೆಸಿದ ಹಾಗೂ ಬೌದ್ಧ ಧರ್ಮ ಪಲಾಯನದ ದಾರಿ ತುಳಿಯುವಂತೆ ಮಾಡಿದ ಈ ದೇಶವನ್ನು ಕುರಿತು ಈ ಮೇಲಿನಂತವೇ ಮಾತುಗಳನ್ನು ಹೇಳಿದ ಎಂಬುದು ಹೆಗ್ಗಳಿಕೆಯ ಅಥವಾ ಅಹಂಕಾರದ ಮಾತಾಗದು. ಅದು ಒಂದು ದೇಶದ, ಸಂಸ್ಕೃತಿಯ ವಿಕಸನದ, ಮೂಲ ಸೆಲೆಯನ್ನು ಗುರುತಿಸುವಿಕೆ ಅಷ್ಟೆ. ತತ್ತ್ವ, ಸಿದ್ಧಾಂತಗಳು ಹಾಗೂ ಸಾಹಿತ್ಯ ಒಂದು

ಸಂದರ್ಭ ಹಾಗೂ ಒಬ್ಬ ಬರಹಗಾರನ ವೈಯಕ್ತಿಕ ಆಸಕ್ತಿ ಹಾಗೂ ಅದನ್ನು ಅಭಿವ್ಯಕ್ತಿಸುವ ಶೈಲಿಯನ್ನು ಬಹುಪಾಲು ನಿರ್ಧರಿಸಿದೆ. ಬಾಹ್ಯವನ್ನು ಮೋಹರಿಂದ ಮಿಗಿಲಾಗಿ, ನಿರ್ಲಿಪ್ತವಾಗಿ, ಸ್ವೀಕರಿಸುತ್ತ ಆತ್ಮೋನ್ನತಿಯನ್ನೇ ಬದುಕಿನ ಅಂತಿಮ ಗುರಿಯಾಗಿಸಿಕೊಂಡ ಪೂರ್ವದ ಸಂಸ್ಕೃತಿ ರೋಮಾನ ರೋಲಾನಿಗೂ ಮುಂಚೆ ಹೆರ್ಮನ್ ಹೆಸ್‌ನಿಗೂ ನಂತರದ ಪಾಶ್ಚಾತ್ಯರಿಗೆ ಅಚ್ಚರಿಯ ಹಾಗೂ ಅಧ್ಯಯನದ ವಿಷಯವಾಯಿತು ಎನ್ನುವುದು ಆತ್ಮ ಗೌರವ ಮಾತಷ್ಟೆ. ಇವರಿಬ್ಬರಿಗೂ ಮುಂಚೆ Michelet ಎಂಬಾತ ಆಡಿರುವ ಈ ಮಾತುಗಳಂತೂ ಇನ್ನು ಅದ್ಭುತ "The west is too narrow. Greece is small: I stifle there. Judea is dry: I pant there. Let me look towards Asia and the profound East for a little while. There lies my great poem, as vast as the Indian ocean, blessed, gilded, with the sun, the book of divine harmony where in is no dissonance. A serene peace reigns there. and in the midst of conflict an infinite. a boundless fraternity, which spreads over all living, an ocean of love, of pity, of clemency, I have found the object of my search. The Bible of Kindness"

ಆ ನಂತರದಲ್ಲಿ ಮ್ಯಾಕ್ಸ ಮುಲ್ಲ‌ರನ ಭಾರತ ಕುರಿತಾದ ಅಭಿಪ್ರಾಯಗಳು ಇವುಗಳ ಪುನರಾವರ್ತನೆಯಷ್ಟೆ ಇಷ್ಟಾಗಿಯೂ ಹೆರ್ಮನ್ ಹೆಸ್ ಈ ಚಿಂತನಾಕ್ರಮದ ಪರಂಪರೆಯಿಂದ ಹೊರಗುಳಿಯುತ್ತಾನೆ. ಎನ್ನಲು ಅನೇಕ ಸ್ಪಷ್ಟನೆಗಳನ್ನು ನೀಡಬಹುದು. ಹಸಿಹಸಿಯಾದ ಮನುಷ್ಯನನ್ನು ಅರ್ಥೈಸಿಕೊಳ್ಳಲು ಹೊರಟ ಹೆರ್ಮನ್ ಹೆಸ್‌ನಿಗೆ ಪೂರ್ವದ ಚೈನಾ ಹಾಗೂ ಭಾರತದಂಥ ರಾಷ್ಟ್ರಗಳಲ್ಲಿಯ ಇಹ-ಪರಗಳ ಚಿಂತನೆ, ಮಾಯೆ-ಮೋಕ್ಷದ ಮಾತುಗಳು, ಜಡ-ಜಂಗಮದ ವಿಚಾರಗಳು, ಭೌತಿಕ-ನಿರ್ವಾಣದ ತುಡಿತಗಳು ಆಕರ್ಷಣೀಯ ಎನ್ನಿಸುವುದು, ಆತನ ತೀರ ವೈಯಕ್ತಿಕ ಕಾರಣಗಳಿಗಾಗಿ ತನ್ನೊಳಗೇ ಘಾಸಿಗೊಂಡಿದ್ದ ಹೆರ್ಮನ್ ಹೆಸ್ ತನ್ನ ಆತ್ಮದೊಳಗೆ ಬಿರುಗಾಳಿ ಎಬ್ಬಿಸಿದ, ತನ್ನನ್ನು ತಲ್ಲಣಗೊಳಿಸಿದ, ಕಾಡಿಸಿದ, ಪೀಡಿಸಿದ ಸಾಮಾನ್ಯ ಪ್ರಶ್ನೆಗಳಿಗೆ ಉತ್ತರ ಹುಡುಕುತ್ತ ಹೊರಟು ಆಲೋಚನಾಕ್ರಮಕ್ಕೆ ಹತ್ತಿರವಾದವನು, ಒಂದು ಹಂತದಲ್ಲಿ ಅದನ್ನು ಒಪ್ಪಿಕೊಂಡವನು.

೧೮೭೭ರಲ್ಲಿ ಜರ್ಮನಿಯ 'ಕಾಲ್ವ'ದಲ್ಲಿ ಜನಿಸಿದ ಹೆಸ್ ಮೂಲತಃ ಕ್ರೈಸ್ತ ಧರ್ಮ ಪ್ರಸಾರಕ್ಕಾಗಿಯೇ ಸ್ಥಾಪಿತವಾದ ಶಾಲೆಗಳಲ್ಲಿಯೇ ಶಿಕ್ಷಣ ಪ್ರಾರಂಭಿಸಿದ. ಮುಂದೆ ಧರ್ಮ ಪ್ರಸಾರಕನಾಗುವುದೇ ಆತನ ಹಣೆಬರಹವಾಗಿತ್ತು. ಆದರೆ ಸಮಕಾಲೀನ ಧಾರ್ಮಿಕ ನಂಬುಗೆಗಳನ್ನು ಪ್ರಶ್ನಿಸಿ ಜನರಿಂದ ಬಂಡುಕೋರನ್ನೆಸಿಕೊಂಡ ಹೆಸ್ ೧೮೯೨ರಲ್ಲಿ ಮೆಲ್ಬೋರ್ನ್‌ದಿಂದ ಪಲಾಯನ ಮಾಡಬೇಕಾಯಿತು. ಶಿಕ್ಷಣದ ಅವಧಿಯಲ್ಲಿ ಹೈಸ್ಕೂಲಿನಿಂದ ಉಚ್ಚಾಟನೆಗೊಂಡು ಆತ್ಮಹತ್ಯಗೆ ಪ್ರಯತ್ನಿಸಿದ. ಬೇಡಿಕೊಂಡ ಸಾವೂ ಸಹಕರಿಸದಿದ್ದಾಗ ಅನಿವಾರ್ಯಕ್ಕೆ ಹೆಸ್ ಜರ್ಮನಿಯ ಅನೇಕ ಪುಸ್ತಕ ಮಳಿಗೆಗಳಲ್ಲಿ ಕೂಲಿಯವನಾಗಿ ಜೀವನ ಪ್ರಾರಂಭಿಸಿದ.

ಪೂರ್ವದ ದೇಶಗಳಲ್ಲಿ, ವಿಶೇಷತಃ ಭಾರತದಲ್ಲಿ ಅಪೂರ್ವವಾದ ಆತನ ಜನಪ್ರಿಯತೆಗೆ ಕಾರಣವಾದ ಕಾದಂಬರಿ "ಸಿದ್ಧಾರ್ಥ"ಕ್ಕೂ ಮುಂಚೆಯೂ ಆತ ಮೂರು ಕಾದಂಬರಿಗಳನ್ನು ಬರೆದಿದ್ದ. ಅವನ ಆತ್ಮಕತೆಯ ತುಣುಕುಗಳಂತೆ ಬರೆಯಲಾಗಿರುವ

'ಪೀಟರ್ ಕಮೆನ್‌ಝಿಂಡ್', 'ಬನೀಥ ದ ವ್ಹೀಲ್' ಹಾಗೂ 'ಡೇಮಿಯನ್' – ಮೂರು ಕಾದಂಬರಿಗಳಲ್ಲಿ ಆತ್ಮದ ಧ್ವನಿಯನ್ನೇ ನಿಸ್ತೇಜಗೊಳಿಸುವ ಶಿಕ್ಷಣ ವ್ಯವಸ್ಥೆ, ಅದಕ್ಕೆ ಕಾರಣವಾಗುವ ತಂದೆ, ತಾಯಿ ಹಾಗೂ ಶಿಕ್ಷಕ ವೃಂದವನ್ನು ಕುರಿತು ಆಕ್ರೋಶವನ್ನು ವ್ಯಕ್ತಪಡಿಸಿದ್ದಾನೆ. ಮನುಷ್ಯನ ವೈಚಾರಿಕತೆ ಹಾಗೂ ಹೃದಯ ಸೌಂದರ್ಯವನ್ನು ಬಹುವಾಗಿ ನಂಬಿದ್ದ ಹೆಸ್ ಅದರ ಶರಣ್ಯದಲ್ಲಿಯೇ ಆತ್ಮದ ತಿಳವಳಿಕೆಗೆ ಯತ್ನಿಸಿದವ. ಇದೇ ಲೆಕ್ಕಾಚಾರದಲ್ಲಿ ಸಾಗಿದ್ದರೆ ಬಹುತೇಕ ಹೆಸ್‌ನ ಸಾಹಿತ್ಯಕ್ಕೆ ವಾಲ್ಟವಿಟ್‌ಮನ್, ಟ್ಯಾಗೋರ, ಮ್ಯಾಕ್ಸ ಮುಲರ್‌ಗೂ ಮೀರಿದ ಒಂದು ಸ್ಥಾನ ಸಿಗುತ್ತಿರಲಿಲ್ಲ. ಅವರಿಂದ ಭಿನ್ನವಾಗಿ ನಿಲ್ಲುವ ಒಂದು ಸಂದರ್ಭ ಹೆಸ್‌ನ ಸಾಹಿತ್ಯಕ್ಕೆ ಒದಗಿಸಿದ ಹಿರಿಮೆ ಮೊದಲನೆಯ ಮಹಾಯುದ್ಧಕ್ಕೆ ಸಲ್ಲಬೇಕು.

ಹೆಸ್ ಮತ್ತು ಯುದ್ಧ :

ಮನುಷ್ಯನ ಸಹಜ ಹಾಗೂ ಸರಳ ಪ್ರಪಂಚದಲ್ಲಿ ಅಸಹಜ ಎನ್ನಿಸುವ ಸಂದರ್ಭಗಳಿಗೆ ಕಾರಣವಾಗುವ ಧಾರ್ಮಿಕ ಮೇಲಾಟವನ್ನೇ ಸಹಿಸಲಾಗದಿದ್ದ ಹೆಸ್‌ನಿಗೆ ಮೊದಲನೆಯ ಮಹಾಯುದ್ಧ ತೀವ್ರವಾದ ಮಾನಸಿಕ ಆಘಾತವನ್ನುಂಟುಮಾಡಿತು. ಶಬ್ಧತೀರದ ಜೀವನವನ್ನು ನೆಚ್ಚಿಕೊಂಡಿದ್ದ ಈತ ತನ್ನ ಯುದ್ಧ ವಿರೋಧಿ ವಿಚಾರಗಳನ್ನು ಹಂಚಿಕೊಳ್ಳಲು ಯೋಗ್ಯ ಸಹಚರನೊಬ್ಬನನ್ನು ಅರಸುತ್ತಿದ್ದ. ಆಗ ಸಿಕ್ಕವನೇ ರೋಮಾನ್‌ರೋಲಾಂ. ಹೆರ್ಮನ್ ಹೆಸ್ ಮಾನವೀಯ ಮೌಲ್ಯಗಳಾದ ದಯೆ ಶಾಂತಿ, ಕರುಣೆಯ ತತ್ವ ಪ್ರಸಾರಕ ಕಾದಂಬರಿಗಳನ್ನು ಬರೆಯುವುದೇ ಅಲ್ಲದೆ ರೋಮಾನ್‌ರೋಲಾಂನೊಂದಿಗೆ ಸೇರಿಕೊಂಡು ಮನುಷ್ಯ ಸಮಾಜದ ಹಿತ ಚಿಂತಕರನ್ನೆಲ್ಲ ಒಗ್ಗೂಡಿಸುವ, ನಿರಂತರವಾಗಿ ಪತ್ರಿಕೆಗಳಿಗೆ ಬರೆಯುವ, ಲೇಖನಗಳನ್ನು ಸಂಗ್ರಹಿಸುವ ಕಾಯಕಕ್ಕೆ ಹಗಲಿರುಳು ತೊಡಗಿಸಿಕೊಂಡ ಹೆರ್ಮನ್ ಹೆಸ್ ಪ್ರತಿಫಲವಾಗಿ ಪಡೆದದ್ದು ಹೆಂಡತಿಯಿಂದ ವಿಚ್ಛೇಧನ ಪತ್ರ. ಈ ಮೂಲಕ ಹೆಸ್‌ನ ಮೊದಲ ಸಂಸಾರಿಕ ಸಂಬಂಧ ಕುಸಿಯಿತು. ಧೃತಿಗೆಡದ ಹೆಸ್ ಓದಿಗೆ ತೊಡಗಿಸಿಕೊಂಡ. ಸಿಗ್ಮಂಡ್ ಪ್ರಾಡ್ ಹಾಗೂ ಜಂಗರನ್ನು ಆಳವಾಗಿ ಓದಿ ಅವರ ವಿಚಾರಗಳನ್ನು ತಾರ್ಕಿಕತೆಯ ಸೂಜಿಗಲ್ಲಿಗೆ ಹಚ್ಚಿದ್ದು ಇದೇ ಅವಧಿಯಲ್ಲಿ. ೧೯೧೯ರಲ್ಲಿ ಅಂತಿಮವಾಗಿ ಸ್ವಿಟ್ಜರ್‌ಲ್ಯಾಂಡಿಗೆ ಹೋಗಿ ನೆಲೆಸಿದ ಈತ ಶ್ರೇಷ್ಠ ಕಾದಂಬರಿಕಾರನಾಗಿ ತನ್ನ ಹೆಜ್ಜೆ ಗುರ್ತುಗಳನ್ನು ಮೂಡಿಸಿದ್ದು ಈ ಅವಧಿಯಲ್ಲಿಯೇ. ಆತನ ಸರ್ವಶ್ರೇಷ್ಠ ಕಾದಂಬರಿ ಡೇಮಿಯನ್ ಬಿಡುಗಡೆಯಾಯಿತು. ಬೆಳಕಾಗುವುದರೊಳಗೆ ಯುರೋಪಿನ ಮನೆಮನೆಯ ಮಾತಾಯಿತು ಹೆಸ್ ನ 'ಡೇಮಿಯನ್.' ಮನೋವೈಜ್ಞಾನಿಕವನ್ನೇ ಭೂಮಿಕೆಯನ್ನಾಗಿ ಇಟ್ಟುಕೊಂಡು ಬರೆದ ಈ ಕಾದಂಬರಿ ಯುರೋಪಿನ ಮಾರುಕಟ್ಟೆಯನ್ನೆ ಕೊಳ್ಳೆಹೊಡೆದು, ಹೆಸ್‌ನನ್ನು ಪ್ರಪಂಚದ ಶ್ರೇಷ್ಠ ಬರಹಗಾರರ ಸಾಲಿಗೆ ಸೇರಿಸಿದರೂ ಆತನ ಅಲೆಮಾರಿ ಮನಸ್ಸಿಗೆ ಇದಾವುದೂ ಬೇಕಾಗಿರಲಿಲ್ಲ. ಯುದ್ಧವನ್ನು ಕಂಡ ಆತನ ಕಣ್ಣುಗಳಿಗೆ ಈ ಪ್ರಚಾರ, ಪ್ರಸಿದ್ಧಿ ನೆಮ್ಮದಿಯ ನಿದ್ರೆಯನ್ನು ನೀಡಲಿಲ್ಲ. ಇಡೀ ಯುರೋಪ್ ಪರಸ್ಪರ ಬಲಾಬಲಗಳ ಪರೀಕ್ಷೆಗಾಗಿ ತೊಡಗಿಸಿಕೊಳ್ಳುವಾಗ ಈತ ಬುದ್ಧನ ನಾಡಿನತ್ತ ಹೆಜ್ಜೆ ಹಾಕಿದ.

ಯುದ್ಧದಿಂದ ಬುದ್ಧನಡೆಗೆ :

ಸುಮಾರು ೧೯೨೨ರ ಆಸುಪಾಸಿನಲ್ಲಿ ಹೆರ್ಮನ್ ಹೆಸ್ ಪೂರ್ವದೆಡೆಗೆ ಹೊರಟಿರಬಹುದು. ಈ ಕುರಿತು ಒಮ್ಮತವಿಲ್ಲ. ಮೂವತ್ತು ವರ್ಷಗಳವರೆಗೆ ಭಾರತದಲ್ಲಿ ಧರ್ಮಪ್ರಸಾರಕನಾಗಿದ್ದ ಹೆಸ್‌ನ ಅಜ್ಜ ಮೊಮ್ಮೊಗನಿಗೆ ಭಾರತ ಕುರಿತು ಕಥೆಗಳನ್ನು ಹೇಳಿ ಈ ನಾಡಿನ ಬಗೆಗೆ ಎಲ್ಲಿಲ್ಲದ ಕಲ್ಪನೆಗಳನ್ನು ತುಂಬಿದ್ದ. ಹೀಗಾಗಿ ೧೯೧೧ ರಲ್ಲಿಯೇ ಹೆಸ್ ಏಷಿಯಾದ ಅನೇಕ ರಾಷ್ಟ್ರಗಳನ್ನು ಹಾಗೂ ಭಾರತವನ್ನು ಸಂದರ್ಶಿಸಿದ್ದ ಎಂಬ ಅಭಿಪ್ರಾಯವೂ ಇದೆ. ಆತ ಯಾವಾಗಲಾದರೂ ಬಂದಿರಲಿ, ಮನುಷ್ಯ ಗೌರವವನ್ನು ದಫನಾಯಿಸಿ ಈ ಸಮಾಜವನ್ನು ಮರುಭೂಮಿಯಾಗಿ ಪರಿವರ್ತಿಸುವ ಪಶ್ಚಿಮದ ಯುದ್ಧ ಹಾಗೂ ವ್ಯವಹಾರಿಕ ಲೋಕದಿಂದ ಮುಕ್ತಿಯನ್ನು ಬಯಸಿ ಶಾಂತಿಯ ಅರಸುವಿಕೆಯಲ್ಲಿ ಆತ ಇದ್ದ ಎಂದಕೊಳ್ಳಲು, ಅವನ ದಿನಚರಿಯೊಳಗಿನ ಈ ಮಾತು ಸಾಕ್ಷಿಯಾಗುತ್ತದೆ.

"We find here a paradies, the abundance and rich voluptuousness of all natural gifts. We find the pure simple, childlike people of paradise. We lost our paradise long ago, and the new one that we wish to build is not to be found along the equator and on the warm seas of the East" ಆತನಿಗೆ ಗೊತ್ತಿತ್ತು "ಸದ್ದು ಗದ್ದಲಗಳಿಂದ ದೂರ..... ಮನಸ್ಸಿನ ತೋಟದಲ್ಲಿ, ಯಾರ ಕಣ್ಣಿಗೂ ಬೀಳದಂತೆ, ಒಳ್ಳೆಯ ಸಾಹಿತ್ಯ ಸದ್ದಿಲ್ಲದಂತೆ ಅರಳುತ್ತದೆ. ಜಗದ ಪಾಡು ಅಲ್ಲಿ ಜೀವನದ ಹಾಡಾಗುತ್ತದೆ. ಎದೆಯ ಹಾಲಾಗುತ್ತದೆ. ಓದು ಬರವಣಿಗೆ ಪ್ರೇಮದಂತೆ, ಸ್ವಪ್ನದಂತೆ, ಅದರ ಖಾಸಗಿತನವನ್ನು, ಏಕಾಂತವನ್ನು ಕಾಪಾಡಿಕೊಳ್ಳುವುದೇ ಲೇಖಕನ ಅಗ್ನಿದಿವ್ಯ". ಈ ಸತ್ಯವನ್ನು ಅರಿತಿದ್ದ ಹೆಸ್, ಜೀವನದಲ್ಲಿ ಬರೆದಿಟ್ಟ ನಾಲ್ಕು ಸಾಲುಗಳನ್ನು ಮೀರಿ ಮನುಷ್ಯ ಸಾಯುವಾಗ ನೆಮ್ಮದಿ ನೀಡುವಂತ ಇನ್ನಾವುದೇ ಸಾಧನೆ ಉಳಿಯುವುದಿಲ್ಲ ಎಂದೂ ತಿಳಿದವನಾಗಿದ್ದ.

ಬುದ್ಧನ ನಾಡನ್ನು ಕುರಿತು :

ಹೆಸ್‌ನನ್ನು ಬಲ್ಲ ಆನ್ ಆಟೆನ್ ಹೇಳುತ್ತಾನೆ: "ಹೆರ್ಮನ್ ಹೆಸ್‌ನಿಗೆ ಭಾರತವನ್ನು ಕುರಿತಾಗಿ ಏನಾದರೂ ಬರೆಯಬೇಕು, ಬುದ್ಧನ ಮೌನ ಸಾಮ್ರಾಜ್ಯದ ಮಹಾ ಸಾಧನೆಯನ್ನು ಪಶ್ಚಿಮಕ್ಕೆ ಸಾರಿ ಹೇಳಬೇಕು ಎಂಬ ನಿರಂತರ ತುಡಿತ ಆತ "ಸಿದ್ಧಾರ್ಥ" ಬರೆಯುವುದರ ಹಿನ್ನೆಲೆ" ಎಂದು. ಆದರೆ ಅದನ್ನು ಇಡಿಯಾಗಿ ಒಪ್ಪಿಕೊಳ್ಳಲಾಗದು. ಯಾಕೆಂದರೆ ಹೆಸ್‌ನ ದಿನಚರಿಯ ಪ್ರಕಾರ ಮಗುವಿನ ಮುಗ್ಧತೆಯ ಜನರ ಬಗೆಗೆ ಅವನಿಗಿರುವಷ್ಟು ಆಸಕ್ತಿ ಯಾವುದೇ ಧಾರ್ಮಿಕ ಗುಂಪಿನ ಬಗೆಗೆ ಇರಲಿಲ್ಲ. ಮೇಲಾಗಿ ಆತ ಭಾರತಕ್ಕೆ ಬರುವ ವೇಳೆಗಾಗಲೇ ಎಲ್ಲ ಬೌದ್ಧರೂ ಈ ದೇಶದ ಎಲ್ಲ ಧರ್ಮಲಂಡರಂತೆ, ಕರ್ಮಟರಂತೆ ಸಾಕಷ್ಟು ಪರಿವರ್ತನೆಯಾಗಿದ್ದರು. ಆಗಲೇ ಬೌದ್ಧ ಧರ್ಮ ಇಂದಿನ ಬಸವಣ್ಣ, ಗಾಂಧಿಗಳಂತೆ ಒಂದು ಸಿದ್ಧಾಂತ ಹಾಗೂ ಸ್ಥಾವರದ ರೂಪತಾಳಿಯಾಗಿತ್ತು. ಯುದ್ಧ, ರಾಜಪ್ರಭುತ್ವ, ಅಧಿಕಾರದ ಎಲ್ಲೆಗಳನ್ನು ಮೀರಿ ಬಂದಿದ್ದ ಬುದ್ಧನನ್ನು ಮತ್ತೆ ಮತ್ತೆ ಇವುಗಳ ಹಿನ್ನೆಲೆಯಲ್ಲಿಯೇ ಆಪಾದಿಸಲಾಗಿತ್ತು. ಅವನು ದೀನರ, ದಲಿತರ, ತುಳಿತಕ್ಕೊಳಗಾದವರ, ಮಕ್ಕಳ

ಮಹಿಳೆಯರ, ರೋಗ ಹಾಗೂ ಮುಪ್ಪಿನಿಂದ ಜರ್ಜರಿತರಾದವರ, ಕುರಿತಾದ ಚಿಂತನೆಗಳು ನೇಪಥ್ಯಕ್ಕೆ ಸರಿದು ಬುದ್ಧನೆನ್ನುವವ ಮತಾಂಧರ ಕೈಯೊಳಗಿನ ಗಾಳಿಪಟವಾಗಿದ್ದ. ಯಾವುದರಿಂದ ಯಾರನ್ನೂ ಮುಕ್ತಗೊಳಿಸುವೆನೆಂಬ ಹುಚ್ಚು ಭ್ರಮೆಯಲ್ಲಿರದ ಬುದ್ಧ ಆಗಲೇ ಕೃಷ್ಣ ರಾಮರ ಅವತಾರ, ಅವಧೂತ ಎಲ್ಲವೂ ಆಗಿದ್ದ. Wisdom is not communicable. The wisdom which a wise man tries to communicate always sounds foolish. Knowledge can be communicated but not wisdom. ಎಂದಿದ್ದ ಬುದ್ಧ ಚೈತ್ಯಾಲಯ-ಸ್ತೂಪಗಳ ಗೋಡೆಗಳ ಮೇಲೆ ಜಾಹೀರಾತಾಗಿದ್ದ. ಅವನನ್ನು ಅವನ ಅನುಭವಗಳನ್ನು ಮಾರಿಕೊಂಡೇ ಬದುಕುವ ಒಂದು ವ್ಯವಸ್ಥಿತ ಪಂಗಡ ಹುಟ್ಟಿಯಾಗಿತ್ತು. ಹೀಗಾಗಿ ಈ ಎಲ್ಲ ಭೀತಿಗಳಿಂದ ಮುಕ್ತವಾಗಿಸುವ, ಕೊಳದಲ್ಲಿಯ ಹಾವಸೆಯ ಕೆಳಗಿನ ನಿರ್ಮಲ ಗಂಗೆಯನ್ನು ತೋರಿಸುವ ಚಿಂತಕನೊಬ್ಬನ ಅವಶ್ಯವಿರುವ ವೇಳೆಯಲ್ಲಿಯೇ ಹೆರ್ಮನ್ ಹೆಸ್ ಭಾರತಕ್ಕೆ ಬಂದು "ಸಿದ್ಧಾರ್ಥ" ಬರೆಯಲು ತೊಡಗಿದ್ದು. ಆದರೆ ನೆನಪಿರಲಿ ಅದು ನಮ್ಮ ನಿಮ್ಮ ಬುದ್ಧನ ದಿನಚರಿಯ ಪುನರ್ ಸೃಷ್ಟಿಯಾಗಿರಲಿಲ್ಲ. I emphasize that Siddhartha is problematic only when used as a reflection of Indian Buidhism, not when presented as a narrative reflecting Hess's internal struggle to understand his own life as a spiritual process. ತನ್ನೊಳಗಿನ ಭೀತಿ, ತಲ್ಲಣಗಳಿಗೆ ಉತ್ತರ ಹುಡುಕುತ್ತ ಹೊರಟಿದ್ದ ಹೆಸ್‌ನದು ಬುದ್ಧನ ಅನ್ವೇಷಣೆಯೇ ಆಗಿತ್ತು. ಅಥವಾ ಅಂತಹ ಪ್ರಶ್ನೆಗಳಿಗೆ ಉತ್ತರ ಹುಡುಕುವವರೆಲ್ಲ ಬುದ್ಧರಾಗುತ್ತಾರೇನೋ ಎನ್ನುವುದು ಅವನ ಸಿದ್ಧಾರ್ಥನ ಜಿಜ್ಞಾಸೆ.

ಹೆಸ್‌ನ ಕಾದಂಬರಿ ಸಿದ್ಧಾರ್ಥ ಆಕಾಶಕ್ಕೆ ಬಿಟ್ಟ ನೆಲ್ಲಿಯಕಾಯಿಯಲ್ಲ. ಅವನ ಕಾದಂಬರಿಯ ನಾಯಕ ಸಿದ್ಧಾರ್ಥ ಮೊಲೆಯ ಮೇಲಿನ ಯೋಗಿಯೂ ಅಲ್ಲ ಅಥವಾ ಶಿಲೆಯ ಮೇಲಿನ ಭೋಗಿಯೂ ಅಲ್ಲ. ಈ ಸಿದ್ಧಾರ್ಥನ ಬದುಕಿನ ಪಯಣದಲ್ಲಿ ಒಂದು ಅಂತ್ಯ ಹಾಗೂ ಇನ್ನೊಂದು ಆರಂಭ ಎನ್ನುವುದಿಲ್ಲ. An aimless man is useless ಎನ್ನುವ ಸಿದ್ಧಾಂತವನ್ನು ತಿರುವ ಮುರುವಾಗಿಸುವ ಹೆಸ್ ತನ್ನ ನಾಯಕನಿಗೆ ಯಾವುದೇ ಭೌತಿಕ ಗುರಿ ಎಂಬುದೇ ಇಟ್ಟಿಲ್ಲ. ಇದೊಂದು ರೀತಿ ಪ್ರಾರಂಭದಿಂದಲೇ ಮುಕ್ತಾಯ, ಮುಕ್ತಾಯದಿಂದಲೇ ಪ್ರಾರಂಭ ಇದು ಮನುಷ್ಯ ಪ್ರೀತಿಯ ಹಾಗೂ ಅದರ ಅಗಾಧ ಶಕ್ತಿಯ ಪರಿಚಯದ ಪ್ರಕ್ರಿಯೆ. Gentleness is stronger than severity, water is stronger than rock, love is stronger than force ಎಂಬುದೇ ಕಾದಂಬರಿಯ ಒಟ್ಟು ತಿರುಳು ಹಾಗೂ ಸೈದ್ಧಾಂತಿಕ ಗುರಿ.

ಕಾದಂಬರಿ ಪ್ರಾರಂಭಿಸುತ್ತಲೇ ಹೆರ್ಮನ್ ಹೆಸ್ ಪರಿಚಯಿಸುವ ತನ್ನ ನಾಯಕ ಸಿದ್ಧಾರ್ಥ ಹಲವಾರು ದ್ವಂದ್ವಗಳಿಂದ ಜರ್ಜರಿತನಾಗಿದ್ದಾನೆ. ಸಿದ್ಧಾರ್ಥನಿಗೆ ತನ್ನ ಹೆತ್ತ ತಂದೆ, ತಾಯಿ, ಪ್ರೀತಿಯ ಗೆಳೆಯ ಗೋವಿಂದ ಈ ಯಾರ ಪ್ರೀತಿಯು ತನಗೆ ನೆಮ್ಮದಿ ನೀಡದು ಎಂದು : ಬೈರಾಗಿಗಳು, ಸನ್ಯಾಸಿಗಳು ತೋರಿಸಿದ ವೈರಾಗ್ಯದ ಮಾರ್ಗ ತುಳಿದು, ದೇಹದ ಬಯಕೆಗಳನ್ನು ಧಿಕ್ಕರಿಸುತ್ತಾನೆ. ಸಾಮವೇದದ your soul is whole world ಎಂಬ ಉಕ್ತಿಯನ್ನು ನಂಬಿ ಆತ್ಮದ ಶೋಧದೊಳಗೆ ತೊಡಗಿಕೊಳ್ಳುತ್ತಾನೆ. ಸುಂದರಿಯನ್ನು ಮುತ್ತಿಡುವ ತುಟಿಗಳು ಈಗ ಮರಗಟ್ಟುತ್ತವೆ.

ಉತ್ತಮೋತ್ತಮ ಬಟ್ಟೆಗಳನ್ನು ತೊಟ್ಟ ಜನಸಂದಣಿಯಿಂದ ಸಾಗಿರಬೇಕಾದರೆ ಮನಸ್ಸು ಈರ್ಶೆಯಿಂದ ಕುದಿಯುತ್ತದೆ. ಸತ್ತ ಹೆಣದ ಮುಂದೆ ಅಳುವವರು, ಮೈ ಮಾರುವ ಸೂಳೆಯರು, ರೋಗಿಗೆ ಔಷಧ ನೀಡುವ ವೈದ್ಯ, ವ್ಯಾಪಾರಿಗಳು, ಪ್ರೇಮಿಗಳು ಅವನ ದೃಷ್ಟಿಯಲ್ಲಿ ಹುಚ್ಚರಾಗಿರುತ್ತಾರೆ. ದುಃಖ, ಆಶೆ, ಹಸಿವು, ನೀರಡಿಕೆ, ನಿದ್ರೆ, ಕನಸು, ಮೈಥುನ, ಸಂತೋಷ ಹಾಗೂ ಭಯಗಳಿಂದ ಮುಕ್ತಿ ಬಯಸಿ ಹೊರಟ ಸಿದ್ಧಾರ್ಥನ ಮನಸ್ಸು ತಿರಸ್ಕಾರದಂಥ ಕ್ಷುಲ್ಲಕ ವಿಷಯದ ಗೂಡಾಗುತ್ತದೆ ಅಷ್ಟೆ. ಒಬ್ಬ ಸೂಳೆ ಹಾಗೂ ಜೂಜುಕೋರ ಕಲಿಸಬಹುದಾದಷ್ಟನ್ನೇ ಈ ಸನ್ಯಾಸಿಗಳು ಹಾಗೂ ಸಾಧಕರು ತನಗೆ ಕಲಿಸಬಲ್ಲರು ಎಂಬುದು ಯಾವಾಗ ಅವನ ಅರಿವಿಗೆ ಬಂದಿತೊ ಆ ಕ್ಷಣಕ್ಕೆ ಅವರನ್ನು ಧಿಕ್ಕರಿಸಿ ಗೌತಮನ ಭೇಟಿಗೆ ಹೋಗುತ್ತಾನೆ. ಆತ್ಮಶುದ್ಧಿಗೆ The troubled course of the life cycle ಅನಿವಾರ್ಯ ಎಂಬುದು ಅರಿವಿಗೆ ಬಂದಾಗ ನಾಯಕ ಸಿದ್ಧಾರ್ಥ ಕಮಲಾ ಎಂಬ ವೇಶ್ಯೆಯ ಸಂಗ ಮಾಡುತ್ತಾನೆ. ಭಯದಿಂದ ಮುಕ್ತನಾಗಿ ಹೆಣ್ಣನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡಿ, ಆಕೆಯನ್ನು ಸಂಭೋಗಿಸಿ, ಗಂಡು ಮಗುವನ್ನು ಹೆತ್ತು ತಂದೆಯಾಗುತ್ತಾನೆ. ಕೊನೆಗೆ ಆಕೆಯಿಂದಲೂ ಮುಕ್ತನಾಗಿ ಕಾಮಸ್ವಾಮಿ ಎಂಬ ವ್ಯಾಪಾರಿಯ ಅಡಿ ಆಳಾಗಿ ದುಡಿದು ಲೋಕ ವ್ಯವಹಾರ ಕಲಿಯುತ್ತಾನೆ. ನಾನು, ಮಹಾನ್ ಸಾಧಕ, ಶಮನ ಎಂಬ ಅಹಂಕಾರಗಳಿಂದ ಹೊರಬರಲು ಯತ್ನಿಸುತ್ತಾನೆ.

ಈ ಮಧ್ಯೆ ಆತನ ಹೆಂಡತಿ ಸಾಯುತ್ತಾಳೆ. ಮಗನ ಆರೈಕೆ ಆತನ ಜವಾಬ್ದಾರಿಯಾಗುತ್ತದೆ. ಮಗನನ್ನು ತನ್ನ ವೈಚಾರಿಕ, ಜೀವನ ಮೌಲ್ಯಗಳ ಸಿದ್ಧಾಂತಕ್ಕೊಳಪಡಿಸಲು ಹೋಗಿ ಸೋಲುತ್ತಾನೆ. ಮಗನ ಮೂದಲಿಕೆಗೊಳಗಾಗಿ ಆತ ನೋಯುತ್ತಾನೆ. ಏನನ್ನು ಸಾಧಿಸ ಬಲ್ಲೆ ಎಂಬ ಸಿದ್ಧಾರ್ಥನ ಅಹಂಕಾರವನ್ನು ಆತನ ಮಗ ಅಳಿಸಿ ಹಾಕುತ್ತಾನೆ. ಎಲ್ಲವನ್ನು ಧಿಕ್ಕರಿಸಿದ್ದ ಸಿದ್ಧಾರ್ಥ ಮಗನ ಧಿಕ್ಕಾರಕೊಳಗಾಗಿ ಬಂದು, ನದಿಯೊಂದರ ಮುಂದೆ ನಿಂತಾಗ, ಹರಿದ ನದಿ ಅವನನ್ನು ಅಣಕಿಸಿ ನಕ್ಕಂತೆ ಭಾಸವಾಗುತ್ತದೆ. ನದಿಯು ಆತನಿಗೆ ಓಂ ಎಂಬ ದಿವ್ಯ ಶಬ್ದದ ಅಭೂತಪೂರ್ವ ಲೋಕಕ್ಕೆ ಕರೆದೊಯ್ಯುತ್ತದೆ. ಸಿದ್ಧಾರ್ಥ ನಾವಿಕನೊಬ್ಬನನ್ನು ಭೇಟ್ಟಿಯಾಗುತ್ತಾನೆ. ಈ ಸಂದರ್ಭ ಶ್ರೀ ರಾಮಚಂದ್ರ ಹಾಗೂ ನಾವಿಕನೊಬ್ಬನ ಮಧ್ಯದ ಸಂವಾದವನ್ನು ಕಬೀರನ ದೋಹೆಯಲ್ಲಿ ಚಿತ್ರಿಸಿದಂತಿದೆ. ಅಗಸನಿಂದ ಅಗಸ, ಕ್ಷೌರಿಕನಿಂದ ಕ್ಷೌರಿಕ ಹಾಗೂ ಅಂಬಿಗನಿಂದ ಅಂಬಿಗ ಹೀಗೆ ಸಮಾನ ವೃತ್ತಿಯಲ್ಲಿರುವ ಇಬ್ಬರು ಪರಸ್ಪರ ಉಪಕಾರವಾಯಿತೆಂದುಕೊಳ್ಳುವುದಾಗಲಿ, ಹಣ ಕೊಡುವದಾಗಲಿ ಮೂರ್ಖತನ, ಒಂದರ್ಥದಲ್ಲಿ ಎಲ್ಲರೂ ಅಂಬಿಗರೆ, ಕೆಲವರು ಸಂಸಾರ ಸಾಗರದಿಂದ ನಮ್ಮನ್ನು ದಾಟಿಸಿಕೊಂಡು ಹೋಗುತ್ತಿದ್ದರೆ. ಇನ್ನು ಕೆಲವರು ಭೌತಿಕವಾದ ಸಾಗರವನ್ನು ದಾಟಲು ಸಹಕರಿಸುತ್ತಾರೆ. ಸಿದ್ಧಾರ್ಥನಿಗೆ ನದಿಯು ಕಾಲಾತೀತವಾಗಿರುವುದನ್ನು, ಬದುಕೇ ಒಂದು ಭೂತ, ಭವಿಷ್ಯಗಳಿಲ್ಲದ ನಿರಂತರ ನದಿಯಾಗಿರುವುದನ್ನು, ನದಿಯೂ ಕೂಡ ತನ್ನ ಒಡಲೊಳಗೆ ಗರ್ಭಿಣಿಯು ನಿಟ್ಟುಸಿರು, ರಾಜನ ಅಟ್ಟಹಾಸ, ಯೋಧನೊಬ್ಬನ ವಿಜಯ ಧ್ವನಿ, ಗೂಳಿಯೊಂದರ ಗೂತ್ಕಾರ ಹೀಗೆ ಹಲವು ಧ್ವನಿಗಳನ್ನು ಒಳಗೊಂಡಿರುವುದನ್ನು ತೋರಿಸುತ್ತದೆ. ಆತ್ಮನ ಅಂತ್ಯವಿಲ್ಲದ ಪರಿಭ್ರಮಣವನ್ನು ತೋರಿಸುತ್ತದೆ. ನಿಗ್ರಹ, ಸಾಧನೆ, ನಿರ್ವಾಣ, ಮುಕ್ತಿ, ಆತ್ಮಜ್ಞಾನಗಳ

ಅರಸುತ್ತ ಹೊರಟ ಸಿದ್ಧಾರ್ಥ ಪಾಪ–ಪುಣ್ಯ, ಪಾಪಿ–ಮಹಾತ್ಮ, ಹುಟ್ಟು–ಸಾವು, ಸೋಲು–ಗೆಲುವುಗಳ ಪ್ರಶ್ನೆಗಳಿಂದ ಸ್ವತಂತ್ರನಾದ ಇಲ್ಲಿಯ ಸಿದ್ಧಾರ್ಥ ಪ್ರತಿಯೊಬ್ಬ ಸಾಧಕನ ಪ್ರತಿರೂಪ. ಆತ ಸಾಕ್ರೆಟಿಸನಂತೆ–ಸತ್ಯ ಮತ್ತು ಅಹಿಂಸೆ ಹಿಮಾಲಯದಷ್ಟು ಹಳೆಯವು, ಅವುಗಳನ್ನು ನಾನು ಪರಿಚಯಿಸಿದೆ ಎನ್ನುವುದು ಮೂರ್ಖತನ ಎಂದು ವಿನೀತನಾಗಿ ಹೇಳುತ್ತಾನೆ. ಹೆಸ್‌ನ ಸಿದ್ಧಾರ್ಥ ಹೆಸ್‌ನಂತೆ. ಲೋಕಸಂಚಾರಿ, ಶಾಂತಿಪ್ರಿಯ, ಮಾನವ ಪ್ರೇಮಿ ಹಾಗೂ ಸಂಸಾರಿ.

ಹೆರ್ಮನ್ ಹೆಸ್‌ನ ಕಾದಂಬರಿ ಸಿದ್ಧಾರ್ಥ ಒಂದು ಕಾದಂಬರಿಯಾಗಿಯೂ ತನ್ನ ತಂತ್ರ ಮತ್ತು ವಸ್ತುವಿಗೆ ಉತ್ತಮ ಉದಾಹರಣೆಯಾಗಿದೆ. ಅತಿ ಗಹನವಾದ ಭಾರತೀಯ ತತ್ವ ಸಿದ್ಧಾಂತಗಳನ್ನು ಒಂದು ಕತೆಯ ಮೂಲಕ ಕಾದಂಬರಿಕಾರ ತಿಳಿತಿಳಿಯಾಗಿಸುತ್ತಾನೆ. ಕೇವಲ ಎಂಟು ಪಾತ್ರಗಳ ಮೂಲಕ ಅನಾವರಣಗೊಳ್ಳುವ ಈ ಕಾದಂಬರಿ ದ್ವಂದ್ವಗಳನ್ನು ಸೃಷ್ಟಿಸುವುದಿಲ್ಲ. ಕೇವಲ ನೂರೈವತ್ತು ಪುಟಗಳಲ್ಲಿ ಭಾರತದ ಸಾವಿರಾರು ವರ್ಷಗಳ ಪರಂಪರೆಯಿರುವ ಅನುಭಾವ ಜಗತ್ತಿನ ಕಠಿಣಾತಿಕಠಿಣ ವಿಷಯಗಳನ್ನು ಸುಲಿದ ಬಾಳೆಯ ಹಣ್ಣಿನಂತೆ ಸುಲಲಿತಗೊಳಿಸುತ್ತಾನೆ. ಹೆಸ್‌ನ ಸಿದ್ಧಾರ್ಥ ಈ ಅರ್ಥದಲ್ಲಿ ಯುರೋಪಿನ Christirnity, Judedism ಚೈನಾದ Bhuddism ಭಾರತದ Hinduism ಗಳ ಮೇಲೆ ಭಾಷ್ಯ ಬರೆದಂತೆ ಈ ಕಿರು ಕಾದಂಬರಿಯಲ್ಲಿ ಎಲ್ಲವೂ ಇದೆ. ಕಾದಂಬರಿ ಮುರಿದರೂ ಪೂರ್ವ –ಪಶ್ಚಿಮಗಳ ಆಧ್ಯಾತ್ಮಿಕ ವಿಚಾರಗಳ ಮಂಥನದಿಂದ ಹೆಸ್‌ನ ಮೂಲಕ ಹೊರಬಂದ ವಿಚಾರಗಳನ್ನು ಈ ರೀತಿ ಸಂಗ್ರಹಿಸಬಹುದಾಗಿದೆ.

೧. ಧ್ಯಾನ ಎಂಬುವುದು ತಾತ್ಕಾಲಿಕ ಪಲಾಯನದ ದಾರಿ. ಮತ್ತೇರಿಸಿ ಮೈಮರೆಸುವ ಶೆರೆಗೂ ಈ ಧ್ಯಾನಕ್ಕೂ ದೊಡ್ಡ ವ್ಯತ್ಯಾಸವಿಲ್ಲ.

೨. ಅಭಿಪ್ರಾಯ ಎನ್ನುವುದು ಅರ್ಥಹೀನ. ಅದು ರುಚಿಸಬಹುದು ಅಥವಾ ಅರುಚಿಯಾಗಿರಲೂಬಹುದು. ಯಾರೂ ಅದನ್ನು ಒಪ್ಪಿಕೊಳ್ಳಬಹುದು ಇಲ್ಲಾ ಧಿಕ್ಕರಿಸಬಹುದು. ಅದು ಜಾಣತನದ ಮಾತಾಗಿರಬಹುದು ಅಥವಾ ಮೂರ್ಖತನದ ಅಭಿವ್ಯಕ್ತಿಯಾಗಿರಬಹುದು. ಜ್ಞಾನದ ಹಸಿವಿನಿಂದ ಬಳಲುತ್ತಿರುವವರಿಗೆ ಜಗತ್ತನ್ನು ವಿವರಿಸುವುದು ಅಭಿಪ್ರಾಯದ ಉದ್ದೇಶವಲ್ಲ. ಅದರ ಗುರಿ ತೀರ ಭಿನ್ನ, ಮನುಷ್ಯನನ್ನು ನರಳುವಿಕೆಯಿಂದ ಮುಕ್ತನನ್ನಾಗಿಸುವುದು.

೩. ಕಲಿಕೆಯಿಂದ ಏನನ್ನು ಕಲಿಯಲಾಗುವುದಿಲ್ಲ, ಒಂದು ಅನುಭವಕ್ಕೆ ಶಬ್ಧಗಳ ರೂಪಕೊಡಬಹುದು, ಆದರೆ ಆ ಅನುಭವವನ್ನು ಕಲಿಸಲಾಗದು ಅಥವಾ ಆ ಮೂಲಕ ನಮ್ಮದಾಗಿಸಿಕೊಳ್ಳಲಾಗದು.

೪. ಪ್ರೀತಿಯನ್ನು ಕೇಳಬಹುದು, ಕೊಡಬಹುದು, ನಮ್ಮ ಸುತ್ತಲೂ ಬದುಕಿರುವ ಎಲ್ಲರಲ್ಲೂ ಅದರ ಸ್ವರೂಪವನ್ನು ನೋಡಬಹುದು, ಆದರೆ ಒಬ್ಬರ ಕಣ್ಣು ತಪ್ಪಿಸಿ ಅದನ್ನು ಕದಿಯಲಾಗದು.

೫. ಬರೆಯುವುದು ಉತ್ತಮ, ಚಿಂತಿಸುವುದು ಅತ್ಯುತ್ತಮ : ಜಾಣ್ಮೆ ಉತ್ತಮ, ಸಹನೆ ಅತ್ಯುತ್ತಮ.

೬. ಪ್ರೀತಿಯಲ್ಲಿರುವ ಪ್ರೇಮಿಗಳಿಬ್ಬರು ಒಬ್ಬರನ್ನೊಬ್ಬರು ಪ್ರಶಂಸಿಸದ ಹೊರತು ಒಬ್ಬರಿಂದೊಬ್ಬರು ಅಗಲಬಾರದು.

೭. ಸಭ್ಯತೆ, ಅನಾಗರಿಕತೆಗಿಂತಲೂ; ನೀರು, ಕಲ್ಲಿಗಿಂತಲೂ ಹಾಗೂ ಪ್ರೀತಿ, ಅಧಿಕಾರಕ್ಕಿಂತಲೂ ಶಕ್ತಿ ಶಾಲಿ.

೮. ಜ್ಞಾನವನ್ನು ಹೇಳಬಹುದು, ಹಂಚಿಕೊಳ್ಳಬಹುದು. ತಿಳುವಳಿಕೆ ಅಥವಾ ಅನುಭವವನ್ನು ಹಂಚಿಕೊಳ್ಳಲಾಗದು, ಎಂಥ ಜ್ಞಾನಿಯೂ ಅದನ್ನು ಹಂಚಿಕೊಳ್ಳಲು ಸಿದ್ಧನಾದಾಗ ಮೂರ್ಖನೆನಿಸಿಕೊಳ್ಳುತ್ತಾನೆ.

ಹೀಗೆ ಹೆರ್ಮನ್ ಹೆಸ್‌ನ ಸಿದ್ಧಾರ್ಥನ ತುಂಬಾ ಆತನ ಅನುಭವದ ರಸಾತಳದಿಂದ ಬಂದ ಅನೇಕ ಹೇಳಿಕೆಗಳಿವೆ. ಇಡೀ ಗ್ರಂಥವನ್ನು ಕಂಠಪಾಠ ಮಾಡಬೇಕು ಎಂದು ಓದುಗರಿಗೆ ಅನ್ನಿಸುವಂಥ ಜೀವನ ಪ್ರೀತಿಯನ್ನು ಈ ಕಾದಂಬರಿಯಲ್ಲಿ ಆತ ತುಂಬಿದ್ದಾನೆ. ಸಿದ್ಧಾರ್ಥ ಬಂದ ಹೊಸದರಲ್ಲಿ ಪೂರ್ವ ಪಶ್ಚಿಮಗಳ ಚಿಂತಕರಿಬ್ಬರೂ ಹೆಸ್‌ನ ವೈಚಾರಿಕತೆಗೆ, ಭಾವ ಸೌಂದರ್ಯಕ್ಕೆ ಮುಗ್ಧರಾದರು, ನಮ್ಮ ನವ್ಯದ ಲಂಕೇಶ, ಬುದ್ಧನನ್ನು ಕುರಿತು ಬರೆದ 'ಮೋಕ್ಷ ಹುಡುಕುತ್ತ ಪ್ರೀತಿಯ ಬಂಧನದಲ್ಲಿ' ಹೆಸ್‌ನ ಪ್ರಭಾವದ ಒಂದು ಉದಾಹರಣೆ ಅಷ್ಟೆ

ಪೂರ್ವದ ತೀವ್ರ ಆಕರ್ಷಣೆಗೆ ಒಳಗಾಗಿದ್ದ ಹೆಸ್ ಎಲ್ಲಿಯೂ ಮೈಮರೆಯುವುದಿಲ್ಲ. ಯಾವುದೇ ಗೊಡ್ಡು ಸಿದ್ಧಾಂತಗಳಿಗೆ ತಲೆದೂಗುವುದಿಲ್ಲ. ಮನುಷ್ಯ ನಿರ್ಮಿತ ಯುದ್ಧದಂತ ಹೇಯ ಕ್ರಿಯೆಯಿಂದ ಭೀತಗೊಂಡಿದ್ದ ಹೆಸ್ ಯುದ್ಧವನ್ನು ಹಾಗೂ ಅದರ ಭೀತಿಯನ್ನು ಮನುಷ್ಯನ ಬಾಹ್ಯ ಹಾಗೂ ಆಂತರಿಕ ಜಗತ್ತುಗಳೆರಡರಿಂದಲೂ ಬುಡ ಸಮೇತ ನಿರ್ಮೂಲಗೊಳಿಸಲು ಯತ್ನಿಸುತ್ತಾನೆ. ಹೆಸ್‌ನ ಪಾಲಿಗೆ ಬದುಕು ಎನ್ನುವುದು ಶರಣಾಗತಿಯಲ್ಲ. ಅಂತೆಯೆ ಹರ್ಮನ್ ಹೆಸ್‌ನ ಸಿದ್ಧಾರ್ಥ ಮತ್ತೆ ಮತ್ತೆ ಹೇಳುತ್ತಾನೆ. "I will no longer try to escape from Siddhartha. I will no longer devote my thoughts to Atman and the sarrows of the world. I will no longer mutilate and destroy myself in order to find a secret behind the ruins. I will no Longer study Yoga-Veda, Atharva veda- or asceticism, or any other teachings I will learn from myself, be my own pupil I will learn from myself the secret of Siddhartha"

✦✦

ಡಾ. ರಾಜಶೇಖರ ಮಠಪತಿ ಅಧ್ಯಾಪಕರು, ಸ್ನಾತಕೋತ್ತರ ಇಂಗ್ಲೀಷ್ ವಿಭಾಗ
ಬಸವೇಶ್ವರ ಕಲಾ ಮಹಾವಿದ್ಯಾಲಯ, ಬಾಗಲಕೋಟ.

ಪಶ್ಚಾತ್ತಾಪ

ಮಿಥುನ ಚಕ್ರವರ್ತಿ

ಬೆಳಿಗ್ಗೆ ಕಾಡಿಗೆ ಮೇಯಲು ಹೋಗಿದ್ದ ದನಕರುಗಳು ಸಂಜೆ ಆರು ಘಂಟೆಯ ಸುಮಾರಿಗೆ ಮನೆಗೆ ಹಿಂತಿರುಗಿ ಬಂದವು. ದೈನಂದಿನ ಪರಿಪಾಠದಂತೆ ಅವುಗಳ ನಿಗ ನೋಡುತ್ತಿದ್ದವರು ಮಾವಯ್ಯನವರು. ಆದರೆ ಅವರು ಇಂದಿಲ್ಲವಲ್ಲ! ಶಾನುವಳ್ಳಿ ಭಾಲಚಂದ್ರ ಗೌಡರ ಮನೆ ಪಂಚಾಯ್ತಿಗೆ ಹೋಗಿದ್ದಾರೆ. ಹೋದ ಮೇಲೆ ಇಂದೇ ಬರುತ್ತಾರೆಂದರೂ ಇಲ್ಲ. ನಾಳೆಯೂ ಆಗಬಹುದು, ನಾಡಿದ್ದೂ ಆಗಬಹುದು. ಅಲೆಮಾರಿತನ ಮಾವಯ್ಯನ ಸ್ವಭಾವಗುಣವೇ ಅಲ್ಲವೆ ಎಂದುಕೊಂಡು ಲಲಿತ, ಸುಬ್ಬಿ ಮತ್ತು ಗೌರಿ ಬರದಿದ್ದನ್ನು ಗಣನೆಗೆ ತಂದುಕೊಂಡು ಉಳಿದವುಗಳನ್ನು ಕಟ್ಟಿ ಒಣಹುಲ್ಲನ್ನು ತರಲು ಹಿತ್ತಲಿಗೆ ನಡೆದಳು.

ಗೌರಿಗೆ ಕೆಚ್ಚಲಿಳಿಸಲು ಸಾಮಾನ್ಯ ಇನ್ನೂ ಮೂರು ನಾಲ್ಕು ದಿನಗಳು ಬೇಕಾಗಬಹುದು. ಸುಬ್ಬಿ ಮಾತ್ರ ಕರುಹಾಕಿ ನಾಲ್ಕು ದಿನ ತುಂಬಿತ್ತು. ಬೆಳಿಗ್ಗೆ ಮಗಳನ್ನು ಬಿಟ್ಟು ಹೋಗಲು ತುಂಬ ತಡಕಾಡಿದಳು. ಮಾವಯ್ಯ ಕೇಳಬೇಕಲ್ಲ ತಮ್ಮ ಅಡ್ಡ ಬಡಿಗೆಯನ್ನು ಎತ್ತರದಲ್ಲಿ ಬೀಸಿ ಕಣ್ಣು ಕಿಸಿದು ಬಾಯಿ ಮಾಡಿದ್ದೇ ತಡ, ಅದರ ರುಚಿಯನ್ನು ಕಳೆದ ಹತ್ತಾರು ವರ್ಷಗಳಿಂದ ಚೆನ್ನಾಗೇ ಕಂಡುಕೊಂಡ ಸುಬ್ಬಿ ತನ್ನ ಬಂಧುಗಳೊಡನೆ ಅನಿವಾರ್ಯವಾಗಿ ಕಾಡಿನ ಕಡೆಗೆ ಭಾರವಾದ ಹೆಜ್ಜೆ ಹಾಕಿದ್ದಳು. ಇಷ್ಟು ಕತ್ತಲಾಗುತ್ತಾ ಬಂದರೂ ಇನ್ನೂ ಹಿಂದಿರುಗದಿರುವುದು ಆಶ್ಚರ್ಯವೇ ಸರಿ ಎಂದು ಕೊಳ್ಳುತ್ತ ಕೆಟ್ಟಯೋಚನೆ ಬಂದದ್ದನ್ನು'ಒಳ್ತು' ಎಂದು

ಪರಿಸಮಾಪ್ತಿಗೊಳಿಸಿ. ಧೈರ್ಯಕ್ಕಾಗಿ ಅಗಡಿ ಚೌಡಮ್ಮನಿಗೆ ಪ್ರತಿವರ್ಷವೂ ತಪ್ಪದೇ ಕಾಯಿ ಕಳುಹಿಸಿಕೊಡುತ್ತಿದ್ದುದನ್ನು ನೆನಪಿಸಿಕೊಂಡು ಲಲಿತ ಕುದ್ದ ಕಲಗಚ್ಚನ್ನು ಒಲೆಯಿಂದ ಕೆಳಗಿಳಿಸಿ ಹಿತ್ತಲ ಬಾಗಿಲ ಸಂದಿಯಲ್ಲಿಟ್ಟು ಬಂದಳು. ಕಾಯಿ ಕಳಿಸದಿದ್ದವರಿಗೆ, ಮುಟ್ಟು-ಚಟ್ಟು ಮಾಡಿದವರಿಗೆ ಚೌಡಮ್ಮ ದನಕರಗಳನ್ನು ಅಡಗಿಸಿಟ್ಟು ಊರೆಲ್ಲ ಹುಡುಕಿಸಿ ಕಾಯಿ ಕೊಟ್ಟ ಮೇಲೆ ಪವಾಡವೆಂಬಂತೆ ಅವರ ಜಾನುವಾರುಗಳನ್ನು ಕಾಣುವಂತೆ ಮಾಡುತ್ತಿದ್ದಳು. ಆಳುಗಳು ಹುಡುಕುವಾಗ ದನಗಳು ಅಲ್ಲೇ ಮೇಯುತ್ತಿದ್ದರೂ ಅವರಿಗೆ ಕಾಣದಂತೆ ಮಾಡುತ್ತಿದ್ದ ಚೌಡಮ್ಮ ಸುತ್ತೂರಿನ ಸಮಸ್ತ ಜನರ ಭಯ ಭಕ್ತಿಗೆ ಕಾರಣೀಭೂತಳಾಗಿದ್ದಳು.

ತಾಯಿಯನ್ನು ಬಯಸಿ ಕೊಟ್ಟಿಗೆಯಲ್ಲಿ ಮಗಳು ಒದರಾಟ ನಡೆಸಿದ್ದಳು. ನಾಲ್ಕು ದಿನವೂ ತುಂಬದ ಕರು. ಕಿವಿಯಲ್ಲಿ ಗಾಳಿ ಹೊಕ್ಕೊಡನೆ ಸಿಕ್ಕಲ್ಲಿ ಓಡುತ್ತಿದ್ದಳು. ಅಂಬಾ ಎನ್ನುವ ಸ್ಪಷ್ಟ ಉಚ್ಚಾರಣೆಯೂ ಬರದು. ಪ್ರಯಾಸದಿಂದ ಬಾಯಿತೆರೆದು ಕಷ್ಟಪಟ್ಟು ಅಂಬಾ ಎಂದರೆ ಹೊಟ್ಟೆಯ ಎರಡೂ ಪಾರ್ಶ್ವಗಳು ಒಂದಕ್ಕೊಂದು ಹತ್ತಿಕೊಂಡಂತೆ ಕಾಣುತ್ತವೆ. ಬೆಳಗಿನಿಂದ ತಾಯಿಯನ್ನೇ ಕಾಣದ ಅವಳ ಸ್ಥಿತಿ ನಿರಾಶಾದಾಯಕವಾಗಿ ಹಾಲುಣ್ಣುವ ನೆನಪಾದೊಡನೆ ಬಿಟ್ಟೂ ಬಿಡದೆ ಕೂಗುತ್ತಾಳೆ. ಮಗುವಿನ ಸಂಕಟವೆಂದರೆ ಎಲ್ಲಾ ಒಂದೇ ಅಲ್ಲವೇ? ಮನುಷ್ಯನಾದರೇನು, ಪ್ರಾಣಿಯಾದರೇನು! ಲಲಿತಳದೂ ತಾಯಿಯ ಹೃದಯವಲ್ಲವೇ? ಗೊಟ್ಟದಲ್ಲಿ ಸ್ವಲ್ಪ ಬೆಳಗಿನ ಹಾಲನ್ನು ಹಾಕಿ ಕುಡಿಸಿದಳು.

ಹೊರಗಡೆ ತಂಪು ಕುಳಿರ್ಗಾಳಿಯೊಂದಿಗೆ ಕತ್ತಲ ಕಾಳಿ ನಿಧಾನ ಹೆಜ್ಜೆ ಇಟ್ಟು ಅಳಿದುಳಿದ ಸುತ್ತಮುತ್ತಲ ಬೆಳಕನ್ನು ಬೆಕ್ಕು ಜಾಗರೂಕತೆಯಿಂದ ಹಾಲು ನೆಕ್ಕುವಂತೆ ತೃಪ್ತಿಯಿಂದ ನೆಕ್ಕುತ್ತಿತ್ತು. ಲಲಿತಳ ಗಂಡ ಸದಾಶಿವ ಮಕ್ಕಳನ್ನು ದೂರದ ಧಾರವಾಡದಿಂದ ಮನೆಗೆ ಕರೆದುಕೊಂಡು ಬರಲು ಹೋಗಿದ್ದನು. ಲಲಿತ ಅಗಸಿ ಬಾಗಿಲನ್ನು ಹಾಗೇ ತೆರೆದು ಬಂದಿದ್ದಳು. ಕತ್ತಲಾದ ಕಾರಣ ಹೊರಗೆ ಕಾಲಿಡಲು ಅಂಜಿ 'ಕ್ರೊ.ಕ್ರೊ' ಎಂದು ಟಿಪ್ಪುವನ್ನು ಕರೆದಳು. ಟಿಪ್ಪು ಬಾಲ ಅಲ್ಲಾಡಿಸುತ್ತ ಹಿತ್ತಲ ಬಾಗಿಲ ಬಳಿ ಬಂದು ಆಕೆಯ ಕೈಯನ್ನೇ ನಿರೀಕ್ಷಿಸುತ್ತ ನಿಂತಿತು. ಸುಬ್ಬಿ ಬಂದರೆ ಬರಲಿ ಕೊರಳಿನ ಲೊಡಂಗ ಕೇಳಿಸುತ್ತದಲ್ಲ ಎಂದುಕೊಂಡು ಹಿತ್ತಲಿಗೆ ಹೋಗಿ ಬಿದಿರಿನ ಗಳುಗಳನ್ನು ದಡಪಿಯ ಸರುಗೋಲಿಗೆ ಸಿಕ್ಕಿಸಿ ಭದ್ರಮಾಡಿ ಹಿಂತಿರುಗಿದಳು. ಕಲಗಚ್ಚು ಇನ್ನೂ ಆರಿರಲಿಲ್ಲ. ಬೇಗ ಹಾಲಿನ ಕೆಲಸ ಮುಗಿಸುವ ಎಂದುಕೊಂಡು ಅದನ್ನು ಅರ್ಧ ಮುಸುರೆಯೊಂದಿಗೆ ಸಮಮಾಡಿ ಹಿಂಡಿಸಿಕೊಳ್ಳುವ ಆಕಳುಗಳ ಮರಿಗೆಗೆ ಸುರಿದು ಬಂದಳು. ದೂರ ಕಟ್ಟಿದ್ದ ಕರುಗಳು ತಾಯಿಯ ಬಳಕೆಗೆ ಹಾತೊರೆಯುತ್ತ ತಮ್ಮ ಕಣ್ಣಿಗಳನ್ನು ಜಗ್ಗಾಡಿ, ಕಸರತ್ತು ತೋರಿಸಿ ನಡುನಡುವೆ 'ಅಂಬ್ಯಾ' ಎಂದು ಕೂಗುತ್ತಿದ್ದವು. ಲಾಟೀನಿನ ತುಂಬ ಎಣ್ಣೆ ಹಾಕಿ ಹಾಲಿನ ಎರಡು ದೊಡ್ಡ ಕೊಳಗಗಳನ್ನೂ, ಒಂದು ಹಿಂಡುವ ತಾಲಿಯನ್ನೂ ಹಿಡಿದು ಲಲಿತ ಕೊಟ್ಟಿಗೆ ಪ್ರವೇಶಿಸಿದಳು. ಎತ್ತರದ ಮರದ ಬಡ್ಡೆಯ ಮೇಲೆ ಲಾಟೀನನ್ನು ಕುಕ್ಕರಿಸಿ, ಉಳಿದೆರಡು ಕೊಳಗಗಳನ್ನು ಇರಿಸಿ, ಸಣ್ಣ ತಾಲಿಯೊಂದಿಗೆ ಕರೀ ಆಕಳ ಕರುವನ್ನು ಮೊಲೆಯುಣ್ಣಲು ಬಿಟ್ಟಳು. ಹತ್ತಿಪ್ಪತ್ತು ದಿನದ ಕರು. ಹೆಚ್ಚು ರೂಢಿಯಿಲ್ಲದ್ದು. ತಾಯಿಯ ಮುಂಗಾಲಿನ ಹತ್ತಿರ ಕೆಚ್ಚಲಿಗಾಗಿ ತಡಕಾಡಿ

ಜೋತುಬಿದ್ದ ಚರ್ಮವನ್ನೇ ಗಡಿಬಿಡಿಯಿಂದ ಬಾಯಿಗೆಳೆದುಕೊಳ್ಳುತ್ತಿತ್ತು. ಅದನ್ನು ಹಿಡಿದು ತಾಯಿಯ ಮೊಲೆಯ ಹತ್ತಿರ ಬಿಟ್ಟೊಡನೇ ಕೆಚ್ಚಲನ್ನು ಗುದ್ದಿ ಗುದ್ದಿ 'ಚಪ್ ಚಪ್' ಎನ್ನುವ ಶಬ್ದದೊಂದಿಗೆ ಮೊಲೆಯುಣ್ಣತೊಡಗಿತು. ಅದನ್ನು ಹಿಡಿದು ಪಕ್ಕದ ಗೊಟಕ್ಕೆ ಕಟ್ಟಿ 'ಚೊರ್ ಚೊರಸ್' ಎಂದು ಬಿಸಿ ಹಾಲು ಕರೆಯಲು ಅಂಗಳದಲ್ಲಿ ಸುತ್ತುತ್ತಿದ್ದ ಟಿಪ್ಪು ಲಲಿತಳಿಗೆ ಧೈರ್ಯಕ್ಕಾಯಿತು.

ಬರೀ ಮೂರು ಆಕಳನ್ನು ಕರೆಯಲು ಮೂವತ್ತು ನಿಮಿಷ ಹಿಡಿಯಿತು. ನಾಲ್ಕನೆಯದರ ಕೆಚ್ಚಲಿಗೆ ಕೈ ಹಾಕುತ್ತಿದ್ದಂತೆ ಅದು ಒದೆತ ಪ್ರಾರಂಭ ಮಾಡಿತು. ಇನ್ನಷ್ಟು ಹಾಲುಣ್ಣಲಿ ಎಂದು ಕರುವನ್ನು ಬಿಟ್ಟಳು. ಆದರೂ ಅದು ಆ ಕಡೆಯಿಂದ ಈ ಕಡೆಗೆ, ಈ ಕಡೆಯಿಂದ ಆ ಕಡೆಗೆ ಅಲೆದಾಟ ಪ್ರಾರಂಭಿಸಿ ಕೆಚ್ಚಲಿಗೆ ಕೈ ಹಾಕಿದೊಡನೆ ಒದೆತ ಪ್ರಾರಂಭಿಸಿತು. ಲಲಿತಳಿಗೆ ಆಗಲೇ ಸಿಟ್ಟು ನೆತ್ತಿಗೇರಿತ್ತು. ಇನ್ನೂ ಹಿಂಡಿಸಿಕೊಳ್ಳುವ ಎರಡು ಆಕಳುಗಳು ಬಾಕಿ ಇದ್ದವು. ಅಷ್ಟರಲ್ಲಿ ಅತ್ತೆ ಗಿರಿಜಮ್ಮ ಒಂದಾ ಮಾಡಬೇಕೆಂದು ಕರೆಯಹತ್ತಿದ್ದಳು. ಕುಡಿದು ಸಾಯಲಿ ಎಂದು ಕರುಗಳನ್ನು ಬಿಟ್ಟು ಅವಕ್ಕೆ ಅಜೀರ್ಣವಾದರೆ ಏನು ಗತಿ? ಎಂದು ಸಂಶಯ ಪಡುತ್ತ ತನ್ನ ಸಗಣಿಗಾಲನ್ನು ತೊಳೆದುಕೊಂಡು ಹಿತ್ತಲ ಬಾಗಿಲನ್ನು ಪ್ರವೇಶಿಸಿದಳು. ಅಡುಗೆ ಮನೆಯಲ್ಲಿ ಆಗಲೇ ಅವಳತ್ತೆ ಒಂದಾ ಹೋಗಲು ತಯಾರಾಗಿ ಕೂತಿದ್ದಳು.

'ಈ ಶನಿಯಿಂದ ಅಂತೂ ಮನೆತನಕ್ಕೆ ಮುಕ್ತಿಯಿಲ್ಲ. ಇದಕ್ಕೆ ಆ ದೇವರು ಸಾವು ಎಲ್ಲಿಟ್ಟಿದ್ದಾನೋ? ನಾನೊಬ್ಬಳೇ ಎಲ್ಲ ಮಾಡಿ ಸಾಯಬೇಕು' ಎಂದು ಗೊಣಗುಡುತ್ತ ಲಲಿತ ಕೈಯಲ್ಲಿದ್ದ ಹಾಲಿನ ಕೊಳಗವನ್ನು ನೆಲಕ್ಕೆ ಜೋರಾಗಿ ಕುಕ್ಕಿದ ರಭಸಕ್ಕೆ ತುಂಬಿದ್ದ ನೊರೆಹಾಲು ತುಳುಕಿ ಹರಿಯಿತು. ಅತ್ತೆಯನ್ನು ಹೊಸ್ತಿಲಿನಿಂದ ಇಳಿಸುತ್ತ ನಾಲ್ಕು ಗುದ್ದು ಗುದ್ದಿ 'ಈ ಮುಣ್ಯಾತ್ಗಿತ್ತಿಗೆ ತಿನ್ನದು, ಹೇಲದೂ ಬಿಟ್ರೆ ಬೇರೆ ಕೆಲಸನೇ ಇಲ್ಲ' ಎಂದು ಅಬ್ಬರಿಸಿ, ಎಳೆದಾಡಿ ಮೂಲೆಗೆ ಕೂರಿಸಿದಳು.

ಲಲಿತಳ ಅತ್ತೆ ಗಿರಿಜಮ್ಮನಿಗೆ ಪಾರ್ಶ್ವವಾಯು ಬಡಿದು ಬರುವ ಮುಣ್ಣೆತ್ತಿನ ಅಮವಾಸ್ಯೆಗೆ ಸರಾಸರಿ ನಾಲ್ಕು ವರ್ಷ ತುಂಬುತ್ತದೆ. ಮೊದಲ ಸಲ ಬರೀ ಬಾಯಿಗೆ ಬಡಿದಾಗ ತೊದಲುತ್ತ ತನ್ನ ಕೆಲಸ ತಾನು ಮಾಡಿಕೊಳ್ಳುತ್ತಿದ್ದಳು. ಮುಂದಿನ ಅಮವಾಸ್ಯೆ ಬರುವುದರೊಳಗೆ ಸಂಪೂರ್ಣ ಬಲಭಾಗಕ್ಕೆ ಗಟ್ಟಿಯಾಗೇ ಬಡಿಯಿತು. ಒಂದೆರಡು ತಿಂಗಳು ಔಷಧಿಗಾಗಿ ಮನೆಮಂದಿಯಲ್ಲ ತುಂಬಾ ಗಂಭೀರವಾಗಿ ಮುತುವರ್ಜಿಯಿಂದ ಹುಡುಕಾಡಿ, ತರಿಸಿ, ಹೊತ್ತೊತ್ತಿಗೆ ಉಪಚಾರ ಮಾಡಿದರು. ಆದರೆ ಗುಣವಾಗುವ ಯಾವ ಭರವಸೆಯೂ ಕಾಣಲಿಲ್ಲ. ಇದಕ್ಕೆ ಮೊದಲು ಮನೆಯ ಕೆಲಸ ಏನೂ ಗೊತ್ತಾಗದಂತೆ ನಡೆದುಕೊಂಡು ಹೋಗುತ್ತಿತ್ತು. ಈಗ ದಿಢೀರನೆ ಮನೆಯ ಎಲ್ಲ ಕೆಲಸಗಳೂ ಲಲಿತಳ ತಲೆಯ ಮೇಲೆ ಬಿದ್ದದ್ದು ಆಕೆಗೆ ಒಂದು ಅಗ್ನಿ ಪರೀಕ್ಷೆಯಂತೆಯೇ ಗೋಚರಿಸಿತ್ತು. ಹಾಗಂತ ಲಲಿತ ಏನೂ ತುಂಬಾ ನಾಜೂಕಾದ, ಕಷ್ಟವನ್ನರಿಯದ ಹೆಂಗಸೇನಲ್ಲ. ಹದಿನೆಂಟು ವರ್ಷಕ್ಕೇ ಮದುವೆಯಾಗಿ ಗಂಡನ ಮನೆಗೆ ಬಂದು ಒಂದು ಮೈಲಿ ದೂರವಿದ್ದ ಸವಕಾರಿ(ಸರ್ಕಾರಿ) ಬಾವಿಯಿಂದ ನೀರು ಸೇದಿ ಗರ್ಭಿಣಿಯಾಗಿ ಹಡೆಯಲು ಒಂದು ವಾರ ಉಳಿದಾಗಲೂ ಕೂಡ ನೀರು ಹೊತ್ತು ಇಡೀ ಮನೆಯುನ್ನು ಸರಿದೂಗಿಸಿಕೊಂಡು ಹೋದಾಕಿ. ಅಷ್ಟರಲ್ಲಾಗಲೇ ಅತ್ತೆಯು ಸೊಂಟ ಬಗ್ಗಿ

ಹೋಗಿತ್ತಾದರೂ ಮನೆಯಲ್ಲಿ ಲಲಿತಳಿಗೆ ಜವಾಬ್ದಾರಿಯ ಗಟ್ಟಿ ಕೆಲಸಗಳನ್ನು ಮಾಡಿಯೇ ಗೊತ್ತಿರಲಿಲ್ಲ ಎಂದರೆ ತಪ್ಪಾಗಲಿಕ್ಕಿಲ್ಲ. ಸೊಂಟ ಬಗ್ಗಿದರೂ ಗಿರಿಜಮ್ಮ ಒಂದು ದಿನವೂ ಕೂತುಂಡ ಪೈಕಿಯಲ್ಲ. ಮನೆಮಂದಿಗೆಲ್ಲ ರುಚಿ ರುಚಿಯಾದ ಅಡುಗೆ ಮಾಡಬೇಕು. ಮನೆಮಂದಿ ಎಂದರೆ ಮನೆಯಲ್ಲಿ ಇದ್ದವರು ಎಷ್ಟು ಜನ? ಗಂಡ-ಹೆಂಡತಿ ಮತ್ತು ಮಗ-ಸೊಸೆ. ಮೊಮ್ಮಕ್ಕಳಿಬ್ಬರನ್ನೂ ದೂರದ ಪಟ್ಟಣದಲ್ಲಿ ವಿದ್ಯಾಭ್ಯಾಸಕ್ಕಾಗಿ ಇರಿಸಿಯಾಗಿತ್ತು. ಅವು ಮನೆಗೆ ಬರುವುದು ವರ್ಷದಲ್ಲಿ ತುಂಬಾ ನಿಷ್ಕಾರುಣ್ಯವಾಗಿ ಬರುವ ಎರಡೇ ರಜೆಗಳಲ್ಲಿ: ಒಂದು ಬೇಸಿಗೆ, ಮತ್ತೊಂದು ಮಾರ್ನಾಮಿ.

ಮನೆಯಲ್ಲಿರುವವರು ನಾಲ್ಕೇ ಮಂದಿಯಾದರೂ ಗಿರಿಜಮ್ಮ ಪ್ರತಿದಿನವೂ ಹತ್ತು-ಹದಿನೈದು ಮಂದಿಗೆ ಕಡಿಮೆಯಾಗದಂತೆ ಬೇಯಿಸುವುದನ್ನು ರೂಢಿಮಾಡಿಕೊಂಡು ಬಂದಿದ್ದಳು. ಹೆಸರಿಗೆ ವಿಭಕ್ತ ಕುಟುಂಬವೆನಿಸಿದರೂ ಇದು ಅವಿಭಕ್ತ ಕುಟುಂಬವೇ ಸರಿ. ಮನೆಗೆ ಬರುವವರು ದಿನವೂ ಒಬ್ಬರಲ್ಲ ಒಬ್ಬರು ಇರುತ್ತಿದ್ದರು. ಸಿದ್ಧಯ್ಯನವರು ಮತ್ತು ಪಟೇಲರನ್ನು ನಿಕ್ಕಿ ಹಿಡಿದರೂ ಆರು ಮಂದಿ ಮಾತ್ರ. ಆದರೆ ಉಳಿದ ಮನೆಗಳಿಗೆ ಬಂದ ಬೀಗರು; ಹೊಸದಾಗಿ ಆ ಊರಿಗೆ ಕೊಟ್ಟ ಹೆಣ್ಣುಮಕ್ಕಳ ನೆಂಟರು; ಐನೇರ ಹತ್ತಿರ ಜಾತಕ ಬರೆಸಲಿಕ್ಕೆ, ನೋಡಿಸಲಿಕ್ಕೆ, ಲಗ್ನ ಮಹೂರ್ತ ಕೇಳಿಸಲಿಕ್ಕೆ ಬಂದ ದೂರದೂರಿನವರು; ನಾಟಾ ಕೊಯ್ಯಿಸಲಿಕ್ಕೆ ಬಂದರೆ ನಿಂಗಪ್ಪಗೌಡ ಮತ್ತು ಅವನ ಸಹಚರರು, ಆಚಾರಿಗಳು; ಕಳೆದು ಹೋದ ದನ ಹುಡುಕಲಿಕ್ಕೆಂದು ಬಂದ ಯಾರಾದರೂ... ಗಿರಿಜಮ್ಮನಿಗೆ ತಾ ಮಾಡಿದ ಅಡಿಗೆ ಉಳಿದು ಹಾಳಾಗುತ್ತದೆಂಬ ಶಂಕೆ ಒಂದು ದಿನವೂ ಕಾಡಿದ್ದೇ ಇಲ್ಲ. ಇಷ್ಟಾದ ಮೇಲೆ ಆಳು ಕಾಳಿಗೆ ಬೇರೆ. ಗಟ್ಟದ ಕೆಳಗಿನ ಜನರ ಹಾಗೆ ಬರೀ ಗಂಜಿ ಬೇಯಿಸಿಟ್ಟರಾಗದು. ಆಳಿಗೆ ಐದರಂತೆ ಹಿಡಿದರೂ ಸರಿಸುಮಾರು ದಿನಕ್ಕೆ ಅರವತ್ತರಿಂದ ಎಪ್ಪತ್ತು ರೊಟ್ಟಿ ಬೇಕೇ ಬೇಕು. ರೊಟ್ಟಿಗೆ ಪ್ರತಿದಿನವೂ ಎರಡು ಬಗೆಯ ಪಲ್ಯ, ಮೇಲೆ ಹುಳಿಪಲ್ಯ, ಕರಿಹಿಂಡಿ, ಖಾರದ ಚಟ್ನಿ. ಚಟ್ನಿಪುಡಿಗಳ ಪೈಕಿ ಅಗಸೆ, ಶೇಂಗ, ಉದ್ದಿನ ಹಿಟ್ಟು, ಗುರೆಳ್ಳಿನ ಪುಡಿ, ಕೆಲವೊಮ್ಮೆ ಹುಚ್ಚೆಳ್ಳು ಪುಡಿಗಳು ಯಾವಾಗಲೂ ಮನೆಯಲ್ಲಿ ಶಾಶ್ವತ ಸ್ಥಾನ ಗಿಟ್ಟಿಸಿಕೊಂಡಿದ್ದವು. ದಿಢೀರನೆ ಯಾರಾದರೂ ಅಪವೇಳೆಯಲ್ಲಿ ಬಂದರೆ ಇವು ರೊಟ್ಟಿಯೊಂದಿಗೆ ಹಂಚಿಕೊಳ್ಳಲು ಭಾಜನರಾಗಿ ಮರ್ಯಾದೆ ಉಳಿಸುತ್ತಿದ್ದವು. ಹಾಲು, ಮೊಸರು, ತುಪ್ಪಕ್ಕಂತೂ ಮನೆಯಲ್ಲಿ ಯಾವಾಗಲೂ ಕೊರತೆ ಬಿದ್ದದ್ದೇ ಇಲ್ಲ. ತಿಂಗಳಿಗೊಮ್ಮೆಯಂತೆ ಒಂದಾದರೂ ಆಕಳು ಕೆಚ್ಚಲಿಳಿಸಿಯೇ ತೀರುತ್ತಿತ್ತು. ಹಾಗೇ ಮುಂದಿನ ಸರದಿಗೆ ಗಬ್ಬಾದ ಆಕಳಾಗಲೀ, ಎಮ್ಮೆಯಾಗಲೀ ಕಾಯುತ್ತಿರುತ್ತಿದ್ದವು. ಇರುವ ನಾಲ್ಕು ಮಂದಿಗೆ ಇಷ್ಟೊಂದು ದನಕರಗಳು ಬೇಕೇ?- ಇದರ ಸಲುವಾಗಿ ಶಾಂತಪ್ಪಗೌಡರ ಎಂದೂ ಯೋಚಿಸಿದ್ದೇ ಇಲ್ಲ. ಆದರೆ ಮಗನಿಗೆ ಇದರ ಬಗ್ಗೆ ಅತೀವ ಅಸಮಾಧಾನವಿತ್ತು. ಅವನು ತನ್ನ ಕಾಲಮಾನಕ್ಕೆ ತಕ್ಕಂತೆ ಕಾಲ ಹಾಕಬೇಕೆಂದು ಇಂಥ ಅನವಶ್ಯಕ ಗೌಡಿಕೆಯನ್ನು ಸಮಯ ಸಿಕ್ಕಾಗ ಮುರಿಯುತ್ತಲೇ ಬಂದಿದ್ದನು. ಇದರ ಸಲುವಾಗಿ ಅಪ್ಪ ಮಗನಲ್ಲಿ ಹಲವಾರು ಬಾರಿ ಮಾತಿಗೆ ಮಾತು ಬೆಳೆದು ಮನಸ್ತಾಪಗಳಾಗಿದ್ದವು. ದಿನವೂ ಬಿಟ್ಟಿ ಊಟ ಮಾಡಲು ಮನೆಗೆ ಬರುವ ದಂಡನ್ನು ಮಗ ಸಹಿಸುತ್ತಿರಲಿಲ್ಲ. ಶಾಂತಜ್ಜನಿಗೆ ಇದು ದಾಸೋಹವೆನಿಸಿದರೆ ನವ ಪೀಳಿಗೆಯ ಮಗನಿಗೆ ದುಂದು ಎನಿಸುತ್ತಿತ್ತು. ಮನೆಯಲ್ಲಿ ಉಳಿದವರಿಗ್ಯಾರಿಗೂ ಇದರ

ಬಗ್ಗೆ ಯೋಚಿಸಬೇಕೆಂದು ಎಂದೂ ಅನಿಸಿರಲಿಲ್ಲ. ಇನ್ನು ಪ್ರಸ್ತಾಪ ಮಾಡುವ ಮಾತೇ ಬರುವುದಿಲ್ಲವಲ್ಲ!

ಪೇಟೆಯಲ್ಲಿ ತಮ್ಮಷ್ಟಕ್ಕೆ ತಾವು ಬದುಕುವ ಯಾವುದೇ ಸಂಸಾರದ ಯಜಮಾನನು ಶಾಂತಜ್ಜನ ಜೀವನವೈಖರಿಯನ್ನು ದುಂದು ಎಂದೇ ಪರಿಗಣಿಸುತ್ತಿದ್ದ. ಅಪ್ಪನ ಜೀವನ ಶೈಲಿ ಸರಿಯೋ, ಮಗನ ಜೀವನ ಶೈಲಿ ಸರಿಯೋ? ಎಂಬುದಕ್ಕೆ ಸಮರ್ಥನೆ ಕೊಡುವುದು ಕಷ್ಟವೇ ಆದೀತು. ಇತ್ಯರ್ಥ ನಿಂತ ಘಳಿಗೆಗೆ ಮಾಡದಿರುವುದು ಕ್ಷೇಮಕರ. ಹಳ್ಳಿಯ ಜೀವನ ಹಳ್ಳಿಗೆ, ಪೇಟೆಯ ಜೀವನ ಪೇಟೆಗೆ. ಈ ಉತ್ತರವಷ್ಟೇ ಸದ್ಯಕ್ಕೆ ಸಮಂಜಸ.

ಮೊದಮೊದಲು ಅತ್ತೆಯ ಚಾಕರಿ ಲಲಿತಳಿಗೆ ಸೇವೆ ಎನಿಸುತ್ತಿತ್ತು. ಅದು ವರ್ಷಾನುಗಟ್ಟಲೇ ಸರಿದಾಗ ಲಲಿತಳಿಗೂ ಸಾಕುಬೇಕಾಗಿ ಹೋಯಿತು. ಪಾರ್ಶ್ವಯಾದ ಮೊದಲೊಂದು ವರ್ಷ ಅತ್ತೆಯ ಎಲ್ಲ ಕೆಲಸಗಳನ್ನೂ ಲಲಿತ ಬಹಳ ಮುತುವರ್ಜಿಯಿಂದ ಮಾಡಿದಳು . ಒಬ್ಬಳೇ ಎತ್ತಿಕೊಂಡು ಹೋಗಿ ಒಂದಾ ಮಾಡಲು ಕೂರಿಸುವಳು. ಆದ ಬಳಿಕ ನೀರು ಹಾಕಿ ಸ್ವಸ್ಥಾನಕ್ಕೆ ಎತ್ತಿಕೊಂಡು ಹೋಗಿ ತರುವಳು. ಪ್ರತಿದಿನವಲ್ಲದಿದ್ದರೂ ಎರಡು ದಿವಸಗಳಿಗೊಮ್ಮೆ ತಪ್ಪದೇ ಸ್ನಾನ ಮಾಡಿಸಿ, ಲಂಗ ತೊಡಿಸಿ, ಸೀರಿ ಉಡಿಸಿ, ತಲೆ ಬಾಚಿ, ಕುಂಕುಮ ಬಟ್ಟಿಟ್ಟು, ಊಟಕ್ಕೆ ಕೊಟ್ಟು ಆಮೇಲೆ ತನ್ನ ಕೆಲಸಗಳನ್ನು ಮಾಡಿಕೊಳ್ಳುತ್ತಿದ್ದಳು.

ಸರಿಸುಮಾರು ಒಂದು ವರ್ಷ ಕಳೆದ ಮೇಲೆ ಒಂದು ದಿನ ಲಲಿತಳಿಗೆ ಸೊಂಟದಲ್ಲಿ ವಿಪರೀತ ನೋವು ಕಾಣಿಸಿಕೊಂಡಿತು. ಒಂದು ವಾರ ಸರಿಯಾಗಿ ನೆಲವನ್ನೇ ಹಿಡಿದುಬಿಟ್ಟಳು. ಆಗ ಮಾವಯ್ಯನೇ ಅಡಿಗೆ ಮಾಡಿ, ಹೆಂಡತಿಯ ಚಾಕರಿ ಮಾಡಿ, ಸೊಸೆಗೆ ಗಂಜಿ ಬೇಯಿಸಿ ಆರೈಕೆ ಮಾಡಿದರು. ಒಂದು ವಾರ ಜ್ವರ ಮುಗಿಸಿ ಏಳುವುದರೊಳಗೆ ಅತ್ತೆ ಅನಿವಾರ್ಯವೆಂಬಂತೆ ತಾನೇ ನೆಲದಲ್ಲಿ ತೆವಳಲು ಪ್ರಾರಂಭಿಸಿದ್ದಳು. ಇದು ಲಲಿತಳಿಗೆ ಉಪಯುಕ್ತವೇ ಆಯಿತು. ಹೊಸ್ತಿಲ ತನಕ ತೆವಳಿಕೊಂಡು ಬರುತ್ತಿದ್ದಳು. ಯಾರಾದರೂ ಹೊಸ್ತಿಲಿಳಿಸಲು ಮಾತ್ರ ಬೇಕಿತ್ತು. ಮಿಕ್ಕಿದಂತೆ ತಾನೇ ಅಂಗಳದ ತನಕ ತೆವಳಿಕೊಂಡು ಮೂಲೆಗೆ ಹೋಗಿ ಒಂದಾ ಅಥವಾ ಎರಡಾ ಮಾಡಿ ನೀರಿಗಾಗಿ ಕೂಗುತ್ತಿದ್ದಳು. ಆ ಸಮಯದಲ್ಲಿ ಗಂಡಸರು ಯಾರಾದರೂ ಅಲ್ಲಿ ಸುಳಿದರೆ ಸಾಕು ಘಂಟೆಗಟ್ಟಲೇ ತಿಣುಕುತ್ತ ಕುಳಿತರೂ ಆಕೆಗೆ ಬಹಿರ್ದೆಶೆಯಾಗುತ್ತಲೇ ಇರಲಿಲ್ಲ. ಆದರೆ ಒಳಗೆ ಬಂದ ಒಂದೆರಡು ನಿಮಿಷಗಳಲ್ಲಿ ಲಂಗವೆಲ್ಲ ಭೇದಿಯಿಂದಲೋ, ಮೂತ್ರದಿಂದಲೋ ಒದ್ದೆಯಾಗಿಬಿಡುತ್ತಿತ್ತು. ಲಲಿತ ಊಟಕ್ಕೇನೂ ಕೊರತೆ ಮಾಡದ ಕಾರಣ ಗಿರಿಜಮ್ಮನಿಗೆ ದಿನಕ್ಕೆ ಕನಿಷ್ಟ ಏಳೆಂಟು ಸಲವಾದರೂ ಬಹಿರ್ದೆಷೆಗೆ ಹೋಗಬೇಕಾಗುತ್ತಿತ್ತು. ಕೆಲವೊಮ್ಮೆ ಮಲಗಿದಲ್ಲೇ ಎಲ್ಲವೂ ಆದಾಗ ಯಾರಾದರೂ ಕೇಳಿದರೆ 'ಇಲ್ಲ ಬಿಡೇ ತಂಗಿ' ಎಂದು ವಾದಿಸುತ್ತಿದ್ದಳು. ಮನೆಯವರು ಬೈಯುತ್ತಾರೆಂದೋ, ತನಗೆ ಹೇಳಲು ನಾಚಿಕೆಯಾಗಿಯೋ, ಅಂತೂ ತನ್ನಿಂದ ಯಾವುದೂ ತಪ್ಪಾಗಿಲ್ಲ ಎಂದು ಸಾಧಿಸುತ್ತಿದ್ದಳು. ಈ ಎಲ್ಲ ಕಾರಣಗಳಿಂದ ಮನೆಯಲ್ಲಿ ಕ್ರಮೇಣ ಮನಸ್ತಾಪವೂ ಆಗುತ್ತಿತ್ತು. ಗಿರಿಜಮ್ಮ ಅಡಿಗೆ ಮನೆಯ ಒಂದು ಮೂಲೆಯಲ್ಲೇಮಲಗುತ್ತಿದ್ದರಿಂದ ಇಡೀ ಅಡಿಗೆ ಮನೆ ಉಚ್ಚೆ, ಮತ್ತಿತರ ಹೊಲಸು ವಾಸನೆಯಿಂದ ತುಂಬಿ ಮನೆಯಲ್ಲಿ ಯಾರಿಗೂ ಕೂಳು-ನೀರು

ಹಿಡಿಸದಾಯಿತು. ಮೂರು ನಾಲ್ಕು ದಿನವಾದರೂ ಭೇದಿಯಾಗದಿದ್ದಾಗ ತನ್ನ ಕೈ ಬೆರಳಿನಿಂದ ಕುರಿ ಹಿಕ್ಕಿಯಂತೆ ಮಲದ ಗಟ್ಟಿ ತುಂಡುಗಳನ್ನು ತೆಗೆದು ಗಿರಿಜಮ್ಮ ತನ್ನ ಕಾಲ ಬುಡದಲ್ಲಿ ಹಾಸಿಗೆಯ ಕೆಳಗೆ ವಾಸನೆ ಬಾರದಂತೆ ಮುಚ್ಚಿಟ್ಟುಬಿಡುತ್ತಿದ್ದಳು. ಎಲ್ಲರಿಂದ 'ಛೀ..ಥೂ' ಎನ್ನಿಸಿಕೊಳ್ಳುವ ತನ್ನ ನರಕದ ಜೀವನಕ್ಕೆ ತುಂಬಾ ಮರುಗುತ್ತಿದ್ದಳು. ಈಗೀಗ ಸೊಸೆ ಅಷ್ಟಕ್ಕಷ್ಟೆಯಾಗಿ ದೂರ ಉಳಿದ ಮೇಲೆ ಶಾಂತಜ್ಜನಿಗೆ ಹೆಂಡತಿಯ ಎಲ್ಲ ಕೆಲಸಗಳನ್ನು ಮಾಡುವುದು ಅನಿವಾರ್ಯವಾಯಿತು. ಗಿರಿಜಮ್ಮ ಗಂಡನ ಕೈಯಲ್ಲಿ ಖಾಸಗಿ ಕೆಲಸಗಳನ್ನು ಮಾಡಿಸಿಕೊಳ್ಳಲಾರದೆ ಒಂದೇ ಸಮನೆ ಅಳುತ್ತಿದ್ದಳು. ಯಾರೇ ಬರಲಿ ಅವರ ಮುಂದೆ ಅಳುವುದೊಂದೇ ಪರಿಪಾಠವಾಗಿತ್ತು.

ತಿಂದದ್ದು ಭೇದಿಯಾಗದಿದ್ದಾಗ ಲಲಿತ ಅತ್ತೆಗೆ ಊಟ ಕೊಡುವುದನ್ನು ಕಮ್ಮಿ ಮಾಡಿದಳು. ಊಟ ಕೊಟ್ಟರೆ ಬಳಿಯುವ ಕೆಲಸ ಆಕೆಯ ತಲೆ ಮೇಲೆ ಬೀಳುತ್ತಿತ್ತು. ಗಂಡಸರು ಬಳಿಯುವ, ತೊಳೆಯುವ ಕೆಲಸ ಎಷ್ಟು ಮಾಡಿಯಾರು? ಅತ್ತೆಯ ಕೆಲಸ ಮಾಡಿ ಬಂದು ಊಟಕ್ಕೆ ಕುಳಿತರೆ ಲಲಿತಳಿಗೆ ಬಳಿದ ಭೇದಿಯದೇ ನೆನಪಾಗಿ ಊಟವೇ ಸೇರುತ್ತಿರಲಿಲ್ಲ. ಕೆಲವೊಮ್ಮೆ ವಿಪರೀತ ವಾಂತಿಯೂ ಆಗುತ್ತಿತ್ತು. ಪಾರ್ಶ್ವವಾಯು ಮೂರನೇ ಬಾರಿ ಬಡಿಯಿತೆಂದರೆ ಬದುಕುವುದು ಕಷ್ಟ. ಆ ಕರುಣೆಯನ್ನಾದರೂ ದೇವರು ತನ್ನತ್ತೆಯ ಮೇಲೆ ತೋರಿಸಬೇಕು ಎಂದು ಲಲಿತ ಬೇಡಿಕೊಳ್ಳುತ್ತಿದ್ದಳು. ಹಿಂದಿನ ಎರಡು ಬಾರಿಯೂ ಅಮವಾಸ್ಯೆಗೇ ಬಡಿದಿದ್ದರಿಂದ ಮೂರನೆಯ ಬಾರಿಯೂ ಅಮವಾಸ್ಯೆಗೇ ಎಂಬುದು ಆಕೆಗೆ ಖಾತರಿಯಾದಂತಾಗಿತ್ತು. ಅದಕ್ಕಾಗಿ ಕಾಯಿ ಕೆಡಗಿಸಿ ಶವಸಂಸ್ಕಾರಕ್ಕೆ ಬೇಕಾದ ಎಲ್ಲ ವಸ್ತುಗಳನ್ನೂ ಬಾಯಿಬಿಡದೇ ತಯಾರಿ ಮಾಡಿಕೊಂಡಿದ್ದಳು. ಮೂರನೇ ಬಾರಿ ಪಾರ್ಶ್ವವಾಯುವೇನೋ ಬಡಿಯಿತು, ಆದರೆ ನಿರೀಕ್ಷೆ ಸುಳ್ಳಾಯಿತು. ಗಿರಿಜಮ್ಮನದು ಗಟ್ಟಿ ಜೀವವೇ ಆಗಿ ಉಳಿಯಿತು.

ಗಿರಿಜಮ್ಮನಿಗೆ ಮಾತು ನಿಚ್ಚಳವಾಗಿ ಬರುತ್ತಿರಲಿಲ್ಲ. ಏನಾದರೂ ಹೇಳಲು ಬಾಯ್ತೆರೆದರೆ ಮುಂದಿದ್ದವರಿಗೆಲ್ಲ ಉಗುಳು ಸಿಡಿದು, ಮಾತಾಡಿದ ಶಬ್ದಗಳೆಲ್ಲ ಕದಡಿ ಹೋಗಿ ಒಂದೂ ತಿಳಿಯುತ್ತಿರಲಿಲ್ಲ. ಹಾಗಾಗಿ ಆಕೆ ಬಾಯಿ ಬಿಟ್ಟರೆ ಸಾಕು ಮನೆಯವರು ಗದರಿಸುತ್ತಿದ್ದರು. ಎಲ್ಲರ ಅಸಡ್ಡೆಗೂ ಪಾತ್ರಳಾಗಿ ತುಂಬಾ ಅಳುತ್ತಿದ್ದಳು. ಅತ್ತು ಅತ್ತು ಕಣ್ಣೀರೇ ಬರದೇ ಅಳುವುದು ತನ್ನ ದುಗುಡವನ್ನು ವ್ಯಕ್ತಗೊಳಿಸುವ ಒಂದು ಸಾಧಾರಣ ಕ್ರಿಯೆಯಾಗಿ, ರೂಢಿಯೇ ಆಗಿಬಿಟ್ಟಿತ್ತು.

ಮನೆಗೆ ಯಾರೇ ಬಂದರೂ 'ತೊತಿ ಬಯ್ತಾಲವ್ವ' ಎಂದು ಬೆಟ್ಟು ಮಾಡಿ ಅವರು ತಂದ ತಿನಿಸುಗಳನ್ನು ಬೇಗನೆ ಹಾಸಿಗೆಯ ಸಂದಿಯಲ್ಲಿ ಮುಚ್ಚಿಟ್ಟುಕೊಳ್ಳುತ್ತಿದ್ದಳು. ಇಂಥ ವರ್ತನೆಗೆ ಮನೆಯವರು ಸೇರುತ್ತಿರಲಿಲ್ಲ. ಈಗ ಹಾಸಿಗೆಯೂ ಇಲ್ಲದೇ, ಮೈಮೇಲೆ ಸರಿಯಾಗಿ ಬಟ್ಟೆಯೂ ಇರದೆ, ಸ್ನಾನ ಮಾಡದೇ ತಿಂಗಳುಗಳು ಕಳೆದು ಮೈಯೆಲ್ಲ ವಾಸನೆಯಾಗಿ, ತಲೆಯಲ್ಲೆಲ್ಲ ಹೇನಿನ ಮರಿಗಳು ಹೆಚ್ಚಿ, ತಲೆಯನ್ನೆಲ್ಲ ಕುಕ್ಕಿ ತಿಂದು ಹುಳ ಆಗುವ ಪರಿಸ್ಥಿತಿಗೆ ತಂದಿಟ್ಟಿದ್ದವು. ತಲೆಯ ಕೂದಲಷ್ಟೇ ಅಲ್ಲದೇ, ಹುಬ್ಬಿನ ಕೂದಲೂ ಉದರಿ ಅದೊಂದು ಅಸಹ್ಯ ಮನುಷ್ಯಾಕೃತಿ ಎಂದು ಹೇಳಲು ಮಾತ್ರ ಯೋಗ್ಯವಾಗಿತ್ತು. ಆರೈಕೆ ಮಾಡಿದಷ್ಟೂ ಆಯುಷ್ಯ ಎಂದು

ಲಲಿತ ಅತ್ತೆಗೆ ಸ್ವಲ್ಪ ಊಟ ಕೊಡುವುದನ್ನು ಬಿಟ್ಟರೆ ಮತ್ಯಾವ ಚಾಕರಿಯನ್ನು ಮಾಡುತ್ತಿರಲಿಲ್ಲ. ಎಲ್ಲ ಅವಳ ಮಾವಯ್ಯನೇ ಮಾಡುತ್ತಿದ್ದರು.

ಇದೇ ರೀತಿಯ ಜೀವನ ನಾಲ್ಕು ವರ್ಷ ಸಾಗಿದೆ. ಲಲಿತ ಅತ್ತೆಯ ಚಾಕರಿ ಒಂದು ದಿನ ಮಾಡಿದರೆ ಸಾಕು, ಸರಿಯಾಗಿ ವಾಂತಿಯಾಗಿ ನಿತ್ರಾಣ ಸ್ಥಿತಿಗೆ ತಲುಪಿಬಿಡುತ್ತಿದ್ದಾಳೆ. ಇದೇ ಕಾರಣವನ್ನು ಮುಂದೆ ಮಾಡಿ ಚಾಕರಿಯ ಎಲ್ಲ ಕೆಲಸಗಳನ್ನೂ ತೊರೆದು ಅಡಿಗೆ, ಮನೆಗೆಲಸಗಳನ್ನು ಮಾತ್ರ ಮಾಡಿಕೊಂಡು ಮನಸ್ಥಿತಿ ಸರಿಯಿಲ್ಲದೇ ಸದಾ ಎಲ್ಲದಕ್ಕೂ ಸಿಟ್ಟಿಗೇಳುತ್ತಿದ್ದಾಳೆ.

ರಾತ್ರಿ ಎಂಟೂವರೆಯಾಗುತ್ತಾ ಬಂದಿತ್ತು. ಸುಬ್ಬಿ ಅಗಸಿ ಹತ್ತಿರ ನಿಂತು ಮಗಳನ್ನು ಕೂಗಿ ಕೂಗಿ ಕರೆಯತೊಡಗಿದ್ದಳು. ಲಲಿತ ಆಕೆಯನ್ನು ಕಟ್ಟಿ ಆಗಷ್ಟೇ ಬಾಗಿಲು ಹಾಕಿದ್ದಳು. ಹಿತ್ತಲ ಬಾಗಿಲ ಕಡೆಯಿಂದ 'ಅಮ್ಮಾರ.. ಆಞ' ಎಂದು ಹೊಲೇರ ಸಿದ್ದ ಕೂಗಿದ. ಲಲಿತ ಹೋಗಿ 'ಯಾಕಪ್ಪ ಸಿದ್ದನ ಸವಾರಿ ಇಷ್ಟೊತ್ತಿನ್ಯಾಗ ಬಂದ್ಯೆತೀ' ಎಂದಳು. 'ಅಜ್ಜಯ್ಯ ಮಲಗಾಕ ಹೇಳಿ ಹೋಗಿತ್ತೂ' ಎಂದು ತನ್ನ ಇಸುಬು ಹತ್ತಿದ ಕಾಲನ್ನು ಪರ ಪರ ಕೆರೆದುಕೊಳ್ಳುತ್ತಾ ರಾಗವೆಳೆದ. ಲಲಿತ ಅವನ ಊಟ ಆಗಿದೆ ಎಂದು ತಿಳಿದೊಡನೇ ಬಾಯಿಗೆ ಕವಳ ಕೊಟ್ಟು ಸುಬ್ಬಿ, ಗೌರಿ ಬರದಿದ್ದ ಸುದ್ದಿಯನ್ನು ಹೇಳುತ್ತಾ ಕುಳಿತಿದ್ದಳು. ಅಷ್ಟರಲ್ಲಿ ಅಡಿಗೆಮನೆಯಲ್ಲಿ ಏನೋ ಸಪ್ಪಳವಾದಂತಾಗಿ ಸದಾ ಕಾಡುತ್ತಿದ್ದ ಹಡಬೆ ಬೆಕ್ಕಿನ ಕಾಲು ಮುರಿಯಬೇಕೆಂದುಕೊಂಡು ಅಡಿಗೆ ಮನೆಗೆ ನುಗ್ಗಿದಳು. ನೋಡುತ್ತಾಳೆ, ಅತ್ತೆಮ್ಮ ಅಕ್ಕಿಯ ಕೇಲಿನ ಹತ್ತಿರದ ಡಬ್ಬಿಯಿಂದ ಬೆಲ್ಲದ ತುಣುಕನ್ನು ಎತ್ತಲು ಬರುತ್ತಿದ್ದ ತನ್ನ ಒಂದೇ ಒಂದು ಕೈಯಿಂದ ತೆಗೆದುಕೊಳ್ಳಲು ಹವಣಿಸುತ್ತಿದ್ದಾಳೆ. ಅಲ್ಲಿಯ ತನಕ ಕತ್ತಲಲ್ಲಿ ತೆವಳಿಕೊಂಡು ಹೋದ ಅವಳ ಸಾಹಸಕ್ಕೆ ಲಲಿತಳಿಗೆ ಒಮ್ಮೆ ನಗು ಬಂತು, ತಕ್ಷಣ ಕನಿಕರ ಮೂಡಿತು, ಪಾಪ ಎನಿಸಿತು. ಆದರೆ ಇದ್ಯಾವುದನ್ನೂ ಪ್ರಕಟಗೊಳಿಸದೇ ಸಿಟ್ಟಿನಿಂದ 'ಅಯ್ಯೋ ಹಾಳು ಮುದುಕಿ ನಿನ್ನ ಹೊಲಸು ಹೇಲಿನ ಕೈಯಿಂದ ಎಲ್ಲ ನೈವೇದ್ಯ ಮಾಡತೀಯಲ್ಲೇ' ಎನ್ನುತ್ತಾ ಆಕೆಯ ರಟ್ಟೆಯನ್ನು ಹಿಡಿದು ಹೋದೊಡನೆ 'ಅಯ್ಯಯ್ಯೋ... ಬಿಡೇ ಬೋಚುಡೀ..' ಎಂದು ಗಿರಿಜಮ್ಮ ಕೂಗಿದಳು. ಲಲಿತ ಇದನ್ನು ಲೆಕ್ಕಿಸದೇ ದರದರ ಆಕೆಯನ್ನು ಸ್ವಸ್ಥಾನಕ್ಕೆ ಎಳೆದು ತಂದು ಒಂದು ಗಂಗಾಳಕ್ಕೆ ಅನ್ನ ಸಾರು ಸುರಿದು ಬಿಟ್ಟಳು.

ಗಿರಿಜಮ್ಮನಿಗೆ ತಾನು ಬದುಕಿದ ಮಡಿ ಉಡಿಯ, ಶಿಸ್ತಿನ, ಪರೋಪಕಾರದ ಜೀವನ ಒಮ್ಮೆಲೇ ಕಟ್ಟೆಯೊಡೆದಂತೆ ನೆನಪಾಯಿತು. ಆಗಿದ್ದೇ ತಡ 'ಏ ಬೋಚುಡೀ ಅಯ್... ನನ ಕೈ ಯಿಂದ ಬೆಲ್ಲದ ತುಂಡು ಕಚಗಂಡೆಲೇ, ನಿನ ಕೈ ಚೇದಿ ಹೋಗ್ಲೀ..' ಎಂದಿತು. 'ಮತ್ತ.. ನನ್ನ.. ಬೋಸಡಿ ಅಂತೀಯನೇ ಮುದಿ ಮೂಳಾ..' ಎನ್ನುತ್ತ ಲಲಿತ ಆಕೆಯ ರಟ್ಟೆಯನ್ನು ಇನ್ನೂ ನೋವಾಗುವಂತೆ ಅತ್ತಿತ್ತ ಎಳೆದಾಡಿದಳು. ಸಿದ್ದ ಹೊರಗಿನಿಂದ 'ಚಿಕ್ಕಮ್ಮನೋರೆ ಹಂಗ ಮಾಡಬ್ಯಾಡ್ರೀ..' ಎಂದು ಕರೆದೇ ಕರೆದ. ಈ ಎಲ್ಲ ಅವಾಂತರದಿಂದ ಲಲಿತಳಿಗೆ ತುಂಬಾ ಹೇಸಿಗೆಯೆನ್ನಿಸಿ, ಸಿದ್ದನಿಂದ ಹೇಳಿಸಿಕೊಂಡದ್ದಕ್ಕೆ ಇನ್ನೂ ಕೀಳೆನಿಸಿ, ಆ ಕಲಹದ ಕೋಣೆಯನ್ನು ಶಾಂತಗೊಳಿಸಲು ಬೇರೆ ವಿಷಯ ಎತ್ತಿ ತುಂಬಾ ಸಹನೆಯನ್ನು ತಂದುಕೊಂಡ

ಯಜಮಾನಗಿತ್ತಿಯಂತೆ ಗತ್ತಿನಲ್ಲಿ ಧ್ವನಿ ಗಟ್ಟಿ ಮಾಡಿಕೊಂಡು 'ಸಿದ್ದ! ರಾತ್ರಿ ಆಕಳು ಬಂದ್ರೆ ನಿಗಾ ಮಾಡಿ ಕಟ್ಟು, ಗಬ್ಬಾದ ಆಕಳ ಅದು' ಎಂದು ಆತನಿಗೆ ಒಂದು ಹಚಡ ಮತ್ತು ಹರುಕು ಕಂಬಳಿಯನ್ನು ಎಸೆದು ಊಟಮಾಡದೆ ತನ್ನ ಕೋಣೆಗೆ ಹೋಗಿ ದೀಪ ಆರಿಸಿ ಮಲಗಿದಳು.

ಲಲಿತ ಬೆಳಗ್ಗೆ ಏಳುವುದರೊಳಗೆ ಸಿದ್ದ ಗೌರಿಯ ಕರುವನ್ನು ಕಾಡಿನಿಂದ ಹೆಗಲ ಮೇಲೆ ಹೊತ್ತುಕೊಂಡು ಮನೆಗೆ ತಂದಿದ್ದ. ಸಂಜೆ ದನಗಳೆಲ್ಲ ಹಿಂತಿರುಗುವ ಹೊತ್ತಿಗೇ ಗೌರಿಗೆ ಹೆರಿಗೆ ನೋವು ಶುರುವಾಗಿ ಏಳೆಂಟು ಘಂಟೆಯ ಹೊತ್ತಿಗೆ ಕರು ಹಾಕಿರಬೇಕು. ರಾತ್ರಿಯಿಡೀ ಚಳಿಯಲ್ಲಿ ನಾಯಿ ನರಿಗಳಿಂದ ಕರುವನ್ನು ಬೆಳಗಿನ ತನಕ ಸಾಯದಂತೆ ಕಾವಲು ಮಾಡಿ ಅಂತೂ ಬದುಕಿಸಿದ್ದಳು. ಸಿದ್ದನಿಗೆ ಅಷ್ಟು ನಸುಕಿನಲ್ಲಿ ಅದ್ಯಾರು ಸುದ್ದಿ ಮುಟ್ಟಿಸಿದರೋ, ಅಥವಾ ಇವನಿಗೇ ಅನುಮಾನ ಬಂದಿತ್ತೋ, ಅಂತೂ ತಾಯಿ ಮಗಳು ಸುರಕ್ಷಿತವಾಗಿ ಮನೆ ಸೇರಿದ್ದರು. ಗೌರಿಗೆ ಮೊದಲು ಬಿಸಿನೀರ ಸ್ನಾನ ಮಾಡಿಸಿ, ಒತ್ತಡದಿಂದ ಜಿರಿಯುತ್ತಿದ್ದಂತೆ ಕಾಣುತ್ತಿದ್ದ ಆಕೆಯ ಕೆಚ್ಚಲುಗಳಿಗೆ ಬೇಗ ಕರುವನ್ನು ಬಿಟ್ಟು ಉಣ್ಣಿಸಿ ಆ ಮೇಲೆ ಗೀಜಿನ ಹಾಲು ಕರೆಯಬೇಕು ಎಂದು ಲಲಿತ ಸಿದ್ಧನನ್ನು ಕೂಗಿದಳು. ಆಗಲೇ ತಯಾರಾಗಿ ಕೂತಿದ್ದ ಅತ್ತೆಮ್ಮನನ್ನು ಕೆಳಗೆ ಕುಕ್ಕುರಿಸಿದಳು. ಕೂಡಲೇ ಆಕೆ ತೆವಳುತ್ತ ಮುಂದೆ ಸಾಗಿದ ಮೇಲೆ 'ಸಿದ್ದ, ಇವತ್ತು ಯಾರದ್ದಾದರೂ ಕೆಲಸ ಹಿಡಿದಿದ್ದರೆ ಅವರಿಗೆ ಬರೋದಿಲ್ಲ ಅಂತ ಹೇಳಿ ನಿಂಗಿಯನ್ನೂ ಬೇಗ ಕರೆದುಕೊಂಡು ಬಾ ಹೋಗು, ನಿಮ್ಮ ದೊಡ್ಡಮ್ಮನೋರ ಲಂಗಬಟ್ಟೆ, ಚದಾರ ತೊಳೆಯೋವು ಅದಾವೆ. ಹೋಗುವ ಮುಂಚೆ ಕರುವಿನ ಗೊರಸನ್ನು ಕೊಯ್ದು ಸರಿ ಮಾಡಿ ಹೋಗು!' ಎಂದು ಹೇಳಿ ಒಳಗಿನ ಕೆಲಸಕ್ಕೆ ನಡೆದಳು. ರಾತ್ರಿಯ ಬಸ್ಸಿಗೆ ಹೊರಟ ಗಂಡ ಮಕ್ಕಳು ಬೆಳಿಗ್ಗೆ ಊರಿಗೆ ಬಂದಿಳಿದರು. ಗೌರಿ ಕರು ಹಾಕಿದ ಸುದ್ದಿ ತಿಳಿದದ್ದೇ ತಡ ಮಕ್ಕಳಿಬ್ಬರೂ ಕೊಟ್ಟಿಗೆಗೆ ದೌಡಾಯಿಸಿದರು. ಗೌರಿ, ಯಾರೋ ತನ್ನ ಮಗಳಿಗೆ ಹಾನಿ ಮಾಡಲು ಬರುತ್ತಿದ್ದಾರೆಂದು ತಿಳಿದು ಬುಸುಗುಡುವಂತೆ ಮಾಡಿ ಸುಮ್ಮನಾದಳು. 'ಅಮ್ಮಾ, ಅಮ್ಮಾ ಕರುವೆಲ್ಲ ವಾಸನೆ, ಇದಕ್ಕೆ ಮೈ ತೊಳೆಸಲ್ಲೇನಮ್ಮಾ? ಬೇಗ ಬೇಗ ಬಚ್ಚಲೊಲೆಗೆ ಬೆಂಕಿ ಹಾಕು' ಎಂದು ಪುಟ್ಟ ಮೂಗಿನ ಮುಂದೆ ಗಾಳಿ ಹೊಡೆದುಕೊಳ್ಳುತ್ತಾ, ಗೌರಿಯ ಬಾಲದ ಜೊತೆಗೆ ಜೋತುಬಿದ್ದ ಮಾಸಲ ಮಾಂಸವನ್ನು ಜಿಗುಪ್ಸೆಯಿಂದ ನೋಡುತ್ತಾ, ಜಾಗರೂಕತೆ ವಹಿಸಿ ಸಗಣಿಯನ್ನು ತುಳಿಯದೇ ತುದಿಗಾಲಿನಿಂದ ಅಂಗಳಕ್ಕೆ ಹಾರಿ ಓಡಿ ಬಂದ. ಟಿಪ್ಪು ಅವನ ಎದೆ ಮೇಲೆ ಹಾರಿ ಕಾಲಿಟ್ಟು ಬಾಲ ಅಲ್ಲಾಡಿಸುತ್ತ ಕುಂಯಿಗುಟ್ಟಹತ್ತಿತು.

ವಯಸ್ಸಿನಲ್ಲಿ ಹಿರಿಯುವನಾದ ಕಿಟ್ಟಿ 'ಅಮ್ಮಾ ಕರುವಿಗೆ ನಾನೇ ಮೈ ತೊಳೆಸುತ್ತೇನೆ' ಎನ್ನುತ್ತಿದ್ದಂತೆ ಪುಟ್ಟ, 'ಅಮ್ಮ ನಾನು ಮೈ ತೊಳೆಸೋನು' ಎಂದನು. ಹಾಗೇ ಇಬ್ಬರಲ್ಲೂ ಮಾತಿಗೆ ಪ್ರತಿ ಮಾತುಗಳು ಬೆಳೆಯುತೊಡಗಿ ಅವು ಮುಂದುವರಿಯುತ್ತವೆ ಎಂದು ಗ್ರಹಿಸಿದ ಅವರಪ್ಪ ಬಚ್ಚಲಿನಿಂದ ಜೋರಾಗಿ ಗದರಿಸುವ ಧ್ವನಿಯಿಂದ 'ಲೇ..ನಿಮ..ನಿಮ..' ಎನ್ನುತ್ತಿದ್ದಂತೆ ಮಕ್ಕಳಿಬ್ಬರೂ ಶಾಂತರಾದರು.

'ಸಿದ್ದ ಇನ್ನೂ ಬರಲೇ ಇಲ್ಲ, ಕರದುಕೊಂಡು ಬಾ ಹೋಗು' ಎಂದು ಲಲಿತ ಪುಟ್ಟನನ್ನು ಅಟ್ಟಿದಳು. ಕೋಣೆಗೆ ಹೋಗಿ ಊರಿನಿಂದ ತಂದ ಚೀಲವನ್ನು ಬಿಚ್ಚಿ ಸಾಮಾನುಗಳನ್ನು ಹೊರ ತೆಗೆದು ನಾಗಂದಿಗೆಯ ಮೇಲೆ ಇಟ್ಟಳು. ಕಿಟ್ಟ ಅಜ್ಜಿಯ ಹತ್ತಿರ ಕುಶಲ ಸಮಾಚಾರ ಕೇಳುತ್ತ ತನ್ನ ಶಾಲೆಯ ವಿಚಾರ ಹೇಳಿಕೊಳ್ಳುತ್ತ ಕುಳಿತಿದ್ದ. ಲಲಿತ ಅಲ್ಲಿಂದ ಎದ್ದು ಹೋಗುವಂತೆ ಸೂಕ್ಷ್ಮವಾಗಿ ಕಿಟ್ಟನಿಗೆ ಕಣ್ಸೊನ್ನೆ ಮಾಡಿದಳು. ಕಿಟ್ಟ ಮಾತ್ರ ಅಲ್ಲಿಂದ ಏಳಲಿಲ್ಲ. ಲಲಿತ ಒಳಗೆ ಹೋಗಿ ಬಂದು ಇನ್ನೊಮ್ಮೆ ಕಣ್ಣು ಕೆಕ್ಕರಿಸಿದಳು. ಕಿಟ್ಟನಿಗೆ ಬಿಸಿ ಮುಟ್ಟಿತು. 'ಅಜ್ಜಿ ನಾ ಜಳಕ ಮಾಡ್ತೇನಿ' ಎಂದು ಅಲ್ಲಿಂದ ಎದ್ದ.

ಸಿದ್ದ ಬಂದು ತಾಯಿ ಮಗಳಿಗೆ ಜಳಕ ಮಾಡಿಸಿ, ಕರುವಿನ ಬಾಯಲ್ಲಿ ಬೆಟ್ಟಿಟ್ಟು, ಚೀಪಲು ರೂಡಿ ಮಾಡಿ, ಗೌರಿಯ ಕೆಚ್ಚಲಿಗೆ ಬಿಟ್ಟ. ಗೌರಿ ತನ್ನ ಮಗಳ ಬಗ್ಗೆ ವಿಪರೀತ ಕಾಳಜಿ ತೋರಿಸುತ್ತ ಎಲ್ಲೆಂದರಲ್ಲಿ ಕರುವಿನ ಮೈಯನ್ನು ನೆಕ್ಕತೊಡಗಿದಳು. ನಿಂಗಿ ದನಗಳನ್ನು ಬಿಟ್ಟು ಹೊಡೆದು, ಸಗಣಿ ಹುಲ್ಲನ್ನು ತೆಗೆದು ಕೊಟ್ಟಿಗೆಯನ್ನು ಸಾರಿಸಿದಳು.

ಮಾವಯ್ಯನೂ ಹತ್ತು-ಹನ್ನೊಂದು ಘಂಟೆಯ ಸುಮಾರಿಗೆ ಬಂದರು. ಸಿದ್ದನಿಂದ ಗೌರಿ ಕರು ಹಾಕಿದ ಪ್ರಕರಣವನ್ನೆಲ್ಲ ತಮ್ಮ ಯಜಮಾನಿಕೆ ಗತ್ತಿನಲ್ಲಿ ವಿವರವಾಗಿ ತಿಳಿದುಕೊಂಡು ಬಚ್ಚಲಿಗೆ ನಡೆದರು. ಅವರು ಪೂಜೆ ಮಾಡಿ ಬಂದೊಡನೆ ಲಲಿತ ಮಣೆ ಹಾಕಿ ಗಂಗಾಳ ಇಟ್ಟಳು. ಮೊಮ್ಮಕ್ಕಳೊಂದಿಗೆ ಶಾಂತಜ್ಜ ಊಟಕ್ಕೆ ಕೂತರು. 'ಅಜ್ಜ ಇವತ್ತು ಕೋಡಿ ಮೂಲೆಯ ಮಾವಿನ ಕಾಯಿ ಕೊಯ್ದು ಬಿಡೋಣ!' ಎಂದನು ಕಿಟ್ಟ. ಶಾಂತಜ್ಜ ನಗುತ್ತ 'ಅವಿನ್ನೂ ಬಲೀಬೇಕಪ್ಪ, ಅದು ಕಡೇದಾಗಿ ಹಣ್ಣಾಗೋ ಮರ' ಎಂದರು. ಹಂಗಾದರೆ ಬಾವಿ ಗಿಡದ ಕಾಯನ್ನಾದರೂ ಕೊಯ್ಯೋಣ ಎಂದನು ಪುಟ್ಟ. 'ತಂಗೀ ಕುಡಿಯಾಕ ಒಂದು ಲೋಟ ಸುಡೋ ಸಾರು ಕೊಡೇ' ಎನ್ನುತ್ತ ಮಾವಯ್ಯ ಅಡುಗೆ ಮನೆಯಿಂದ ಎದ್ದರು.

ಸಂಜೆ ಮೊಮ್ಮಕ್ಕಳಿಬ್ಬರನ್ನೂ ಕಟ್ಟಿಕೊಂಡು ಶಾಂತಜ್ಜ ತೋಟಕ್ಕೆ ನಡೆದರು. ಸದಾಶಿವನಿಗೆ ಮೈಯೆಲ್ಲ ಉರಿದೇ ಹೋಯ್ತು. ಪುಟ್ಟ ಕಿಟ್ಟರಿಗೆ ಇಂಗ್ಲೀಷ್ ಕಲಿಸಿ ಚೆನ್ನಾಗಿ ಓದಿಸಿ ಆಫೀಸರ್ ಮಾಡುವ ಕನಸಿನಿಂದ ಪೇಟೆಯಲ್ಲಿ ಬಿಟ್ಟಿದ್ದ. ಆದರೆ ಮಕ್ಕಳು ಹಳ್ಳಿ ಮನೆಗೆ ಬಂದೊಡನೆ ಅಲ್ಲಿನ ಕಗ್ಗ ವರ್ತನೆಗಳನ್ನು ಅಳವಡಿಸಿಕೊಂಡು ಗುಗ್ಗು ನಡವಳಿಕೆ ನಡೆಸುವುದು ತಂದೆಗೆ ತುಂಬಾ ಬೇಸರವನ್ನುಂಟು ಮಾಡುತ್ತಿತ್ತು. ತನ್ನ ಅಪ್ಪಯ್ಯ ಹಿರಿಯವನಾದ ಕಿಟ್ಟನನ್ನು ಮನೆಯಲ್ಲಿಟ್ಟುಕೊಂಡು ಗದ್ದೆಮನೆ ನಡೆಸಿಕೊಂಡು ಹೋಗಲು ಹಚ್ಚಬೇಕೆ ಎಂದಾಗ, ಸದಾಶಿವ ಮುಕಕ್ಕೆ ಹೊಡೆದಂತೆ ಮಾತಾಡಿ ತನ್ನ ಮಕ್ಕಳ ವಿಚಾರದಲ್ಲಿ ಎಂದೂ ತಲೆ ಹಾಕಬಾರದೆಂದು ತಾಕೀತು ಮಾಡಿ ಹೇಳಿದ್ದ. ಮೊದಲಿನಿಂದಲೂ ಒಂದಲ್ಲ ಒಂದು ವಿಷಯಕ್ಕೆ ತಂದೆ ಮಗ ಕಚ್ಚಾಡಿಕೊಂಡೇ ಬಂದಿದ್ದರೂ ಈ ಮಾತು ನಡೆದಾಗಿನಿಂದ ಅಪ್ಪ ಮಗನಿಗೆ ಅಷ್ಟಕ್ಕಷ್ಟೆಯಾಗಿತ್ತು. ತಾಯಿ ನೆಲ ಹಿಡಿದಾಗಿನಿಂದ ಸದಾಶಿವನಿಗೆ ಹೆಂಡತಿ ಹೇಳಿದ ಮಾತೇ ಸತ್ಯವೆನಿಸುತ್ತಿತ್ತು. ಆತ ಗ್ರಹಿಸಿದಂತೆ ತನ್ನ ಮಕ್ಕಳಿಬ್ಬರಿಗೂ ಗದ್ದೆ, ತೋಟ, ಮನೆ, ಬೇಸಾಯ, ದನಕರುಗಳು ಎಂದರೆ ಪಂಚಪ್ರಾಣ. ಅವರು ಹಳ್ಳಿಯಲ್ಲಿದ್ದರೆ

ಓದುವುದು ಸಾಧ್ಯವೇ ಇಲ್ಲ ಎಂದು ಆತನಿಗೆ ಮನದಟ್ಟಾಗಿತ್ತು. ಹಾಗಾಗಿ ಪೇಟೆಯಲ್ಲಿ ಓದುತ್ತಿದ್ದ ತನ್ನ ಮಕ್ಕಳಿಂದ ಆತ ನಿರೀಕ್ಷಿಸುತ್ತಿದ್ದದ್ದೇನೆಂದರೆ ಮನೆಯಲ್ಲಿ ಶಿಸ್ತಾಗಿ ಬೆಳಗಿನಿಂದ ಸಂಜೆಯುವರೆಗೆ ಹಳ್ಳಿ ಹುಡುಗರ ಜೊತೆಗೆ ಬೆರೆಯದೇ ತಮ್ಮ ಕೋಣೆಯಲ್ಲಿ ಓದುತ್ತ ಕುಳಿತು ಕೊಳ್ಳುವುದನ್ನು. ಆದರೆ ತನ್ನ ಮಕ್ಕಳು ರಜೆಗೆ ಊರಿಗೆ ಬಂದಾಗ ಒಂದು ದಿನವೂ ಹೀಗೆ ನಡೆದುಕೊಂಡಿರಲಿಲ್ಲ. ಒತ್ತಾಯ ಮಾಡಿ ಓದಲು ಕೂರಿಸಿದಾಗ ಅವರಿಗೆ ಎಂದೂ ಬರದ ನಿದ್ದೆ ಬರುತ್ತಿತ್ತು. ಹೆಚ್ಚಿಗೆ ಹೆದರಿಸಿದರೆ ಚಡ್ಡಿಯಲ್ಲಿ ಒಂದಾ ಮಾಡಿಕೊಳುತ್ತಿದ್ದರು. ಇದನ್ನು ಹೇಗೆ ಬಗೆಹರಿಸಬೇಕೆಂದು ಸದಾಶಿವನಿಗೆ ತಿಳಿಯದಾಗಿತ್ತು.

ತೋಟದಲ್ಲಿ ಅಜ್ಜಯ್ಯ, ಕಿಟ್ಟು ಮರ ಹತ್ತಿದ್ದರು. ಪುಟ್ಟ ಕೆಳಗಿದ್ದು ಮರದಿಂದ ಮಿಣಿಕಟ್ಟಿ ಚೀಲದಲ್ಲಿ ಇಳಿಸುತ್ತಿದ್ದ ಮಾವಿನಕಾಯಿಗಳನ್ನು ನೆಲಕ್ಕೆ ಸುರುವಿಕೊಂಡು ಖಾಲಿ ಚೀಲವನ್ನು ಮೇಲೆ ಕಳಿಸಿಕೊಡುತ್ತಿದ್ದ. ಕೆಲವು ಕಾಯಿಗಳು ತುಂಬಾ ತುದಿಯಲ್ಲಿದ್ದು ಕಲ್ಲೀಗಣೆಗೆ ಸಿಗದಂತಿದ್ದವು. ಹೀಗಾಗಿ ಅಜ್ಜಯ್ಯ ಕಿಟ್ಟನನ್ನು ಕೆಳಗಿಳಿಸಿ ಪುಟ್ಟನನ್ನು ಮರ ಹತ್ತಲು ಹೇಳಿದರು. ಪುಟ್ಟ ಮರ ಹತ್ತುತ್ತ ಯಾವ ಕಡೆ ಹೋಗಬೇಕೆಂದು ಮೇಲೆ ನೋಡುತ್ತಾನೆ. ಅಜ್ಜಯ್ಯನ ಪಂಚೆಯ ಸಂದಿಯಿಂದ ದೊಡ್ಡದಾದ ಎರಡು ಕಲ್ಲು ಗುಂಡುಗಳಂಥ ವಸ್ತುಗಳು ಜೋತಾಡುತ್ತಿವೆ. ನಗುವನ್ನು ತಡೆದುಕೊಂಡು 'ಅಯ್ಯಯ್ಯೋ ಅಜ್ಜಯ್ಯ..' ಎಂದು ತಲೆಗೆ ಕೈ ಮುಟ್ಟಿಸಿಕೊಳ್ಳುತ್ತ, ನಗೆಯಾಡುತ್ತ , ಲಹರಿ ಬಂದೊಡನೆ ಕ್ಷಣಾರ್ಧದಲ್ಲಿ ನೆಗೆದು ತಾಯಿಯನ್ನು ಸೇರುವ ವಾನರಮುಟಾಣಿಯಂತೆ ಪುಟ್ಟ, ಅಜ್ಜನಿದ್ದ ರೆಂಬೆಯ ಮೇಲೆ ಬಂದು ಕುಳಿತ. ಪುಟ್ಟನ ಸರಾಸರಿ ತೂಕ ಹದಿನೈದಿಪ್ಪತ್ತು ಕೇಜಿಗಿಂತ ಹೆಚ್ಚಿಲ್ಲ. ಬಳುಕಾಡುವ ಎಂಥಾ ಚಿಕ್ಕ ರೆಂಬೆಯ ಮೇಲೂ ಲೀಲಾಜಾಲವಾಗಿ ನಿಂತು ಅಥವಾ ಜೋತು ಬಿದ್ದು ಕಾಯಿ ಕೊಯ್ಯುವ ನೈಪುಣ್ಯತೆ ಆತನಿಗಿದೆ. ಅಡಕೆ ಗಿಡಗಳನ್ನು ಇಣಚಿಯ ಮರಿಗಿಂತ ವೇಗವಾಗಿ ಹತ್ತಿ, ಝುರ‍್ರೆಂದು ಇಳಿಯಬಲ್ಲ . ಕೊನೆ ಕೊಯ್ಯುವ ಸಂದರ್ಭದಲ್ಲಿ ಆಳುಗಳು ಅಜ್ಜಯ್ಯನಿಲ್ಲದಾಗ ಈತನನ್ನು ಹೊಗಳಿ ಸರಿಯಾಗಿ ಕೆಲಸ ಮಾಡಿಸುತ್ತಿದ್ದರು.

ಸುಮಾರು ಐನೂರು ಕಾಯಿಗಳಷ್ಟು ಕೊಯ್ದಾಗಿತ್ತು. ಆಗಲೇ ದಿನಮಣಿ ಮುಳುಗಿ ಸಂಜೆಗತ್ತಲು ಪ್ರಾರಂಭವಾಗಿತ್ತು. ಪೀಕಿ ಕೆರೆಯನನ್ನು ಬರ ಹೇಳಲು ಅಜ್ಜ ಕಿಟ್ಟನನ್ನು ಕಳಿಸಿದರು. ಐವತ್ತು ಸಾಕೆಂದರೂ ಕೇಳದೇ ಪುಟ್ಟ-ಕಿಟ್ಟ ಎಪ್ಪತ್ತೈದು ಕಾಯಿಗಳನ್ನು ತಮ್ಮ ಚೀಲಗಳಿಗೆ ಹಾಕಿಸಿಕೊಂಡರು. ಅಜ್ಜಯ್ಯ ಐದು ಕಾಯಿಯ ಒಂದು ಗುಂಪಿಗೆ 'ಒಂದು' ಎಂದು ಲೆಕ್ಕ ಮಾಡಿ ಚೀಲಕ್ಕೆ ಹಾಕುತ್ತಿದ್ದರು. ಇಪ್ಪತ್ತು ಗುಂಪನ್ನು ಹಾಕಿ ಒಮ್ಮೆಲೇ ನೂರು ಕಾಯಿ ಆದವು ಎಂದುಬಿಡುತ್ತಿದ್ದರು. ಪುಟ್ಟನಿಗೆ ಈ ಲೆಕ್ಕ ಏನೂ ತಿಳಿಯುತ್ತಿರಲಿಲ್ಲ. ಅಜ್ಜಯ್ಯ ಇಂಥ ಲೆಕ್ಕ ಮಾಡುವಾಗ ನಡುವೆ ಯಾರೂ ಮಾತಾಡಿಸಬಾರದೆಂಬ ಸೂಕ್ಷ್ಮ ಮಾತ್ರ ತಿಳಿದಿತ್ತು.. ಕಣ್ಣು ಮಿಟುಕಿಸದೇ ಈ ಲೆಕ್ಕ ಮಾಡುವ ಕಾರ್ಯವನ್ನು ಭಾರೀ ಘನಂದಾರೀ ಕೈಚಳಕದ ಕೆಲಸವೆಂಬಂತೆ ಕಿಟ್ಟು-ಪುಟ್ಟು ನೋಡುತ್ತ ಕುಳಿತಿರುತ್ತಿದ್ದರು. ತಲೆಗೆ ಮೆತ್ತನೆ ಟವೆಲ್ ಕಟ್ಟಿ ಅದರ ಮೇಲೆ ಕಾಯಿ ಚೀಲವನ್ನು ಸಿದ್ದ ಇಬ್ಬರಿಗೂ ಹೊರಿಸಿದ ಮೇಲೆ ತುಂಬಾ ಭಾರವಾದ ಸೂಕ್ಷ್ಮ ತಿಳಿದರೂ ಅದನ್ನು ಹೇಳಿದರೆ ತಮಗೆ ಅವಮಾನವಾದಂತೆ ಎಂದುಕೊಳ್ಳುತ್ತ

ಮುಂದೆ ನಡೆದರು. ಸಿದ್ದ ಉಳಿದ ಮುನ್ನೂರೈವತ್ತು ಕಾಯಿಗಳನ್ನು ಒಬ್ಬನೇ ಹೊತ್ತದ್ದು ಮಾತ್ರ ಪುಟ್ಟನಿಗೆ ಅವನ ಅಜಾನುಬಾಹುತ್ವದ ಬಗ್ಗೆ ಹೆಮ್ಮೆಯೆನಿಸಿತು. ಮನೆ ಕಣ್ಣಿಗೆ ಕಾಣುವ ಅಳತೆಯಲ್ಲಿದ್ದರೂ ತಾವು ನಡೆದುಕೊಂಡು ಬರುತ್ತಿರುವ ಕೆರೆ ಅಂಗಳದಿಂದ ಕನಿಷ್ಠ ಅರ್ಧ ಮೈಲಿಂಯಾದರೂ ಇದೆ. ಪುಟ್ಟನ ಗೋಣು ಸ್ವಲ್ಪ ದೂರ ಬಂದಾಗಿನಿಂದಲೇ ನೋಯಲು ಪ್ರಾರಂಭವಾಗಿತ್ತು. ಇನ್ನೇನು ತನಗೆ ಸಾಧ್ಯವೇ ಇಲ್ಲ ಎನ್ನುವ ಮಟ್ಟ ತಲುಪಿದಾಗ ಧಡಾರನೆ ಚೀಲವನ್ನು ನೆಲಕ್ಕೆ ಎಸೆದ. ಆಗಲೇ ಕತ್ತಾಲಗಿದ್ದರಿಂದ ಕಣ್ಣು ಕಾಣದೇ ತಡಕಾಡಿಕೊಂಡು ಒಂದು ಕೈಲ್ಲಿ ಕಲ್ಲಿಗಣೆ, ಇನ್ನೊಂದು ಕೈಯಲ್ಲಿ ಮಿಣಿ ಹಿಡಿದುಕೊಂಡು ಬರುತ್ತಿದ್ದ ಅಜ್ಜಯ್ಯನಿಗೆ ತೀರ ಸಿಟ್ಟು ಬಂತು. ಸಾಧಾರಣ ಒಂದು ಕೈ ಗಾತ್ರಕ್ಕಿಂತ ದೊಡ್ಡ ಕಾಯಿಗಳು. ಪೆಟ್ಟಾದರೆ ಹಣ್ಣಾಗುವುದು ದೂರದ ಮಾತು. ಎಲ್ಲಾ ಕೊಳೆತು ಹೋಗುತ್ತವೆ. ಇಂಥ ಯೋಚನೆಗಳು ಅಜ್ಜಯ್ಯನಿಗೆ ಬಂದಿದ್ದೇ ತಡ ಎಲ್ಲಿತ್ತೋ ಏನೋ ಸಿಟ್ಟು ಪುಟ್ಟನಿಗೆ ಏರಿಸಿ ಎರಡು ಕೊಟ್ಟರು. ತನ್ನ ಪ್ರೀತಿಯ ಅಜ್ಜ ಎಂದೂ ತನಗೆ ಹೊಡೆಯುವುದಿಲ್ಲ ಎಂದು ತುಂಬಾ ನಿರೀಕ್ಷೆ ಇಟ್ಟುಕೊಂಡ ಪುಟ್ಟನಿಗೆ ಎಲ್ಲರ ಮುಂದೆ ತುಂಬಾ ಅವಮಾನವಾದಂತಾಯಿತು. ಮೊದಲು ಅಳಬೇಕೆಂದು ಗೊತ್ತಾಗಲೇ ಇಲ್ಲ. ಕಡೆಗೆ ಕಿಟ್ಟ ಹಂಗೇ ಆಗಬೇಕೆಂದು ನೋಡಿದಾಗ, 'ಅಂಯೀ..' ಎನ್ನುತ್ತ ಕಾಯಿಗಳ ಚೀಲವನ್ನು ಅಲ್ಲೇ ಬಿಟ್ಟು ಮನೆ ಕಡೆಗೆ ಓಟ ಕಿತ್ತ. ಮನೆ ಹತ್ತಿರ ಆದಂತೆಲ್ಲ ಆತನ ರೋದನ ಮುಗಿಲು ಮುಟ್ಟುವ ಆಕ್ರಂದನದಂತೆ ಮಾರ್ಪಟ್ಟಿತು. ಅವನ ಅಳುವನ್ನು ಕೇಳುತ್ತಿದ್ದಂತೆ ಮಗನಿಗೆ ಏನೋ ಭಾರೀ ಆಘಾತವಾಗಿದೆಯೆಂದು ಶಂಕಿಸಿದ ಲಲಿತ 'ಅಯ್ಯೋ..ರೀ..' ಎಂದು ಒಂದೇ ಉಸಿರಿಗೆ ಅಕ್ಕಿ ಬೀಸುತ್ತ ಕೂತಲಿಂದ ಹಾಗೇ ಎದ್ದು ಓಡಿದಳು. ಮುಂದಿನ ಬಾಗಿಲ ಬಳಿ ಓದುತ್ತ ಕುಳಿತ ಅವನಪ್ಪನಿಗೂ ಹೆಂಡತಿ ಕೂಗಿದ ಸೂಚನೆ ಭಯಂಕರವಾಗಿ ಕೇಳಿ ಆತನೂ ಹಿತ್ತಲ ಕಡೆಗೆ ಓಡಿದ. ಅಷ್ಟರಲ್ಲಿ ಲಲಿತ ಮಗನನ್ನು ಎತ್ತಿ ಸೊಂಟದಲ್ಲಿಟ್ಟುಕೊಂಡು ಸಂತೈಸುತ್ತ ಕಾರಣ ಕೇಳುತ್ತಿದ್ದಳು. ಅತಿ ಮುದ್ದಿನ ಆ ಸಂದರ್ಭದಲ್ಲಿ ಪುಟ್ಟ ತನ್ನ ತಂದೆ ತಾಯಿಯರ ಬಳಿ, ಇದ್ದದ್ದು ಇಲ್ಲದ್ದು ಎಲ್ಲವನ್ನೂ ಸೇರಿಸಿ ಹೇಳಿ ತಾನು ನಿರಪರಾಧಿಯೆಂಬುದನ್ನು ಅವರಿಗೆ ಮನದಟ್ಟು ಮಾಡಿಸಿ ಅಜ್ಜಯ್ಯನನ್ನು ಮಹಾ ಅಪರಾಧಿಯ ಸ್ಥಾನದಲ್ಲಿ ನಿಲ್ಲಿಸಿದನು. ಅವನಪ್ಪ ಅಮ್ಮಂದಿರೂ ಮಕ್ಕಳ ಮಾತನ್ನು ಗಂಭೀರವಾಗಿ ತೆಗೆದುಕೊಳ್ಳಬಾರದೆಂಬುದನ್ನು ಯೋಚಿಸಲೇ ಇಲ್ಲ.

ಕೆಲವು ಸಂಸಾರಗಳಲ್ಲಿ ಘಟನೆ ಯಾವುದಕ್ಕೆ ಇಂಧನ ಎಂಬುದನ್ನೇ ಗುರುತಿಸಲಾಗುವುದಿಲ್ಲ. ಏನೂ ಕಾರಣವಿಲ್ಲದೇ ತುಂಬಿದ ಸಂಸಾರಗಳೇ ಹೋಳಾಗಿಬಿಡುತ್ತವೆ. ಅಣ್ಣ ತಮ್ಮಂದಿರೇ ಕಡಿದಾಡಿಕೊಳ್ಳುತ್ತಾರೆ. ಅಪ್ಪ ಮಕ್ಕಳೇ ಹೊಡೆದಾಡಿಕೊಳ್ಳುತ್ತಾರೆ. ಅರಿವೆಂಬುದು ಅಂಥಲ್ಲಿ ಸ್ವಲ್ಪ ಕೆಲಸ ಮಾಡಿದರೂ ಸಂಸಾರಗಳು ಉಳಿದುಕೊಳ್ಳುತ್ತವೆ. ಶಾಂತಜ್ಜನ ಸಂಸಾರದಲ್ಲಿ ಇಂಥ ಏನೂ ಪ್ರಾಮುಖ್ಯವಲ್ಲದ ಸಾಧಾರಣ ಘಟನೆ ಅಪ್ಪ ಮಕ್ಕಳನ್ನು ತೊರೆಸಿ ಬಹು ದೂರ ಸರಿಸಿ ಬಿಟ್ಟಿತು.

ಸದಾಶಿವ ತುಂಬಾ ಎಂದರೆ ತುಂಬಾ ದುಡುಕಿನ ಸ್ವಭಾವದವನು. ಆ ಹೊತ್ತಿಗಾಗಲೇ ಆತ ಅರ್ಧ ಘಂಟೆಗೆ ಮುಂಚೆ ಕುಡಿದ ನಿಶೆ ನೆತ್ತಿಗೇರಿತ್ತು. ಆತನಿಗೆ

ಆ ಸಂದರ್ಭದಲ್ಲಿ ತನ್ನ ಮಗನ ಚಿತ್ರಣ ಅಭಿಮನ್ಯುವನ್ನು ಕೌರವರು ಚಕ್ರವ್ಯೂಹದೊಳಗೆ ಓಡಾಡಿಸಿ, ಹಿಂಸಿಸಿ ಕೊಂದದ್ದಕ್ಕಿಂತ ಅತ್ತತ್ತ ಎನ್ನಿಸಿತ್ತು. ಕೂಡಲೆ ಸದಾಶಿವ ಸೇಡು ತೀರಿಸಿಕೊಳ್ಳುವ ಅರ್ಜುನನಾಗಿಬಿಟ್ಟ. ಅಪ್ಪ ಬರುತ್ತಿದ್ದಂತೆಯೇ ಹಿತ್ತಲಲ್ಲೇ ತಡೆದು 'ನನ್ನ ಮಗನ ಮೈ ನೀ ಅಥ್ಯಾಗೆ ಮುಟ್ಟಿದೆ ಸೂಳೇಮಗನೆ, ನಿನ್ನ ಕಡಿದೇ ಬಿಡುತ್ತೇನೆ' ಎಂದು ಅವನಪ್ಪ ಹೆಗಲ ಮೇಲೆ ಹೊತ್ತಿದ್ದ ಕಲ್ಲಿಗಣೆಯನ್ನು ರಭಸದಿಂದ ಕಸಿದು, ಕೆಕ್ಕರಿಸಿದ ಕೆಂಡಗಣ್ಣಿನಿಂದ ತನ್ನೊಬ್ಬ ಮಹಾವೈರಿಯನ್ನು ತಡೆವ ಯೋಧನಂತೆ ತಡೆದು ಕುಡುಗೋಲಿಗಾಗಿ ಅತ್ತಿತ್ತ ಹುಡುಕಾಡಿದ. ಹಿರಿಯರಿಗೆ ಎಲ್ಲರೆದುರು ಹೀಗೆ ಅವಮಾನಕರ ಮಾತಾಡಿದರೆ ಹೇಗಾಗಬೇಡ!

ಇಷ್ಟು ತೀವ್ರವಾದುದನ್ನು ಎಂದೂ ನಿರೀಕ್ಷಿಸದೇ ಇದ್ದ ಶಾಂತಜ್ಜ 'ಆಯ್ತು ಸರಿಯಪ್ಪ ಅತ್ಲಾಗೆ' ಎನ್ನುವಂತೆ ಎತ್ತಿದ್ದ ಮಗನ ಕೈನ್ನು ಇಳಿಸಲೆಂಬಂತೆ ತನ್ನ ಕೈಅಡ್ಡ ತಂದನು. 'ನನ್ನೇ ಹೊಡಿಯಾಕ ಬರ್ತೀಯ ನಿನ್ನವ್ವನ..' ಎಂದವನೇ ಸದಾಶಿವ ಅಪ್ಪನಿಗೆ ಭಡಾರ್ ಭಡಾರ್ ಎಂದು ಕೆನ್ನೆಯ ಮೇಲೆ ಎರಡು ಕೊಟ್ಟೇ ಬಿಟ್ಟ. ಚಾಳೀಸು ಮೇಲೆ ನೆಗೆದು ಕೊಟ್ಟಿಗೆ ಮೂಲೆಗೆ ಹೋಗಿ ಬಿದ್ದರೆ, ಶಾಂತಜ್ಜ ಕಟ್ಟಿಗೆ ಗೂಡಿಗೆ ಹೋಗಿ ತಿರುಗಿ ಬಿದ್ದರು. ಸಿದ್ದನಿಗೆ ಕೋಪವುಕ್ಕಿದರು ಸಣ್ಣ ಒಡೆಯರ ಮೇಲೆ ಕೈ ಮಾಡಲು ಹೆದರಿದ. ನೆಲಕ್ಕೆ ಕೆಡಗಿದ ಮೇಲೂ ಮಗನ ಆವೇಶ ಇಳಿದಿರಲಿಲ್ಲ. ಮತ್ತು ಅಪ್ಪನ ಎದೆಯ ಮೇಲೆ ಕುಳಿತು ಗುದ್ದುತ್ತಿದ್ದಾಗ ಮಾತ್ರ ಸಿದ್ದನಿಗೆ ತಡೆಯಲಾಗಲಿಲ್ಲ. ಸದಾಶಿವನನ್ನು ಅಜಾಮತ ಎತ್ತಿ ಕೊಟ್ಟಿಗೆಯ ಸೂರಿನ ಬಳೀ ಒಯ್ದು ಇಳಿಸಿದ. ಇದನ್ನು ನೋಡುತ್ತ ಲಲಿತ ಗರಬಡಿದವಳಂತೆ ಏನು ಮಾಡಲೂ ತೋಚದೆ ಹಸುಳೆಯಂತೆ ಸ್ತಬ್ಧ ನಿಂತುಬಿಟ್ಟಿದ್ದಳು. ಮಕ್ಕಳಿಬ್ಬರೂ ಗಡಗಡ ನಡುಗುತ್ತಿದ್ದರು. ಕತ್ತಲಲ್ಲಿ ಒಳಗೆ ಮಲಗಿದ್ದ ಗಿರಿಜಮ್ಮನಿಗೆ ಏನಾಗುತ್ತಿದೆಯೆಂಬುದೊಂದೂ ತಿಳಿಯದೇ ಎದ್ದು ಕೂತು ' ಉಂಯಿ..ಉಂಯ್...' ಎಂದು ತೊದಲುತ್ತ ಏನೇನೋ ಅಸ್ಪಷ್ಟ ಶಬ್ದಗಳನ್ನು ಹೊರಡಿಸುತ್ತಿತ್ತು.

ಈ ಘಟನೆ ಎರಡು ತಾಸಿನ ಒಳಗಾಗಿ ಊರಿನ ಪ್ರಮುಖರ ಕಿವಿ ಮುಟ್ಟಿತು. ಹಳ್ಳಿಗಳಲ್ಲಿ ಇಂಥ ಸುದ್ದಿಗಳು ಚಲಿಸುವ ವೇಗ ಕಾಳ್ಗಿಚ್ಚನ್ನೂ ನಾಚಿಸುವಂತಿರುತ್ತದೆ. ಸುದ್ದಿ ರವಾನೆಗೆ ಯಾವ ವಿಶೇಷ ಏಜಂಟುಗಳೂ ಬೇಕಿಲ್ಲ. ಅಂಗಡಿ ಕಟ್ಟೆಯಿಂದ ದೇವಸ್ಥಾನ ಕಟ್ಟೆಗೆ, ಮನೆಯಿಂದ ಮನೆಗೆ, ಬಾಯಿಂದ ಬಾಯಿಗೆ ಸಾಗುವಷ್ಟರಲ್ಲಿ ಸುದ್ದಿ ವಿಚಿತ್ರ ತಿರುವನ್ನೇ ಪಡೆದುಕೊಂಡಿರುತ್ತದೆ. 'ಶಾಂತಜ್ಜ ಮರಣ ಶಯ್ಯೆಯಲ್ಲಿ ಮಲಗಿ ಆಗಲೇ ಈಗಲೋ ಎಂದು ಉಸಿರು ಬಿಡುತ್ತಿದ್ದಾನಂತೆ' ಎಂಬ ವದಂತಿ ಊರ ತುಂಬ ಕ್ಷಣಾರ್ಧದಲ್ಲಿ ಹರಡಿತು. ಕೆಲವರು ಮತ್ತೊಬ್ಬರಿಗೆ ಹೇಳುವಾಗ 'ಸದಾಶಿವ ಕುಡುಗೋಲಿನಿಂದ ಶಾಂತಜ್ಜನನ್ನು ಕಡಿದನಂತೆ, ಶಾಂತಜ್ಜ ಅಲ್ಲೇ 'ಶಿವ ಶಿವ ಎಂದು ಪ್ರಾಣ ಬಿಟ್ಟನಂತೆ, ಎಂದೂ ಹೇಳಿದರು. ಅಂತೂ ಇಂತೂ ಶಾಂತಜ್ಜನನ್ನು ನೋಡಲು ಮನೆಗೆ ಬರುವ ಮಂದಿ ಹೆಚ್ಚತೊಡಗಿತು. ಕೆಲವು ಹೆಣ್ಣುಮಕ್ಕಳು ಮುಂದಿನ ಕಾರ್ಯಕ್ಕೆಂದು ಕಾಯಿ, ಊದಿನಕಡ್ಡಿ, ಕರ್ಪೂರ, ಹೂವು-ಹಣ್ಣುಗಳನ್ನೂ ತಂದಿದ್ದರು.

ಶಾಂತಜ್ಜ ಹೆಸರಿಗೆ ತಕ್ಕಂತೆ ಶಾಂತವಾಗಿ ಮಲಗಿ ಸಾವಧಾನವಾಗಿ ಸುಧಾರಿಸಿಕೊಳ್ಳುತ್ತಿದ್ದ. ದೈಹಿಕವಾಗಿ ಎಲ್ಲೂ ಹೆಚ್ಚು ಪೆಟ್ಟಾಗದಿದ್ದರೂ ಅವಮಾನದಿಂದ

ಮಾನಸಿಕವಾಗಿ ತುಂಬಾ ಕುಸಿದಿದ್ದ, ಮುಂದಿನ ಪರಿಸ್ಥಿತಿಯ ಬಗ್ಗೆ ಖಿನ್ನನಾಗಿ ಯೋಚಿಸುತ್ತಿದ್ದ. ಬಂದು ಬಂದು ವಿಚಾರಿಸಿ ಪಕ್ಕದಲ್ಲಿ ಕೂರುತ್ತಿದ್ದ ಜನರಿಗೆ 'ಏನೂ ಆಗಿಲ್ಲ' ಎಂದು ನಗುತ್ತ ಆಶ್ವಾಸನೆ ನೀಡುತ್ತಿದ್ದ.

ಅರ್ಧ ಘಂಟೆ ಕಳೆದಿತ್ತು, ಆಗ ಪಟೇಲರು, ಐನೇರು, ಸಿದ್ದನಗೌಡ್ರು, ಮಲ್ಲಣಗೌಡ್ರು ತಮ್ಮ ಗತ್ತಿನ ಠೀವಿಯಿಂದ ನಡೆದು ಬಂದರು. ಪಟೇಲರು, 'ಶಾಂತಪ್ಪಾ.. ಏ ಶಾಂತಪ್ಪಾ..' ಎಂದು ಕೂಗಿ ಕರೆದರು. ಮನೆಯವರಿಗಿಂತ ನೋಡಲು ಬಂದ ಜನರೇ ಅವರಿಗೆ ಒಳಗೆ ಕರೆದು ಕೂಡಲು ಅಲ್ಲಿದ್ದ ಗುಡಾರ ಹಾಸಿ, ದಿಂಬು ಕೊಟ್ಟು ವ್ಯವಸ್ಥೆ ಮಾಡಿದರು. ಸದಾಶಿವನಿಗೆ ಇನ್ನೂ ನಿಶೆ ಇಳಿದಿರಲಿಲ್ಲ. ತಾನು ಕೂತ ಕೋಣೆಯಿಂದಲೇ ಅಪ್ಪನಿಗೆ ಕೆಟ್ಟ ಕೊಳಕ ಬೈಯುತ್ತಿದ್ದ. ಒಮ್ಮೆಲೇ ಸಿಟ್ಟಿನ ರಕ್ತ ರಭಸದಿಂದ ನೆತ್ತಿಗೇರಿದಾಗ ಸಿಂಹದಂತೆ ಘರ್ಜಿಸಿ ಮುಂದಿದ್ದ ಟೇಬಲ್ಲನ್ನು ಗಟ್ಟಿಯಾಗಿ ಗುದ್ದುತ್ತಿದ್ದ. ಸಾಮಾನ್ಯವಾಗಿ ಹಳ್ಳಿಯಲ್ಲಿ ಬಳಸುವ ಅತಿಕೀಳು ಶಬ್ದಗಳನ್ನು ಉಪಯೋಗಿಸುತ್ತಿದ್ದ. ಮಗ ಘಟೋದ್ಗಜನನ್ನು ಕಳೆದುಕೊಂಡ ಭೀಮ ವೀರಾವೇಶದಿಂದ ಹೂಂಕರಿಸಿ ಗದೆಯನ್ನು ಬೀಸುವಂತೆ ತನ್ನೆರಡು ಕೈಗಳನ್ನೂ ಬೀಸಿ ಗೋಡೆಗೆ ಹೊಡೆದುಕೊಂಡೊಡನೆ ಮತ್ತಷ್ಟು ಸಿಟ್ಟಿಗೆದ್ದು ಕೋಣೆಯ ಬಾಗಿಲು ತೆಗೆದು ತೂರಾಡುತ್ತ ಅಪ್ಪನ ಮೇಲೆ ಮುಂಬರಿಯಲಿಕ್ಕೆ ಮುಂದಾಗುತ್ತಿದ್ದಾಗ ನೋಡುತ್ತಾನೆ ಶಾಂತಜ್ಜನ ಸುತ್ತ ಜನರು ನೆರೆದು ನಿಂತಿದ್ದಾರೆ! ಸದಾಶಿವ ನಿಶೆಯಲ್ಲಿದ್ದರೂ ಕೂಡ ಒಮ್ಮೆ ದಂಗು ದಂಗಾಗಿ ಹೋದ.

ಅಷ್ಟರಲ್ಲಿ ಪಟೇಲರು ತಾವು ಕೂತಲ್ಲೇ ಕಾಲಿನ ಮೇಲೆ ಕಾಲು ಹಾಕಿಕೊಂಡು 'ಹೂಂ..ಶಾಂತಪ್ಪಾ.. ಮುಂದ.. ನಿನ್ನ ತೀರ್ಮಾನ ಏನಪ್ಪಾ..' ಎಂದು ಪಂಚಾಯತಿ ಮಾಡಲು ಬಂದ ತಮ್ಮ ಇಚ್ಚೆಯನ್ನು ಗತ್ತಿನಿಂದಲೇ ಪ್ರಸ್ತಾಪಿಸಿದರು. 'ಮುಂದ ಅಂದರ ಏನ್ರೆಪಾ..! ಹಿಂಗ ಎಲ್ಲರ ಸಂಸಾರದಾಗೂ ಇರವ' ಎಂದು ಸಮಾಧಾನದಿಂದ ಸಮಜಾಯಿಸುತ್ತಿದ್ದ ಶಾಂತಪ್ಪನನ್ನು ತಡೆದು 'ಹಂಗಂದ್ರ ಹ್ಯಂಗೋ..? ಎಂದು ಹುಬ್ಬು ಹಾರಿಸಿ ಮುಂದುವರಿಸಿದರು.

'ನಾವೂ ಭಾಳ ದಿವಸದಿಂದ ನಿನ್ನ ಮಗನ ಅರ್ಭಾಟಾನ ಕೇಳತಾ ಬಂದೀವಿ. ನೀನು ಯಜಮಾನ ಮನಷ್ಯಾ ಅದಿದಿ. ಅಪ್ಪ ಅನ್ನೋ ಗೌರವ ಕೊಡದ ಅಂವ ಕೆಟ್ಟಾ ಕೊಳಕಾ ಬೈತಾನೂ. ನೀನೂ ಅದನ್ನ, ಒಬ್ಬನ ಮಗ ಅಂತ ಸುಧಾರಿಸಿಕೊಂಡಾ ಬಂದಿದಿ.. ಊರಿನ ಮಕ್ಕಳೆಲ್ಲ ಇದನ್ನು ಕಲೀಬಕೂ ಅಂತೀಯೇನೂ.?' ಎಂದು ಪ್ರಶ್ನಾರ್ಥಕವಾಗಿ ತನ್ನ ಮಾತನ್ನು ನಿಲ್ಲಿಸಿ ಪುಷ್ಟಿಗಾಗಿ ಐನೇರ ಕಡೆಗೊಮ್ಮೆ, ಸಿದ್ದನಗೌಡರ ಕಡೆಗೊಮ್ಮೆ ನೋಡಿ ಕೆಮ್ಮಿದರು. ಅವರೂ ತಲೆ ಹಾಕಿ ತಮ್ಮ ಸಮ್ಮತಿಯನ್ನು ಸೂಚಿಸಿದರು. ಆದರೆ ಅವರ್ಯಾರಿಗೂ ನಡುವೆ ಮಾತಾಡುವ ಧೈರ್ಯವಿಲ್ಲದ್ದನ್ನು ಕಂಡು ಕೊಂಡ ಪಟೇಲರು ತಾನೇ ಧೀರ ಎಂಬ ಗತ್ತನ್ನು ತಂದುಕೊಂಡು ಒಮ್ಮೆ ದೊಡ್ಡದಾಗಿ ಕ್ಯಾಕರಿಸಿ ಕೆಮ್ಮಿ ಮತ್ತೆ ತಮ್ಮ ಮಾತನ್ನು ಮುಂದುವರಿಸಿದರು. ಮನೆಯ ಸುತ್ತಲೂ ಆಗಲೇ ಜನರ ಜಾತ್ರೆಯೇ ನೆರೆದಿತ್ತು. ಎಲ್ಲರೂ ತುಂಬ ಶ್ರದ್ಧೆಯಿಂದ ಪುರಾಣ ಕೇಳುವವರಂತೆ ಕೂತಿದ್ದರು.

ಲಲಿತಳಿಗೆ ಅದೆಲ್ಲಿಂದ ಧೈರ್ಯ ಬಂತೋ, ಕರೆಯದೇ ಬಂದು ದೊಡ್ಡ ಪಂಚಾಯಿತಿಗೆ ಮಾಡಲು ಬಂದ ಪಟೇಲಪ್ಪನಿಗೆ ಅಡಿಗೆ ಮೆನೆಯಲ್ಲಿ ನಿಂತುಕೊಂಡೇ ಹೋಗಪ್ಪಾ...ಪಟೇಲಪ್ಪಾ.. ಹೋಗು.. ನಿನ್ನ ಮನೆಯಾಗಿದ ದ್ವಾಸೀ ತೂತು ಎಣಿಸ್ ಹೋಗು, ಇಲ್ಲೇನು ಪಂಚಾತ್ಗೀ ಮಾಡಾಕ ಬಂದೀ..! ಎಂದಳು. ಊರಿನ ಹಿರೇರಿಗೆ ತನ್ನ ಸೊಸೆ ಇಷ್ಟು ಮುಖ ಕಟ್ಟುವ ಹಾಗೆ ಮಾತಾಡಿದ್ದನ್ನು ಖಂಡಿಸಿ ಶಾಂತಜ್ಜ ಇನ್ನೂ ಶಾಂತವಾಗೇ ತಿಳಿಹೇಳುತ್ತಿದ್ದರು. ಅಷ್ಟರಲ್ಲಿ ಸದಾಶಿವ 'ನನ್ನ ಹೇಣ್ತಿಗೆ ಮಾತಾಡಾಕ ಯಾವ ಹಡ್ಸೀ ಮಗಾಗೂ ಹಕ್ಕಿಲ್ಲ. ಧೈರ್ಯ ಇದ್ದರ ನನ್ನೆದುರಿಗೆ ಮಾತಾಡ್ರಿ, ಏ ಎಪ್ಪಾ ಹೆಂಗಸ್ಯಾಸಂಗ ಪಟೇಲರನ್ನ ಕರಸೀಯಲಲೇ..' ಎಂದು ಚುಚ್ಚಿ ಅಪ್ಪನಿಗೆ ಮೂದಲಿಸಿದನು. ದಿನವೂ ರಾತ್ರಿ ಕುಡಿದು ಮತ್ತೇರಿದ ಮಗನ ಬಾಯಿಂದ ಕೆಟ್ಟ ಕೊಳಕಾ ಬೈಯಿಸಿಗೊಂಡು ರೋಸಿ ಹೋಗಿದ್ದ ಶಾಂತಜ್ಜನ ಜೀವ ಈಗ ಸುಳ್ಳು ಆರೋಪ ಹೊರಿಸಿದ ಮೇಲೆ ಅದನ್ನು ನಿವಾರಿಸಿಕೊಳ್ಳಲೇಬೇಕೆಂದು 'ನೀನ ಕೇಳು ಅವರನ್ನ ನಾನ್ ಬರಹೇಳಿದ್ದೆನೇನೂ ಅಂತ! ಚೆಂದಾಗಿ ತಿಳಕೋಣದಾಂಗ ಏನೇನೋ ಒದರಾಡ ಬ್ಯಾಡ..' ಎಂದನು. ಅದಕ್ಕೆ ಸದಾಶಿವ 'ನನಗಿದೆಲ್ಲಾ ಹೇಳಾಕಹೋಗಬ್ಯಾಡ್ರೀ.. ನೀವೆಲ್ಲಾ ಒಂದ ಅದೀರಿ, ಸುಮನ ನಾಟ್ಗಾ ಮಾಡ್ತೀರಿ' ಎಂದನು.

ಅಪ್ಪ ಮಗನಿಗೆ ಜಗಳ ಹತ್ತಿದ್ದ ಪಂಚಾಯ್ತಿ ಮಾಡಲು ಬಂದಿದ್ದ ಜನರಿಗೆ ಅನುಕೂಲವೇ ಆಯಿತು. ತಮ್ಮಂತೆಯೇ ಎಲ್ಲವೂ ನಡೆಯುತ್ತಿದ್ದುದು ಅವರಿಗೆ ಹಾಲು ಕುಡಿದಷ್ಟು ಸಂತೋಷವಾಗಿತ್ತು. ಶಾಂತಜ್ಜನನ್ನು ಹೇಗಾದರೂ ಮಗನಿಂದ ಬೇರ್ಪಡಿಸಿದರೆ ಸಾಕು, ತಮ್ಮ ಕೆಲಸ ತುಂಬಾ ಸುಸೂತ್ರ ಎಂದುಕೊಂಡರು. ಪೀಠಿಕೆಗಾಗಿ, 'ಶಾಂತಪ್ಪಾ ಇಷ್ಟು ದಿವಸ ನೀನು ನಿನ್ನ ಮಗನಿಂದ ಉಂಡ ಸುಖ ಅಷ್ಟರಾಗೇ ಐತಿ. ಅಂವ ಕೊಡೋ ಮರ್ಯಾದೆ ಕೊಟ್ಟು ಬಾಳೇವ್ ಮಾಡದಾದ್ರ ನಿನ್ನ ಜೋಡಿ ಇರ್ಲಿ. ಮತಿಲ್ಲಪಾ ಅಂದ್ರ ಅವುಂದಂವುಗ ಕೊಡು, ಅಂವಂದಾರೀ ಅಂವ ನೋಡ್ಕೆಳಲಿ..' ಎಂದು ತೀರ್ಮಾನ ಕೊಟ್ಟರು.

ಇಷ್ಟು ನಡೆಯುತ್ತಿರುವಾಗ ಸದಾಶಿವನಿಗೆ ಅಮಲು ಇಳಿಯುತ್ತಾ ಬಂದಿತ್ತು. ತನ್ನಿಂದ ಇಷ್ಟಾದ ಅವಾಂತರಕ್ಕೆ ನಾಚಿಕೆಯೂ ಆಯಿತು. ಆದರೆ ಯಾವುದನ್ನೂ ತೋರಿಸಗೊಡದೆ ಕಟ್ಟಕಡೆಯ ತೀರ್ಮಾನ ತೆಗೆದುಕೊಂಡವನಂತೆ 'ಇಷ್ಟಾದ ಮೇಲೆ ನಾನು ಈ ಮನೆಯಲ್ಲಿ ಇರೋದಿಲ್ಲ. ದಿನ್ಬೆಳಗಾದರ ಮನಿಯೊಳ್ಗ ಪಂಚಾತ್ಗಿ. ನಿನ್ನ ಐದು ಪೈಸದ ರುಣಾನೂ ನನಗ ಬ್ಯಾಡ. ನನ್ನ ಹೇಣ್ತೀ ಮಕ್ಕಳನ್ನ ಮರದ ಕೆಳಗ ಬೇಕಾದ್ರೂ ಸಾಕ್ತೇನಿ. ನಿನ್ನ ಪರವಹಿಸಿ ಮಾತಾಡಿದ ಪಟೇಲಪ್ಪನ ದಂಡೇನೈತಲಾ, ಅದ ನಿನ್ನನ್ನ ದುಡಿದು ಸಾಕಲಿ. ನಿನಗ ಮಗ ಬ್ಯಾಡ ಹೌದಲ್ಲೋ! ನೀ ಅವರನ್ ಕಟಿಗೊಂಡು ಒಬ್ಬನ ಆರಾಮ ಇರು' ಎಂದು ಅಪ್ಪ ಅವ್ವಗ ಹಣೆ ಹಚ್ಚಿ ನಮಸ್ಕಾರ ಮಾಡಿ ಉಟ್ಟಬಟ್ಟೆಯಲ್ಲಿ ಹೆಂಡತಿ ಮಕ್ಕಳೊಂದಿಗೆ ನಡುರಾತ್ರಿಯಲೇ ದಡದಡ ಕೆಳಗಿಳಿದು ಯಾರು ಹೇಳಿದರೂ ಕೇಳದೇ ನಡೆದೇಬಿಟ್ಟ, ಇದನ್ನೆಲ್ಲ ಸುಮ್ಮನೆ ಒಂದು ಮೂಲೆಯಲ್ಲಿ ಕುಳಿತು ನೋಡುತ್ತಿದ್ದ ಗಿರಿಜಮ್ಮ 'ತಮ್ಮಾ.. ಏಎ.. ತಂಗೀ..' ಎಂದು ಎದ್ದೇಳಲಾಗದಿದ್ದರೂ ಏಳುವವರಂತೆ ಮಾಡುತ್ತಾ, ದಡಬಡ ಮುಂದಿನ

ಬಾಗಿಲವರೆಗೂ ತೆವಳಿದಳು. ಶಾಂತಜ್ಜ ಮಗ ಕುಡಿದ ಅಮಲಿನಲ್ಲಿ ಏನೋ ಮಾಡುತ್ತಿದ್ದಾನೆ ಬಿಡು, ನಾಳೆ ಬೆಳಿಗ್ಗೆ ಬಂದೇ ಬರ್ತಾನೆ ಎಂದು ಇದನ್ನು ಅಷ್ಟೊಂದು ಹಚ್ಚಿಕೊಳ್ಳಲಿಲ್ಲ. ಆದರೂ ಆತನ ಹಠಮಾರಿತನದ ಬಗ್ಗೆ ಶಂಕೆಯಾಗದೇ ಇರಲಿಲ್ಲ.

ತಮ್ಮ ಆಸೆ ಇಷ್ಟು ಬೇಗ ಈಡೇರುತ್ತದೆಂದು ಪಟೇಲರು ಕನಸಿನಲ್ಲೂ ಅಂದುಕೊಂಡಿರಲಿಲ್ಲ. ಮುದುಕಿ ಆಗಲೋ ಈಗಲೋ ಎನ್ನುವ ಹಾಗಿದೆ. ಶಾಂತಪ್ಪನ ಮೂಗುದಾರ ನಮ್ಮ ಕೈಯಲ್ಲಿ ಎಂದು ಖುಷಿಯಾದರೂ ತೋರಗೊಡದೆ ಮೊದಲಿದ್ದ ಗಡುಸಿನ ಧ್ವನಿಯಿಂದಲೇ ಹೂವ ಕೆಳಗಣ ಸರ್ಪದಂತೆ 'ಹೆದರಬ್ಯಾಡ ಶಾಂತಪ್ಪ, ನಾವಿದ್ದೇವಿ. ನಿನ್ನ ಸಾಕತೀವಿ. ಮಗನ ಕಾಲದಲ್ಲಂತೂ ಏಟೂ ಸುಖ ಕಾಣಲಿಲ್ಲ. ಏನು ಮಾಡೋದು ನಿನ್ನ ಹಣೇಬಾರ. ಮಗನ ಕೈಲಿ ಹೊಡೆಸಿಗೊಂಡು, ಒದೆಸಿಗೊಂಡು, ಅನಬಾರದನ್ನೆಲ್ಲಾ ಅನಿಸಿಗೊಂಡು ಕಾಲ ಕಳದ ಬಿಟ್ಟಿ. ಇನ್ನ ಹೆದರಬ್ಯಾಡ, ನಾವೆಲ್ಲ ನಿನಗ ಒಂದು ವ್ಯವಸ್ಥಾ ಮಾಡತೇವಿ' ಎಂದು ಪಟೇಲರು ಎದ್ದರು. ಪಟೇಲರೆದ್ದ ಮೇಲೆ ಕೇಳಬೇಕೇ?– ಅವರ ಹಿಂದಿನ ದಂಡೂ ತಲೆ ಹಾಕುತ್ತಾ ಅಲ್ಲಿಂದ ಕಾಲ್ತೆಗೆಯಿತು.

ನಿನಗೊಂದು ವ್ಯವಸ್ಥಾ ಮಾಡ್ತೇವಿ' ಎಂದು ಪಟೇಲರು ಹೇಳಿದ್ದು ಶಾಂತಪ್ಪನಿಗೆ ಸರಿಯಾಗಿ ತಿಳಿಯಲು ಒಂದು ವರ್ಷವೇ ಬೇಕಾಯ್ತು.

ಮನೆ ಬಿಟ್ಟ ಮಗ ಪಟ್ಟಣ ಸೇರಿದ. ತನ್ನೂರ ಕಡೆ ತಿರಿಗಿಯೂ ನೋಡಲಿಲ್ಲ. ಅದೇ ಸಿಟ್ಟಿನಿಂದ ಕಾಲವೂ ತುಂಬಾ ವೇಗವಾಗಿ ಸರಿಯಿತು.

ಮಗ–ಸೊಸೆ, ಮೊಮ್ಮಕ್ಕಳು ಮನೆ ಬಿಟ್ಟು ಹೋದ ಮೇಲೆ ಆ ಮನೆ ಸ್ಮಶಾನಸದ್ರುಶವಾಯಿತು. ಶಾಂತಜ್ಜ ಬೆಳಿಗ್ಗೆ ಒಂದು ಬಾರಿ ಗಂಜಿ ಮಾಡಿದರೆ ಅದನ್ನೇ ಬೆಳಿಗ್ಗೆ, ಮಧ್ಯಾಹ್ನ, ರಾತ್ರಿ ಹೆಂಡತಿಗೆ ಕೊಟ್ಟು ತಾನೂ ತಿನ್ನುತ್ತಿದ್ದನು. ಅವರಿವರು ಅದೂ ಇದೂ ತಂದು ಕೊಟ್ಟರೂ ತಿನ್ನಲು ಮನಸ್ಸೊಪ್ಪುತ್ತಿರಲಿಲ್ಲ. ಹದಿನೈದು ದಿವಸ ಹೀಗೇ ಸಾಗಿತ್ತು. ಒಂದು ರಾತ್ರಿ ಹೆಂಡತಿ ಅತೀವವಾಗಿ ಕೆಳಗೂ ಮೇಲೂ ಉಸಿರಿಗಾಗಿ ಕಷ್ಟಪಡುವ ಧ್ವನಿ ಕೇಳಿಸಿತು. ಮಲಗಿದಲ್ಲಿಂದಲೇ 'ಗಿರಿಜೇ.. ಏಯ್' ಎನ್ನುತ್ತ ಶಾಂತಜ್ಜ ಗಡಿಬಿಡಿಯಿಂದ ದೀಪ ಹಚ್ಚಿ ಹತ್ತಿರ ಬಂದನು. ಅರ್ಧ ಜೀವ ಆಗಲೇ ಹೋಗುತ್ತಿತ್ತು. ಹಾಲಿನ ಗಡಿಗೆಯ ಕಡೆಗೆ ಬೆರಳು ಮಾಡಿ ಗಿರಿಜಮ್ಮ ತೋರಿಸಿದಳು. ಹೋಗಿ ನೋಡಿದರೆ ತಳದಲ್ಲಿ ಸ್ವಲ್ಪವೇ ಸ್ವಲ್ಪ ಹಾಲಿತ್ತು. ಇತ್ತೀಚೆಗೆ ಅವರಿವರ ಮನೆಯವರೇ ಹಾಲು ಹಿಂಡಿ ಒಂದು ಲೋಟ ಮಾತ್ರ ಮನೆಗೆ ಕೊಟ್ಟು ಹೋಗುತ್ತಿದ್ದರು. ಉಳಿದದ್ದನ್ನೇ ತರುವ ಲಗುಬಗೆಯಲ್ಲಿ ಲೋಟ ಉರುಳಿ ಇದ್ದ ನಾಲ್ಕು ತೊಟ್ಟೂ ಚೆಲ್ಲಿ ಹೋಯಿತು. ಶಾಂತಜ್ಜ ನೋಡಿಕೊಂಡ, ತನ್ನ ಕೈಗಳು ನಡುಗುತ್ತಿದ್ದವು. ನಾಲ್ಕು ತೊಟ್ಟು ನೀರನ್ನಾದರೂ ಕುಡಿಸಬೇಕೆಂಬ ಹಂಬಲದಿಂದ ತಡ ಮಾಡದೇ ಒಂದು ಲೋಟ ನೀರು ತಂದು ಬಾಯಿಗೆ ಹಿಡಿಯಲು ಹೋದರೆ ಆಗಲೇ ಸ್ಪಂದನ ನಿಂತು ದೇಹ ತಣ್ಣಗಾಗಹತ್ತಿತ್ತು. ಶಾಂತಜ್ಜ ತುಂಬಾ ಸ್ಥಿತಪ್ರಗ್ನನಾಗಿದ್ದ. ಸ್ವಲ್ಪ ಹೊತ್ತು ಅಳು ಬಂದರೂ ಅದು ಅವನನ್ನು ಅಧೀರಗೊಳಿಸಲಿಲ್ಲ. ರಾತ್ರಿಯಾದ್ದರಿಂದ ಯಾರಿಗೂ ಸುದ್ದಿ ತಿಳಿಸಬೇಕೆನಿಸಲಿಲ್ಲ. ಹೆಣವನ್ನು ಇಟ್ಟುಕೊಂಡು ಬೆಳಗಿನವರೆಗೂ ಕಾಲ ಹಾಕಿದ.

ಮಗನಿಗೆ ಹೇಗೆ ಹೇಳಿ ಕಳಿಸುವುದು ಎಂಬ ಚಿಂತೆ ಕಾಡಹತ್ತಿತು. ಮಗ ಮನೆ ಬಿಟ್ಟು ಹೋಗಿ ಎರಡು ತಿಂಗಳಾಗಿತ್ತಷ್ಟೇ. ನಾಳೆ ಬರಬಹುದು, ನಾಡಿದ್ದು ಬರಬಹುದು, ಮುಂದಿನ ವಾರ ಬರಬಹುದು, ಅವನ ಹುಚ್ಚು ಬುದ್ಧಿ ಇಳಿದರೆ ಎಂದು ಕಾದು ಕಾದು ಅಂತೂ ಹೆಂಡತಿ ಕೊನೆಕಂಡಳು. ಕೆಲವರು 'ಧಾರವಾಡದಲ್ಲೇ ಮನೆ ಮಾಡಿ ಉಳಿದಿದ್ದಾನೆ' ಎಂದರೆ, ಮತ್ತೆ ಕೆಲವರು 'ಆರೆ ಸ್ವಾನವನನ್ನು ಮೊನ್ನೆ ತಾನೆ ಶಿವಮೊಗ್ಗದಲ್ಲಿ ಭೇಟಿಯಾಗಿದ್ದೆ' ಎಂದರು. ಪಟೇಲರಿಗೆ ಗೊತ್ತಿದ್ದರೂ ಯಾರೂ ಪತ್ತೆ ಹೇಳದಂತೆ ಬಂದಾಬಸ್ತು ಮಾಡಿದ್ದರು. ಎಲ್ಲಕಡೆ ವಿಚಾರಿಸಿ ಕಡೆಗೆ ಸೋತು ಶಾಂತಜ್ಜ ಹೆಣವನ್ನು ಎಬ್ಬಿಸಲು ತೀರ್ಮಾನಿಸಿದನು. ಗದ್ದೆಯ ಮೇಲಿನ ಬೇಣದಲ್ಲಿ ಗುಳಿತೆಗೆದು ಅಂತೂ ಶವಸಂಸ್ಕಾರ ಎಂಬ ಕ್ರಿಯೆ ಮಧ್ಯಾಹ್ನದೊಳಗೆ ಮುಗಿಯಿತು.

ಶಾಂತಜ್ಜ ಮನೆಗೆ ಬಂದ. ದಿನದ ಪರಿಪಾಠದಂತೆ ಸ್ನಾನ ಮಾಡಿ, ಪೂಜೆ ಮಾಡಿ, ಅಡಿಗೆ ಮಾಡಿ ಇಂದು ಹೆಂಡತಿಯಿಲ್ಲ ತಾನೊಬ್ಬನೇ ತಿನ್ನಬೇಕೆಂದು ನೆನಪಾಯ್ತು. ಆ ನೆನಪು ಊಟವೇ ಬೇಡ ಎನ್ನುವಷ್ಟು ತೀವ್ರವಾಗಿ ಬೆಳೆದಾಗ ಗಡಿಗೆಯನ್ನು ಹಾಗೇ ಮುಚ್ಚಿಟ್ಟು ಮೇಲೆದ್ದ. ಒಬ್ಬಂಟಿಯ ಸಂಸಾರ ಹೀಗೇ ವಾರಗಟ್ಟಲೇ, ತಿಂಗಳುಗಟ್ಟಲೇ ಕಳೆದು ಒಂದು ವರ್ಷ ಪೂರೈಸಿದರೊಳಗೆ ವಯಸ್ಸಾಗಿದ್ದರೂ ಗಟ್ಟಿಮುಟ್ಟಾಗಿದ್ದ ಶಾಂತಜ್ಜ ಬಹಳ ಜೀರ್ಣವಾಗಿಹೋದ.

ಶಾಂತಜ್ಜನ ಮೂವತ್ತೈದು ಎಕರೆ ಹೊಲ ಪಿತ್ರಾರ್ಜಿತವಲ್ಲ, ಬದಲಾಗಿ ಸಂಪೂರ್ಣ ಸ್ವಯಾರ್ಜಿತ. ಆದ್ದರಿಂದ ವಾರಸುದಾರ ಇಷ್ಟಪಟ್ಟವನಿಗೆ ಆಸ್ತಿಯನ್ನು ಬರೆದು ಕೊಡುವ ಹಕ್ಕಿದೆ. ಆದರೂ ಪಟೇಲರು ತಮ್ಮ ಹೆಸರಿಗೆ ಮಾಡಿಸಿಕೊಳ್ಳಲು ಯಾಕೋ ಹೆದರಿದರು. ಈ ಅಂಜಿಕೆ ಒಂದು ತಾಜಾ ಉಪಾಯಕ್ಕೆ ದಾರಿ ಮಾಡಿಕೊಟ್ಟಿತು. ಪಕ್ಕದ ಆಲಹಳ್ಳಿಯಲ್ಲಿ ಯಾವತ್ತೋ ಜೀರ್ಣವಾದ ಒಂದು ಮಠದ ಅವಶೇಷ ಇತ್ತೀಚಿಗೆ ಪತ್ತೆಯಾಗಿತ್ತು. ಅದು ಮೇಧಾಪುರಿ ಪೀಠದ ಶಾಖಾಮಠವಾಗಿತ್ತೆಂದು ತಿಳಿದು ಬಂದಿತ್ತು. ಆ ಮಠವನ್ನು ಜೀರ್ಣೋದ್ಧಾರ ಮಾಡಲು ಆಸ್ತಿಯ ಅಥವಾ ದುಡ್ಡಿನ ಅವಶ್ಯಕತೆ ತುಂಬಾ ಇತ್ತು. ಹೆಚ್ಚು ಸಮಯ ತೆಗೆದುಕೊಳ್ಳದೇ ಅಲ್ಲಿಗೆ ಒಬ್ಬ ಮರಿ ಸ್ವಾಮಿಯನ್ನು ತಂದು ಪೀಠಾಧ್ಯಕ್ಷನನ್ನಾಗಿ ಮಾಡಿದರು. ಶಾಂತಜ್ಜನ ಮನ ಒಲಿಸಲು ಅವನ ಮನೆಯ ತುಂಬಾ ಪೀಠದ ಚಿತ್ರಗಳನ್ನೂ, ನಾನಾ ದೇವರ ಪಟಗಳನ್ನೂ ಅಂಟಿಸಿದರು. ಶಾಂತಜ್ಜನಿಗೆ ಇಂದಲ್ಲಾ ನಾಳೆ ಮಗ ಬಂದೇ ಬರುತ್ತಾನೆಂದು ದೂರದ ಆಸೆ ಇತ್ತೇ ಇತ್ತು. ಮೊಮ್ಮಕ್ಕಳ ನೆನಪಾಗಿ ಮಲಗಿದಲ್ಲೇ ಕಣ್ಣೀರು ಹರಿಯುತ್ತಿತ್ತು.

ಇತ್ತ ಪಟೇಲರ ಧರ್ಮಬೋಧನೆ ಚುರುಕಿನಿಂದ ನಡೆದಿತ್ತು. ಊರೆಲ್ಲೆಲ್ಲಾ ಶಾಂತಪ್ಪಜ್ಜನ ಉದಾರ ಗುಣವನ್ನು ಹಾಡಿ ಹೊಗಳುವ ತಯ್ಯಾರಿ ನಡೆದಿತ್ತು. ಆಲಹಳ್ಳಿ ಪೀಠಕ್ಕೆ ತನ್ನಷ್ಟೂ ಆಸ್ತಿಯನ್ನು ದಾನವಾಗಿ ಕೊಟ್ಟಿದ್ದಾನೆಂದೂ ಸಾರಿಯಾಗಿತ್ತು. ಶಾಂತಜ್ಜನಿಗೆ ತಾನೇನೂ ಮಾಡುತ್ತಿಲ್ಲ, ಎಲ್ಲ ತನ್ನ ಕೈಮೀರಿ ನಡೆಯುತ್ತಿದೆ ಎಂದು ಗೊತ್ತಿದ್ದರೂ ಆಗಾಗ ಸಿಟ್ಟು ಬಂದು ಕೂಗಾಡುತ್ತಿದ್ದ. ಕಡೆಗೊಂದು ದಿನ ಒಂದು ಕಾರು ಮಾಡಿಕೊಂಡು ಪಟೇಲರೂ, ಐನೇರೂ, ಸಿದ್ದಪ್ಪಗೌಡರೂ, ಶಾಂತಜ್ಜನನ್ನು ಶಿವಮೊಗ್ಗೆಗೆ ಕರೆದುಕೊಂಡು ಹೋಗಿ ಆತನ ಎಲ್ಲ ಆಸ್ತಿಯನ್ನೂ ದಾನಪತ್ರವಾಗಿ

ಮಠಕ್ಕೆ ಬರೆಯಿಸಿ ನೋಂದಣಿ ಮಾಡಿಸಿ ಹಿಂತಿರುಗಿದರು. ಊರಲ್ಲಿ ಕಾರಿಗೆ ಭವ್ಯ ಸ್ವಾಗತ ದೊರೆಯಿತು. ಶಾಂತಜ್ಜನ ಮೇಲೆ ಊರವರು 'ದಾನವೀರ ಶಾಂತಜ್ಜ' ಎಂಬ ಲಾವಣಿ ಕಟ್ಟಿ ಹಾಡಿದರು. ಆತನ ಮನೆಯ ನೆತ್ತಿಯ ಮೇಲೆ ಒಂದು ಕೆಂಪು ಧರ್ಮಧ್ವಜ ಹಾರಿಸಿದರು. ಮಠ ಸ್ವಲ್ಪ ದಿನಗಳಲ್ಲೇ ತನಗೆ ದೂರದ ಆ ಗದ್ದೆಯನ್ನು ಮಾಡಿಸಲು ಕಷ್ಟವಾಗುತ್ತದೆ. ಆದ್ದರಿಂದ ಪಟೇಲರೂ, ಐನೇರೂ ಕೂಡಿ ಆ ಹೊಲ ಬಿತ್ತಿ ನಮಗೆ ಇಂತಿಷ್ಟು ಅಂತ ಕೊಡಲಿ ಎಂದು ತೀರ್ಮಾನ ಹೊರಡಿಸಿತು. ತಮ್ಮ ಇಚ್ಛೆ ಪೂರ್ತಿಯಾಗಿದ್ದಕ್ಕಾಗಿ ಇಬ್ಬರೂ ಸಂತಸಪಟ್ಟರು.

ಇಷ್ಟಾದ ಒಂದು ವಾರದೊಳಗೆ ಶಾಂತಜ್ಜ ಪೂರ್ತಿ ನೆಲ ಹಿಡಿದ, ನೆಲ ಹಿಡಿಯಲಿಕ್ಕೆ ಬಚ್ಚಲಲ್ಲಿ ಒಮ್ಮೆ ಜಾರಿ ಬಿದ್ದದ್ದು ನೆವವಷ್ಟೇ ಆದರೂ ಉಳಿದಂತೆ ಮಾನಸಿಕವಾಗಿ ಮುದುಕ ತುಂಬ ಹಣ್ಣಾಗಿದ್ದ. ಇತ್ತೀಚೆಗೆ ಆತನಿಗೆ ಹಿಂದಿನ ಎಲ್ಲ ಸ್ಮೃತಿ ನೆನಪಾಯಿತು. 'ತಾನು ಚಿಕ್ಕಂದಿನಲ್ಲಿ ಕೈ ಬೀಸಿಕೊಂಡು ಬಯಲುಸೀಮೆಯಿಂದ ಈ ಅರೆಮಲೆನಾಡ ಹಳ್ಳಿಗೆ ಮನೆಯಾಳುತನಕ್ಕೆ ಬಂದು ದರಕಾಸ್ತಿನಲ್ಲಿ ಇಷ್ಟೆಲ್ಲ ಆಸ್ತಿಯನ್ನು ಕಷ್ಟಪಟ್ಟು ಹಿಡಿದು ಗಟ್ಟಿ ದುಡಿಮೆ ಪ್ರಾರಂಭಿಸಿದಾಗ ಪಟೇಲರು, ಐನೇರು ಎಲ್ಲರೂ ಬಹಿರಂಗವಾಗಿ ವಿರೋಧಿಸದಿದ್ದರೂ ಹಿಂದಿನಿಂದ ಕಿರುಕುಳ ಕೊಡುತ್ತಿದ್ದರು. ಯಾವುದಕ್ಕೂ ಅಂಜದೆ ತಾನು ದುಡಿದು ಮೇಲೆ ಬಂದು , ಮತ್ತಷ್ಟು ಭೂಮಿಯನ್ನು ಖರೀದಿಮಾಡಿ ಮತ್ತೊಬ್ಬರಿಗೆ ಸಹಾಯ ಮಾಡುವಂತಾದಾಗ ಪಟೇಲರು, ಐನೇರು, ಸಿದ್ದನಗೌಡರು ಎಲ್ಲರೂ ಹತ್ತಿರವಾಗಿದ್ದರು. ಆದರೂ ಅವರಲ್ಲಿ ತನ್ನ ಬಗ್ಗೆ ಅಸೂಯೆ, ಬೂದಿ ಮುಚ್ಚಿದ ಕೆಂಡದಂತೆ ಯಾವಾಗಲೂ ಇತ್ತು. ಅದೇ ಕಿಚ್ಚನ್ನು ಅವರು ಈಗ ನಯವಾಗಿ ತೀರಿಸಿಕೊಂಡಿದ್ದಾರೆ. ಅಯ್ಯೋ ನಾನು ರುಜು ಮಾಡಿ ಬಿಟ್ಟೆನೇ? ನನ್ನ ಬುದ್ಧಿಗೆ ಏನಾಗಿತ್ತು? ಎಂದು ಹಳಹಳಿಸಿದ. 'ಏ ಪಟೇಲಪ್ಪಾ..' ಎಂದು ಒಮ್ಮೆ ಶಕ್ತಿಯನ್ನು ಒಟ್ಟುಗೂಡಿಸಿ ರೋಷದಿಂದ ಕೂಗಿದ. ಗೋಡೆಗಳಿಗೆ ಅಂಟಿಸಿದ್ದ ದೇವರ ಪಟಗಳು ಅಣಕಿಸಿ ನಕ್ಕವು. ಕೈಲಾಗದ ಒದ್ದೆ ಉರುವಲಂತೆ ತುಂಬಾ ಪಶ್ಚಾತ್ತಾಪಪಟ್ಟ.

ಪೇಟೆಯಲ್ಲಿ ಸುಮಾರು ಒಂದು ವರ್ಷ, ಅದೂ ಇದೂ ಹಂಗಾಮಿ ಕೆಲಸ ಮಾಡಿಕೊಂಡು ಕಳೆದ ಸದಾಶಿವನಿಗೆ ಏಕೋ ಇತ್ತೀಚೆಗೆ ತಾನು ಮಾಡಿದ್ದು ಸರಿಯಲ್ಲವೆನಿಸಹತ್ತಿತ್ತು. ಹೆಂಡತಿಯೊಂದಿಗೆ ಕೆಲವು ಬಾರಿ ಹೇಳಿಯೂ ನೋಡಿದ್ದ. 'ಗಂಜಿ ಕುಡಿದರೂ ಚಿಂತಿಲ್ಲ, ನಿಮ್ಮವ್ವನ ಹೇಲು, ಉಚ್ಚೆ ಚಾಕರಿ ನಾ ಮಾಡಾಕೊಲ್ಲೆ..' ಎಂದಿದ್ದಳು ಲಲಿತ. ಆಕೆಯಿಂದ ಯಾವುದೇ ಸಮರ್ಪಕ ಉತ್ತರ ದೊರೆಯದಿದ್ದುದರಿಂದ ಆಕೆಗೆ ತಿಳಿಸದೇ ತನ್ನೂರಿಗೆ ಹೋಗಿಬರಲೇಬೇಕೆಂದು ಒಮ್ಮೆ ನಿಶ್ಚಯಿಸಿದ. ಮತ್ತೊಮ್ಮೆ ಗರ್ವ ಅಡ್ಡ ಬಂದಿತು. ಆದರೂ ತನ್ನ ನಿಶ್ಚಯವನ್ನೇ ನಿಕ್ಕಿ ಹಿಡಿದು ಒಂದು ಮಧ್ಯಾಹ್ನ ಊರಿನ ಸರಹದ್ದನ್ನು ಹೊಕ್ಕ. ಮನೆ ಸಮೀಪಿಸುತ್ತಿದ್ದಂತೆ ಎತ್ತರದಲ್ಲಿ ಹಾರಾಡುತ್ತಿದ್ದ ಧರ್ಮಧ್ವಜ ಕಾಣಿಸಿತು. ಒಂದೂ ತಿಳಿಯದೇ ನೇರ ಮನೆಗೆ ನುಗ್ಗಿ ಎಲ್ಲೆಲ್ಲೂ ಕತ್ತಲಿದ್ದಿದ್ದರಿಂದ ಅಪ್ಪಯ್ಯಾ..? ಎಂದು ಒಮ್ಮೇ ಕೂಗಿದ.

'ತಮ್ಮಾ.. ಅಯ್ಯಯ್ಯೋ..' ಎನ್ನುವ ಆರ್ತ ಧ್ವನಿಯಿಂದ ಅಪ್ಪಯ್ಯ ಮಲಗಿದ್ದಲ್ಲೇ ದಡಬಡಿಸಿತು. ಪಶ್ಚಾತ್ತಾಪದಿಂದ ಬೆಂದ ಎರಡು ಹೃದಯಗಳು ಕಲೆತವು. ಶಾಂತಜ್ಜ ಏನೇನೋ ಕೈ ಬೆರಳಾಡಿಸಿ ಹೇಳಲು ಪ್ರಯತ್ನ ಪಟ್ಟರೂ ಒಂದೂ ತಿಳಿಯಲಿಲ್ಲ.

ಸದಾಶಿವ 'ಅಯ್ಯೋ ಶಿವನೇ' ಎಂದು ಕೂತಲ್ಲಿಂದಲೇ ತನ್ನೆರಡೂ ಕೈಗಳನ್ನೂ ಉದ್ದವಾಗಿ ನೆಲಕ್ಕೆ ಬಗ್ಗಿಸಿ ಬಾಗಿದ.

◆◆

ಮಿಥುನ ಚಕ್ರವರ್ತಿ, ಆಂಗ್ಲ ಉಪನ್ಯಾಸಕರು, ಎಸ್.ಡಿ.ಎಂ. ಕಾಲೇಜ್, ಉಜಿರೆ (ದ.ಕ) – ೫೭೪೨೪೦

‘ಆಕು ರಾಲು ಕಾಲಂ’ - ‘ಎಲೆಯುದುರೊ ಕಾಲ’: ಒಂದು ತುಲನಾತ್ಮಕ ಪರಿಶೋಧನೆ

ಡಾ. ಜಿ. ವೀರಭದ್ರಗೌಡ

ಮಹೆಜಬೀನ್‌ರ ‘ಆಕು ರಾಲು ಕಾಲಂ’ ಎಂಬ ತೆಲುಗು ಕವನ ಸಂಕಲನವನ್ನು ಚಿದಾನಂದ ಸಾಲಿಯವರು ‘ಎಲೆ ಯುದುರೊ ಕಾಲ’ ಎಂಬುದಾಗಿ ಕನ್ನಡಕ್ಕೆ ಅನುವಾದಿಸಿದ್ದಾರೆ. ಪ್ರಸ್ತುತ ಬರಹ, ಚಿದಾನಂದ ಸಾಲಿಯವರು ಅನುವಾದಿಸಿದ ಕವಿತಾ ಸಂಕಲನವನ್ನು ಮೂಲ ಸಂಕಲನಕ್ಕೆ ಹೋಲಿಸಿ, ಯಾವ ಪ್ರಕಾರದ ಅನುವಾದ ಎಂದು ಗುರುತಿಸುವುದರೊಂದಿಗೆ, ಹೆಚ್ಚುವರಿ ಸಾಧ್ಯತೆಗಳನ್ನು ಪರಿಶೀಲಿಸುವ ಪ್ರಯತ್ನದ್ದಾಗಿದೆ. ಈ ಪ್ರಯತ್ನಕ್ಕೆ ಪೂರಕವಾಗಿ ಮೂಲ ಪಠ್ಯ ಕವಿಯಿತ್ರಿಯ ಹಿನ್ನೆಲೆಯನ್ನು, ಉದ್ದೇಶ ಪೂರ್ವಕವಾಗಿ ಕೊಂಚ ವಿವರವಾಗಿ ಬಳಸಿಕೊಳ್ಳಲಾಗಿದೆ. ಪರಿಶೀಲನೆಯ ವಿವರಣೆಗಳನ್ನು ಸಂಕ್ಷಿಪ್ತಗೊಳಿಸುವ ಕಾರಣಕ್ಕೆ ಮೂಲ ಹಾಗೂ ಅನುವಾದದ ಪಠ್ಯ ಉದಾಹರಣೆಗಳನ್ನು ಅಧಿಕವಾಗಿ ಬಳಸಿಕೊಳ್ಳುವುದು ಇಲ್ಲಿ ಅಗತ್ಯವಾಗಿದೆ.

ಆಧುನಿಕ ತೆಲುಗು ಸಾಹಿತ್ಯದಲ್ಲಿ ವಿಪ್ಲವ, ದಲಿತ ಹಾಗೂ ಮುಸ್ಲಿಂ, ಸ್ತ್ರೀವಾದಗಳು ಹೊಸ ಆಲೋಚನೆಗಳ ರಹದಾರಿಯನ್ನು ಸೃಷ್ಟಿಸಿವೆ. ಈ ವಾದಗಳ ಪ್ರವೇಶ, ಪ್ರಭಾವದಿಂದ ತೆಲುಗು ಕಾವ್ಯ ತೇಜೋಮಯವಾಗಿದೆ. ಈ ಪಂಥಗಳ ಮಹಿಳಾ ಸಾಹಿತ್ಯವೇ ಭವಿಷ್ಯದ ತೆಲುಗು ಸಾಹಿತ್ಯ ಎನ್ನುವಂಥ ನಂಬಿಕೆಯನ್ನು ಮೂಡಿಸಿ ಬೆಳೆದಿವೆ. ಇಂಥ ಸಂದರ್ಭವು ತೆಲುಗು ಭಾಷೆಗೆ ಒದಗಲು, ಕೆಲವು ಕವಿಯಿತ್ರಿಯರ ಕೃಷಿ ಗಮನಾರ್ಹವಾದದ್ದು. ಆ ಸಾಲಿನ ಕವಿಯಿತ್ರಿಯರಲ್ಲಿ ಮಹೆಜಬಿನ್ ಒಬ್ಬರು.

ಜಬೀನ್‌ರು ೯೦ರ ದಶಕದಲ್ಲಿ ‘‘ಆಕು ರಾಲೆ ಕಾಲಂ’’ (ಎಲೆಯುದುರೊ ಕಾಲ) ಸಂಕಲನದಿಂದ ತೆಲುಗು ಕಾವ್ಯಕ್ಕೆ ಗೌರವದ ವಿಶಿಷ್ಟಗರಿ ನೆಟ್ಟವರು. ವಿಪ್ಲವದವರು ತಮ್ಮ ಕಾಲ್ಪನಿಕತೆ, ಅನುಭೂತಿ, ಉದ್ವಿಗ್ನತೆಗಳ ಸ್ಪಷ್ಟ ಅಭಿವ್ಯಕ್ತಿಯಿಂದ ಇತರರಿಗಿಂತ ಭಿನ್ನತೆಯನ್ನು ತೋರುವ ಕವಿತೆಗಳನ್ನು ರಚಿಸಿದವರು ಎಂಬ ಅಭಿಪ್ರಾಯಕ್ಕೆ ಪಾತ್ರರಾದವರು. ಮೂಲತಃ ಮುಸ್ಲಿಂ ಸಮುದಾಯದವರಾದ

ಜಬೀನ್ ಸ್ತ್ರೀಸಂವೇದನೆ, ಸ್ತ್ರೀವಾದ ನೆಲೆಯಿಂದ ಕವಿತೆ ರಚಿಸಿದವರು. ಅವರು ಆಕರ್ಷಕವೂ ವಿಶಿಷ್ಟ್ಯವೂ ಆದ ರೀತಿಯಲ್ಲಿ ಅಭಿವ್ಯಕ್ತಿಯನ್ನು ಮೆರೆದವರಾಗಿದ್ದಾರೆ.

ಮುಸ್ಲಿಂ ಸಂವೇದನೆಯ ಕವಿತೆಗಳನ್ನು ರಚಿಸಿದರೂ, ಅವರು ಈ ಪಂಥದಲ್ಲಿ ಮುಂದುವರೆಯದೆ, ವಿಪ್ಲವ ಪಂಥದೊಂದಿಗೆ ಗುರುತಿಸಿಕೊಂಡು ಮೌಲಿಕ ಕವಿತೆಗಳನ್ನೂ ನೀಡಿದ್ದಾರೆ. ಒಂದು ದೃಷ್ಟಿಯಿಂದ ಮುಸ್ಲಿಂ ಸ್ತ್ರೀವಾದಕ್ಕೆ ಇವರು ನೀಡಬಹುದಾದಷ್ಟು ಕೊಡುಗೆ ನೀಡಲಾಗಲಿಲ್ಲ ಎಂದರೂ, ವಿಪ್ಲವ ಪಂಥವನ್ನು ವಿಶಿಷ್ಟವಾಗಿ ಪ್ರತಿನಿಧಿಸಿದ ಸಾಧನೆ ಸ್ಮರಣೀಯ. ವಿಪ್ಲವ ಸ್ತ್ರೀವಾದದಲ್ಲಿ ವಿಶಿಷ್ಟವಾಗಿ ನಿಲ್ಲುವ ಅವರ ಅನೇಕ ಕವಿತೆಗಳು, ವಸ್ತುವನ್ನು ವಿಶಿಷ್ಟವಾಗಿ ಅಂತಿಮ ಪರೀಕ್ಷೆಗೆ ಒಳಪಡಿಸಿವೆ. ಇವರ ಬರವಣಿಗೆ, ಪ್ರಮಾಣದಿಂದ ಚಿಕ್ಕದಾಗಿದ್ದರೂ ಸಾಹಿತ್ಯ ಲೋಕಕ್ಕೆ ಚಿರಪರಿಚಿತವಾಗಿದ್ದಾಗಿದೆ. ಹರಡಿಕೊಂಡ, ತನ್ನ ಅನುಭವಕ್ಕೆ ನಮ್ಮನ್ನು ಸೆಳೆದುಕೊಂಡು ಅದರಲ್ಲಿ ಒಂದಾಗಿಸಿಕೊಳ್ಳುವ ಯಾವುದೋ ಸಂಮೋಹಕ ಶಕ್ತಿ ಆಕೆಯ ಕಾವ್ಯಕ್ಕೆ ಇದೆ. - ಎನ್ನುವ ಕೆ. ಶಿವಾರೆಡ್ಡಿ ಅವರ ಮಾತುಗಳು ಸೂಕ್ತವಾದವು. ತೆಲುಗು ಕಾವ್ಯವನ್ನು ಒಂದು ಸಂದರ್ಭಕ್ಕೆ ವಿಶೇಷವಾಗಿ ಪರಿಶೀಲಿಸಿದ ಡಾ. ಎಂಡ್ಲೂರಿ ಸುಧಾಕರ ಅವರು ಜಬೀನರ 'ಜ್ಞಾಪಕಂ' ಕವಿತೆ ಕುರಿತು : ಇದೆ ಕವಿತೆಯನ್ನು ಚೈನಾ ಇಲ್ಲವೆ ಅಮೇರಿಕ ಕವಿಯಿತ್ರಿಯಿಂದ ಬರೆಯಿಸಿದ್ದರೆ ರಾತ್ರೋರಾತ್ರಿ ಆಕೆ ಅಂತರ್ ರಾಷ್ಟ್ರೀಯ ಕೀರ್ತಿವಂತ ಕವಿಯಿತ್ರಿಯಾಗಿರುತ್ತಿದ್ದಳೇನೋ ಎಂದು ಅಭಿಪ್ರಾಯ ಪಡುತ್ತಾರೆ. ಭಾಷಾ ಸೀಮಿತತೆ, ಮೀಡಿಯಗಳ ಕುತಂತ್ರದಿಂದ ನಮ್ಮ ಅನೇಕ ಬರಹಗಾರರು ಪಕ್ಕದ ಭಾಷೆಗಳಿಗೂ ಅಪರಿಚಿತರಾಗುತ್ತಿರುವುದು ಒಂದು ದುರಂತ ಈ ಹಿನ್ನೆಲೆಯಲ್ಲಿ ಸಾಲಿಯುವರ ಪ್ರಯತ್ನ ಮೆಚ್ಚುವಂತದ್ದು.

ಆರು ರಾಲು ಕಾಲಂ ನಂತರ ಅವರು 'ಅಗಾಥಂ' ಎಂಬ ಕವಿತೆ ರಚಿಸಿದ್ದಾರೆ. ಈ ಕವಿತೆಯು 'ಅಗಾಥೆ' ಎಂಬ ಶೀರ್ಷಿಕೆಯೊಂದಿಗೆ ಅನುವಾದಗೊಂಡಿದೆ. ಸಮಕಾಲೀನ ಸಂದರ್ಭಗಳನ್ನು ಎಲ್ಲರೂ ವಿಶಿಷ್ಟವಾಗಿ ಅರ್ಥಮಾಡಿಕೊಳ್ಳಬೇಕಾದ, ವ್ಯವಸ್ಥೆ ಎಂದು ಹೇಳಿಕೊಳ್ಳುವ ಅವ್ಯವಸ್ಥೆಯನ್ನು, ಅಲ್ಲಿಯ ಸೂಕ್ಷ್ಮ ಸಮಸ್ಯೆಗಳ ವಿರುದ್ಧ ಹೃದಯ ಶಕ್ತಿಯಿಂದ ಶೀತಲ ಪ್ರತಿಭಟನೆ ಮಾಡಿದ್ದಾರೆ;

> ಚರಿತ್ರೆ ಸ್ತ್ರೀಯರ ಕಣ್ಣೀರಿನಿಂದ ನೆನೆದು ಹೋಗಿದೆ
> ಅವರ ಹೋರಾಟದಿ ರಂಗೇರಿ ಹೋಗಿದೆ
> ನಮಗೆ ಗಾಯಗಳನ್ನು ಉಳಿಸಿದ್ದು ಬಿಟ್ಟರೆ
> ಗಂಡಸರು ಸರಿಯಾಗಿ ಯುದ್ಧವನ್ನೆಂದು ಮಾಡಿದರು
> ....
> ರಾಜ್ಯವು ತಾಯಿ ಸಮ
> ಅಣ್ಣಂದಿರು ಒಡಹುಟ್ಟಿದವರು
> ಶೋಷಣೆ ಯಾವ ರಾಜ್ಯಕ್ಕೂ ಶೋಭೆ ಕೊಡದು
> ....
> ನಿಮಗೆ ನಡೆಯಲು ರಾಜಬೀದಿ ಅನವಸರ
> ಕಾಲುದಾರಿ ಸಾಕು
> ಆಡವಿಗೆ ರಾಜ್ಯಕ್ಕೆ ಮಧ್ಯ
> ಒಂದು Fly over Bridge ಕಟ್ಟಿಸಿ (ಜ. ವೀರಭದ್ರಗೌಡ. ಮಹಿಳಾ ಸಂಪದ-೨೦೦೫)

ಜಬೀನ್ ಬರೆದ ಕವಿತೆಗಳನ್ನು ಓದುತ್ತಿದ್ದರೆ, ದುಃಖಗೊಂಡ ಪಕ್ಕದ ಮನೆಯ ಹುಡುಗಿಯ ಹೃದಯದೊಳಕ್ಕೆ ಇಣುಕಿದಂತಾಗುತ್ತದೆ. ಯಾರನ್ನೊ ಕಳೆದುಕೊಂಡು ಯಾರಿಗೊ ಹೇಳಿಕೊಳ್ಳಲಾಗದಂತಹ ಯಾತನೆಯನ್ನು ಅನುಭವಿಸುತ್ತಿದ್ದು ನಾವಷ್ಟೇ ಮಾತನಾಡಿದಂತಾಗುತ್ತದೆ. ಒಂದು ಹನಿ ಕಣ್ಣೀರೊರೆಸಲು ಒಂದು ಆಶ್ರುನಯನ ಬೇಕೇ ಬೇಕು ಎಂಬುದು ಜಬೀನಳ ಸಿದ್ಧಾಂತ. ಜಬೀನ್ ಸಾರಾಸಗಟು ನಕ್ಸಲೀಯ ಕವಿಯತ್ರಿಯಲ್ಲದಿರಬಹುದು ಆದರೆ ನಕ್ಸಲೀಯ ಪ್ರಭಾವ ಜಬೀನರಿಗೆ ಪರೋಕ್ಷವಾಗಿದೆ ಎಂಬ ರವಿ ಬೆಳಗೆರೆಯವರ ಸಹೃದಯ ವಿಮರ್ಶಾ ಮಾತುಗಳು ಯಾಥಾರ್ಥವಾದವು.

ಸ್ತ್ರೀವಾದದಲ್ಲಿಯೇ ವಿಶಿಷ್ಟವಾದ ಸ್ತ್ರೀ ತುಡಿತವನ್ನು ಮೆರೆದ ಜಬೀನ್ ತೆಲುಗಿನ ವಿಪ್ಲವ ಪಂಥದ ವಿಶಿಷ್ಟ ಕವಿಯಿತ್ರಿ. ಒಂದು ಪಂಥದಲ್ಲಿ ಹೊಸತನವನ್ನು ಪಂಥದೃಷ್ಟಿಯಿಂದ ಗ್ರಹಿಸುವ ಸಾಹಿತಿಗಳ ಸಾಹಿತ್ಯವನ್ನು ಪರಭಾಷೆಗೆ ಪರಿಚಯಿಸುವ ಅಗತ್ಯ ಅನೇಕ ದೃಷ್ಟಿಯಿಂದ ಮಹತ್ವದ್ದು. ಇಂಥ ಮಹತ್ವ ಚಿದಾನಂದ ಸಾಲಿಯವರು ಅರಿತಿದ್ದಾರೆ.

೨

ಅನುವಾದ ಸಂದರ್ಭದಲ್ಲಿ ಅನುವಾದಕರಿಗೆ ಸಮಸ್ಯೆಗಳು ಹಲವು ರೀತಿಯವು. ಅದರಲ್ಲಿಯೂ ಕಾವ್ಯ ಪ್ರಕಾರವನ್ನು ಅನುವಾದಿಸುವಾಗ ಸಮಸ್ಯೆಗಳು ಇನ್ನು ವಿಶಿಷ್ಟವಾಗಿರುತ್ತವೆ. (ವಿವರಕ್ಕಾಗಿ ನೋಡಿ: ಪ್ರಧಾನ ಗುರುದತ್ತ. ಭಾಷಾಂತರ ಕಲೆ- ೨೦೦೬) ಸಾಲಿಯವರು ಆಯ್ಕೆ ಮಾಡಿಕೊಂಡಿರುವ ಸಂಕಲನದ ಮೂಲ ಭಾಷೆ ತೆಲುಗು. ತೆಲುಗು - ಕನ್ನಡಗಳು ಮೂಲದ್ರಾವಿಡದ ಸಹೋದರಿ ಭಾಷೆಗಳು, ಕಾಲನಂತರದಲ್ಲಿ ರೂಪ ಸಾಮ್ಯವಾದರೂ ಅರ್ಥವು ಸಾಂದರ್ಭಿಕವಾಗಿ ಭಿನ್ನವಾಗಿವೆ. ಸಂಸ್ಕೃತ ರೂಪಗಳನ್ನು ಉಭಯ ಭಾಷೆಗಳು ಸ್ವೀಕರಿಸಿದ್ದರೂ ಅರ್ಥವನ್ನು ಭಿನ್ನವಾಗಿ ಗ್ರಹಿಸಿಕೊಂಡಿವೆ. ಭಾಷೆಗಳಿಗೆ ಇಂಥ ಸಂದರ್ಭವಿರುವ ಕಾರಣ, ಅನುವಾದಕ ಅನೇಕ ಎಚ್ಚರ ವಹಿಸಬೇಕಾಗಿದೆ. ಅನುವಾದ ಪಠ್ಯದ ವಸ್ತು ಕನ್ನಡ ಸಂದರ್ಭಕ್ಕೆ ಒಂದು ವಿಶಿಷ್ಟವಾದ ಸಮಸ್ಯೆಯನ್ನು ಸೂಚಿಸುತ್ತದೆ. ತೆಲುಗು ನೆಲದಲ್ಲಿ ಕಾಡಿದ ನಕ್ಸಲೈಟ ಸಮಸ್ಯೆ, ಸಾಹಿತ್ಯ ಪ್ರೇರಣೆಯಾಗಿ ವಿಪ್ಲವ ಸಾಹಿತ್ಯಕ್ಕೆ ವಿಶಿಷ್ಟ ವಸ್ತುವಾಗಿ ಸೇರ್ಪಡೆಯಾಗಿದೆ. ಅಂಥ ವಸ್ತುವಿಗೆ ಸಮವಾಗಿ ಕನ್ನಡದಲ್ಲಿ ಬಂಡಾಯ ಪಂಥ ಬೆಳೆದಿದ್ದರೂ ಆ ಹಿನ್ನೆಲೆ ಹಾಗೂ ವಿಶಿಷ್ಟತೆಗಳನ್ನು ಗುರುತಿಸಿಕೊಂಡಿಲ್ಲ. ಈ ಉಭಯ ಭಾಷೆಗಳ ಮಧ್ಯೆ ಇದು ಪಠ್ಯದ ವಸ್ತು ದೃಷ್ಟಿಯ ಸಮಸ್ಯೆಯೇ ಆಗಿದೆ. ಒಂದು ದೃಷ್ಟಿಯಲ್ಲಿ ಸಾಲಿಯವರ ಅನುವಾದ ಪಠ್ಯ ಕನ್ನಡದಲ್ಲಿ ಮುಂದೆ ಆ ನಿಟ್ಟಿನ ವಿಶಿಷ್ಟ ಪ್ರೇರಣೆಯಾಗಬಹುದೇನೊ?

ಕವಿತಾ ಪ್ರಕ್ರಿಯೆಯಲ್ಲಿ ಕವಿ ಕಂಡ ವಸ್ತುವನ್ನು ವಿಭಿನ್ನ ನೆಲೆಯಲ್ಲಿ ಅಂತಿಮ ಪರೀಕ್ಷೆಗೆ ಒಳಪಡಿಸಿದ್ದಾಗಿರುತ್ತದೆ. ಭಾಷೆಯ ಸಾಮಾನ್ಯ ರೂಪಗಳನ್ನು ಸಾಂದರ್ಭಿಕವಾಗಿ ವಿಶಿಷ್ಟ ಅರ್ಥ ಮೂಡಿಸುವಂತ ಪ್ರಯತ್ನ ವಿಭಿನ್ನವಾಗಿರುತ್ತದೆ. ಅದರೊಂದಿಗೆ ಕವಿತೆ ವಿಶಿಷ್ಟ ಶೈಲಿಯನ್ನು ಪಡೆಯುತ್ತದೆ. ಮತ್ತೊಂದು ಸಮಸ್ಯೆ ಅಂದರೆ, ಕವಿತೆ ಕೇವಲ ವಸ್ತು, ರೂಪ, ಭಾಷೆ, ಶೈಲಿಯಾಗಿದರೆ ಕವಿಯ ಜೀವಶಕ್ತಿಯಾಗಿರುವುದನ್ನು ಅನುವಾದದಲ್ಲಿ ತರುವಾಗಿನ ಸಮಸ್ಯೆಗಳನ್ನು ವಿವರಿಸಲು ಅಸಾಧ್ಯವಾಗಿಯೇ ನಿಲ್ಲುತ್ತವೆ. ಇಂಥಲ್ಲಿ ಅನುವಾದಕಾರನ ಪ್ರತಿಭಾ ಪ್ರಯತ್ನವೇ ಮುಖ್ಯವಾಗಿ ತೋರುತ್ತದೆ. ಪ್ರಸ್ತುತ ಅನುವಾದ ಪ್ರಕ್ರಿಯೆ ಸಮಸ್ಯೆಗಳನ್ನು ಎದರಿಗಿಟ್ಟುಕೊಂಡು ರೂಪತಾಳಿದ ಹಿನ್ನೆಲೆ ಮುಂತಾದ ಅಂಶಗಳನ್ನು ಇಲ್ಲಿ ತುಲನಾತ್ಮಕವಾಗಿ ನೋಡಲಾಗಿದೆ.

೩

ಜಜೀನರ ಮೂಲ ಸಂಕಲನದ ಒಟ್ಟು ೨೬ ಕವಿತೆಗಳನ್ನು ಚಿದಾನಂದ ಸಾಲಿಯವರು ಅನುವಾದಿಸಿದ್ದಾರೆ. ಇದರಲ್ಲಿ ಕ್ರಮವಾಗಿ; ನವಸ್ಮೃತಿ, ಅಮ್ಮನ ಕಣ್ಣುಗಳು, ಮೋಡ ಸುರಿಸದ ಮಳೆ, ಚಿಕ್ಕಅಮ್ಮ, ಜೀರೋ ಅವರ್, ಸನ್ನಿಹಿತ ಸಂಬಂಧ, ನೈಸರ್ಗಿಕ ಸ್ವರೂಪ, ಅನುರಾಗಸ್ಮೃತಿಗೆ, ಭಾವಚಿತ್ರ, ವಿರಹ ಗೀತೆ, ಕಣಿವೆ, ಬಿಲ್ವತ್ Elegy ಇವು ೧೪-೨೬ರ ವರೆಗಿ ಕವಿತೆಗಳು. ಇವುಗಳಲ್ಲಿ ಮೋಡ ಸುರಿಸದ ಮಳೆ ಮತ್ತು ಬಿಲ್ವತ್ ಕವಿತೆಗಳಲ್ಲಿನ ಆಕಸ್ಮಿಕ ನ್ಯೂನ್ಯತೆಗಳನ್ನು ಬಿಟ್ಟರೆ, ಉಳಿದವು ''ನಿಕಟಾನುವಾದ''ವನ್ನು ಸಾಧಿಸಿವೆ. ವಸ್ತು, ರೀತಿ ಮತ್ತು ಶೈಲಿಗಳ ದೃಷ್ಟಿಯಿಂದ ಮೂಲಕ್ಕೆ ತೀರ ಯಥಾರ್ಥವಾದವುಗಳಾಗಿವೆ. ಯಾವುದೇ ರೀತಿಯ ಅಸಂಬದ್ಧತೆ ತೋರದೆ ಮೂಲವನ್ನು ಅನುಸರಿಸಿ, ಮೂಲದ ಆದರ್ಶವನ್ನು ಮೆರೆದಿವೆ. ಆ ಕವಿತೆಗಳ ಮೂಲ, ಅನುವಾದ ಪಠ್ಯ ಭಾಗಗಳು ಇಂತಿವೆ. ಗಮನಿಸಬಹುದು.

ಮೂಲ : ನವಸ್ಮೃತಿ

ಅನೇಕ ಸಂದಿಗ್ಧ ಆಲೋಚನಲ ಅನಂತರಂ
ಸವಾಲಕ್ಷ ಅಪ್ರಸ್ತುತ ಪ್ರಶ್ನಲಕು
ಸಮಕೂರ್ಚುಕುನ್ನ ಸಮಾಧಾನಾಲ ಅನಂತರಂ
ನೇನೊಕ್ಕ ನಿರ್ಣಯಾನಿಕೊಚ್ಚಾನು

ಹದ್ದುಲು ಸರಿಹದ್ದುಲು ಬಲಾದೂರ್
ಲಕ್ಷ್ಮಣರೇಖಲ್ನಿ ದಾಟಡಂ ಇಪ್ಪುಡು ಅವಸರಂ

ಮನುಕು ಮಾತ್ರಮೇ ಸಾಧ್ಯಮಯ್ಯೆ ಆ ಸಂಘಟನ
ಮನಕು ಮಾತ್ರಮೇ ಕಲ್ಪಿಂಚಬಡಿನ ಆ ವರಂ
....

ಎವರೈತೇನೆಂ? ಧೈರ್ಯಂಗಾ ನವಮಾಸಾಲು
ಮೋಯಾಲನುಕುನ್ನಪ್ಪುಡು

ಗುಂಡೆ ಚಪ್ಪುಡು ಕಡುಪುಲೊ ವಿನಿಪಿಂಚೆ
ಅದ್ಭುತಾನ್ನಿ ಸೊಂತಂ ಚೆಸುಕೋವಾಲಿ
ಮನ ರಕ್ತಮಾಂಸಾಲ ಫಲಾಲ ಮೀದ

ಎವರಿ ಅಧಿಕ್ಯಮೂ ವದ್ದು
ವಾಳ್ಳಕು ತೆಲಿಯನಿ ಅಸ್ಪಷ್ಟ ಬಹಿಷ್ಕರಣಲಮಧ್ಯ
ನೇನು, ಈ ಯುಗಂ ಮುಂದು ನಿಲಬಡಿ

ಅನು : ನವಸ್ಮೃತಿ

ನೂರಾರು ಸಂದಿಗ್ಧ ಆಲೋಚನೆಗಳ ನಂತರ
ಸಾವಿರಾರು ಅಪ್ರಸ್ತುತ ಪ್ರಶ್ನೆಗಳಿಗೆ
ಉತ್ತರ ಸಮೀಕರಿಸಿಕೊಂಡ ನಂತರ
ನಾನೊಂದು ನಿರ್ಧಾರಕ್ಕೆ ಬಂದಿದ್ದೇನೆ

ಗಡಿಗಳು ಸರಹದ್ದುಗಳು ಬೇಡ
ಲಕ್ಷ್ಮಣ ರೇಖೆಗಳ ದಾಟ ಬೇಕಿರುವುದೀಗ
ಅನಿವಾರ್ಯ

ನಮಗೆ ಮಾತ್ರ ಸಾಧ್ಯವಾಗುವ ಆ ಕ್ರಿಯೆ
ನಮಗೆ ಮಾತ್ರ ಕೊಡಲಾದ ಆ ವರ
....

ಯಾರಾದರೇನು? ಧೈರ್ಯವಾಗಿ ನವಮಾಸಗಳು
ಹೊರಲು ಸಿದ್ಧವಾಗಿರುವಾಗ

ಹೃದಯ ಬಡಿತ
ಹೊಟ್ಟೇಲಿ ಕೇಳಿಸುವ
ಅದ್ಭುತವ ಅನುಭವಿಸಬೇಕು

ನಮ್ಮ ರಕ್ತಮಾಂಸದ ಫಲಗಳ ಮೇಲೆ
ಅವರಿವರ ಅಧಿಕಾರದ ಮೊಹರು ಅದ್ಯಾಕೆ ಬೇಕು?
ಅವರಿಗೇ ತಿಳಿಯದ ಅಸ್ಪಷ್ಟ ಬಹಿಷ್ಕಾರಗಳ ನಡುವೆ

ಮಾತೃತ್ವಾನ್ನಿ ಆವಿಷ್ಕರಿಸ್ತುನ್ನಾನು	ಈ ಯುಗದ ಮುಂದೆ ನಿಂತು
	ಮಾತೃತ್ವವನ್ನು ಅನಾವರಣಗೊಳಿಸುತ್ತಿರುವೆ.

ಮೂಲ ಕವಿತೆಯಲ್ಲಿನ; ಅನೇಕ (= ಅನೇಕ) ಸವಾಲಕ್ಷ (= ಸವಲಕ್ಷ) ಹದ್ದಲು (=ಹದ್ದುಗಳು) ಸೊಂತಂ ಚೆಸುಕೋವಾಲಿ (= ಸ್ವಂತ ಮಾಡಿಕೊಳ್ಳಬೇಕು) ಕನ್ನಡ ಭಾಷೆಯಲ್ಲಿ ಈ ಶಬ್ದಗಳು ಸರಳ ಸಾಧ್ಯವೆನಿಸಿದರೂ ಅವುಗಳ ಬದಲಿಗೆ ಮೂಲ ರೂಪಗಳ ಅರ್ಥ ಸಹಜತೆ ಮೆರೆಯಲು ಕ್ರಮವಾಗಿ ನೂರಾರು, ಸಾವಿರಾರು, ಗಡಿಗಳು, ಅನುಭವಿಸಬೇಕು ಎಂಬ ರೂಪಗಳನ್ನು ಬಳಸಿಕೊಂಡುದು ಯಥಾರ್ಥವಾಗಿದೆ. ಮೂಲದಲ್ಲಿ 'ಎವರಿ ಅಧಿಕ್ಯಮೂ ವದ್ದು' ಎಂಬ ಸಾಲನ್ನು 'ಅವರಿವರ ಅಧಿಕಾರದ ಮೊಹರು ಅದ್ಯಾಕೆ ಬೇಕು?' ಎಂಬಲ್ಲಿ ಸಹಜ ಅಭಿವ್ಯಕ್ತಿ ಎಂಬಂತೆ ಅನುವಾದಿಸಲಾಗಿದೆ.

ಮೂಲ : ಅಮ್ಮಕಳ್ಳು	**ಅನು : ಅಮ್ಮನ ಕಣ್ಣುಗಳು**
ಜೀವಿತ ಸಂಬಂಧಂ ತೆಗಿಪೊಯಾಕ	ಜೀವನ ಸಂಬಂಧ ಹರಿದು ಹೋದ ಮೇಲೆ
ಬಂಧಾಲನ್ನೀ ಬಂಧನಾಲೇ	ಬಂಧಗಳೆಲ್ಲ ಬಂಧನಗಳೇ
....	....
ವಂಟಿಂಟಿಕಿ ಜೀವಿತಾನ್ನಿ ಅಂಕಿತಂ ಇಚ್ಚಿನ ವೇಳ	ಅಡುಗೆ ಕೋಣೆಗೆ ಬದುಕನರ್ಪಿಸಿಕೊಂಡ ಸಮಯ
ಪೊಗಬಾರಿನ	ಹೊಗೆ ಸೂರಿದ
ಅಮ್ಮಕಳ್ಳು ಅಧಿವಾಸ್ತವಿಕ ರೂಪಾಲು	ಅಮ್ಮನ ಕಣ್ಣುಗಳು ಅವಾಸ್ತವಿಕ ರೂಪಗಳು

ಮೂಲ ಕವಿತೆಯಲ್ಲಿನ; 'ಜೀವಿತಾನ್ನಿ ಅಂಕಿತಂ ಇಚ್ಚಿನ ವೇಳ' ಎಂಬುದನ್ನು 'ಬದುಕನರ್ಪಿಸಿಕೊಂಡ ಸಮಯ' ಎಂಬ ರೂಪದಿಂದ ಯಥಾರ್ಥತೆಯನ್ನು ಕನ್ನಡ ಸಹಜತೆಯಿಂದ ಸೂಚಿಸಿದ್ದಾರೆ.

ಮೂಲ : ಜೀರೋ ಅವರ್	**ಅನು : ಜೀರೋ ಅವರ್**
ಪಾತ ರಾತ್ರಿಕಿ	ಹಳೆರಾತ್ರಿ
ಕೊತ್ತಪಗಟಿಕಿ	ಹೊಸಹಗಲಿನ
ಮಧ್ಯ	ನಡುವೆ
ನಲುಗುತುನ್ನ ನವಜಾತ ಕ್ಷಣಂಲೊ	ನಲುಗುತಿಹ ನವಜಾತ ಕ್ಷಣಗಳಲಿ
ಉನ್ನಟ್ಟುಂಡಿ ಮೆಲಕುವ	ಇದ್ದಕ್ಕಿದ್ದಂತೆ ಎಚ್ಚರ
....	....
ಯುದ್ಧಂ ಮೊದಲವಕ ಮುನುಪೆ	ಯುದ್ಧ ಶುರುವಾಗುವ ಮೊದಲೇ
ಪೊಗೊಟ್ಟುಕುನ್ನ ಆಯುಧಂ ಆತನು	ಕಳೆದು ಹೋದ ಆಯುಧ - ಅವನು
ಶತ್ರು ಶಿಬಿರಾನ್ನಿ ದಾಟಡಾನಿಕಿ	ಶತ್ರು ಶಿಬಿರ ದಾಟಿ ಬರಲು
ನಾಕತನಿ ಸಾಯಂ ಕಾವಾಲಿ	ನನಗವನ ಸಹಾಯ ಬೇಕೇ ಬೇಕು

ಈ ಕವಿತೆಯ ಕೊನೆಯ ಸಾಲಿನ ಮೂಲದ 'ನಾಕತನಿ' ('ನನಗವನ' ಎಂಬುದು ನನಗಾತನ ಎಂದು ಮಾಡಿದ್ದಾರೆ ಇನ್ನು ಚೆನ್ನಾಗಿರುತ್ತಿತ್ತು) ಎಂಬುದನ್ನು ಬಿಟ್ಟರೆ ಎಳ್ಳಷ್ಟು ವ್ಯತ್ಯಾಸವಿಲ್ಲದೆ ಕನ್ನಡ ಸಹಜತೆ ಗಮನಿಸಿದ್ದಾರೆ.

ಮೂಲ :ಸನ್ನಿಹಿತ ಸಂಬಂಧಂ	**ಅನು : ಸನ್ನಿಹಿತ ಸಂಬಂಧ**
ಭೂಮಿ ಗುಂಡ್ರಗಾನೇ ಉಂದಿ	ಭೂಮಿ ಗುಂಡಾಗಿಯೇ ಇದೆ
ಕಾಲಮೇಮಿ ಮಾರಲೇದು	ಕಾಲವೇನೂ ಬದಲಾಗಿಲ್ಲ
ನಾಗರಿಕತ ಅನಾಗರಿಕಂಗಾನೇ ಉಂದಿ	ನಾಗರಿಕತೆ ಅನಾಗರಿಕವಾಗೇ ಇದೆ
ಬ್ರತುಕು ಚೌರಸ್ತಲೋ ನಿಲಬಡಿ	ಬದುಕು ಚೌಕದಲ್ಲಿ ನಿಂತು
ಸ್ತ್ರೀಲ ಗುರಿಂಚಿ ತಪ್ಪ	ಮಾತಾಡಿಕೊಳ್ಳಲು
ಇಕ್ಕಡ ಮಾಟ್ಲಾಡುಕೊಟಾನಿಕಿ ಮಾಟಲೇಮಿ ಲೇವು	ಸ್ತ್ರೀಯರ ವಿಷಯ ಬಿಟ್ಟು ಬೇರೆ ವಸ್ತುಗಳೇ ಇಲ್ಲ
ಪ್ರಪಂಚಂ,	ಪ್ರಪಂಚ
Women Sexuality ಚುಟ್ಟೂತಿರುಗುಂದಿ ತುಂದಿ	Women Sexuality ಸುತ್ತತಿರುಗುತ್ತಿದೆ

ಈ ಪ್ರೇಮ ಕಥ ಎಲ್ಲಾ ರಾಶಾವು ?	ಈ ಪ್ರೇಮಕಥೆ ಹೇಗೆ ಬರೆದೆ ?
ಆ ಕವಿತಲೊ ಅತನೆವರು?	ಆ ಕವಿತೆಯಲಿ ಅವನ್ಯಾರು?
ಅನ್ನೀ ವಿಕಸಿಂಚನಿ ಪ್ರಶ್ನಲೇ!	ಎಲ್ಲ ಅರಳದ ಪ್ರಶ್ನೆಗಳೇ!
....	....

ಮೂಲ ಕವಿತೆಯ 'ಸ್ತ್ರೀಲ ಗುರಿಂಚಿ ತಪ್ಪ। ಇಕ್ಕಡ ಮಾಟ್ಲಾಡುಕೊಟಾನಿಕಿ ಮಾಟಲೇಮಿ ಲೇವು' ಎಂಬ ಸಾಲನ್ನು 'ಮಾತಾಡಿಕೊಳ್ಳಲು । ಸ್ತ್ರೀಯರ ವಿಷಯ ಬಿಟ್ಟು ಬೇರೆ ವಸ್ತುಗಳೇ ಇಲ್ಲ' ಎಂದು ಸರಳೀಕರಿಬರುವುದು ಔಚಿತ್ಯವಾಗಿದೆ.

ಮೂಲ : ನೈಸರ್ಗಿಕ ಸ್ವರೂಪಂ	**ಅನು : ನೈಸರ್ಗಿಕ ಸ್ವರೂಪ**
ಕಾಲಡಂ ಖಾಯಮನಿ ತೆಲಿಸಾಕ	ಸುಡುವುದು ಗ್ಯಾರಂಟಿ
ಒಕೇ ಒಕ್ಕ ಸಾರಿ ಸೂರ್ಯಣ್ಣಿ	ಎಂದು ಗೊತ್ತಾದ ಮೇಲೆ ಒಂದೇ ಒಂದು ಸಲ
ಕೌಗಿಲಂಚುಕೋವಾಲನುಂದಿ	ಸೂರ್ಯನ ಅಪ್ಪಿಕೊಳ್ಳಬಾರದೇಕೆನಿಸುತ್ತಿದೆ
ಚಿನ್ನಪ್ಪಟಿನುಂಚಿ ಅಂತೇ	ಚಿಕ್ಕಂದಿನಿಂದಲೂ ಅಷ್ಟೇ
ನಿಷಿದ್ಧಂ ಮೀದೇ ನಾ ಗುರಿ	ನಿಷೇದಗಳ ಮೇಲೇ ನನ್ನ ಗುರಿ
ಸರಿ ಹದ್ದುಲನ್ನೀ ಚೆರಿಪೇಸುಕುನ್ನಾಕ	ಎಲ್ಲ ಎಲ್ಲೆಗಳ ಇಲ್ಲವಾಗಿಸಿದ ಮೇಲೆ
ಆಕಾಶಂ ಒಕ್ಕಟೇ ನಾಕು ಹದ್ದಯಿಂದ	ಆಕಾಶವೀಗ ನನ್ನ ಎಲ್ಲೆ
......	......
ಉರಿಮೆ ಮೇಘಾಲಲೋನಿ	ಗುಡುಗುವ ಮೋಡಗಳೊಳಗಿನ
ರಸಾಯನಿಕ ಪದಾರ್ಥಾನ್ನಿ ತೆಚ್ಚಿ	ರಾಸಾಯನಿಕ ಪದಾರ್ಥವ ತಂದು
ನಾ ದೇಶ ಪ್ರಜಲ ಸ್ವರಪೇಟಿಕಲಕು ರಾಯಲಿ	ನನ್ನ ದೇಶ ಬಾಂಧವರ ಧ್ವನಿ ಪೆಟ್ಟಿಗೆಗಳಿಗೆ ಸವರಬೇಕು
ಈ ನಿರಂತರಾನ್ವೇಷಣಲೋ	ಈ ನಿರಂತರಾನ್ವೇಷಣೆಯಲಿ
ಎಪ್ಪಡೊ ಓಸಾರಿ ಆಕಾಶಾನ್ನಿ	ಯಾವಾಗಲೋ ಒಮ್ಮೆ ಆಕಾಶವ
ಸೊಂತಂ ಚೆಸುಕೊನಿ	ಸ್ವಂತ ಮಾಡಿಕೊಂಡು
ನಾ ಸ್ವಪ್ನಾಲು ಚಲ್ಲುಕುಂಟಾನು	ಅಲ್ಲಿ ನನ್ನ ಕನಸುಗಳನು ಹರವಿಕೊಳ್ಳುತ್ತೇನೆ

ಈ ಕವಿತೆಯಲ್ಲಿ ಮೂಲದ 'ಖಾಯಮನಿ ತೆಲಸಾಕ'(=ಖಾಯಂ ಎಂದು ತಿಳಿದ ಬಳಿಕ), 'ಸರಿ ಹದ್ದುಲನ್ನಿ ಚೆರಿಪೇಸುಕುನ್ನಾಕ' (=ಸರಹದ್ದುಗಳನ್ನು ಕೆಡಸಿ ಹಾಕಿಕೊಂಡ ಬಳಿಕ) 'ಆಕಾಶಂ ಒಕ್ಕಟಿ ನಾಕು ಹದ್ದಯಿಂದಿ' (=ಆಕಾಶವು ಒಂದೇ ನನಗೆ ಎಲ್ಲೆಯಾಗಿದೆ) 'ರಾಯಾಲಿ'(=ಬರೆಯಬೇಕು / ಹಚ್ಚಬೇಕು) 'ನಾ ಸ್ವಪ್ನಾಲ ಚಲ್ಲುಕುಂಟಾನು' (=ನನ್ನ ಸ್ವಪ್ನಗಳನ್ನು ಚೆಲ್ಲಿಕೊಳ್ಳುತ್ತೇನೆ) ಎಂಬ ಸಂದರ್ಭ, ಭಾಷಾ ಪ್ರಯೋಗಗಳನ್ನು ಕನ್ನಡಕ್ಕೆ ಸಹಜವಾಗುವಂತೆ ಮೂಲ ಅಗತ್ಯಕ್ಕೆ ತಕ್ಕಂತೆ ಇಂಗ್ಲೀಷ ರೂಪಗಳನ್ನು ಬಳಸಿಕೊಂಡು ಕನ್ನಡೀಕರಿಸಿರುವದ 'ಗ್ಯಾರಂಟೆಂದು ಗೊತ್ತಾದ ಮೇಲೆ', 'ಎಲ್ಲ ಎಲ್ಲೆಗಳ ಇಲ್ಲವಾಗಿಸಿದ ಮೇಲೆ', 'ಆಕಾಶವೀಗ ನನ್ನ ಎಲ್ಲೆ', 'ಸವರಬೇಕು', 'ಅಲ್ಲಿ ನನ್ನ ಕನಸುಗಳ ಹರಪಿಕೊಳ್ಳುತ್ತೇನೆ' ಎಂಬ ಪದಪುಂಜ ಹಾಗೂ ವಾಕ್ಯಗಳಿಂದ ಮೂಲವನ್ನು ಸ್ಪಷ್ಟವಾಗಿ ಹೋಲಿಸುವ ಪ್ರಯತ್ನ ಅನುವಾದಕರದ್ದಾಗಿದೆ.

ಮೂಲ : ಜಾವಳಿ	**ಅನು : ವಿರಹ ಗೀತೆ**
ಚಲಿನೆಗಳ್ಳ ಮಧ್ಯ ರಗುಲುತುನ್ನ ವಿರಹಗೀತಂ	ಚಳಿ ಬೆಂಕಿಯ ಮಧ್ಯೆ ಹೊತ್ತಿಕೊಂಡ ವಿರಹ ಗೀತೆ
ಜೀವಿತಾನ್ನಿ ವೆನಕ್ಕಿ ರಪ್ಪಿಂಚೆ	ಬದುಕನ್ನು ಹಿಂದಕ್ಕೆಳೆವ
ವ್ಯರ್ಥ ಪ್ರಯತ್ನಂ ಚೇಸ್ತುಂದಿ	ವ್ಯರ್ಥ ಪ್ರಯತ್ನ ಮಾಡುತ್ತಿದೆ
....	....
ಸ್ನೇಹಿತುಡಾ	ಮಿತ್ರಾ
ರೆಪ್ಪಪಾಟು ಕಾಲಂಲೋ ನುವ್ವು	ಕಣ್ಮುಚ್ಚಿ ತೆರೆಯುವಷ್ಟರಲ್ಲಿ
ಆಕಾಶಂಲೋ ಚುಕ್ಕವೈನಾವು	ನಕ್ಷತ್ರವಾದೆ ನೀನು ಆಕಾಶದಲ್ಲಿ
ನಿನ್ನು ತಲ್ಚುಕುಂಟಾ	ನಿನ್ನ ನೆನೆಯುತ್ತ
ರೇಪಟಿತರಂ ನಿರ್ಭಯಂಗಾ ನಡವಡಾನಿಕಿ	ನಾಳಿನ ತಲೆಮಾರು ನಿರ್ಭಯವಾಗಿ ಸಾಗಲು
ಬಾಟಲು ಚೇಸ್ತುನ್ನಾನು	ದಾರಿ ಮಾಡುತ್ತಿರುವೆ

ಇಲ್ಲಿ ಮೂಲದ; ರಪ್ಪಿಂಚೆ (=ಕರೆಸುವ) ಎಂಬುದನ್ನು, 'ಎಳೆವ' ಎಂದು, 'ಸ್ನೇಹಿತುಡಾ' (=ಸ್ನೇಹಿತನೇ) 'ಮಿತ್ರಾ' ಎಂದು ಮಾಡಿಕೊಂಡಿರುವಲ್ಲಿ ಓದಿನ ಸೊಗಸು ನೀಡುವುದರೊಂದಿಗೆ ಕನ್ನಡದ ಸಹಜತೆಯನ್ನು ಗುರುತಿಸಿಕೊಂಡಿದ್ದಾರೆ.

ಮೂಲ : ಲೋಮ	**: ಲೋಯಅನು : ಕಣಿವೆ**
....	....
ನಾ ಕಲವ ಕಾಶ್ಮೀರಮಾ	ನನ್ನ ಕನಸ ಕಾಶ್ಮೀರವೇ
ನೀಕೊಸಂ ತಪಿಂಚಿಪೋತುನ್ನಾನು	ನಿನಗಾಗಿ ಚಡಪಡಿಸುತಿರುವೆ
ನೀ ಒಡಿಲೋ ಪ್ರಶಾಂತಂಗಾ	ನಿನ್ನ ಮಡಿಲಲಿ ಮಲಗಿ ಪ್ರಶಾಂತವಾಗಿ
ಸೇದತೀರೇ ರೋಜುಕೋಸಂ ಎದುರು ಚೂಸ್ತುನ್ನಾನು	ದಣಿವಾರಿಸಿಕೊಳ್ಳುವ ದಿನಕ್ಕಾಗಿ ಎದುರು ನೋಡುತ್ತಿರುವೆ

ಈ ಭಾಗದಲ್ಲಿ ಮೂಲ ಪದ್ಯದ ಪದಗಳಿಗೆ ಸಮಾನವಾಗಿ ಕನ್ನಡ ಪದಗಳನ್ನು ಬಳಸಿಕೊಂಡಿರುವದು ಪದಾನುವಾದ ಎಂದು ತೋರಿದರು ವಸ್ತು ಶೈಲಿ ಇತ್ಯಾದಿಗಳಿಂದ ಮೂಲದ ಯಥಾರ್ಥತೆ ಅನುವಾದದಲ್ಲಿ ಮೂಡಿ ಬಂದಿದೆ.

ಮೂಲ : Elegy	**ಅನು** : Elegy
బ్రతికే వున్నావన్న పచ్చి అబద్ధాన్ని	ಬದುಕೇ ಇದ್ದೀಯೆಂಬ ಹಸೀಸುಳ್ಳನು
హృదయానికి హత్తుకుంటున్నాను	ಎದೆಗಪ್ಪಿಕೊಳ್ಳುತಿರುವೆ
జనం మధ్య నీ కోసం ఆశగా వెతుకుతున్నాను	ಜನರ ನಡುವೆ ಆಸೆಕಂಗಳಿಂದ ಹುಡುಕುತ್ತಿರುವೆ
నువ్వు పరిచయంకాకుండా ఉంటే బాగుండేది	ನೀನು ಪರಿಚಯವಾಗದಿದ್ದರೆ ಎಷ್ಟೊಂದು ಚೆನ್ನಾಗಿರೋದು
My Friend అనే మాటకు ఇన్ని కన్నీళ్ళుంటాయా ?	My Friend ಎಂಬ ಮಾತಿಗೆ ಇಷ್ಟೊಂದು ಕಣ್ಣೀರಿರುತ್ತವಾ?

ಮೂಲದಂತೆ ಅನುವಾದದಲ್ಲಿ My Friend ಎಂಬ ಇಂಗ್ಲೀಷ ಪದಪುಂಜವನ್ನು ಹಾಗೇ ಇಟ್ಟುಕೊಂಡಿದ್ದು ಮೂಲದ ಗತ್ತು ನಿಲ್ಲಿಸಲು ಕಾರಣವಾಗಿದೆ.

ಈ ಪೂರ್ವದಲ್ಲಿ ಪ್ರಸ್ತಾಪಿಸಿದಂತೆ ೧೪-೨೬ ರವರೆಗಿನ ಕವಿತೆಗಳು ಅನುವಾದವೆನಿಸಿಕೊಳ್ಳದೆ ಮೂಲವೇ ಎನ್ನುವಷ್ಟರ ಮಟ್ಟಿಗೆ ಮೂಡಿ ಬಂದಿವೆ. ಮೂಲ ಸಂಕಲನದ ೧ ರಿಂದ ೧೩ರವರೆಗಿನ ಕವಿತೆಗಳಲ್ಲಿ ಅನುವಾದಕರು ನಿಕಟಾನುವಾದ ಪ್ರಯತ್ನ ಮಾಡಿದ್ದರೂ ಭಾವಾಂತರ ಪರಿಯನ್ನು ವಿರಳವಾಗಿ ಅನುಸರಿಸಿದ್ದಾರೆ. ಪ್ರಸ್ತಾಪಿತ ಈ ಕವಿತೆಗಳಲ್ಲಿ ಸಾಂದರ್ಭಿಕವಾಗಿ ವಿಸ್ತಾರ ಪ್ರಕ್ರಿಯೆಯನ್ನು ವಿರಳವಾಗಿ ಸಂಕ್ಷಿಪ್ತ ಪ್ರಕ್ರಿಯೆಯನ್ನು ಮಾಡಿದ್ದಾರೆ. ಅಲ್ಲದೆ ಭಾಷಿಕ ಸಾಧ್ಯತೆಗಳನ್ನು ಮೂಲಕ್ಕೆ ಹೋಲಿಸಿ ನೋಡಿದಾಗ, ೧೪-೨೬ರ ವರೆಗಿನ ಕವಿತೆಗಳ ಅನುವಾದದಂತೆ ಕೈಗೂಡದೆ ಸ್ವಲ್ಪ ಮಟ್ಟಿನ ಅಸ್ಪಷ್ಟವಾಗಿರುವದು ಕಂಡು ಬರುತ್ತದೆ. ಈ ಭಾಗದಲ್ಲಿರುವ ನ್ಯೂನ್ಯತೆ ಮೂಲ ಕವಿತೆಯ ವಸ್ತು ರೀತಿ ಇತ್ಯಾದಿ ಅಂಶಗಳಿಗೆ ಯಾವುದೇ ರೀತಿಯ ಧಕ್ಕೆ ನೀಡಿದಂತೆ ಕಾಣುವುದಿಲ್ಲ. ಕೆಲವು ಉದಾಹರಣೆಗಳನ್ನು ಮೂಲ ಹಾಗೂ ಅನುವಾದಗಳ ಸಂಕಲನಗಳ ಪುಟಸಂಖ್ಯೆಗಳಿಂದ ಇಲ್ಲಿ ಗಮನಿಬಹುದು.

ಮೂಲ:	**ಅನು :**
అందర్నీ నిద్రపొమ్మని శాసించి	ಎಲ್ಲರನೂ ಜೋಗುಳ ಹಾಡಿ ಮಲಗಿಸಿ
రాత్రి మాకోసం మేల్కొంటుంది (౧౫)	ರಾತ್ರಿ ಎದ್ದು ಕೂರುತ್ತಿದೆ ನಮಗಾಗಿ (೧)

ಮೂಲದಲ್ಲಿ ಹೋರಾಟಗಾರರನ್ನು ಬಿಟ್ಟು ಉಳಿದವರಿಗೆ 'ರಾತ್ರಿ ಮಲಗಲು ಆಜ್ಞೆ ಮಾಡಿದರೆ', ಅನುವಾದದಲ್ಲಿ 'ಜೋಗುಳ ಹಾಡಿ ಮಲಗಿಸಿ' ಎಂದಾಗಿದೆ. ಇಲ್ಲಿ ರೂಪ ಮೂಲ ವ್ಯತ್ಯಾಸವೇ ಆಗಿದೆ. ಅನುವಾದ ಓದುವಿಕೆಯಿಂದ ಮೂಲದ ಸತ್ವ, ಸ್ವಲ್ಪ ದೂರ ನಿಲ್ಲಿಸುತ್ತದೆ.

మా పనలు ప్రభాతం పాడుకుంటాయి	ಅಲ್ಲಿಂದಿ ಶುರು ನಮ್ಮ ದಿನ. ಅದು ನಮ್ಮ ಸುಪ್ರಭಾತ.
చీకట్లో మాకు వయసు వెచ్చదనాలు	ಅದೇ ನಮ್ಮ ಬೆಳಗು

గుర్తుండవు చీకట్లో మేం గోడల్ని కౌగిలించుకుంటాం (౧౫)	ಅಲ್ಲಿಂದಲೇ ಮೊದಲಾಗುವುವು ನಮ್ಮ ಕೆಲಸಗಳು ಕತ್ತಲಲಿ ನಮಗೆ ವಯಸ್ಸು ಬಿಸುಪುಗಳಿರುವುದಿಲ್ಲ ಆಗ ಗೋಡೆಗಳ ಬಿಗಿದಪ್ಪಿಕೊಳ್ಳುತ್ತೇವೆ ನಾವು (೧)

ಮೂಲ ಬಂಧ ಅನುವಾದದಲ್ಲಿ ವಿಸ್ತಾರವಾಗಿದೆ. ಈ ವಿಸ್ತಾರ ಅನಗತ್ಯವೆನಿಸುತ್ತದೆ. 'ಅಲ್ಲಿಂದಿ ಶುರು ನಮ್ಮ ದಿನ. ಅದು ನಮ್ಮ ಸುಪ್ರಭಾತ. ಅದೇ ನಮ್ಮ ಬೆಳಗು' ಈ ಸಾಲುಗಳ ಅರ್ಥ ಮುಂದಿನ ಸಾಲುಗಳಲ್ಲಿ ಪುನರಾವರ್ತನೆಯಾಗುತ್ತದೆ.

ఇదంతా ప్రేమ లేకపోబట్టే	ಈ ಎಲ್ಲ ಪ್ರೀತಿ ಇಲ್ಲದ್ದಕ್ಕಾಗೇ
ఒక కన్నీళ్ళను తుడవడానికి మరో అశ్రునయనం కావాలి (౧౯)	ಕಣ್ಣಂಚಿಗೆ ಬಂದು ನಿಂತ ಹನಿಯ ಒರೆಸಲು ಮತ್ತೊಂದು ಕಣ್ಣೀರ ಹನಿಯೇ ಬೇಕು (೪)

ಇಲ್ಲಿ ಮೂಲದ ಶಬ್ದಗಳನ್ನು ವಿಸ್ತಾರ ಮಾಡಿಕೊಂಡ ಕಾರಣ ಮೂಲದ ಅರ್ಥ ಭಾವ ಸಡಿಲವಾಗಿದೆ. ಇದೆಲ್ಲಾ ಪ್ರೀತಿ ಇಲ್ಲದ್ದಕ್ಕಾಗಿಯೇ, ಒಂದು/ಒಬ್ಬರ ಕಣ್ಣೀರನು ಒರೆಸಲು ಮತ್ತೊಂದು/ಮತ್ತೊಬ್ಬರ ಆಶ್ರುನಯನಬೇಕು. ಕನ್ನಡ ಭಾಷೆಗೆ ಸರಳ ಸಾಧ್ಯತೆಯನ್ನು ಇಲ್ಲಿ ಕ್ಲಿಷ್ಟಮಾಡಿಕೊಳ್ಳಲಾಗಿದೆ.

తొలి నిశ్శబ్ద నిమిషాన్ని భగ్నం చేస్తూ వాళ్ళు తలుపు కొట్టిన జ్ఞాపకం (౨౯)	ಮೊದಲ ನಿಶ್ಯಬ್ದ ನಿಮಿಷವ ಭಂಗಗೊಳಿಸುತ ಅವರು ಕದ ತಟ್ಟಿದ ನೆನಪು (೧೪)

ಮೂಲದಲ್ಲಿ 'ತಲುಪುಕೊಟ್ಟಿನ' ಎಂಬ ಭಾಗವನ್ನು 'ಕದ ತಟ್ಟಿದ' ಎಂದು ಅನುವಾದಿಸಿಕೊಂಡದ್ದು ಮೂಲದ ಅರ್ಥಾಂತರವಾಗಿದೆ. ಪೋಲಿಸರ ದೃಷ್ಟಿಯಲ್ಲಿ ಅಪರಾಧಿಯಾಗಿ ಕಂಡ, ಹೋರಾಟದ ಸಂಘಟಕನನ್ನು ಹುಡುಕುವ ಸಂದರ್ಭವದು; ಕಾರಣ 'ಕದ ತಟ್ಟಿದ' ಬದಲಾಗಿ 'ಕದ ಮುರಿದ' ಎಂದು ಗ್ರಹಿಸಿದ್ದರೆ, ಅರ್ಥ ಸ್ಪಷ್ಟವಾಗುತ್ತಿತ್ತು.

ఎడువారాలు నగల మధ్య భాబి ఎనిమిదో వారం కోసం ఎదురు చూసేది	ಸಾಲುಗಳು ಲೋಪ

ಮೂಲದಲ್ಲಿ ಕ್ರಮವಾಗಿ ಸಂಬಂಧಗಳ ಹಿನ್ನಲೆಗಳಿಂದ ಸ್ತ್ರೀ ಸಮಸ್ಯೆ ಹೇಳುವ ಉತ್ತಮ ಕವಿತೆ, ಅನುವಾದದಲ್ಲಿ ಭಾಬಿಯ ಬಗೆಗಿನ ಸಾಲುಗಳು ಲೋಪವಾಗಿದೆ- ಈ ರೀತಿಯಾಗಿ ಕೆಲವು ನ್ಯೂನ್ಯತೆಗಳು ಸ್ಥಾನ ಪಡೆದಿವೆ.

ಇವೆಲ್ಲವೂ ಮೂಲಕ್ಕೆ ಹೋಲಿಸಿಕೊಂಡಾಗ, ಅರಿವಾಗುವ ಅಂಶಗಳು. ಅನುವಾದ ಓದುವ ಸಂದರ್ಭದಲ್ಲಿ ಅತಿಗೊಂದಲ ಉಂಟು ಮಾಡದಿದ್ದರೂ. ಎಚ್ಚರ ವಹಿಸಿದ್ದರೆ, ಅನುವಾದ ಇನ್ನು ಶ್ರೀಮಂತವಾಗಿರುತ್ತಿತ್ತು.

ಈ ಭಾಗದ ಅಂದರೆ, ಸಂಕಲನದ ೧ ರಿಂದ ೧೫ರ ವರೆಗಿನ ಕವಿತೆಗಳಲ್ಲಿ ನಿಕಟಾನುವಾದದ ಹಲವು ಉದಾ :

ಮೂಲ :	ಅನು :
ಸರಿಗ್ಗಾ ಅಪ್ಪುಡೆ	ಅದೇ ಆಗ
ಕವಿತ್ವೀಕರಿಸ್ತುನ್ನ ಕ್ಷಣಾಲ್ಲೋ	ಇನ್ನೇನು ಕವಿತೆ ಹುಟ್ಟತ್ತೆನ್ನುವಾಗ
ಅತನು ಮುದ್ದು ಪೆಟ್ಟುಕುಂಟಾಡು	ಅವನು ಮುತ್ತಿಟ್ಟು ಬಿಡುತ್ತಾನೆ
ಅತನಿ ಅಡುಗುಲ ಸವ್ವಡಿಲೋ	ಅವನ ಹೆಜ್ಜೆಸದ್ದಿನಲಿ
ಛಂದಸ್ಸು ವೆತುಕ್ಕುಂಟಾ	ಛಂದಸ್ಸು ಹುಡುಕುತ್ತ
ನೇನು ಆಲಮೋಕಗಾ ಕಳ್ಳು ಮೂಸುಕುಂಟಾನು (೩೨)	ನಾನು ತನ್ಮಯಳಾಗಿ ಕಣ್ಮುಚ್ಚಿ ಕೊಳ್ಳುತ್ತೇನೆ (೧೭)
ನಾಕು Chromosomes ಇಚ್ಚಿನ	ನನಗೆ ಕ್ರೋಮೋಸೋಮುಗಳ ಕೊಟ್ಟವನೇ
ಓ ಮನಿಷೀ	ಜೊತೆಗೆ ಬೊಗಸೆ ಪ್ರೀತಿಯನೂ ಕೊಟ್ಟಿದ್ದರೆ
ಕಾಸ್ತಂತ ಪ್ರೇಮಕೂಡಾ ಇಚ್ಚುಂಟೆ	ಇಂದು ನಿನ್ನ ವೃದ್ಧಾಪ್ಯವ ನನ್ನ
ಈ ರೋಜು ನೀ ವೃದ್ಧಾಪ್ಯಾನ್ನಿ	ಭುಜಗಳ ಮೇಲೆ ಹೋರುತ್ತಿರಲಿಲ್ಲವೇ ? (೨೦)
ಭುಜಾಲ ಮೀದ ಮೊಸೇದಾನ್ನಿ ಕದಾ (೩೫)	
ಕಾಸೇಪ್ರ ಮಾನಂ ಪರಾಮರ್ಶಿಸ್ತುಂದಿ	ಕ್ಷಣಕಾಲ ಮೌನ ವಿಚಾರಿಸುತ್ತದೆ
ಚೂಪುಲು ವಳ್ಳಂತಾ ಕರಚಾಲನಂ ಚೆಸ್ತಾಯಿ (೩೯)	ಕಣ್ಣೋಟಗಳು ಮೈಯಲ್ಲ ಹರಿದಾಡುತ್ತವೆ (೨೪)
ಅತನಿಪ್ಪುಡು ಲೇಡು	ಅವನೀಗ ಇಲ್ಲ
ಈ ಮಧ್ಯ ಅದ್ಧಾಂತರಂಗಾ ವಚ್ಚಿನ	ಅವಧಿಗೆ ಮುಂಚೆಯೇ ಬಂದ
ಆಕು ರಾಲು ಕಾಲಾನಿಕಿ ಎಕ್ಕಡ ರಾಲಿ ಪಡ್ಡಾಡೋ? (೪೧)	ಎಲೆ ಉದುರೊ ದೂರೂ ಕಾಲಕ್ಕೆ
	ಸಿಕ್ಕು ಎಲ್ಲಿ ಉದುರಿಹೋದನೋ? (೨೬)

ತೆಲುಗು ಮೂಲದ ಈ ಸಂಕಲನವನ್ನು ಅನುವಾದಿಸುವಾಗ ಅನುವಾದಕ ಕೆಲವು ಭಾಷಿಕ ಅಂಶಗಳನ್ನು ಲಕ್ಷಿಸಿದ್ದರೆ, ಸಂಪೂರ್ಣ ನಿಕಟಾನುವಾದವೆನಿಸುತ್ತಿತ್ತು. ಅವುಗಳನ್ನು ಹೀಗೆ ಪಟ್ಟಿ ಮಾಡಬಹುದು.

೧. ಕವಿಯಿತ್ರಿ ನಿರ್ದಿಷ್ಟ ಭಾಷೆ, ನಿರ್ದಿಷ್ಟ ಕವಿತೆಯಲ್ಲಿ, ನಿರ್ದಿಷ್ಟ ವಸ್ತುವನ್ನು ಅಭಿವ್ಯಕ್ತಿಸಿದ ಬಗೆ ವಿಶಿಷ್ಟವಾಗಿರುತ್ತದೆ. ಮುಖ್ಯವಾಗಿ ಮಹೆಜಬೀನ್‌ರ ಈ ಸಂಕಲನದಲ್ಲಿ ತೆಲುಗನ್ನು ಇಂಗ್ಲೀಷನೊಂದಿಗೆ ಕೋಡ್ ಮಿಕ್ಸ್ ಮಾಡಿದ ಭಾಷೆಯನ್ನು ವಿಶಿಷ್ಟವಾಗಿ ಬಳಸಿಕೊಂಡಿದ್ದಾರೆ. ಈ ರೀತಿ ಆ ವಸ್ತು ವಿವರಣೆಗೆ ವಿಶೇಷತೆಯನ್ನು ತಂದುಕೊಟ್ಟಿದೆ. ಈ ರೀತಿಯ ಭಾಷಾ ಶೈಲಿ ಅನುವಾದಕರು ಅಲ್ಲಲ್ಲಿ ಬಳಸಿಕೊಂಡಿದ್ದರೂ ಕೆಲವಡೆ ಅಲಕ್ಷಿಸಿದ್ದಾರೆ.

೨. ತೆಲುಗು ಕನ್ನಡ ಭಾಷೆಯಲ್ಲಿ ಸರ್ವನಾಮಗಳು ನಿರ್ದಿಷ್ಟ ಅರ್ಥ, ಪ್ರಸಾರ ವ್ಯವಸ್ಥೆಯನ್ನು ಹೊಂದಿವೆ. ಆದರೆ ಮೂಲದಲ್ಲಿ ಕವಿಯಿತ್ರಿ ಉತ್ತಮ ಪುರುಷ ಮಹತ್ ಏಕವಚನ ಸರ್ವನಾಮ

'ವಾಡು'(=ಅವನು) ಎಂಬ ರೂಪದ ಬದಲಿಗೆ, 'ಆತನು' ಎಂಬ ಪ್ರಾದೇಶಿಕ ಹಿನ್ನೆಲೆಯ ರೂಪವನ್ನು ಗೌರವಾರ್ಥದೊಂದಿಗೆ ಸ್ವೀಕರಿಸಿಕೊಳ್ಳಲಾಗಿದೆ. ಹೀಗೆ ಬಳಸಿಕೊಂಡ ಈ ರೂಪ ಆ ಕವಿತೆಗಳನ್ನು ಓದುವಾಗ ಕವಿಯಿತ್ರಿಗೆ ತನ್ನ ಪ್ರಿಯಕರನ ಅಥವಾ ನಾಯಕನ ಬಗ್ಗೆ ಇರುವ ಗೌರವ ಬಾಂಧವ್ಯ ವ್ಯಕ್ತವಾಗುತ್ತದೆ. ಈ ಸಂದರ್ಭದಲ್ಲಿ ಇಂಥ ಸಂಗತಿಯನ್ನು ಅನುವಾದಕರು 'ಅವನು' ಎಂದು ಬಳಸಿದ್ದಾರೆ. ಆ ಕವಿತೆಗಳನ್ನು ಓದುವಾಗ ಮೂಲದಂತೆ ಪ್ರಿಯಕರ ಅಥವಾ ನಾಯಕನ ಬಗ್ಗೆ ಇರುವ ಗೌರವ ದೂರ ನಿಂತಂತೆ ತೋರುತ್ತದೆ. ಅಥವಾ ಮೂಲದಂತೆ ಭಾಷಾ ಸಂದರ್ಭವನ್ನು ಗ್ರಹಿಸಲಾಗಿಲ್ಲ. ಜಬಿನಳ ಕವಿತಾ ಭಾಷೆ ಯಾವುದೇ ವಿಷಯವನ್ನು ರೋಷ - ಒತ್ತಾಯಗಳಿಂದ ಹೇಳುವುದಿಲ್ಲ. ಸಹಜತೆ ಇದೆ. ಇಂಥ ಸಹಜತೆಯನ್ನು ರವಿ ಬೆಳಗೆರೆಯವರು ''ಕವಿತೆಗಳನ್ನು ಓದುತ್ತಿದ್ದರೆ ದುಃಖಿಗೊಂಡ ಪಕ್ಕದ ಮನೆಯ ಹುಡುಗಿಯ ಹೃದಯದೊಳಕ್ಕೆ ಇಣುಕಿದಂತಾಗುತ್ತದೆ'' ಎಂದಿದ್ದಾರೆ. ಕವಿತಾ ವಸ್ತುವಿನೊಂದಿಗೆ ಕವಿಯತ್ರಿ ಆಯ್ಕೆ ಮಾಡಿಕೊಂಡು ಪ್ರಮಾಣ ಹಾಗೂ ಉಪಭಾಷಾ ಅಂಶಗಳು ಅಷ್ಟೇ ಮಹತ್ವದು. ಈ ಮಹತ್ವತೆಯನ್ನು ಗಮನಿಸುವದು ಅಷ್ಟೇ ಗಮನಾರ್ಹ.

೩. ತೆಲುಗು ಭಾಷೆಗೆ ಸಹಜವಾಗಿರುವ ಬಹುವಚನ ಪ್ರತ್ಯಯ ಕನ್ನಡಕ್ಕೆ ಸಹಜವಾಗದೆ ಶೂನ್ಯ ಪ್ರತ್ಯಯ ಹೊಂದುವುದು. ಉದ್ದಿಷ್ಟ ಭಾಷೆಯ ಇಂಥಹ ವೈಲಕ್ಷಣವನ್ನು ಗಮನಿಸಿಕೊಳ್ಳುವುದು ಮಹತ್ವದು ಆಗಿದೆ.

೪. ಮೂಲದ ಕೆಲವು ವಾಕ್ಯ ರಚನೆಯಲ್ಲಿ ವಿಭಕ್ತಿಯನ್ನು ಸರಿಯಾಗಿ ಅರ್ಥೈಯಿಸಿಕೊಳ್ಳುವ ಅಗತ್ಯವಿತ್ತು.

ಪ್ರಸ್ತಾಪಿಸಿದ ಕೆಲವು ಭಾಷಿಕ ಅಂಶಗಳನ್ನು ಲಕ್ಷಿಸಿದ್ದರೆ, ಕವನಸಂಕಲನದ ಆದಿಯ ಕವನಗಳು ಯಥಾರ್ಥನುವಾದ ಎನಿಸಿಕೊಳ್ಳುತ್ತಿದ್ದವು. ಪ್ರಸ್ತಾಪಿಸಿದ ಈ ಎಲ್ಲಾ ವ್ಯತ್ಯಯಗಳು ಮೂಲ ಪಠ್ಯವನ್ನು ಹೋಲಿಸಿಕೊಂಡು ನೋಡಿದಾಗ ಮಾತ್ರ ಗೋಚರವಾಗುವಂತವು. ಅನುವಾದಿತ ಸಂಕಲನದ ಓದಿನಲ್ಲಿ ಇಂಥ ಕೆಲ ಸಮಸ್ಯೆಗಳು ಯಾವುದೇ ಗೊಂದಲ ಉಂಟು ಮಾಡದೇ ಓದಿಸಿಕೊಳ್ಳುತ್ತವೆ ಎಂಬುದು ದಿಟ.

ಡಾ॥ ಜಿ. ವೀರಭದ್ರಗೌಡ,
ಅಧ್ಯಾಪಕರು, ಕನ್ನಡ ಸ್ನಾತಕೋತ್ತರ ವಿಭಾಗ, ಬಾಗಲಕೋಟ–೫೮೭ ೧೦೧

ಲೇಖಕರಿಗೆ ವಿನಂತಿ

ಅಕಾಡೆಮಿಯ ತ್ರೈಮಾಸಿಕ ಪತ್ರಿಕೆ 'ಅನಿಕೇತನ'ದ ಸ್ವರೂಪದಲ್ಲಿ ರಚನಾತ್ಮಕ ಬದಲಾವಣೆಗಳನ್ನು ತರಬೇಕೆಂಬ ಹಂಬಲವನ್ನು ತಾವು ಇದುವರೆಗಿನ ಸಂಚಿಕೆಗಳ ಮೂಲಕ ಗಮನಿಸಬಹುದಾಗಿದೆ. ಕನ್ನಡದ ಶ್ರೇಷ್ಠ ಲೇಖಕರನ್ನೆಲ್ಲ ಒಳಗೊಳ್ಳುವಂತೆಯೂ ಹಾಗೂ ಹೊಸ ಸಂವಾದ, ಸಂವೇದನೆಗಳ ಶಕ್ತ ವೇದಿಕೆಯಾಗಿ ಪತ್ರಿಕೆ ಗಂಭೀರ ಸಾಹಿತ್ಯ ಚಿಂತನೆಗಳ ಅಭಿವ್ಯಕ್ತಿಯಾಗಿ ರೂಪುಗೊಳ್ಳಬೇಕೆಂಬುದೂ ನಮ್ಮ ಆಶಯವಾಗಿದೆ. ಕನ್ನಡದ ಹಿರಿಯ ಹಾಗೂ ಭರವಸೆಯ ಹೊಸ ಪೀಳಿಗೆಯ ಲೇಖಕರೆಲ್ಲರ ಭಾಗವಹಿಸುವಿಕೆಯೇ ಪತ್ರಿಕೆಗೆ ಜೀವದ್ರವ್ಯವಾದ್ದರಿಂದ ತಮ್ಮ ಅಮೂಲ್ಯ ಸಹಕಾರ ಅತ್ಯಗತ್ಯ.

ಅನ್ಯಭಾಷೆಯ ಶ್ರೇಷ್ಠ ಬರಹಗಳ ಅನುವಾದದೊಂದಿಗೆ, ಸ್ವತಂತ್ರ ಬರಹಗಳನ್ನು ಆಹ್ವಾನಿಸುತ್ತಿದ್ದೇವೆ. 'ಅನಿಕೇತನ'ಕ್ಕಾಗಿ ಕವಿತೆ / ಕಥೆ / ಕಿರುನಾಟಕ / ವಿಮರ್ಶಾತ್ಮಕ / ವೈಚಾರಿಕ ಲೇಖನ / ಪ್ರಬಂಧ / ಸಾಂಸ್ಕೃತಿಕ ಚಿಂತನೆ ಹಾಗೂ ಅನುವಾದಗಳನ್ನು ಕಳುಹಿಸಿ ಕೊಡುವುದರ ಮೂಲಕ ನಮ್ಮ ಪ್ರಯತ್ನಕ್ಕೆ ಸಹಕರಿಸಬೇಕೆಂದು ಕೋರುತ್ತಿದ್ದೇವೆ. ದಯವಿಟ್ಟು ಬರೆಯಿರಿ. ಪತ್ರಿಕೆಗೆ ಹೊಸ ರೂಪ ಕೊಡಬೇಕೆಂಬ ಪ್ರಯತ್ನಗಳ ನಮ್ಮೊಂದಿಗೆ ಸದಾ ನೀವಿರುತ್ತೀರೆಂಬುದೇ ನಮ್ಮ ಧೈರ್ಯ ಹಾಗೂ ವಿಶ್ವಾಸ.

ಅನುವಾದಗಳಾದರೆ ಮೂಲ ಲೇಖಕರ ಹೆಸರು, ವಿಳಾಸ, ಮೂಲ ಬರಹದ ಭಾಷೆಯ ವಿವರ ಅಗತ್ಯ. ಅನುಮತಿ ಪತ್ರದ ಜೆರಾಕ್ಸ್ ಪ್ರತಿ ಜೊತೆಯಲ್ಲಿರುವುದು ಅಪೇಕ್ಷಣೀಯ. ಬರವಣಿಗೆ ಹಾಳೆಯ ಒಂದೇ ಮಗ್ಗುಲಲ್ಲಿದ್ದು, ಸ್ಫುಟವಾಗಿ ಓದಲು ಅನುಕೂಲವಾಗುವಂತಿರಲಿ.

ಬರಹಗಳನ್ನು ಕಳುಹಿಸಬೇಕಾದ ವಿಳಾಸ :
ಸಂಪಾದಕರು, 'ಅನಿಕೇತನ', ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು – ೫೬೦ ೦೦೨

–ಸಂಪಾದಕರು



ಅವನು ರಾತ್ರಿ ಸೂರ್ಯನು
ಕಣ್ಣರೆಪ್ಪೆಯಲ್ಲಿ ನಿದ್ದೆಯ ಚಾಪೆಯನ್ನು
ಮಡಿಚಿಟ್ಟು ಕದೀಮ ಕತ್ತಲೆಯನ್ನು
ಬೇಟೆಯಾಡುತ್ತಿರುವವನು.

ಅರ್ಧರಾತ್ರಿ ಮಡದಿ ಮಕ್ಕಳನ್ನು ಬಿಟ್ಟು
ಪ್ರತಿ ರಾತ್ರಿ ಗೌತಮ ಬುದ್ಧನಾಗುತ್ತಾನೆ.

ಯಾವ ಜ್ವರವೋ ತಗುಲಿ ಅವನು
ಬಾರದ ದಿನ ಆಕಾಶದಲ್ಲಿ ತಾರೆಗಳು, ಬೀದಿನಾಯಿಗಳು
ಕತ್ತಲಲ್ಲಿ ಕಣ್ಣೀರು ಸುರಿಸುತ್ತವೆ.

ತನ್ನ ಹೆಂಚಿನ ಮನೆ ಬಿಟ್ಟು ಉಳಿದೆಲ್ಲ
ಮನೆಗಳನು ಪಹರೆ ಕಾಯುತ್ತಾನೆ.

– ಡಾ. ಆಂಜನಪ್ಪ

Reg. No. 45646/88 Price : 30/-